ಹುಬ್ಬಳ್ಳಿ
ಶನಿವಾರ, 4 ಏಪ್ರಿಲ್ 2026
ಸಂಪುಟ 16, ಸಂಚಿಕೆ 10, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ತಾರಾಗಿರಿ ನೌಕಾಪಡೆಗೆ ಸೇರ್ಪಡೆ | ೦೭
ಪಾಕ್‌ನಲ್ಲಿ ಇಂಧನ ದರ ಭಾರೀ ಏರಿಕೆ | ೦೭
ಪುದುಚೇರಿಯಲ್ಲಿ ಮೋದಿ ರೋಡ್‌ಶೋ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಸ್ವಾತಿ

ದಿನದ ಮಾತು

ಪರಿಶ್ರಮದಿಂದ ಯಶಸ್ಸು ಸಾಧ್ಯವೇ ವಿನಾ ಆಡಂಬರದಿಂದಲ್ಲ.
▲ ಪಂಚತಂತ್ರ

ಅಂಗಾದಿತ್ಯ ಎಂದರೇನು?

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಕಲಬುರಗಿಯಲ್ಲಿ ಮಾಜಿ ಸಚಿವರ ಅಳಿಯನ ಹತ್ಯೆ

• **ಕಲಬುರಗಿ:** ನಗರದಲ್ಲಿ ಭೀಕರ ಹತ್ಯೆ ಪ್ರಕರಣ ಗುರುವಾರ ತಡರಾತ್ರಿ ಬೆಳಕಿಗೆ ಬಂದಿದೆ. ಪಿಎನ್‌ಟಿ



ಕಾಲೋನಿ ಸಮೀಪದ ವೆಂಕಟೇಶ್ವರ ಕಾಂಪ್ಲೆಕ್ಸ್‌ನಲ್ಲಿ ದುಷ್ಕರ್ಮಿಗಳು ದಾಳಿ ನಡೆಸಿ ಮಾಜಿ ಸಚಿವರೊಬ್ಬರ ಅಳಿಯನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆಗೈದಿದ್ದಾರೆ. ಹತ್ಯೆಯಾದ ವ್ಯಕ್ತಿ ಅನಿಲ ರಾಠೋಡ್(45) ಎಂದು ಗುರುತಿಸಲಾಗಿದ್ದು, ಅವರು ಮಾಜಿ ಸಚಿವ ರೇವೂನಾಯಕ ಬೆಳಮಗಿ ಅವರ ಅಳಿಯರಾಗಿದ್ದಾರೆ. ಅನಿಲ ಅವರು ಫೈನಾನ್ಸ್ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು.

➡ ಪುಟ ೪

ನಿವೃತ್ತ ನ್ಯಾ.ಸಂತೋಷ್ ಹೆಗ್ಡೆ ಆರೋಗ್ಯದಲ್ಲಿ ಏರುಪೇರು

• **ಬೆಂಗಳೂರು:** ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಕಾರ್ಯಕ್ರಮದ ವೇಳೆ ಸಮಾರಂಭದ ವೇದಿಕೆಯಲ್ಲಿಯೇ ಕುಸಿದುಬಿದ್ದಿದ್ದು, ಕೂಡಲೇ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ಶುಕ್ರವಾರ ಕೊಂಡಜ್ಜಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಭಾಜನರಾದ ಡಾ.ಪಿ.ಜಿ.ಆರ್.ಸಿಂಧ್ಯಾ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ನ್ಯಾ.ಸಂತೋಷ್ ಹೆಗ್ಡೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

➡ ಪುಟ ೪

ಪರಂಪರೆ, ಅಭಿವೃದ್ಧಿ ಜತೆ ಜತೆಯಾಗಿರಲು ಬಿಜೆಪಿ ಶ್ರಮ: ಯೋಗಿ

• ಪುಟ ೭

ಪೇಟೆಂಟ್ ಔಷಧಗಳ ಮೇಲೆ 100% ಸುಂಕ ವಿಧಿಸಿದ ಟ್ರಂಪ್

• ಪುಟ ೭

ಧಾರ್ಮಿಕ ಆಚರಣೆ ತೀರ್ಮಾನ ನ್ಯಾಯಾಲಯಕ್ಕೆ ಪರಿಣತಿ ಇಲ್ಲ

• ಪುಟ ೭

ಕಾಂಗ್ರೆಸ್‌ಗೆ ಬಿಜೆಪಿ ಹೈಕಮಾಂಡ್ ಅಲ್ಲ: ಸಿಎಂ ಸಿದ್ದರಾಮಯ್ಯ

• ಪುಟ ೫

ಸಿಬಿಎಸ್‌ಇ ಹೊಸ ಪಠ್ಯಕ್ರಮ | ಹಲವು ಬದಲಾವಣೆ

6ನೇ ತರಗತಿಯಿಂದ 3ನೇ ಭಾಷೆ ಕಡ್ಡಾಯ

• **ಹೊಸದಿಲ್ಲಿ:** ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್–ಸಿಬಿಎಸ್‌ಇ) 2026–27ರಿಂದ ಜಾರಿಗೆ ಬರುವ ಹೊಸ ಪಠ್ಯಕ್ರಮವನ್ನು ಪ್ರಕಟಿಸಿದ್ದು, 6ನೇ ತರಗತಿಯಿಂದ ಮೂರನೇ ಭಾಷೆಯನ್ನು ಕಡ್ಡಾಯಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ವ್ಯವಸ್ಥೆ ಹಂತ ಹಂತವಾಗಿ ಜಾರಿಯಾಗುತ್ತಾ, 2031ರ ವೇಳೆಗೆ 10ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲೂ ಸಂಪೂರ್ಣವಾಗಿ ಅನ್ವಯವಾಗಲಿದೆ.



ಹೊಸ ಪಠ್ಯಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಶಿಫಾರಸುಗಳಿಗೆ ಅನುಗುಣವಾಗಿದ್ದು, ಈಗಿನ ಎರಡು ಭಾಷೆಗಳ ಬದಲು ವಿದ್ಯಾರ್ಥಿಗಳು 10ನೇ ತರಗತಿವರೆಗೆ ಮೂರು ಭಾಷೆಗಳನ್ನು ಕಲಿಯುವ ವ್ಯವಸ್ಥೆ ಅಳವಡಿಸಲಾಗುತ್ತಿದೆ. ಈ ಯೋಜನೆ ಪ್ರಕಾರ, 2026–27ರಿಂದ 6ನೇ ತರಗತಿಯಲ್ಲಿ 3ನೇ ಭಾಷೆ (ಆರ್3) ಪರಿಚಯವಾಗಲಿದ್ದು, ಕ್ರಮೇಣ 2030–31ರವರೆಗೆ 10ನೇ ತರಗತಿಗೂ ವಿಸ್ತರಿಸಲಾಗುತ್ತದೆ. 2031ರಲ್ಲಿ ಬೋರ್ಡ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಮೊದಲ ಬಾರಿಗೆ ಸಂಪೂರ್ಣ 3 ಭಾಷಾ ವ್ಯವಸ್ಥೆಯಲ್ಲಿ ಪರೀಕ್ಷೆಗೆ ಒಳಗಾಗಲಿದ್ದಾರೆ.

ಸಿಬಿಎಸ್‌ಇ ಅಧ್ಯಕ್ಷ ರಾಹುಲ್ ಸಿಂಗ್ ಪ್ರಕಾರ, 9ನೇ ತರಗತಿಗೆ ತಕ್ಷಣವೇ 3ನೇ ಭಾಷೆ ಕಡ್ಡಾಯವಾಗಲ್ಲ. ಆರ್1 (ಪ್ರಾಥಮಿಕ ಭಾಷೆ), ಆರ್2 (ಎರಡನೇ ಭಾಷೆ), ಆರ್3 (ಮೂರನೇ ಭಾಷೆ) ಎಂಬ 3 ಹಂತಗಳಲ್ಲಿ ಭಾಷಾ ವಿಷಯಗಳನ್ನು ವಿಂಗಡಿಸಲಾಗುತ್ತದೆ.

➡ ಪುಟ ೪

ಬಹು ಭಾಷಾ ಆಯ್ಕೆ

ಭಾಷಾ ಆಯ್ಕೆಗಳ ವ್ಯಾಪ್ತಿಯನ್ನೂ ಸಿಬಿಎಸ್‌ಇ ವಿಸ್ತರಿಸಿದ್ದು, ಡೋಗ್ರಿ, ಮೈಥಿಲಿ, ಕೊಂಕಣಿ ಮತ್ತು ಸಂತಾಳಿ ಭಾಷೆಗಳು 9ನೇ ತರಗತಿಯಲ್ಲಿ ಹೊಸದಾಗಿ ಸೇರಿಸಲ್ಪಟ್ಟಿವೆ. ಇದರಿಂದ ಸಂವಿಧಾನದ ಎಂಟನೇ ಪಟ್ಟಿ ಒಳಗೊಂಡ ಎಲ್ಲಾ 22 ಭಾರತೀಯ ಭಾಷೆಗಳನ್ನೂ ವಿದ್ಯಾರ್ಥಿಗಳಿಗೆ ಕಲಿಯುವ ಅವಕಾಶ ಲಭ್ಯವಾಗಲಿದೆ.

➡ ಪುಟ ೪

ಮುಖ್ಯಾಂಶಗಳು

- 2026-27ರಿಂದ 6ನೇ ತರಗತಿಯಿಂದ ಮೂರನೇ ಭಾಷೆ(ಆರ್3) ಕಡ್ಡಾಯ
- 2031ರಿಂದ 10ನೇ ತರಗತಿ ಬೋರ್ಡ್‌ನಲ್ಲಿ ಮೂರು ಭಾಷೆಗಳಿಗೂ ಪ್ರತ್ಯೇಕ ಪರೀಕ್ಷೆ
- ಇಂಗ್ಲಿಷ್ ವಿದೇಶಿ ಭಾಷೆ ಎಂದು ವರ್ಗೀಕರಣ; ಒಂದೇ ವಿದೇಶಿ ಭಾಷೆ ಆಯ್ಕೆ ಅವಕಾಶ
- ಕನಿಷ್ಠ 2 ಭಾಷೆಗಳು ಭಾರತೀಯ ಮೂಲದವಾಗಿರಬೇಕು
- ಗಣಿತ, ವಿಜ್ಞಾನಕ್ಕೆ ಎರಡು ಮಟ್ಟದ(ಅಡ್ವಾನ್ಸ್ ಆಯ್ಕೆ) ವ್ಯವಸ್ಥೆ
- ಎಐ, ಕಂಪ್ಯೂಟೇಷನಲ್ ಥಿಂಕಿಂಗ್ 2029ರಿಂದ ಬೋರ್ಡ್ ಕಡ್ಡಾಯ ವಿಷಯ
- ಡೋಗ್ರಿ, ಮೈಥಿಲಿ, ಕೊಂಕಣಿ, ಸಂತಾಳಿ ಸೇರಿ 22 ಭಾರತೀಯ ಭಾಷೆಗಳ ಆಯ್ಕೆ

ಸಿಟಿ, ಎಐ ಕಲಿಕೆ • ಪುಟ ೪

ಅಮೆರಿಕ–ಇಸ್ರೇಲ್, ಇರಾನ್ ಉದ್ವಿಗ್ನತೆ ಮತ್ತಷ್ಟು ತೀವ್ರ

ಇರಾನ್ ಸೇತುವೆ ಧ್ವಂಸ


• **ದುಬೈ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಉದ್ವಿಗ್ನತೆ ಮತ್ತಷ್ಟು ತೀವ್ರಗೊಂಡಿರುವ ಹಿನ್ನೆಲೆ, ಇತ್ತೀಚೆಗೆ ಇರಾನ್‌ನ ಕರಜ್ ಪ್ರದೇಶದಲ್ಲಿರುವ ಬಿ1 ತೈಲ ಸಂಪರ್ಕ ಸೇತುವೆ ಮೇಲೆ ನಡೆದ ದಾಳಿಯಲ್ಲಿ 8 ಮಂದಿ ನಾಗರಿಕರು ಮೃತಪಟ್ಟಿದ್ದು, 95 ಜನರು ಗಾಯಗೊಂಡಿದ್ದಾರೆ ಎಂದು ಇರಾನಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಈ ದಾಳಿಯನ್ನು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿವೆ. ದಾಳಿ ನಡೆದ ವೇಳೆ ಪ್ರವಾಸಿಗರು ಹಾಗೂ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.



ಇದಕ್ಕೆ ಪ್ರತಿಕ್ರಿಯೆ ನೀಡಿದ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಈ ದಾಳಿ ಇಸ್ಲಾಮಿಕ್ ಗಣರಾಜ್ಯದ ವಿರುದ್ಧದ ಅಪ್ರಚೋದಿತ ಯುದ್ಧವಾಗಿದ್ದು, ದೇಶ ತನ್ನ ಎಲ್ಲಾ ಸಾಮರ್ಥ್ಯಗಳನ್ನು ಬಳಸಿಕೊಂಡು ಪ್ರತಿರೋಧ ನೀಡಲಿದೆ ಎಂದು ಹೇಳಿದ್ದಾರೆ. ಇದೇ ವೇಳೆ ಅವರು ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಅವರೊಂದಿಗೆ ಮಾತುಕತೆ ನಡೆಸಿ ಪ್ರಾದೇಶಿಕ ಭದ್ರತೆ ಕುರಿತ ಮಾಹಿತಿ ಹಂಚಿಕೊಂಡಿದ್ದಾರೆ. ಇದರ ನಡುವೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ, ಹಾರ್ಮುಜ್ ಜಲಸಂಧಿಯಲ್ಲಿ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅಂತಾರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ಹಡಗು ಸಂಚಾರವನ್ನು ನಿಯಂತ್ರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಉಂಟಾಗಿರುವ ಅಸ್ಥಿರತೆಗೆ ಅಮೆರಿಕ ಮತ್ತು ಇಸ್ರೇಲ್ ಕ್ರಮಗಳೇ ಕಾರಣ ಎಂದು ಆರೋಪಿಸಲಾಗಿದೆ.

ಅಮೆರಿಕಕ್ಕೆ ಇರಾನ್ ಎಚ್ಚರಿಕೆ: ಇನ್ನೊಂದೆಡೆ, ಅಮೆರಿಕದ ಬೆದರಿಕೆಗಳಿಗೆ ಪ್ರತಿಕ್ರಿಯೆ ನೀಡಿದ ಇರಾನ್, ಬಾಂಬ್ ದಾಳಿಗಳ ಮೂಲಕ ತನ್ನ ನಾಗರಿಕತೆಯನ್ನು ನಾಶಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

➡ ಪುಟ ೪



ತೈಲ, ನೀರಿನ ಮೂಲಸೌಕರ್ಯ ಗುರಿಯಾಗಿಸಿ ಇರಾನ್ ದಾಳಿ

ಈ ನಡುವೆ ಇರಾನ್, ಕೊಲ್ಲಿ ದೇಶಗಳ ವಿವಿಧ ಭಾಗಗಳ ಮೇಲೆ ದಾಳಿ ಮುಂದುವರಿಸಿದೆ. ಕುವೈತ್‌ನ ಮಿನಾ ಅಲ್-ಅಹ್ಮದಿ ತೈಲ ಶುದ್ಧೀಕರಣ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿ ಅದನ್ನು ನಿಯಂತ್ರಿಸಲು ಪ್ರಯತ್ನಿಸಿದ್ದಾರೆ. ಅಲ್ಲದೆ, ಕುಡಿಯುವ ನೀರಿನ ಪ್ರಮುಖ ಮೂಲವಾದ ಡಿಸಾಲಿನೇಶನ್ ಘಟಕಕ್ಕೂ ಹಾನಿಯಾಗಿದೆ ಎಂದು ತಿಳಿದುಬಂದಿದೆ. ಈ ದಾಳಿಗಳ ಪರಿಣಾಮ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಆತಂಕ ಹೆಚ್ಚಾಗಿದೆ. ಬಹ್ರೇನ್‌ನಲ್ಲೂ ಎಚ್ಚರಿಕಾ ಸೈರನ್‌ಗಳು ಮೊಳಗಿದರೆ, ಸೌದಿ ಅರೇಬಿಯಾ, ಇರಾನ್‌ನ ಕೆಲವು ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ಹೇಳಿದೆ. ಇಸ್ರೇಲ್ ಮೇಲೆಯೂ ಕ್ಷಿಪಣಿಗಳ ದಾಳಿ ವರದಿಯಾಗಿದೆ. ಯುಎಇಯಲ್ಲಿ ಒಂದು ಅನಿಲ ಕ್ಷೇತ್ರವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಅಮೆರಿಕ ಸೇನೆ ಉನ್ನತ ಅಧಿಕಾರಿಗಳ ಪದಚ್ಯುತಿ



• **ವಾಷಿಂಗ್ಟನ್:** ಅಮೆರಿಕ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಅವರು ಸೇನೆಯ ಅತ್ಯುನ್ನತ ಹುದ್ದೆಯಲ್ಲಿದ್ದ ಅಧಿಕಾರಿ ಸೇರಿದಂತೆ ಇನ್ನಿಬ್ಬರು ಜನರಲ್‌ಗಳನ್ನು ಹಠಾತ್ತಾಗಿ ಪದಚ್ಯುತಗೊಳಿಸಿದ್ದಾರೆ ಎಂದು ಪೆಂಟಗನ್ ತಿಳಿಸಿದೆ. ಈ ನಿರ್ಧಾರಕ್ಕೆ ಸ್ಪಷ್ಟ ಕಾರಣವನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

➡ ಪುಟ ೪

ಅಮೆರಿಕದ ಯುದ್ಧ ವಿಮಾನ, ಕಾಪ್ಟರ್ ಪತನ

• **ಟೆಹ್ರಾನ್/ವಾಷಿಂಗ್ಟನ್:** ಇರಾನ್ ವಾಯು ರಕ್ಷಣಾ ದಳದ ದಾಳಿಯಿಂದ ಅಮೆರಿಕದ ಎಫ್–15 ಸ್ಟ್ರೈಕ್ ಈಗಲ್ ಯುದ್ಧ ವಿಮಾನ, ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಪತನವಾಗಿದ್ದು, ಯುದ್ಧ ವಿಮಾನದ ಇಬ್ಬರು ಪೈಲಟ್‌ಗಳು ಇದರಿಂದ ಆಚೆ ಜಿಗಿದಿದ್ದಾರೆ. ಅಮೆರಿಕವೂ ಈ ಯುದ್ಧ ವಿಮಾನದ ಮೇಲಿನ ದಾಳಿಯನ್ನು ದೃಢೀಕರಿಸಿದ್ದು, ಒಬ್ಬ ಪೈಲಟ್‌ನನ್ನು ರಕ್ಷಿಸಿರುವುದಾಗಿ ಹೇಳಿದೆ. ಹಾಗೆಯೇ, ಮತ್ತೊಬ್ಬನಿಗಾಗಿ ಶೋಧ ನಡೆಯುತ್ತಿದೆ ಎಂದು ಹೇಳಿಕೊಂಡಿದೆ.



ಹಾನಿ, ಸಾವಿನ ಸಂಖ್ಯೆ ಹೆಚ್ಚಳ

ಫೆ.28ರಿಂದ ಆರಂಭವಾದ ಈ ಯುದ್ಧದಲ್ಲಿ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ವೆಸ್ಟ್ ಬ್ಯಾಂಕಾಕ್‌ಲ್ಲಿ ಎರಡು ಡಜನ್‌ಗಿಂತ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

➡ ಪುಟ ೪


ಬಿಜಿಎಸ್ ಕ್ಯಾಂಪಸ್‌ನಲ್ಲಿ ಸಭೆ | ಭಾಗವತ್, ಅಮಿತ್ ಶಾ ಭಾಗಿ

ನೆಲಮಂಗಲದಲ್ಲಿಂದು ಧಾರ್ಮಿಕ ಸಭೆ

• **ನೆಲಮಂಗಲ(ಬೆಂಗಳೂರು ಗ್ರಾಮಾಂತರ):** ನಗರದ ಅರಿಶಿನಕುಂಟೆಯ ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಪಿಯು ಕಾಲೇಜು ಸಭಾಂಗಣದಲ್ಲಿ ಹಿಂದು ಧರ್ಮ ಆಚಾರ್ಯ ಮಹಾಸಭಾದಿಂದ ಶನಿವಾರ (ಏ.4) ಧಾರ್ಮಿಕ ಸಭೆ ಆಯೋಜಿಸಲಾಗಿದೆ.

ಈ ಧರ್ಮಸಭೆಯಲ್ಲಿ ದೇಶದ ನೂರಕ್ಕೂ ಹೆಚ್ಚು ಸ್ವಾಮೀಜಿಗಳು ಹಾಗೂ ಧಾರ್ಮಿಕ ಕೇಂದ್ರಗಳ ಪ್ರಮುಖರು ಪಾಲ್ಗೊಳ್ಳಲಿದ್ದು, ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ.

ಈಗಾಗಲೇ ಗುಜರಾತ್, ಉತ್ತರಪ್ರದೇಶ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಸ್ವಾಮೀಜಿಗಳು, ಸಾಧು-ಸಂತರು ಆದಿಚುಂಚನಗಿರಿ ಮಠ ಹಾಗೂ ಬಿಜಿಎಸ್ ಕ್ಯಾಂಪಸ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ರಾಜ್ಯದ ಹಲವು ಸ್ವಾಮೀಜಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.





ಬಿಗಿ ಭದ್ರತೆ

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿವಿಧ ಸ್ವಾಮೀಜಿಗಳು, ಸಂತರು ಆಗಮಿಸುತ್ತಿರುವ ಕಾರಣ ಭಾರೀ ಭದ್ರತೆ ಕೈಗೊಳ್ಳಲಾಗಿದೆ. ರಸ್ತೆಗಳಲ್ಲಿ ಕಾಲೇಜು, ಆಸ್ಪತ್ರೆ ಸುತ್ತಮುತ್ತಲ ಪ್ರದೇಶದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

➡ ಪುಟ ೪

ಹಿಂದು ಸಂಘಟನೆಗಳ ಆಕ್ರೋಶ | ಆರೋಪ, ಪ್ರತ್ಯಾರೋಪ

ಹುಬ್ಬಳ್ಳಿಯಲ್ಲಿ ಲವ್ ಜಿಹಾದ್ ಯತ್ನ

• **ಹುಬ್ಬಳ್ಳಿ:** ಮಗಳ ಜತೆ ಸಲುಗೆ ಬೆಳೆಸಿ ಲವ್ ಜಿಹಾದ್‌ಗೆ ಯತ್ನಿಸಿದ್ದಲ್ಲದೇ, ಕಿರುಕುಳ ನೀಡುತ್ತಿದ್ದಾನೆ ಎಂದು ಮುಸ್ಲಿಂ ಯುವಕನ ಮೇಲೆ ಕುಟುಂಬವೊಂದು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೆ, ಯುವಕನ ಕುಟುಂಬದವರು, ಲವ್ ಜಿಹಾದ್ ಸುಳ್ಳು ಆರೋಪವಾಗಿದ್ದು, ತಮ್ಮ ಹುಡುಗನ ಮೇಲೆ ಹಲ್ಲೆ ನಡೆಸಿ ಅಪಹರಣ ಮಾಡಿದ್ದಾರೆ ಎಂದು ಪ್ರತಿ ದೂರು ಸಲ್ಲಿಸಿದ್ದಾರೆ.

ಈ ನಡುವೆಯೇ ಹಿಂದು ಸಂಘಟನೆಗಳು ನಗರದಲ್ಲಿ ಪ್ರತಿಭಟನೆ ನಡೆಸಿ 'ಲವ್ ಜಿಹಾದ್' ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ. ಎಸ್‌ಎಸ್‌ಕೆ ಸಮಾಜದ ಜನರು ಹಾಗೂ ಹಿಂದು ಪರ ಸಂಘಟನೆಯವರು ಆತನನ್ನು ಕರೆದೊಯ್ದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದು, ಆತನ ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ತನಿಖೆಯ ಭರವಸೆ, ಪ್ರತಿಭಟನೆ ವಾಪಸ್: ಪ್ರಕರಣದ ಕುರಿತು ದೂರು ದಾಖಲಿಸಿಕೊಂಡು ಸಮಗ್ರ ತನಿಖೆ ನಡೆಸುವುದಾಗಿ ಪೊಲೀಸರು ಭರವಸೆ ನೀಡಿದ ಹಿನ್ನೆಲೆ ಪ್ರತಿಭಟನೆ ಹಿಂಪಡೆದಿದ್ದಾರೆ.

➡ ಪುಟ ೪



ಘಟನೆ ಕುರಿತು ದೂರು ಹಾಗೂ ಪ್ರತಿದೂರು ದಾಖಲಾಗಿದ್ದು, ಈ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
■ **ಎನ್. ಶಶಿಕುಮಾರ್,** ಹು-ಧಾ ಕಮಿಷನರೇಟ್ ಘಟಕದ ಆಯುಕ್ತ

ಸಿಎಸ್‌ಗೆ ರಾಜ್ಯಪಾಲರ ಪತ್ರ

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ. ಈ ಕುರಿತು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ಅವರಿಗೆ ಪತ್ರ ಬರೆದಿದ್ದು, ಸರ್ಕಾರದ ನಿರ್ಧಾರವನ್ನು ಮರು ಪರಿಶೀಲನೆ ಮಾಡುವಂತೆ ತಿಳಿಸಲಾಗಿದೆ.

ಎಸ್ಸೆಸ್ಸೆಲ್ಸಿ ಹಿಂದಿ ಪರೀಕ್ಷೆಗೆ ಅಂಕಗಳ ಬದಲು ಗ್ರೇಡ್

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕಗಳನ್ನು ನೀಡದೆ, ಕೇವಲ ಗ್ರೇಡ್ ನೀಡುವ ನಿರ್ಧಾರವನ್ನು ಮರುಪರಿಶೀಲಿಸಿ. ಭಾಷಾವೈವಿಧ್ಯತೆ, ಜಾಗೃತಿ, ಬೌದ್ಧಿಕ ಬೆಳವಣಿಗೆಯನ್ನು ಬೆಳೆಸುವಲ್ಲಿ ತೃತೀಯ ಭಾಷೆಯು ಪ್ರಮುಖ ಪಾತ್ರ ವಹಿಸುತ್ತದೆ.

➡ ಪುಟ ೪

ಮುಖ್ಯ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿ ವಿಶ್ವಾಸ

ಭಾರತದಲ್ಲಿ ಪಿಒಕೆ ವಿಲೀನ ಶೀಘ್ರ

• **ಶ್ರೀನಗರ:** ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದು ಶೀಘ್ರದಲ್ಲೇ ಭಾರತದೊಂದಿಗೆ ಮತ್ತೆ ಏಕೀಕರಣಗೊಳ್ಳಲಿದೆ ಎಂದು ಅಖಿಲ ಭಾರತೀಯ ಇಮಾಮ್ ಸಂಘಟನೆ ಮುಖ್ಯ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿ ಶುಕ್ರವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಾಶ್ಮೀರದಲ್ಲಿ ನಿಂತು ನಮ್ಮ ನೆರೆಯ ದೇಶಕ್ಕೆ ನಾನು ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ಪಿಒಕೆ ಖಂಡಿತವಾಗಿಯೂ ಭಾರತಕ್ಕೆ ಮತ್ತೆ ಸೇರುತ್ತದೆ. ಏಕೆಂದರೆ ಪಿಒಕೆ ಜನರು ಅಲ್ಲಿ ಜನಾಭಿಪ್ರಾಯ ಸಂಗ್ರಹಿಸಲು ಬಯಸುತ್ತಾರೆ. ದೇವರ ಇಚ್ಛೆಯಿದ್ದರೆ, ಅವರ 'ಘರ್ ವಾಪಸಿ' ಶೀಘ್ರ ನಡೆಯಲಿದೆ. ಅದನ್ನು ಬಯಸುವುದು ಅಲ್ಲಿನ ಜನರೇ. ಇಂದು ಕಾಶ್ಮೀರ ಹೇಗೆ ಪ್ರಗತಿ ಹೊಂದುತ್ತಿದೆ ಎಂಬುದನ್ನು ನೋಡಿದರೆ, ಇಂತಹ ಅಭಿವೃದ್ಧಿಯನ್ನು ಕಂಡು ಸಂತಸಗೊಂಡು ಪಿಒಕೆ ಶೀಘ್ರದಲ್ಲೇ ಭಾರತದೊಂದಿಗೆ ಮತ್ತೆ ಸೇರಿಕೊಳ್ಳಲಿದೆ ಎಂದರು. ಕಳೆದ ವರ್ಷ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಪ್ರವಾಸಿಗರು ಸೇರಿ 25 ಮಂದಿ ಸಾವಿಗೀಡಾದ ಘಟನೆಯನ್ನು ಉಲ್ಲೇಖಿಸಿದ ಇಲ್ಯಾಸಿ, ಈ ಘಟನೆ ನಂತರ ಸ್ವಲ್ಪ ಸಮಯದವರೆಗೆ ಪ್ರವಾಸೋದ್ಯಮ ಕುಸಿದಿದೆ.



➡ ಪುಟ ೪



ಇಂದಿನ ಕಾಶ್ಮೀರ ಅತ್ಯುತ್ತಮ

370ನೇ ವಿಧಿಯನ್ನು ರದ್ದುಗೊಳಿಸಿದ ಬಳಿಕ ಕಾಶ್ಮೀರ ಸಂಪೂರ್ಣ ರೂಪಾಂತರಗೊಂಡಿದೆ. ಇಂತಹ ಬದಲಾದ ಕಾಶ್ಮೀರವನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಇದು ಹೊಸ ಕಾಶ್ಮೀರ. ಇಂದಿನ ಕಾಶ್ಮೀರ ಅತ್ಯುತ್ತಮವಾಗಿದೆ; ಎಲ್ಲೆಡೆ ಸಮೃದ್ಧಿ ಇದೆ ಮತ್ತು ಪ್ರವಾಸೋದ್ಯಮ ಹೆಚ್ಚಾಗಿದೆ. ಇಲ್ಲಿನ ಜನರು ಸಂಪನ್ನರಾಗಿದ್ದಾರೆ.

➡ ಪುಟ ೪

ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯಕ್ಕೆ ಬಲ



ನೌಕಾಪಡೆಗೆ ಐಎನ್‌ಎಸ್ ಅರಿದಮನ್ ಜಲಾಂತರ್ಗಾಮಿ ನೌಕೆ ಸೇರ್ಪಡೆ

• **ಹೊಸದಿಲ್ಲಿ:** ಭಾರತದ ರಕ್ಷಣಾ ಸಾಮರ್ಥ್ಯದಲ್ಲಿ ಮಹತ್ವದ ಬೆಳವಣಿಗೆಯಾಗಿ, ದೇಶದ ಮೂರನೇ ಸ್ವದೇಶಿ ಅಣುಶಕ್ತಿ ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಅರಿದಮನ್ ಅನ್ನು ಭಾರತೀಯ ನೌಕಾಪಡೆಗೆ ಶುಕ್ರವಾರ ಸೇರ್ಪಡೆ ಮಾಡಲಾಗಿದೆ.

➡ ಪುಟ ೪

ಕಿರುಸುದ್ದಿ

ಅಹವಾಲು ಸ್ವೀಕಾರ ಇಂದು

ಕುಂದಗೋಳ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಏ.4 ಶನಿವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳಿಂದ ಸಾರ್ವಜನಿಕ ಅಹವಾಲು ಸ್ವೀಕಾರ ಸಭೆ ಜರುಗಲಿದೆ. ರೈತ ಬಾಂದವರು, ನಾಗರಿಕರು ಸಭೆ ಬಂದು ತಮ್ಮ ಅಹವಾಲು ಸಲ್ಲಿಸಿ ಸಮಸ್ಯೆಗಳ ಬಗ್ಗೆ ಚರ್ಚಿಸಬಹುದೆಂದು ತಹಶೀಲ್ದಾರ್ ರಾಜು ಮಾವರಕರ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹನುಮಾನ್ ಭಾವಚಿತ್ರ ಮೆರವಣಿಗೆ



ಅಣ್ಣಿಗೇರಿ: ಶ್ರೀ ಪತ್ರೇಶ್ವರ ಯುವಕ ಮಂಡಳ ಹಾಗೂ ಹನುಮಾನ್ ಉತ್ಸವ ಸಮಿತಿ ಕಮತಗೇರಿ ಓಣಿ ಅಣ್ಣಿಗೇರಿ ಇವುಗಳ ಸಹಯೋಗದಲ್ಲಿ ಹನುಮ ಜಯಂತಿ ಪ್ರಯುಕ್ತ ಶ್ರೀ ಹನುಮಾನ್ ಭವ್ಯ ಮೆರವಣಿಗೆಗೆ ನಗರದ ದಾಸೋಹ ಮಠದ ಪೀಠಾಧಿಪತಿ ಡಾ. ಶಿವಕುಮಾರ್ ಮಹಾಸ್ವಾಮಿಗಳು ಆಶೀರ್ವಚನ ನೀಡಿ ಚಾಲನೆ ನೀಡಿದರು. ನಗರದ ಪ್ರಮುಖ ರಾಜಬೀದಿಗಳಲ್ಲಿ ಬೃಹದಾಕಾರದ ಡಿಜೆಯೊಂದಿಗೆ ಯುವಕರು ಕುಣಿದು ಕುಪ್ಪಳಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ದೇವರಾಜ್ ದಾಡಿಬಾವಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಚಂಬಣ್ಣ ಆಲೂರ, ನಿಂಗನಗೌಡ್ರು ಕುರಹಟ್ಟಿ, ಬಸನ ಗೌಡ್ರು ಕುರಹಟ್ಟಿ, ಸಿದ್ದನಗೌಡ್ರ ಕುರಹಟ್ಟಿ, ರಾಚಯ್ಯ ಯರಗಂಬಳಿಮಠ, ಚಂದ್ರಗೌಡ್ರು ಕಿತ್ತೂರ, ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಯುವಕ ಮಿತ್ರರು, ಹಿರಿಯರು ಇದ್ದರು.

ಮಹಾನಗರ ಪಾಲಿಕೆ ಇಬ್ಭಾಗ ಬೇಡ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಇಬ್ಭಾಗ ಮಾಡಬಾರದೆಂದು ಕವಿವಿಯ ಮಾಜಿ ಸಿಂಡಿಕೆಟ್ ಸದಸ್ಯ ದಿಲೀಪ್ ಗೋತ್ರಾಳಿ, ಜಯಂತ ಸಾಗರ, ಎಂ.ಬಿ.ಮಟ್ಟಿ, ಎಸ್.ಎಸ್.ಕಣವಿ, ಮೋಹನ ಪಾಟೀಲ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಕೇವಲ 18 ಕಿ.ಮೀ ದೂರವಿರುವ ಉಭಯ ನಗರಗಳ ಬೇರ್ಪಡಿಸದೇ, ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ವಾಣಿಜ್ಯ ಕೇಂದ್ರವಾಗಿ ಹುಬ್ಬಳ್ಳಿ, ಶೈಕ್ಷಣಿಕ ಕೇಂದ್ರವಾಗಿ ಧಾರವಾಡ ಬೆಳವಣಿಗೆಗೆ ಸರ್. ಸಿದ್ದಪ್ಪ ಕಂಬಳಿ, ಬಿ.ಎಲ್.ಪಾಟೀಲ, ದ.ಪ.ಕರ್ಮಕರ್, ಜಿ.ಆರ್. ನಲವಡಿ ಯೋಚಿಸಿ, ಮಹಾನಗರ ಪಾಲಿಕೆ ಮಾಡಿದ್ದಾಗಿ ತಿಳಿಸಿದ್ದಾರೆ. ಹುಡಾ ಅಧ್ಯಕ್ಷರಾದ ಶಾಕೀರ ಸನದಿ ಅವರು, 45 ಹಳ್ಳಿ ಸೇರಿಸಿ ಹೊಸ ಯೋಜನೆ ರೂಪಿಸಿದ್ದಾರೆ. ಇದು ಅಭಿವೃದ್ಧಿಯ ಒಂದು ಭಾಗವೂ ಹೌದು. ಹೀಗಾಗಿ ನಮ್ಮ ಪಾಲಿಕೆ ಇಬ್ಭಾಗಿಸುವುದು ಬೇಡ ಎಂದು ಮನವಿ ಮಾಡಿದ್ದಾರೆ. ನಮ್ಮ ಹಿರಿಯರ ಕನಸುಗಳಿಗೆ ಚ್ಯುತಿ ಬರದಂತೆ ಸಚಿವರಾದ ಪ್ರಹ್ಲಾದ್ ಜೋಶಿ, ಶಾಸಕರಾದ ಅರವಿಂದ ಬೆಲ್ಲದ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೆ ಪಾಲಿಕೆ ಇಬ್ಭಾಗಕ್ಕೆ ಅವಕಾಶ ನೀಡಬಾರದು ಎಂದು ಹೇಳಿದ್ದಾರೆ.

ವಿಶ್ವಕರ್ಮ ವಧು-ವರರ ಸಮಾವೇಶ

ಧಾರವಾಡ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದಿಂದ 'ರಾಜ್ಯ ಮಟ್ಟದ ವಿಶ್ವಕರ್ಮ ವಧು-ವರರ ಸಮಾವೇಶವನ್ನು ಏ.24ರ ಬೆಳಿಗ್ಗೆ 10 ಗಂಟೆಗೆ ಬೆಂಗಳೂರು ಶಿವಾನಂದ ವೃತ್ತದ ಗುರುರಾಜ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾ ಧಾರವಾಡ ಜಿಲ್ಲಾಧ್ಯಕ್ಷ ಕಾಳಪ್ಪ ಬಡಿಗೇರ, ಮಹಸಭಾದ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ನೇತೃತ್ವದಲ್ಲಿ ಪಂಚ ಕಸುಬು ಮಾಡುವ ಸಮಾಜದ ಜನರ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೋರಿದರು.

ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ನೋಂದಣಿ ಪ್ರಕ್ರಿಯೆ ನಡೆಯಲಿದೆ. ವಾಟ್ಸಪ್‌ನಲ್ಲಿ ಅರ್ಜಿ ಭರ್ತಿ ಮಾಡಬಹುದು. ನೋಂದಣಿ ಉಚಿತವಾಗಿದ್ದು, ವಧು-ವರರು, ವಿಚ್ಛೇಧಿತರು, ವಿಧವೆ-ವಿದುರರು ಕೂಡ ಪಾಲ್ಗೊಳ್ಳಬಹುದು ಎಂದು ಮಾಹಿತಿ ನೀಡಿದರು.

ವಧು-ವರರು ಮತ್ತು ಪಾಲಕರಿಗೆ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಿದೆ. ಸಮಾವೇಶದಲ್ಲಿ ಪಾಲ್ಗೊಳ್ಳುವ ವಧು-ವರರು ಮಾಹಿತಿಗೆ ಮೊ:9886423935 ಮತ್ತು ಮಂಜುನಾಥ ಬಡಿಗೇರ 7795068629ಕ್ಕೆ ಸಂಪರ್ಕಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ ಬಡಿಗೇರ, ನಾರಾಯಣ ಬಡಿಗೇರ, ಮಾನಪ್ಪ ಪತಾರ, ವಿಠ್ಠಲ ಕಮ್ಮಾರ, ಗಂಗಪ್ಪ ಕಮ್ಮಾರ, ನಾಗಲಿಂಗ ಪತ್ತಾರ, ಸಂಕ್ರಪ್ಪ ಕಮ್ಮಾರ ಇದ್ದರು.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠದ ನೂತನ ಚೇರಮನ್ ರಾದ ಬಾಳು ಮಗಜಿಕೊಂಡಿ ಹಾಗೂ ವೈಸ್ ಚೇರಮನ್ ಗೀತಾ ಕಲಬುರಗಿ ಅವರಿಗೆ ಹುಬ್ಬಳ್ಳಿ ಎಸ್‌ಎಸ್‌ಕೆ ಸಮಾಜ ಕೇಂದ್ರ ಪಂಚಾಯತ್ ಸಮುದಾಯ ಮುಖಂಡರು ಸನ್ಮಾನಿಸಿದರು.

ಅಧ್ಯಕ್ಷರಾಗಿ ಅಶೋಕ ಘೋರ್ಪಡೆ ಆಯ್ಕೆ

ಕುಂದಗೋಳ: ತಾಲೂಕು ಮರಾಠ ಸಮಾಜದ ಅಧ್ಯಕ್ಷರಾಗಿ ಅಶೋಕ ಘೋರ್ಪಡೆ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.



ಪಟ್ಟಣದ ಮರಾಠ ಸಾಂಸ್ಕೃತಿಕ ಭವನದಲ್ಲಿ ಶುಕ್ರವಾರ ಜರುಗಿದ ತಾಲೂಕು ಮಟ್ಟದ ಮರಾಠ ಸಮಾಜ ಬಾಂಧವರ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ಹಿಂದಿನ ಅಧ್ಯಕ್ಷ ವಿಠಲ್ ಚವ್ಹಾಣ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಮರಾಠ ಸಮಾಜದ ನೂತನ ಅಧ್ಯಕ್ಷರನ್ನಾಗಿ ಅಶೋಕ ಘೋರ್ಪಡೆ ಅವರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಸಮಾಜದ ಹಿರಿಯರಾದ ಜ್ಯೋತಿಭಾ ಖೈರೋಜಿ, ಪವಂ ಮಾಜಿ ಅಧ್ಯಕ್ಷ ಗಣೇಶ ಕೊಕಾಟೆ, ಮರಾಠ ಸಮಾಜದ ನಗರ ಘಟಕದ ಅಧ್ಯಕ್ಷ ಜ್ಯೋತಿಭಾ ಶಿಂಧೆ, ಕೃಷ್ಣಾ ಮಾನಪ್ಪನವರ, ಪರಮೇಶಿ ಕವಟೇಕರ, ಸಂಭಾಜಿ ತಡಸದ, ವಿಠಲ್ ಜಗತಾಪ, ಭಾಸ್ಕರ ಪವಾರ, ಪಾಂಡು ಕುಂಕೂರ, ಬಸವರಾಜ ವಡೇಪೇನವರ, ವಿಠಲ್ ಕುರಾಡೆ, ಪೀರಪ್ಪ ಘೋರ್ಪಡೆ, ತುಕಾರಾಮ ಚವ್ಹಾಣ, ವಿಠಲ್ ಘಾಟಗೆ, ಗಂಗಾಧರ ಡಾಂಗೆ, ಗಿರೀಶ ಘಾಟಗೆ, ಸಂಭಾಜಿ ಚವ್ಹಾಣ, ರವಿ ರೋಡೆ, ಬಸವರಾಜ ನರಗುಂದ, ವಿವಿಧ ಗ್ರಾಮಗಳಿಂದ ಆಗಮಿಸಿದ ಸಮಾಜದ ಬಾಂಧವರು ಉಪಸ್ಥಿತರಿದ್ದರು.



ಧಾರವಾಡ: ನಗರದ ಸೇಂಟ್ ಜೋಸೆಫ್ ಚರ್ಚ್ ಹಾಗೂ ಬಾಸೆಲ್ ಮಿಷನ್ ಚರ್ಚ್‌ನಲ್ಲಿ ಶುಕ್ರವಾರ ಕ್ರೈಸ್ತ ಬಾಂಧವರು ಏಸು ಕ್ರಿಸ್ತನ ಶಿಲುಬೆಗೇರಿಸಿದ ಪವಿತ್ರ ದಿನವಾದ ಗುಡ್ ಫ್ರೈಡೆ ಆಚರಿಸಿದ ಕ್ಷಣ.

ಡಾ.ಕಾಪಸೆ ಪ್ರಶಸ್ತಿ ಪ್ರದಾನ ಸಮಾರಂಭ | ಚಿಂತಕ ಪಾಟೀಲ ಅಭಿಮತ

ಸಾಹಿತ್ಯಕ್ಕೆ ಡಾ.ಕಾಪಸೆ ಕೊಡುಗೆ ಅಪಾರ

ಧಾರವಾಡ: ಸಾಹಿತ್ಯ-ಸಂಶೋಧನಾ ಕ್ಷೇತ್ರಕ್ಕೆ ಡಾ. ಗುರುಲಿಂಗ ಕಾಪಸೆ ಕೊಡುಗೆ ಅಪಾರ ಎಂದು ಅಥಣಿ ದೇವದಾಸಿ ವಿಮೋಚನಾ ಸಂಸ್ಥೆಯ ಅಧ್ಯಕ್ಷ ಬಿ.ಎಲ್. ಪಾಟೀಲ ಹೇಳಿದರು.

ಡಾ.ಗುರುಲಿಂಗ ಕಾಪಸೆ ದತ್ತಿ ಅಂಗವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಡಾ.ಗುರುಲಿಂಗ ಕಾಪಸೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನಿಸಿ ಮಾತನಾಡಿದ ಅವರು, ಮಹಿಳಾ ಶೋಷಣೆ ಕುರಿತು ಡಾ.ವೀಣಾ ಅವರು ಬರೆದ ಪುಸ್ತಕ ತಮ್ಮ ಮೇಲೆ ಪ್ರಭಾವ ಬೀರಿದ ಕಾರಣ ದೇವದಾಸಿಯರ ಶ್ರೇಯೋಭಿವೃದ್ಧಿಗೆ ದುಮ್ಮುಕಿದ್ದಾಗಿ ಹೇಳಿದರು.

ಚನ್ನಬಸವಣ್ಣ ಕೇವಲ ಪ್ರಕಾಶಕ ಮಾತ್ರವಲ್ಲ, ಹಲವು ಸಂಘ ಸಂಸ್ಥೆಗಳಿಗೆ ಆಶ್ರಯ ನೀಡಿದ ಮಹಾನ್ ವ್ಯಕ್ತಿ. ಇವರನ್ನು ಗುರುತಿಸಿ ಡಾ.ಕಾಪಸೆ ಪ್ರಶಸ್ತಿ ನೀಡಿರುವುದು ಶ್ಲಾಘಿಸಿದರು.

ಕಾಪಸೆ ಅವರು ಹಾಲಕ್ಕಿ ಸಂಸ್ಕೃತಿ ಮತ್ತು ಅರವಿಂದರ ತತ್ವಗಳನ್ನು ನಾಡಿಗೆ ಪರಿಚಯಿಸಿದವರು. ಅವರ ಹೆಸರಿನ ಪ್ರಶಸ್ತಿ ಅರ್ಹರಿಗೆ ನೀಡಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿದ ಡಾ.ವೀಣಾ ಶಾಂತೇಶ್ವರ ಮಾತನಾಡಿ, ವೈಚಾರಿಕ ಉದಾರತೆ ಡಾ.ಗುರಲಿಂಗ ಕಾಪಸೆ ಅವರ ದೊಡ್ಡ ಗುಣ. ಸದಾ ಮಹಿಳೆಯರಿಗೆ ಪ್ರೋತ್ಸಾಹ ನೀಡಿದ್ದರು. ಪ್ರಾಥಮಿಕ ಹಂತದಲ್ಲಿ ಭಾಷೆ ಅಪ್ಪಿಕೊಳ್ಳಲು ಪ್ರೇರಣೆ ನೀಡುತ್ತಿದ್ದ ಕಾಪಸೆ ಅವರು, ಬದುಕಿನುದ್ದಕ್ಕೂ ಶಾಂತಿ ಮಂತ್ರವನ್ನೇ ಪ್ರತಿಪಾದಿಸಿದ್ದು, ಅವು ಪ್ರಸ್ತುತವಾಗಿವೆ ಎಂದರು.



ಇನ್ನೋರ್ವ ಪ್ರಶಸ್ತಿ ಪುರಸ್ಕೃತ ಚನ್ನಬಸಣ್ಣ ಮಾತನಾಡಿ, ಲೋಹಿಯಾ ಸಿದ್ಧಾಂತ ಯುವಕರಿಗೆ ತಲುಪಿಸಿದ ಶ್ರೇಯಸ್ಸು ಕಾಪಸೆ ಅವರಿಗೆ ಸಲ್ಲುತ್ತದೆ ಎಂದು ಸ್ಮರಣೆ ಮಾಡಿದರು.

ತಲಾ ರೂ. 25 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಪ್ರಶಸ್ತಿಯನ್ನು ಲೇಖಕಿ ಡಾ. ವೀಣಾ ಶಾಂತೇಶ್ವರ, ಲೋಹಿಯಾ ಪ್ರಕಾಶನದ ಪ್ರಕಾಶಕ ಸಿ.ಚನ್ನಬಸವಣ್ಣ ಅವರಿಗೆ ಪ್ರದಾನ ಮಾಡಲಾಯಿತು. ರೂ.5 ಸಾವಿರ ನಗದು ಒಳಗೊಂಡ ಡಾ.ಗುರುಲಿಂಗ ಕಾಪಸೆ ವಿದ್ಯಾರ್ಥಿ ನಗದು ಬಹುಮಾನವನ್ನು ಸ್ನಾತಕೋತ್ತರ ವಿದ್ಯಾರ್ಥಿನಿ ರಾಜೇಶ್ವರಿ ಹುಲಮನಿಗೆ ನೀಡಿ ಗೌರವಿಸಲಾಯಿತು.

ಡಾ.ಸಿದ್ದನಗೌಡ ಪಾಟೀಲ ಮಾತನಾಡಿದರು. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಸಾದರ, ಡಾ.ವೀರಣ್ಣ ರಾಜೂರ, ಸತೀಶ ತುರಮರಿ, ಶಂಕರ ಹಲಗತ್ತಿ, ಶಂಕರ ಕುಂಬಿ ಇದ್ದರು.

ಜನಪದ ಕಲೆಗಳು ದೇಶಕ್ಕೆ ಮಾದರಿ

ಧಾರವಾಡ: ಉತ್ತರ ಕರ್ನಾಟಕದ ಜನಪದ ಕಲೆಗಳು, ಆಚರಣೆಗಳು ದೇಶದಕ್ಕೆ ಮಾದರಿ. ಅಲ್ಲದೇ, ಪ್ರಾದೇಶಿಕವಾಗಿ ವೈವಿಧ್ಯಮಯ ಭಾಷೆ, ಸಾಹಿತ್ಯ ಕಲಾ ಪ್ರಕಾರ ಪ್ರತಿಬಿಂಬಿಸುತ್ತವೆ ಎಂದು ಮಸ್ಕಿ ಚಾಲುಕ್ಯ ಕೂಟದ ಜಯಾ ಛಬ್ಬಿ ಹೇಳಿದರು.

ಜಾನಪದ ಸಂಶೋಧನಾ ಕೇಂದ್ರ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಸಂಭ್ರಮ, ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಸಂಸ್ಕೃತಿಯ ಉಳಿವಿನಲ್ಲಿ ಉತ್ತರ ಕರ್ನಾಟಕದ ಕೊಡುಗೆ ಅಪಾರವಿದೆ ಎಂದರು.

ಮಹಾದೇವಿ ಕೊಪ್ಪದ ಮಾತನಾಡಿ, ಜಾನಪದ ಸಂಶೋಧನಾ ಕೇಂದ್ರ ಇಂದಿನ ಯುವ ಪೀಳಿಗೆಗೆ ನಮ್ಮ ಭಾಷೆ, ಜಾನಪದ ಕಲೆಗಳು, ಕಲಾವಿದರು, ಹಬ್ಬಗಳ ಕುರಿತು ಒಂದಿಲ್ಲೊಂದು ಕಾರ್ಯದಿಂದ ಅರಿವು ಮೂಡಿಸುವುದ ಶ್ಲಾಘನೀಯ ಎಂದರು.

ಡಾ.ಜ್ಯೋತಿರ್ಲಿಂಗ ಹೊನಕಟ್ಟಿ ಮಾತನಾಡಿ, ಅನಕ್ಷರಸ್ಥರತಾಯಂದಿರಿಂದ ಜನಪದ ಸಾಹಿತ್ಯ ಉಳಿದು, ಬೆಳೆದು ಬಂದಿದೆ. ಪೊಲೀಸ್ ಇಲಾಖೆ ಸೇರುವಲ್ಲಿ ಜಾನಪದ ಹಾಡುಗಳ ಕೂಡ ಕಾರಣ. ಈ ಜನಪದ ಕಲೆ ಉಳಿಸಬೇಕು ಎಂದರು.

2025-26ನೇ ಸಾಲಿನಲ್ಲಿ ಕರ್ನಾಟಕದ ವಿವಿಧ ಅಕ್ಯಾಡೆಮಿಗಳಿಂದ ಪ್ರಶಸ್ತಿ ಪಡೆದ ರೋಹಿಣಿ ಇಮರಾತಿ, ನಾಗರತ್ನ ಹಡಗಲಿ, ಮೇಘಾ ಹುಕ್ಕೇರಿ, ವೀಣಾ ಹೊಸಮನಿ, ಗೋಪಾಲ ಉಣಕಲ್, ಪ್ರಕಾಶ ಮಲ್ಲಿಗವಾಡ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಅಲ್ಲದೇ, ಲಲಿತಾ ಪಾಟೀಲ, ಲೀಲಾವತಿ ಹೋಗಾಡಿ, ಭೀಮನಗೌಡ ಕಠಾವಿ, ಗೀತಾ ಚಿಕ್ಕಮಠ, ಡಾ.ಜ್ಯೋತಿರ್ಲಿಂಗ ಹೊನಕಟ್ಟಿ ಅವರನ್ನು ಸಹ ಸನ್ಮಾನಿಸಿ, ಗೌರವಿಸಲಾಯಿತು. ವೇದಿಕೆಯಲ್ಲಿ ಡಾ.ಲಿಂಗರಾಜ ಅಂಗಡಿ, ಶಂಕರ ಕುಂಬಿ ಇದ್ದರು.

ಜೇನುಗೂಡು ಮಹಿಳಾ ಮಂಡಳ, ಕಲ್ಪತರು ಮಹಿಳಾ ಮಂಡಳಗಳು ನೃತ್ಯಗಳು, ಜಾನಪದ ಸಂಗೀತ ಬಳಗ, ಸಂಗಡಿಗರು ತತ್ವಪದ, ಹಬ್ಬದಹಾಡು ಭಾವಗೀತೆ, ಗೀತಾಕುಂಬಿ, ಅನಸಕ್ಕ, ಸುವರ್ಣ ಹೊಂಗಲ ತಂಡದವರು ಜಾನಪದ ಗೀತೆ ಪ್ರಸ್ತುತಪಡಿಸಿದರು.

ಇಸಾಬೆಲ್ಲ ಜೇವಿಯರ, ಉಷಾ ಗದ್ದಿಗಿಮಠ, ಸುಜಾತ ಹಡಗಲಿ, ಪ್ರಭಾ ನೀರಲಗಿ, ವಿಶ್ವೇಶ್ವರಿ ಹಿರೇಮಠ, ಸುಜಾತಾ ಹಡಗಲಿ, ಭಾರತಿ ಕಲ್ಮಠ, ಬಾಳಪ್ಪ ಚಿನಗುಡಿ, ನಂದಾ ಗುಳೇದಗುಡ್ಡ, ಗಿರಿಜಾ ಶೆಕ್ಕಿ, ಸುನಂದಾ ಬನ್ನಿ, ಗುರು ಕಲ್ಮಠ ಇದ್ದರು.



ರಾಮನವಮಿ, ಹನುಮ ಜಯಂತಿ ಆಚರಣೆ ನಾಳೆ

ಹುಬ್ಬಳ್ಳಿ: ಇಲ್ಲಿನ ಹಳೇಹುಬ್ಬಳ್ಳಿಯ ಆನಂದ ನಗರದ ಶ್ರೀರಾಮ ಉತ್ಸವ ಸಮಿತಿ ಚಾರಿಟಬಲ್ ಟ್ರಸ್ಟ್ ವತಿಯಿಂದ 12ನೇ ವರ್ಷದ ರಾಮನವಮಿ ಹಾಗೂ ಹನುಮ ಜಯಂತಿ ಸಮಾರಂಭವನ್ನು ಏ.5ರಂದು ಆಯೋಜಿಸಲಾಗಿದೆ ಎಂದು ಹಿಂದೂ ಸಮಾಜದ ಮುಖಂಡ ಕುಮಾರ ಹಕಾರಿ ಹೇಳಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಆನಂದ ನಗರ ವೃತ್ತದಲ್ಲಿ ಬೃಹತ್ ಸಮಾವೇಶ, ಸಂಜೆ 6 ಗಂಟೆಗೆ ಸಿದ್ಧಾರೂಢ ಮಠದವರೆಗೆ ಶ್ರೀರಾಮ ಹಾಗೂ ಆಂಜನೇಯನ ಮೂರ್ತಿಗಳ ಮೆರವಣಿಗೆ ನಡೆಸಲಾಗುವುದು ಎಂದರು. ಮುಖ್ಯ ಅತಿಥಿಗಳಾಗಿ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ ಭಾಗವಹಿಸುವರು. ರಾಯನಾಳ ವಿರಕ್ತಮಠದ ಅಭಿನವ ರೇವಣಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದರು. ಟ್ರಸ್ಟ್ ಕಮಿಟಿಯ ಸಂಜೀವಗೌಡ ಮಾಳಗಿ, ಮಂಜುನಾಥ ಮಾಳಗಿ, ಅಮರ ಪಾಟೀಲ, ಸಂಜು ಬಿರಾದಾರ ಇದ್ದರು.

ತೈಲ ಬೆಲೆ ಏರಿಕೆ ಕಡಿತಗೊಳಿಸಲು ಆಗ್ರಹ

ಹುಬ್ಬಳ್ಳಿ: ಎಲ್‌ಪಿಜಿ, ಪೆಟ್ರೋಲ್ ಬೆಲೆ ಏರಿಕೆಯನ್ನು ಕಡಿಮೆ ಮಾಡುವಂತೆ ಆಗ್ರಹಿಸಿ ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಇಲ್ಲಿಯ ಚನ್ನಮ್ಮ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಮಿನಿ ವಿಧಾನ ಸೌಧದ ವರೆಗೂ ಮೆರವಣಿಗೆ ನಡೆಸಿ, ತಹಶೀಲ್ದಾರ ಕಚೇರಿ ಸಿಬ್ಬಂದಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಎಲ್‌ಜಿ, ಪೆಟ್ರೋಲ್ ದರ ಏರಿಕೆ ಹಾಗೂ ಕೆಲ ಪೆಟ್ರೋಲ್ ಪಂಪ್‌ಗಳಲ್ಲಿ ಹೆಚ್ಚಿನ ದರದಲ್ಲಿ ಇಂಧನ ಮಾರಾಟ ಮಾಡುತ್ತಿರುವುದನ್ನು ಖಂಡಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಆಟೋ ಚಾಲಕರು ಬೆಲೆ ಏರಿಕೆಯಿಂದ ಬಾಡಿಗೆ ದರ ಹೆಚ್ಚಳ ಮಾಡಿದಾಗ ಗ್ರಾಹಕರು ದರದಲ್ಲಿ ಚೌಕಾಸಿ ಮಾಡುವ, ಎಲ್‌ಪಿಜಿ ದರ ಕಾಳಸಂತೆಯಲ್ಲಿ ಹೆಚ್ಚಳ ಮಾಡಿರುವ ಅಣಕು ಪ್ರದರ್ಶನ ಮಾಡಿದರು.

ಸಂಘದ ಅಧ್ಯಕ್ಷ ಶೇಖರಯ್ಯ ಮಠಪತಿ ಮಾತನಾಡಿ, ಇರಾನ್-ಅಮೇರಿಕಾ-ಇಸ್ರೇಲ್ ಯುದ್ಧದಿಂದಾಗಿ ಪೆಟ್ರೋಲ್, ಎಲ್‌ಪಿಜಿ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿದ್ದು, ಖಂಡನೀಯ. ಈ ಮೊದಲು ಎಲ್‌ಪಿಜಿ ದರ ಪ್ರತಿ ಲೀಟರ್‌ಗೆ 58 ರೂ. ನಿಂದ 61 ರೂ. ವರೆಗೂ ಇತ್ತು. ಯುದ್ಧದ ದುರುಪಯೋಗ ಪಡೆದು ಗ್ಯಾಸ್ ಏಜೆನ್ಸಿಗಳು 95 ರೂಪಾಯಿಯಿಂದ 105 ರೂ. ವರೆಗೂ ಎಲ್‌ಪಿಜಿ ಮಾರಾಟ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನ ಕಾರ್ಯದರ್ಶಿ ಜೀವನ್ ಉತ್ತೂರಿ ಮಾತನಾಡಿ, ಬಹುತೇಕ ಆಟೋ ಚಾಲಕರು ದಿನನಿತ್ಯದ ದುಡಿಮೆಯನ್ನೇ ನಂಬಿ ಬದುಕು ಸಾಗಿಸುತ್ತಿದ್ದು, ಈಗಾಗಲೇ ಬೆಲೆ ಏರಿಕೆಯಿಂದ ಬಹುತೇಕ ಆಟೋಗಳನ್ನು ಮನೆ ಮುಂದೆ ನಿಲ್ಲಿಸಿದ್ದು, ಅವರು ಜೀವನ ಸಾಗಿಸುವುದು ಅತ್ಯಂತ ಕಷ್ಟಕರವಾಗಿದೆ ಎಂದರು.

ದಾವಲಸಾಬ್ ಕುರಹಟ್ಟಿ, ಮುರಳಿ ಇಂಗಳಹಳ್ಳಿ, ಲೋಕೇಶ ಚಿಕ್ಕಮಂಗಳೂರು, ರಫೀಕ್ ಕುಂದಗೋಳ, ರಾಜೇಶ ಬಿಜವಾಡ, ದಾವೂದ ಅಲಿಶೇಖ್, ಮಹಾವೀರ ಬಿಲಾನ, ಮಲ್ಲಿಕಾರ್ಜುನ ನಂದಿಹಾಳ, ಗುರು ಬೇಟಗೇರಿ, ಬಾಬರ್ ಜಮಖಾನೆ, ಆರೀಫ್ ಕಿಂಗಮೇಕರ್ ಇದ್ದರು.



ಪುರಾತನ ಆಂಜನೇಯ ದೇವಾಲಯ ಶುಚಿಗೊಳಿಸಿದ ಯುವಪಡೆ



ಕಲಘಟಗಿ: ತಾಲೂಕಿನ ಮಿಶ್ರಿಕೋಟಿ ಗ್ರಾಮದ ಹೊರವಲಯದಲ್ಲಿರುವ ಪರಾತನ ಆಂಜನೇಯ ದೇವಾಲಯ ನಿರ್ವಹಣೆ ಇಲ್ಲದೇ ಕಳೆಗುಂದಿತ್ತು. ಇದನ್ನು ಗಮನಿಸಿದ ಗ್ರಾಮದ ಸಮಾನಮನಸ್ಕ ಯುವಪಡೆಯು ದೇವಾಲಯವನ್ನು ಶ್ರದ್ಧಾ ಭಕ್ತಿಯಿಂದ ಸ್ವಚ್ಛಗೊಳಿಸಿದರು.

ಹನುಮ ಜಯಂತಿ ನಿಮಿತ್ತ ಇಷ್ಟಾರ್ಥ ಸಿದ್ಧಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಗ್ರಾಮದ ಯುವಕರು, ಮಹಿಳೆಯರು ಹಾಗೂ ರಾಯಲ್ ಫಿಟ್ನೆಸ್ ಜಿಮ್‌ನ ಯುವಪಡೆ ವತಿಯಿಂದ ದೇವರಿಗೆ ಅಲಂಕಾರ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹನುಮಾನ್ ಚಾಲಿಸಾ ಪಠಣ ಮಾಡಲಾಯಿತು.

ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಸುತ್ತ ಮುತ್ತಲಿನ ಗ್ರಾಮಸ್ಥರು ಈ ದೇವಾಲಯಕ್ಕೆ ಭೇಟಿ ನೀಡಿ ದರ್ಶನ ಪಡೆದು ಹೋಗುತ್ತಿದ್ದಾರೆ. ಸದ್ಯ ಜಾಗೃತ ಸ್ಥಳವಾಗಿ ಮಾರ್ಪಟ್ಟಿದೆ.

ಬರುವ ದಿನಗಳಲ್ಲಿ ಈ ದೇವಸ್ಥಾನದ ಮೇಲ್ಛಾವಣಿ, ವಿದ್ಯುತ್ ಸಂಪರ್ಕ ಹಾಗೂ ಗೋಡೆಗೆ ಸುಣ್ಣ ಬಣ್ಣಗಳಿಗೆ ಭಕ್ತರು ಮುಂದಾಗಬೇಕಿದೆ ಎಂದು ಯುವಕರು ತಿಳಿಸಿದರು.

ಈ ವೇಳೆ ಮಹಾದೇವಿ ನಾಯ್ಕರ್, ಪೋಲಿಸ್ ಸಿಬ್ಬಂದಿ ಬಸವರಾಜ ಸೋಗಿ, ರಾಮಚಂದ್ರ ಕುಳೆನವರ, ಶಿವು ಅಗಸಿಮನಿ, ವಿನಾಯಕ ಜಾಧವ, ಶಿವಾಜೀ ಜಾಧವ, ಅಶೋಕ ರಜಪೂತ ರವಿ ನಾಯ್ಕರ್, ಈರಣ್ಣ ನಾಯ್ಕರ್, ಸಿದ್ದು ಮೂಲಿಮನಿ, ಸಮರ್ಥ ಹುನಗುಂಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹನುಮಂತ ದೇವರಿಗೆ ವಿಶೇಷ ಪೂಜೆ

ಕುಂದಗೋಳ: ಹನುಮಾನ ಜಯಂತಿ ಅಂಗವಾಗಿ ಪಟ್ಟಣದ ಗಾಂಧಿ ಸರ್ಕಲ್ ಪ್ರದೇಶದ ತೆಗ್ಗಿನಕೇರಿ ಓಣಿಯಯಲ್ಲಿ ಗುರುವಾರ ಹನುಮಂತ ದೇವರ ವಿಶೇಷ ಪೂಜೆ ಹಾಗೂ ಅನ್ನಪ್ರಸಾದ ಕಾರ್ಯಕ್ರಮವು ಭಕ್ತಿಭಾವಪೂರ್ಣವಾಗಿ ಜರುಗಿತು. ಈ ವೇಳೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪೂಜೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು. ನಂತರ ಅನ್ನಪ್ರಸಾದವನ್ನು ಭಕ್ತರಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರಾದ ರಮೇಶ ಕೊಪ್ಪದ, ವಿರೇಶ ಭಂಡಿವಾಡ, ರಾಮಣ್ಣ ಗಿಡದೇನವರ, ರವಿಕುಮಾರ ಕರಿಗಾರ, ಬಸವರಾಜ ಕೊಪ್ಪದ, ಮನೋಜ ಕಮತರ, ವಿಶಾಲ ಕುಲಕರ್ಣಿ, ಕಿರಣ ಕಲಾಲ್, ಬಸವರಾಜ ಗೌಡಪ್ಪನವರ, ನಾಗರಾಜ ಅಡಿವೇಣ್ಣವರ, ಕುಮಾರ ಕಿರೇಸೂರ ಸೇರಿದಂತೆ ಓಂ ಗ್ರೂಪ್‌ನ ಸದಸ್ಯರು ಇದ್ದರು.





ಉಪ್ಪಿನಬೆಟಗೇರಿ: ಮಾತೃಶ್ರೀ ಡಾ. ಹೇಮಾವತಿ ವೀ. ಹೆಗ್ಗಡೆಯವರ ಹುಟ್ಟುಹಬ್ಬದ ಪ್ರಯುಕ್ತವಾಗಿ ಕಲ್ಲೂರ ಗ್ರಾಮದಲ್ಲಿ ಮಾಶಾಸನ ಪಡೆಯುವ ಫಲಾನುಭವಿಗಳಿಗೆ ಉಪ್ಪಿನಬೆಟಗೇರಿ ವಲಯದಿಂದ ಧಾರವಾಡ ತಾಲೂಕಾ ಯೋಜನಾಧಿಕಾರಿ ಅಶೋಕ.ಕೆ ಹಣ್ಣು-ಹಂಪಲು ವಿವರಿಸಿದರು. ಮೇಲ್ವಿಚಾರಕಿ ಪಲ್ಲವಿ ಶೆಟ್ಟಿ ಇದ್ದರು.

ಪ್ರೊ.ಶಿವಪುತ್ರಪ್ಪ ಅವರ ಪುಸ್ತಕಗಳ ಲೋಕಾರ್ಪಣೆ

ಹುಬ್ಬಳ್ಳಿ: ಎಲ್ಲ ಉನ್ನತ ಸಾಹಿತಿಗಳ ಜೀವನದಲ್ಲಿ ಭೌತಿಕ ಶೋಧನೆಯ ಪಯಣ ಮತ್ತು ಒಂದು ಆಧ್ಯಾತ್ಮಿಕ ಶೋಧನೆಯ ಪಯಣ ಇರುತ್ತದೆ. ಅಂತಹ ಮೌಲ್ಯಯುತ ಜೀವನ ಪ್ರಯಾಣವನ್ನು ಪ್ರೊ.ಶಿವಪುತ್ರಪ್ಪ ಆರ್.ಆಶಿ ಅವರು ಮಾಡಿದ್ದಾರೆ ಎಂದು ಕುವೆಂಪು ಭಾಷಾ ಭಾರತಿ ಅಧ್ಯಕ್ಷ ಡಾ.ಚನ್ನಪ್ಪಕಟ್ಟಿ ಹೇಳಿದರು.

ನಗರದ ಪಿ.ಸಿ.ಜಾಬಿನ್ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಶುಕ್ರವಾರ ಬೆಳಗ್ಗೆ ರಾಜವಿನಯ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ. ಶಿವಪುತ್ರಪ್ಪ ಆರ್. ಆಶಿ ಅವರ'ಮಂಥನ' ಹಾಗೂ 'ಸ್ಪೇಸ್‌ಟ್ರಾವೆಲ್ ಆ್ಯಂಡ್ ಅದರ್‌ಒನ್ ಆಕ್ಟ್ ಪ್ಲೇ' ಎರಡು ಪುಸ್ತಕಗಳ ಲೋಕಾರ್ಪಣೆ ನೆರವೇರಿಸಿ ಮಾತನಾಡಿದರು.

ಪ್ರೊ.ಆಶಿಯವರು ಬಾಲ್ಯದಿಂದಲೇ ಅವರ ತಂದೆಯವರಿಗಿದ್ದ ಸಾಹಿತ್ಯ ಪ್ರೀತಿಯ ಪ್ರಭಾವಕ್ಕೆ ಒಳಗಾಗಿ ಕಾಲಕ್ರಮದಲ್ಲಿ ಅದನ್ನು ಪೋಷಿಸುತ್ತ ಬಂದವರು. ಒಂದುಕಾಲದಲ್ಲಿ ಸಾಹಿತ್ಯಕ್ಕಿಂತ ಬದುಕು ಮುಖ್ಯವೆನಿಸಿ ಬದುಕು ಕಟ್ಟಿಕೊಳ್ಳಲು ಹೋರಾಡಿದರು. ಅವರ ಇಂಗ್ಲಿಷ ಕೃತಿಯನ್ನು ಅಮೇಜಾನ್‌ನವರು ಪ್ರಕಟ ಮಾಡಿದ್ದು ಆಸಕ್ತರು ಅವರಿಂದಲೇ ಖರೀದಿಸಬೇಕು ಎಂದರು.

ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ ಮಾತನಾಡಿ, ಯಾವುದೇ ಸಾಹಿತ್ಯತನ್ನ ಮಣ್ಣಿನಗುಣವನ್ನು ಮೇಳೈಸಿಕೊಂಡಿರಬೇಕು. ಅದರಲ್ಲಿ ಲೇಖಕ ಮತ್ತು ಓದುಗನ ಬದುಕಿನ ಆಯಾಮಗಳು, ಅನುಭವಗಳು ಗೋಚರಿಸಿ, ಅಲ್ಲಿಯ ಭಾಷೆ ಮತ್ತು ಸಂಸ್ಕೃತಿ ಅಸ್ಮಿತೆಯನ್ನು ಕಟ್ಟಿಕೊಡುವಂತಿರಬೇಕು. ಇಂತಹ ಗುಣ ಪ್ರೊ.ಶಿವಪುತ್ರಪ್ಪ ಆಶಿ ಅವರ ಬರವಣಿಗೆಯಲ್ಲಿ ಕಾಣುತ್ತದೆ. ಈ ಎತ್ತರಕ್ಕೆ ಬೆಳೆದ ಸಾಹಿತಿಯೊಬ್ಬ ಬಾದಾಮಿ ತಾಲೂಕಿನ ನಮ್ಮದೇ ಊರಿನವರು ಎಂಬುದೇ ನನಗೆ ಹೆಮ್ಮೆಯ ವಿಚಾರ ಎಂದರು.



ಮಾಜಿ ಸಂಸದ ಪ್ರೊ.ಐ.ಜಿ. ಸನದಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಂಥನ' ಪ್ರಬಂಧಕೃತಿಯನ್ನುಕುಮಟಾದಇಂಗ್ಲಿಷ್ ಪ್ರಾಧ್ಯಾಪಕ ಪ್ರೊ.ಟಿ.ಜಿ. ಭಟ್ ಹಾಸಣಗಿ ಪರಿಚಯಿಸಿದರು. ಅಮೆಝಾನ್ ಪ್ರಕಾಶನ ಪ್ರಕಟಿಸಿರುವ ಇಗ್ಲಿಷ್ ನಾಟಕಗಳ ಕೃತಿ 'ಸ್ಪೇಸ್‌ಟ್ರಾವೆಲ್‌ಆ್ಯಂಡ್‌ಅದರ್‌ಒನ್‌ಆಕ್ಟ್ ಪ್ಲೇ' ಕೃತಿಯನ್ನು ನಿವೃತ್ತ ಪ್ರಾಧ್ಯಾಪಕ ಡಾ.ಆಶಾ ಎಸ್. ರಬ್ ಅವರಿ ಪರಿಚಯಿಸಿದರು. ಕಸಾಪ ಜಿಲ್ಲಾಧ್ಯಕ್ಷಡಾ.ಲಿಂಗರಾಜ ಅಂಗಡಿ, ಪತ್ರಕರ್ತ ಕುಮಾರ ಬೇಂದ್ರೆ, ಕವಿ ಮಹಾಂತಪ್ಪ ನಂದೂರ, ಕವಿ ಗೋವಿಂದ ಹೆಗಡೆ, ಸಿ.ಎಂ.ಚೆನ್ನಬಸಪ್ಪ ಚನ್ನಬಸಪ್ಪ ಧಾರವಾಡಶೆಟ್ರ, ಶಂಕರಗೌಡ ಸಾತ್ಮಾರ, ಪ್ರೊ. ಆಶಿ ಅವರ ಪರಿವಾರದವರು ಉಪಸ್ಥಿತರಿದ್ದರು.

ವಿಜೃಂಭಣೆಯಿಂದ ಬಸವ ಜಯಂತಿ ಆಚರಣೆ

ಹುಬ್ಬಳ್ಳಿ: ಇಲ್ಲಿಯ ಮೂರು ಸಾವಿರ ಮಠದ ಆವರಣದಲ್ಲಿ ಬಸವ ಜಯಂತಿ ಸಮಿತಿ ನೂತನ ಅಧ್ಯಕ್ಷ ಪ್ರವೀಣ ಕುಬಸದ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಶುಕ್ರವಾರ ನಡೆಯಿತು. ಈ ವೇಳೆ ಏ. 20ರಂದು ಬಸವ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಮಠದ ಸಂಘಟನಾ ಅಧ್ಯಕ್ಷ ವೀರಣ್ಣ ಕಲ್ಲೂರ ಮಾತನಾಡಿ, ಈ ಹಿಂದೆ ಬಸವ ಜಯಂತಿಯನ್ನು ಮೂರು ಸಾವಿರ ಮಠದ ಹಿರಿಯರು ಮಾಡುತ್ತಿದ್ದರು. ಆದರೆ ಈಗ ಮುಜಗು ಯುವಕರಿಗೆ ಕಾರ್ಯಕ್ರಮ ನಡೆಸಲು ಅನುಮತಿ ನೀಡಿದ್ದು, ನಮ್ಮ ಕಡೆಯಿಂದ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು.

ಮಹಾನಗರ ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ಸಮಾಜ ಮುಖಂಡ ಸಿದ್ದು ಮೊಗಲಿಶೆಟ್ಟರ ಮಾತನಾಡಿ, ವಿಶ್ವಗುರು ಬಸವಣ್ಣನವರು ರಾಜ್ಯ ಹಾಗೂ ದೇಶಕ್ಕೆ ಅಷ್ಟೇ ಸೀಮಿತರಲ್ಲ, ಅವರು ವಿಶ್ವಗುರು ಆಗಿದ್ದು, ಇಂಗ್ಲೆಡ್‌ನಲ್ಲಿ ಅವರ ಪ್ರತಿಮೆ ಸ್ಥಾಪಿಸಲಾಗಿದೆ ಎಂದರು. ಪ್ರಮುಖರಾದ ಶಿವಾನಂದ ಚೌಶೆಟ್ಟಿ, ಅಂದಾನಪ್ಪ ಹರದಾನಿ, ನವೀನ ಕುದರಿ, ತಾರಾದೇವಿ ವಾಲಿ, ಜಗದೀಶ್ ಬುಳ್ಳನವರ್, ಪ್ರಭು ನವಲಗುಂದ ಮಠ, ಶಶಿಕಾಂತ್ ಬಿಜವಾಡ, ಕೊಂಕಣ ಸಮಾಜದ ಅಧ್ಯಕ್ಷ ರವಿ ನಾಯಕ, ರಾಜು ಕೊರ್ಯನಮಠ, ದತ್ತ ಮೂರ್ತಿ ಕುಲಕರ್ಣಿ, ಪ್ರಶಾಂತ ಹಾವಣಗಿ ಇದ್ದರು.



ಗಂಬ್ಯಾಪೂರದಲ್ಲಿ ದ್ಯಾಮವ್ವ ದೇವಿ ಮೆರವಣಿಗೆ

ಕಲಘಟಗಿ: ತಾಲೂಕಿನ ಸುಕ್ಷೇತ್ರ ಗಂಬ್ಯಾಪೂರ ಗ್ರಾಮದ ಶ್ರೀ ದ್ಯಾಮವ್ವದೇವಿಯ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ. ನೂತನ ಮೂರ್ತಿ ಪ್ರಾಣ-ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಪ್ರಥಮ ಜಾತ್ರಾ ಮಹೋತ್ಸವಕ್ಕೆ ಅದ್ದೂರಿಯಾಗಿ ಚಾಲನೆ ದೊರಕಿತು. ಗ್ರಾಮದ ಗಡಿಯಿಂದ ಬಸ್ಟ್ಯಾಂಡ್ ಮಾರ್ಗವಾಗಿ ಜೋಡಳ್ಳಿವರಗೆ ಮೆರವಣಿಗೆ ತಲುಪಿ ಅಲ್ಲಿಂದ ಗಂಬ್ಯಾಪೂರದ ಕರಡಿ ಮಜಲು, ಕೋಲಾಟ ಜೋಡಳ್ಳಿಯ ಹೆಜ್ಜೆಮಜಲು, ದೂಳಿಕೊಪ್ಪ, ಶಿವನಾಪುರದ ಡೊಳ್ಳಿನ ಮಜಲುಗಳ ಕುಣಿತದೊಂದಿಗೆ ನೂರಾರು ಮಹಿಳೆಯರ, ಯುವಕರ, ಹಿರಿಯರ ಜೈಕಾರದೊಂದಿಗೆ ಚೌಕಿಕಟ್ಟೆ ತಲುಪಿತು.

ಈ ಮೊದಲು ವಿಶಿಷ್ಟ ರೀತಿಯಲ್ಲಿ ಐದು ಹೊರವಾರಗಳನ್ನು ಆಚರಿಸಿದ ಗ್ರಾಮಸ್ಥರು ಶುಕ್ರವಾರ, ಮಂಗಳವಾರ ಊರು ಬಿಡುವ ಪದ್ಧತಿ ಇದಾಗಿತ್ತು. ಜಾತ್ರೆಯಲ್ಲಿ ಹೊಣ್ಣಿನಾಟ, ಕುಂಭದ ಮೆರವಣಿಗೆ, ಉಡಿತುಂಬುವ ಕಾರ್ಯ, ದಿನವಿಡಿ ಪ್ರಸಾದದ ವ್ಯವಸ್ಥೆ ಇರಲಿದ್ದು, ದರ್ಶನಕ್ಕೆ ಬರುವ ಮಹಿಳೆಯರಿಗೆ ಉಚಿತವಾಗಿ ಬಳೆ, ಅರಿಸಿನ ಮತ್ತು ಕುಂಕುಮ ನೀಡಲಾಗುತ್ತಿದೆ. ಇನ್ನೂ ಒಂಬತ್ತು ದಿನಗಳವರಗೆ ನಡೆಯುವ ಜಾತ್ರಾ ಮಹೋತ್ಸವಕ್ಕೆ ಸುತ್ತಮುತ್ತಲಿನ ಗ್ರಾಮದ ನೂರಾರು ಭಕ್ತರು ಪಾಲ್ಗೊಳ್ಳುವ ನೀರಿಕ್ಷೆ ಇದೆ.



ಜಾತ್ರೆಯು ಏ.10 ರ ವರೆಗೆ ಜರುಗಲಿದೆ. ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಗುರು ಅಭಿನವ ರೇವಣಸಿದ್ದೇಶ್ವರ ಶ್ರೀಗಳು, ಸಂಸ್ಥಾನ ವಿರಕ್ತಮಠ ರಾಯನಾಳ ಸಾನಿಧ್ಯದಲ್ಲಿ ಪ್ರತಿದಿನ ಸಂಜೆ ಪ್ರವಚನ ಜರುಗುಲಿದೆ.

ಮೆರವಣಿಗೆಯಲ್ಲಿ ಗಂಬ್ಯಾಪೂರ, ಜೋಡಳ್ಳಿ, ಲಿಂಗನಕೊಪ್ಪ, ಎಮ್ಮೆಟ್ಟಿ, ಮುತ್ತಗಿ, ಜಮ್ಮಿಹಾಳ ಸೇರಿ ಸುತ್ತಲಿನ ಭಕ್ತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಸಮುದ್ರಕ್ಕೆ ಬಿದ್ದ ಯುವಕ ನಾಪತ್ತೆ

ಭಟ್ಕಳ: ಮೀನುಗಾರಿಕೆಗೆ ತೆರಳಿದ ವೇಳೆ ಕಾಲು ಜಾರಿ ಸಮುದ್ರಕ್ಕೆ ಬಿದ್ದ ಯುವಕನೊಬ್ಬ ನಾಪತ್ತೆಯಾಗಿರುವ ಘಟನೆ ಅಳೀಕೋಡಿ ಬಂದರಿನಿಂದ ವರದಿಯಾಗಿದೆ.

ಒಡಿಶಾ ರಾಜ್ಯದ ಸುಂದರಗಢ ಜಿಲ್ಲೆಯ ನಿವಾಸಿ ಜಿತೇಂದ್ರ ಬೀರಗಂಟಿಯಾ (27) ನಾಪತ್ತೆಯಾದ ಯುವಕ ಎಂದು ಗುರುತಿಸಲಾಗಿದೆ. ಮಂಗಳವಾರ ರಾತ್ರಿ 8 ಗಂಟೆಯ ಸುಮಾರಿಗೆ ಘಟನೆ ಸಂಭವಿಸಿದೆ. ಜನಾಬಾಯಿ ಅವರಿಗೆ ಸೇರಿದ ಶ್ರೀ ಮುಕಾಂಬಿಕಾ ಬೋಟ್‌ನಲ್ಲಿ ಮೀನುಗಾರಿಕೆ ಮಾಡಿಕೊಂಡಿದ್ದ ಈತ ಮೀನುಗಾರಿಕೆಗಾಗಿ ಬೋಟ್ ಹತ್ತುವ ಸಂದರ್ಭದಲ್ಲಿ ಅಕಸ್ಮಾತ್ ಕಾಲು ಜಾರಿ ಸಮುದ್ರದ ನೀರಿಗೆ ಬಿದ್ದಿದ್ದು ತಕ್ಷಣ ಶೋಧ ಕಾರ್ಯ ನಡೆಸಿದರೂ ಕೂಡಾ ಪತ್ತೆಯಾಗಿಲ್ಲ. ಈ ಕುರಿತು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು ತನಿಖೆ ನಡೆಸಲಾಗಿದೆ.

ಗಾಂಜಾ ಸೇವನೆ: ಓರ್ವನ ಬಂಧನ

ಭಟ್ಕಳ: ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ ಮಾಡಿದ ಆರೋಪದ ಮೇಲೆ ಯುವಕನೊಬ್ಬನನ್ನು ಭಟ್ಕಳ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮುಂಬೈ ಜೋಗೇಶ್ವರಿ ನಿವಾಸಿ, ಪ್ರಸ್ತುತ ಭಟ್ಕಳದ ಹಳೇ ಬಸ್ ನಿಲ್ದಾಣದಲ್ಲಿರುವ ವಸತಿ ಗೃಹದಲ್ಲಿ ವಾಸವಾಗಿದ್ದ ಇರ್ಫಾನ್ (28) ಎನ್ನುವವನೇ ಬಂಧಿತ ವ್ಯಕ್ತಿಯಾಗಿದ್ದಾನೆ. ನಗರದ ಹಳೆ ಬಸ್ ನಿಲ್ದಾಣದ ಸಮೀಪ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ ವೇಳೆ ಪೊಲೀಸರು ಆತನನ್ನು ವಿಚಾರಿಸಿದಾಗ ಗಾಂಜಾ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಸರ್ಕಾರದ ಪರವಾಗಿ ನಗರ ಠಾಣೆ ಪಿಎಸ್ಐ ತಿಮ್ಮಪ್ಪ ಎಸ್ ದೂರು ದಾಖಲಿಸಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇಬ್ಬರ ಬಂಧನ

ಭಟ್ಕಳ: ಸಾರ್ವಜನಿಕ ಸ್ಥಳಗಳಲ್ಲಿ ಗಾಂಜಾ ಸೇವನೆ ಮಾಡಿದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಭಟ್ಕಳ ಗ್ರಾಮೀಣ ಠಾಣಾ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಗುಳ್ಮಿ ಬೆಳಲಖಂಡ ನಿವಾಸಿ ಮಹಮ್ಮದ್ ಹುಸೇನ್ (56) ಸಾರ್ವಜನಿಕ ಸ್ಥಳದಲ್ಲಿ ಸಂಶಯಾಸ್ಪದವಾಗಿ ವರ್ತಿಸುತ್ತಿರುವುದನ್ನು ಗಮನಿಸಿದ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಈ ವೇಳೆ ಗಾಂಜಾ ಸೇವನೆ ಮಾಡಿರುವುದು ತಿಳಿದುಬಂದಿದ್ದರಿಂದ ಅವರನ್ನು ಸರ್ಕಾರಿ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವನೆ ದೃಢಪಟ್ಟಿದೆ.

ಇನ್ನೊಂದು ಪ್ರಕರಣದಲ್ಲಿ, ಗಾಂಧಿನಗರದ ಶಮ್ಸ್ ಶಾಲೆಯ ಎದುರಿನ ಸಾರ್ವಜನಿಕ ಸ್ಥಳದಲ್ಲಿ ಆಜಾದ್ ನಗರ 7ನೇ ಕ್ರಾಸ್ ನಿವಾಸಿ ಮಲೀಕ ರೆಹಾನ (27) ಗಾಂಜಾ ಸೇವನೆ ಮಾಡುತ್ತಿದ್ದಾಗಲೇ ಪೊಲೀಸರು ಬಂಧಿಸಿದ್ದಾರೆ.ಈ ಸಂಬಂಧ ಗ್ರಾಮೀಣ ಠಾಣೆಯ ಪಿಎಸ್ಐ ಭರಮಪ್ಪ ಬೆಳಗಲಿ ಸರ್ಕಾರದ ಪರವಾಗಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೂವರ ಬಂಧನ

ಭಟ್ಕಳ: ತಾಲೂಕಿನ ಹೆಬಳೆಯ ಜಾಮಿಯಾಬಾದ್ ಮಾರುಕಟ್ಟೆಯ ಬಳಿ ಹಾಗೂ ವೆಂಕಟಾಪುರದ ಜಾಗಟೆಬೈಲ ಮೈದಾನ ಬಳಿ ಶುಕ್ರವಾರ ಗಾಂಜಾ ಸೇವನೆ ಮಾಡಿ ತೂರಾಡುತ್ತಿದ್ದ ಮೂವರು ಯುವಕರನ್ನು ಗ್ರಾಮೀಣ ಠಾಣಾ ಪೊಲೀಸರು ಬಂದಿಸಿದ್ದಾರೆ.

ತಾಲೂಕಿನ ಹೆಬಳೆಯ ಜಾಮಿಯಾಬಾದ್ ನಿವಾಸಿ ಆಸೀಫ್ ಕೆ ಎ ಅಮೀರ್ ಜಾನ(26), ಮದೀನಾ ಕಾಲೋನಿ ಉಮ್ಮರ್ ಸ್ಟ್ರೀಟ್ ನಿವಾಸಿ ಬಿಲಾಲ ಅಹ್ಮದ ಮೊಹಮ್ಮದ ಮೀರಾ ಶಾಬಂದ್ರಿ(36) ಹಾಗೂ ಜಾಲಿ ತಗ್ಗರಗೋಡ ನಿವಾಸಿ ಮೊಹಮ್ಮದ ರಸೂಲ್ ಅಬ್ದುಲ್ ವಹಾಬ್ ಮುಲ್ಲಾ(34) ಬಂಧಿತರು. ವೈದ್ಯಕೀಯ ತಪಾಷಣೆ ಬಳಿಕ ಮೂವರನ್ನು ನ್ಯಾಯಾಂಗ ಬಂದನಕ್ಕೆ ಒಪ್ಪಿಸಲಾಗಿದೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ದುರ್ಮರಣ

ಧಾರವಾಡ: ವಾಟರ್ ಹಿಟರ್ ಮುಟ್ಟಿದ ಮಹಿಳೆ ಮೃತಪಟ್ಟ ಘಟನೆ ತಾಲೂಕಿನ ದೇವರಹುಬ್ಬಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ನಿವೇದಿತಾ (25) ಮೃತ ಮಹಿಳೆ ಎಂದು ತಿಳಿದುಬಂದಿದೆ. ನೀರು ಕಾಯಿಸಿ ಮಷಿನ್ ತೆಗೆಯುವ ವೇಳೆ ಈ ಅವಘಡ ಸಂಭವಿಸಿದೆ. ಮಷಿನ್ ಮುಟ್ಟಿದ ಮಹಿಳೆ ಅಸ್ವಸ್ಥಗೊಂಡಾಗ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಿದ್ದರೂ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾಳೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ | ಸಿಎಂ ಸಿದ್ದರಾಮಯ್ಯ ಆಕ್ರೋಶ

ನಾನು ಮುಖ್ಯಮಂತ್ರಿ ಆಗಿದ್ದು ಬಿಜೆಪಿಯವರಿಗೆ ಹೊಟ್ಟೆ ಕಿಚ್ಚು

ಬಾಗಲಕೋಟೆ: ರಾಜ್ಯದ ಬಡ ಜನರ ಪರ ಕೆಲಸ ಮಾಡುತ್ತಿರುವುದಕ್ಕೆ ಹಾಗೂ ನಾನು ಮುಖ್ಯಮಂತ್ರಿಯಾಗಿರುವುದಕ್ಕೆ ಮತ್ತು ಉಚಿತ ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನರಿಗೆ ನೀಡಿರುವುದಕ್ಕಾಗಿ ಬಿಜೆಪಿಯವರಿಗೆ ಹೊಟ್ಟೆ ಕಿಚ್ಚು ಶುರುವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಬೇವಿನಮಟ್ಟಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಅವರು ರಾಜ್ಯದಲ್ಲಿ ಒಂಬತ್ತು ವರ್ಷ ಆಡಳಿತ ನಡೆಸಿದ ಬಿಜೆಪಿಯವರು ಬಡವರ, ರೈತರ, ದಲಿತರ ಅಭಿವೃದ್ಧಿ ಕೆಲಸಗಳನ್ನು ಮಾಡಲಿಲ್ಲ. ಸುಳ್ಳು ಹೇಳಿಕೆ ನೀಡಿ, ಅನಗತ್ಯ ಟೀಕೆ ಮಾಡುವ ಮೂಲಕ ಜನರ ದಾರಿಯನ್ನು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ, ಅಭಿವೃದ್ಧಿ ಕೆಲಸ ನಿಂತಿವೆ. ರಾಜ್ಯಕ್ಕೆ ಸಿಎಂ ಸಾಲ ಮಾಡಿದ್ದಾರೆ. ಸರ್ಕಾರದ ಖಜಾನೆ ಖಾಲಿಯಾಗಿದೆ ಎಂದು ಆರೋಪಿಸುವುದನ್ನು ಬಿಜೆಪಿಯವರು ಮಾಡುತ್ತಿದ್ದಾರೆ ಎಂದರು.

ಬಿಜೆಪಿಯವರು ತಮ್ಮ ಸರ್ಕಾರದ ಅವಧಿಯಲ್ಲಿ ರಾಜ್ಯದ ಜನರಿಗೆ ಏನು ಅಭಿವೃದ್ಧಿ ಕೆಲಸ ಮಾಡಿದ್ದೇವೆ ಎಂಬುದನ್ನು ಮುಂದಿಡಲಿ. ಹಿಂದಿನ ಬಿಜೆಪಿ ಸರ್ಕಾರ 600 ಭರವಸೆಗಳಲ್ಲಿ ಅದರಲ್ಲಿ ಎಷ್ಟು ಈಡೇರಿಸಿದ್ದಾರೆಂದು ಜನರಿಗೆ ತಿಳಿಸಿ ಮತ ಕೇಳಲು ಬರಲಿ. ತಲಾ ಆದಾಯದಲ್ಲಿ ನಾವು ದೇಶದಲ್ಲೇ ನಂಬರ್ ಒನ್ ಆಗಿದ್ದೇವೆ. ಆದ್ದರಿಂದ ದೇಶಕ್ಕೆ ಕಾಂಗ್ರೆಸ್ ಬೇಕು. ತೆರಿಗೆ ಸಂಗ್ರಹದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಇದಕ್ಕಾಗಿ ನೀವು ಕಾಂಗ್ರೆಸ್ ಗೆಲ್ಲಿಸಬೇಕು ಎಂದರು.



ನಮ್ಮ ಸರ್ಕಾರ ಸಾಲ ಮಾಡಿದೆ ಎಂದು ಬಿಜೆಪಿ ನಾಯಕರು ಟೀಕಿಸುತ್ತಿದ್ದಾರೆ. ಆರ್ಥಿಕ ನಿರ್ವಹಣಾ ಕಾಯ್ದೆಯ ಮಾನದಂಡಗಳನ್ನು ಮೀರಿ ನಾವು ಸಾಲ ಮಾಡಿಲ್ಲ. ಈ ಸತ್ಯವನ್ನು ಬಿಜೆಪಿ ಹೇಳುತ್ತಿಲ್ಲ. ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ಪಾಲು ಬರಲಿಲ್ಲ, ಜೊತೆಗೆ ಜಿಎಸ್‌ಟಿ ಮೂಲಕ ನಮಗೆ ಬರಬೇಕಿದ್ದ ತೆರಿಗೆ ಕೇಂದ್ರದ ಅವೈಜ್ಞಾನಿಕ ನೀತಿಯಿಂದಾಗಿ 10 ಸಾವಿರ ಕೋಟಿ ಕಡಿಮೆಯಾಯಿತು. ಆದರೂ ನಾವು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಿಲ್ಲ, ಜೊತೆಗೆ ಅಭಿವೃದ್ಧಿ ಕೆಲಸಗಳನ್ನೂ ಮುಂದುವರಿಸಿದ್ದೇವೆ. ಹೀಗಾಗಿ ನಮ್ಮದು ನುಡಿದಂತೆ ನಡೆದ ಪಕ್ಷ ನಮ್ಮ ಕಾಂಗ್ರೆಸ್ ಎಂದರು.

> **ಚನ್ನಪಟ್ಟಣ, ಶಿಗ್ಗಾವಿ, ಸಂಡೂರು ಉಪ ಚುನಾವಣೆಯಲ್ಲಿ ಬಿಜೆಪಿಯ ಎಲ್ಲಾ ಅಪಪ್ರಚಾರದ ನಡುವೆಯೂ ಗೆದ್ದಿದ್ದು ಕಾಂಗ್ರೆಸ್ ಪಕ್ಷವೇ. ಈ ಚುನಾವಣೆಯಲ್ಲೂ ಎರಡೂ ಕ್ಷೇತ್ರದಲ್ಲೂ ನಾವೇ ಗೆಲ್ಲುತ್ತೇವೆ. ಜೊತೆಗೆ 2028ಕ್ಕೂ ನಾವೇ ಗೆದ್ದು ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಧಿಕಾರ ಇದ್ದಾಗ ಕೆಲಸ ಮಾಡದೆ ಈ ಸುಳ್ಳು ಹೇಳಿಕೊಂಡು ತಿರುಗುತ್ತಿರುವ ಬಿಜೆಪಿಗೆ ನಿಮ್ಮ ಮತ ಪಡೆಯುವ ಯೋಗ್ಯತೆ ಇಲ್ಲ, ಯೋಗ್ಯತೆ ಇಲ್ಲದವರಿಗೆ ನಿಮ್ಮ ಮತ ಕೊಡಬೇಡಿ ಎಂದರು.

ಬುದ್ಧ ವಿಹಾರ ಕಟ್ಟಡ ನಿರ್ಮಾಣ ಸ್ಥಳಕ್ಕೆ ಬೌದ್ಧ ಬಂತೇಜಿ ಭೇಟಿ

ಕೋಳಿಗುಡ್ಡ: ಗ್ರಾಮದಲ್ಲಿ ಶ್ರೀ ಕಾಳಿಕಾದೇವಿ ದೇವಸ್ಥಾನದ ಬಳಿ ನಿರ್ಮಾಣವಾಗುತ್ತಿರುವ ಬುದ್ಧ ವಿಹಾರ ಕಟ್ಟಡ ನಿರ್ಮಾಣ ಸ್ಥಳಕ್ಕೆ ಶ್ರೀಲಂಕಾದ ಜ್ಞಾನಜ್ಯೋತಿ ಬಂತೇಜಿ ಅವರು ಭೇಟಿ ನೀಡಿದರು.

ಈ ವೇಳೆ ಬಂತೇಜಿ ಅವರು ನಿರ್ಮಾಣ ಕಾಮಗಾರಿಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು, ಸ್ಥಳದ ಪ್ರಗತಿಯನ್ನು ಪರಿಶೀಲಿಸಿದರು. ಅಲ್ಲದೆ ಗೌತಮ ಬುದ್ಧ ಅವರ ಆಚಾರ-ವಿಚಾರಗಳ ಮಹತ್ವವನ್ನು ವಿವರಿಸಿ, ಶಾಂತಿ ಮತ್ತು ಧ್ಯಾನ ಜೀವನದ ಅಗತ್ಯತೆ ಬಗ್ಗೆ ತಿಳಿಸಿದರು. ಜೊತೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ನಡೆ-ನುಡಿಗಳ ಬಗ್ಗೆ ಮಾತನಾಡಿ, ಸಮಾನತೆ ಮತ್ತು ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು.

ಇದೇ ಸಂದರ್ಭದಲ್ಲಿ, ನಿರ್ಮಾಣ ಸ್ಥಳದಲ್ಲಿ ಬುದ್ಧನ ಧ್ಯಾನ ಹಾಗೂ ಜ್ಞಾನ ಚಿಂತನೆಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ನಡೆಸುವಂತೆ ಸಲಹೆ ನೀಡಿದರು.

ಬಂತೇಜಿ ಅವರ ಭೇಟಿ ಅಂಗವಾಗಿ ಅವರನ್ನು ಗೌರವಪೂರ್ವಕವಾಗಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಸಿದ್ರಾಮ ಕಾಂಬಳೆ, ಗ್ರಾಮದ ಹಿರಿಯರಾದ ಹನುಮಂತ ಕಾಂಬಳೆ ಮಹಾದೇವ ಕಾಂಬಳೆ, ಜಯಕುಮಾರ ಕಾಂಬಳೆ, ಮುತ್ತಪ್ಪ ಕಾಂಬಳೆ, ಶೇಖರ ಕಾಂಬಳೆ ಸೇರಿದಂತೆ ಹಲವು ಗಣ್ಯರು, ಮಹಿಳೆಯರು ಭಾಗವಹಿಸಿದ್ದರು.



ಸುಪ್ರೀಂಕೋರ್ಟ್‌ನಲ್ಲಿ ರವೀಂದ್ರ ಸ್ವಾಮಿಗೆ ಹಿನ್ನಡೆ

ಬೀದರ್: ಸುಳ್ಳು ಪರಿಶಿಷ್ಟ ಜಾತಿ (ಎಸ್ಸಿ) ಪ್ರಮಾಣಪತ್ರ ಪಡೆದ ಪ್ರಕರಣದಲ್ಲಿ ರವೀಂದ್ರ ಸ್ವಾಮಿ ಅವರಿಗೆ ಸುಪ್ರೀಂಕೋರ್ಟ್‌ನಲ್ಲಿ ಮತ್ತೊಮ್ಮೆ ಹಿನ್ನಡೆ ಉಂಟಾಗಿದೆ.

ರವೀಂದ್ರ ಸ್ವಾಮಿ ಅವರು ವೀರಶೈವ ಜಂಗಮ ಸಮುದಾಯಕ್ಕೆ ಸೇರಿದವರಾಗಿದ್ದರೂ, ಪರಿಶಿಷ್ಟ ಜಾತಿಗೆ ಸೇರಿದ ಬೇಡ ಜಂಗಮ ಎಂಬ ಸುಳ್ಳು ಪ್ರಮಾಣಪತ್ರ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಲು ಯತ್ನಿಸಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ.

ಈ ಪ್ರಕರಣದ ಹಿನ್ನೆಲೆ ಜಿಲ್ಲೆಯಲ್ಲಿ ವಿವಿಧ ಸಂಘಟನೆಗಳಿಂದ ನಿರಂತರ ಪ್ರತಿಭಟನೆಗಳು ನಡೆದಿದ್ದವು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಮಾರುತಿ ಬೌದ್ಧೆ ಅವರು ಈ ವಿಚಾರವನ್ನು ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಪ್ರಶ್ನಿಸಿದ್ದರು. ಈ ವೇಳೆ ಹೈಕೋರ್ಟ್ ರವೀಂದ್ರ ಸ್ವಾಮಿ ವಿರುದ್ಧ ತೀರ್ಪು ನೀಡಿತ್ತು.

ಈ ತೀರ್ಪನ್ನು ಪ್ರಶ್ನಿಸಿ ರವೀಂದ್ರ ಸ್ವಾಮಿ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. 2025ರ ನವೆಂಬರ್ 24ರಂದು ಸುಪ್ರೀಂಕೋರ್ಟ್ ಹೈಕೋರ್ಟ್ ತೀರ್ಪನ್ನು ಸಮರ್ಥಿಸಿತ್ತು. ಬಳಿಕ ಅವರು ಮರುಪರಿಶೀಲನೆಗಾಗಿ ಮನವಿ ಸಲ್ಲಿಸಿದ್ದರು. ಆದರೆ ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಲ್ ಮತ್ತು ಮನಮೋಹನ್ ಅವರ ಪೀಠವು 2026ರ ಮಾರ್ಚ್ 10ರಂದು ಮರುಪರಿಶೀಲನಾ ಮನವಿಯನ್ನೂ ತಿರಸ್ಕರಿಸಿದೆ.

ಸುಪ್ರೀಂಕೋರ್ಟ್‌ನ ಈ ತೀರ್ಪನ್ನು ಮಾರುತಿ ಬೌದ್ಧೆ, ಆರ್.ಪಿ.ಐ (ಅಂಬೇಡ್ಕರ್) ರಾಜ್ಯ ಸಂಯೋಜಕ ಮಹೇಶ್ ಗೋರನಾಳಕರ್, ಡಿಎಸ್‌ಎಸ್ ಮುಖಂಡ ಅರುಣ್ ಪಟೇಲ್, ಬಾಬು ಟೈಗರ್, ರಾಜ ಕುಮಾರ ವಾಘಮಾರೆ ಹಾಗೂ ಅಶೋಕ್ ಗಾಯಕವಾಡ ಸೇರಿದಂತೆ ಹಲವರು ಸ್ವಾಗತಿಸಿದ್ದಾರೆ.

ಏ.11ರಂದು ಜಿಲ್ಲೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ಕಾರಂಜಾ ಸಂತ್ರಸ್ತರಿಂದ ಪ್ರತಿಭಟನೆಗೆ ನಿರ್ಧಾರ

ಬೀದರ್: ಕಾರಂಜಾ ಸಂತ್ರಸ್ತರಿಗೆ ಮಾನವೀಯತೆ ಹಾಗೂ ವೈಜ್ಞಾನಿಕ ಮಾದರಿಯ ಆಧಾರದ ಮೇಲೆ ಸಮರ್ಪಕ ಪರಿಹಾರ ನೀಡಬೇಕೆಂದು ಕಳೆದ ಐದು ದಶಕಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರ ಸ್ಪಂದಿಸಿದರೂ, ವಿವಿಧ ಆಡಳಿತಾತ್ಮಕ ಕಾರಣಗಳಿಂದ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಏಪ್ರಿಲ್ 11ರಂದು ಬೀದರನಲ್ಲಿ ಸಿಎಂ ಸಿದ್ದರಾಮಯ್ಯ ಎದುರು ಬೃಹತ್ ಪ್ರತಿಭಟನೆ ನಡೆಸಲು ಕಾರಂಜಾ ಮುಳುಗಡೆ ಪ್ರದೇಶಗಳ 28 ಗ್ರಾಮಗಳ ಸಂತ್ರಸ್ತರ ಸಮಿತಿ ನಿರ್ಧರಿಸಿದೆ.

ನಗರದ ಅಂಬೇಡ್ಕರ್ ವೃತ್ತ ಸಮೀಪದ ಪ್ರವಾಸಿ ಮಂದಿರದಲ್ಲಿ ಕಾರಂಜಾ ಸಂತ್ರಸ್ತರ ಹೋರಾಟಗಾರ ಲಕ್ಷ್ಮಣ ದಸ್ತಿ ಅವರ ನೇತೃತ್ವದಲ್ಲಿ ಗುರುವಾರ ನಡೆದ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಸಿಎಂ ಎದುರು ಪ್ರತಿಭಟನೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.



ಏಪ್ರಿಲ್ 11ರಂದು ನಗರಕ್ಕೆ ಸಿಎಂ ಸಿದ್ದರಾಮಯ್ಯ ಆಗಮಿಸಲಿದ್ದು, ಕಾರಂಜಾ ಸಂತ್ರಸ್ತರ ವೈಜ್ಞಾನಿಕ ಹಾಗೂ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವ ಕುರಿತು ಅಧಿಕೃತವಾಗಿ ಘೋಷಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಮೂಲಕ ಒತ್ತಾಯಿಸಲಾಗುವುದು. ಅಂದು ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಹೋರಾಟ ನಡೆಸುವ ಬಗ್ಗೆ ಸಭೆಯಲ್ಲಿ ಸರ್ವಸಮ್ಮತವಾಗಿ ನಿರ್ಣಯಿಸಿದರು.

ಕಾರಂಜಾ ನೀರಾವರಿ ಯೋಜನೆಗಾಗಿ ನಮ್ಮ ಹಕ್ಕಿನ ಜಮೀನು ನೀಡಿ ಮನೆ-ಮಠ ಕಳೆದುಕೊಂಡ 28 ಹಳ್ಳಿಗಳ ರೈತ ಸಂತ್ರಸ್ತರ ಕುಟುಂಬದ ಎಲ್ಲಾ ಸದಸ್ಯರು ಸಾವಿರಾರು ಸಂಖ್ಯೆಯಲ್ಲಿ ಅಂದಿನ ಪ್ರತಿಭಟನೆಯಲ್ಲಿ ತಪ್ಪದೇ ಭಾಗವಹಿಸಲಿದ್ದೇವೆ. ಜಿಲ್ಲೆಯ ಎಲ್ಲ ನಾಗರಿಕರು, ವಿವಿಧ ಸಂಘ-ಸಂಸ್ಥೆಗಳ ಸದಸ್ಯರು ಪಾಲ್ಗೊಳ್ಳಲು ಸಮಿತಿ ವತಿಯಿಂದ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಎಂದೂ ಆಗಿರದ ಬೃಹತ್ ಮಟ್ಟದ ಹೋರಾಟದ ಯಶಸ್ಸಿಗಾಗಿ ಪ್ರತಿಯೊಂದು ಗ್ರಾಮವಾರು ಕ್ರಿಯಾ ಸಮಿತಿಗಳನ್ನು ರಚಿಸಿ ಸಿದ್ಧತೆ ನಡೆಸಲು ನಿರ್ಧರಿಸಲಾಗಿದ್ದು, ಈ ಹೋರಾಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಸಚಿವರು, ಶಾಸಕರು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಪಕ್ಷಭೇದ ಮರೆತು ಬೆಂಬಲ ನೀಡಬೇಕೆಂದು ಕಾರಂಜಾ ಸಂತ್ರಸ್ತರ ಹೋರಾಟ ಸಮಿತಿ ಮನವಿ ಮಾಡಿದೆ.

ಹೋರಾಟಗಾರರ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ, ಪದಾಧಿಕಾರಿಗಳಾದ ರಾಜಪ್ಪ ರೇಕುಳಗಿ, ವೀರೇಂದ್ರ ಭತಮುರ್ಗೆ, ವಿನಯಕುಮಾರ ಮಾಳಗೆ, ರಾಜಪ್ಪ ಕೋಸಂ, ಮಾದಪ್ಪ ಕೌದೆ, ರೇವಣಪ್ಪ ರಂಜೋಳ, ರೋಹನ್ ಕುಮಾರ, ಸಂಗಾರೆಡ್ಡಿ ಔರಾದ, ಚಂದ್ರಶೇಖರ್ ಒಡ್ಡಿ, ಶಿವಕುಮಾರ್ ಬಗದಲ, ಲಕ್ಷ್ಮಣ ಭೂತಾಳೆ, ಸೂರ್ಯಕಾಂತ ಕುಲಕರ್ಣಿ, ಯೂಸುಫ್ ರೆಕುಳಗಿ, ಮಹಮ್ಮದ ಸೊಲಾಪೂರೆ, ಲಕ್ಷ್ಮೀ ಕೌದೆ, ಸಂಜಯ್ ಪಾಟೀಲ್ ಸೇರಿದಂತೆ ಅನೇಕ ಸಂತ್ರಸ್ತ ರೈತರು ಇದ್ದರು.

ಸಕಾರಾತ್ಮಕ ತೀರ್ಪು ಬಂದರೆ ಶೀಘ್ರ ವಿಮಾನ ನಿಲ್ದಾಣ ಆರಂಭ: ಎಂಬಿಪಾ

ವಿಜಯಪುರ: ನಗರದ ವಿಮಾನ ನಿಲ್ದಾಣ ಯೋಜನೆಸೇರಿದಂತೆಪರಿಸರಸಂಬಂಧಿವಿವಿಧ ಪ್ರಕರಣಗಳ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ಮುಗಿದಿದ್ದು, ತೀರ್ಪಿನ ಪ್ರಕಟಣೆ ಮಾತ್ರ ಬಾಕಿ ಇದೆ. ಸಕಾರಾತ್ಮಕ ತೀರ್ಪು ಹೊರ ಬಂದಲ್ಲಿ ತಕ್ಷಣವೇ ವಿಜಯಪುರ ವಿಮಾನ ನಿಲ್ದಾಣದಿಂದ ವಿಮಾನ ಸೇವೆ ಆರಂಭಿಸಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ವಿಮಾನ ನಿಲ್ದಾಣದ ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಾರಂಭಕ್ಕೆ ಅನುಮತಿ ನೀಡುವಂತೆ ಕೋರಿ ನಾಗರಿಕ ವಿಮಾನಯಾನ ಮಹಾನಿರ್ದೇಶಾಲಯಕ್ಕೂ ಇತ್ತೀಚೆಗೆ ಅರ್ಜಿ ಸಲ್ಲಿಸಲಾಗಿದೆ. ಇದರ ಜತೆಗೆ ಸ್ವತಃ ನಾನೇ ಕೇಂದ್ರ ವಿಮಾನಯಾನ ಸಚಿವ ರಾಮಮೋಹನ ನಾಯ್ಡು ಮತ್ತು ಪರಿಸರ ಸಚಿವ ಭೂಪೇಂದ್ರ ಯಾದವ್ ಅವರನ್ನು ಖುದ್ದು ಭೇಟಿ ಮಾಡಿ ಮನವಿ ಸಲ್ಲಿಸಿರುವೆ.

ಏತನ್ಮಧ್ಯೆ ಯೋಜನೆಗಳ ಆರಂಭಕ್ಕೂ ಮುನ್ನ ಪರಿಸರ ಸಂಬಂಧಿ ಅನುಮತಿ ಪಡೆಯದ ದೇಶದ ವಿವಿಧ ಯೋಜನೆಗಳ ಸ್ಥಗಿತಕ್ಕೆ ಆಗ್ರಹಿಸಿ ಚೆನ್ನೈನ ವನಶಕ್ತಿ ಸಂಸ್ಥೆ, ಸುಪ್ರೀಂಕೋರ್ಟ್ ಮೆಟ್ಟಿಲೇರಿತು. ವಿಚಾರಣೆ ನಡೆಸಿದ ನಂತರ ಇಂತಹ ಯೋಜನೆಗಳ ಆರಂಭಕ್ಕೆ ತಡೆ ನೀಡಿದ್ದಲ್ಲದೇ, ಅವುಗಳನ್ನು ರದ್ದು ಮಾಡಲು ಸೂಚಿಸಿ, ಆದೇಶ ಹೊರಡಿಸಿತು.

ಇದು ನೇರವಾಗಿ ವಿಜಯಪುರ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದ್ದಲ್ಲದಿದ್ದರೂ ಪರಿಸರ ಅನುಮತಿಗೆ ಅರ್ಜಿ ಸಲ್ಲಿಸಿದಾಗ ಸುಪ್ರೀಂಕೋರ್ಟ್ ಆದೇಶ ಮುಂದಿಟ್ಟು ಕೇಂದ್ರ ಪರಿಸರ ಇಲಾಖೆ ಒಪ್ಪಿಗೆ ನೀಡಲಿಲ್ಲ, ಆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಹಿರಿಯ ವಕೀಲರಾದ ಕಪಿಲ್ ಸಿಬಲ್, ದೇವದತ್ ಕಾಮತ್, ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹೆಚ್ಚುವರಿ ಅಡ್ವೋಕೇಟ್ ಜನರಲ್ ನಿಶಾಂತ್ ಪಾಟೀಲ ಅವರಂತಹ ನುರಿತರನ್ನು ಸೇರಿಸಿಕೊಂಡು ಸಮರ್ಥವಾಗಿ ವಾದ ಮಾಡಿಸಿದ ನಂತರ, ಯೋಜನೆ ರದ್ದು ಆದೇಶವನ್ನು ಸುಪ್ರೀಂಕೋರ್ಟ್ ಮರು ಪರಿಶೀಲಿಸಿ, ಈ ರೀತಿಯ ಸಮಸ್ಯೆ ಎದುರಿಸುತ್ತಿರುವ ದೇಶದ ಎಲ್ಲ ಯೋಜನೆಗಳ ಪ್ರವರ್ತಕರು, ಮಾಲೀಕ ಸಂಸ್ಥೆಗಳ ವಾದವನ್ನು ಆಲಿಸಿತು. ಸದ್ಯ ತೀರ್ಪು ಕಾಯ್ದಿರಿಸಿದ್ದು ನ್ಯಾಯಾಲಯ ನೀಡುವ ಆದೇಶದ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.


ಹೆಚ್ಚುವರಿ 220 ಕೋಟಿ ರೂ. ಬಿಡುಗಡೆ: ನಮ್ಮ ಸರ್ಕಾರ ಬಂದ ಮೇಲೆ ಸಂಪರ್ಕ ರಸ್ತೆ ಅಭಿವೃದ್ಧಿಗೆ 60 ಕೋಟಿ ರೂ. ಅಗ್ನಿಶಾಮಕ ವಾಹನಗಳಿಗೆ 25 ಕೋಟಿ ರೂ. ಮತ್ತು ವಿಮಾನಗಳ ನೈಟ್ ಲ್ಯಾಂಡಿಂಗ್ ವ್ಯವಸ್ಥೆಗೆ 60 ಕೋಟಿ ರೂ. ಸೇರಿದಂತೆ ಹೆಚ್ಚುವರಿಯಾಗಿ 220 ಕೋಟಿ ರೂ.ಬಿಡುಗಡೆ ಮಾಡಲಾಗಿದೆ. ವಿಜಯಪುರ ವಿಮಾನ ನಿಲ್ದಾಣ ಆರಂಭವಾದರೆ ಕಿತ್ತೂರು ಕರ್ನಾಟಕದ ಹಲವು ಜಿಲ್ಲೆಗಳ ಜೊತೆಗೆ ನೆರೆಯ ಮಹಾರಾಷ್ಟ್ರದ 2-3 ಜಿಲ್ಲೆಗಳಿಗೂ ಅನುಕೂಲವಾಗಲಿದೆ ಎಂದು ಅವರು ಹೇಳಿದ್ದಾರೆ.

ಮೂರು ಕೃತಿಗಳ ಬಿಡುಗಡೆ ಕಾರ್ಯಕ್ರಮ | ಕಾಗೇರಿ ಅಭಿಪ್ರಾಯ

ಇತಿಹಾಸ ತಿಳಿಯದೆ ವರ್ತಮಾನ ಎದುರಿಸಲು ಸಾಧ್ಯವಿಲ್ಲ

ಕಲಬುರಗಿ: ದೇಶದ ನೆಲದ ಇತಿಹಾಸದ ಬಗ್ಗೆ ಸ್ಪಷ್ಟತೆ ಇದ್ದಾಗ ಮಾತ್ರ ಹೊಸ ಇತಿಹಾಸ ಸೃಷ್ಟಿಸಲು ಸಾಧ್ಯ. ಇತಿಹಾಸ ತಿಳಿಯದವರು ವರ್ತಮಾನವನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿಲ್ಲ. ಜಗತ್ತು ಕಣ್ಣು ಬಿಡುವ ಮೊದಲೇ ಪ್ರಜಾಪ್ರಭುತ್ವದ ಬೀಜ ಬಿತ್ತಿದ ಅನುಭವ ಮಂಟಪದ ನಾಡು ನಮ್ಮದು. ನಾವೆಲ್ಲರೂ ನೆಮ್ಮದಿಯ ಜೀವನ ಸಾಗಿಸಲು ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ಆಧಾರ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಮತ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ನ್ಯೂ ಬಾರ್ ಅಸೋಸಿಯೇಷನ್ ಕಾರ್ಯಭವನದಲ್ಲಿ ಗುಲಬರ್ಗಾ ಬಾರ್ ಅಸೋಸಿಯೇಷನ್ ಹಾಗೂ ಹೈಕೋರ್ಟ್ ಕಲಬುರಗಿ ವಿಭಾಗ ವತಿಯಿಂದ ಶುಕ್ರವಾರ ಹಿರಿಯ ವಕೀಲ, ಗುಲ್ಬರ್ಗಾ ಬಾರ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಡಾ.ಬಸವರಾಜ್ ಚಿಂಚೋಳಿ ರಚಿಸಿರುವ ಮೂರು ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ ಅವರು, ಭಾರತದ ಭೂಭಾಗ ವಿಭಜನೆಯಾದರೂ, ಭಾರತೀಯರ ಮನಸುಗಳ ನಡುವೆ ವಿಭಜನೆ ಉಂಟಾಗದಂತೆ ತಡೆದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸೇರುತ್ತದೆ ಎಂದರು.



> **ದಿ ರೌಂಡ್ ಟೇಬಲ್ ಕಾನ್ಫರೆನ್ಸ್ (1930-1932)", "ಡಿಬೇಟ್ಸ್ ಇನ್ ಬ್ರಿಟಿಷ್ ಇಂಡಿಯಾ ಪಾರ್ಲಿಮೆಂಟ್ (1946-1949)" ಹಾಗೂ "ಪ್ರಿಯಾಂಬಲ್ ಆಫ್ ದಿ ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾ (1949-1950)" ಕೃತಿಗಳಗಳಲ್ಲಿ ಸ್ವಾತಂತ್ರ್ಯಕ್ಕೂ ಮೊದಲು ಹಾಗೂ ನಂತರದ ಕೆಲ ಘಟನೆಗಳ ಬಗ್ಗೆ ಉಲ್ಲೇಖಿಸಲಾಗಿದೆ. ಜತೆಗೆ ಡಾ. ಬಿ.ಆರ್ ಅಂಬೇಡ್ಕರ್ ಹಾಗೂ ಗಾಂಧೀಜಿ ಅವರ ಕುರಿತ ಕೆಲ ವಿಚಾರ, ಜಿನ್ನಾ ನಿಲುವಿನ ಬಗ್ಗೆ ಬರೆಯಲಾಗಿದೆ. ಭಾರತದ ಸಂವಿಧಾನದ ಮಹತ್ವವನ್ನು ಎತ್ತಿ ತೋರಿಸಲಿವೆ.**
> ■ ಡಾ.ಬಸವರಾಜ್ ಚಿಂಚೋಳಿ, ಪುಸ್ತಕದ ಲೇಖಕ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಪಾರ ಬೌದ್ಧಿಕ ಕೊಡುಗೆ ಹಾಗೂ ಸಂವಿಧಾನದ ಆಶಯಗಳಿಂದಾಗಿ ಇಂದು ದೇಶದ ಸಮಗ್ರತೆ ಕಾಪಾಡಲು ಸಾಧ್ಯವಾಗಿದೆ. ಸರ್ದಾರ್ ವಲ್ಲಭಭಾಯಿ ಪಟೇಲರ ದೃಢ ನಿರ್ಧಾರಗಳು ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಹೋರಾಟವನ್ನು ಸ್ಮರಿಸಿದರು.

ನ್ಯಾಯಾಧೀಶ ಚನ್ನಪ್ಪಗೌಡ, ಗುವಿವಿ ಕುಲಪತಿ ಪ್ರೊ. ಶಶಿಕಾಂತ ಉಡಿಕೇರಿ ಮಾತನಾಡಿದರು. ವೇದಿಕೆಯಲ್ಲಿ ಲೇಖಕ, ಹಿರಿಯ ವಕೀಲ ಡಾ.ಬಸವರಾಜ್ ಚಿಂಚೋಳಿ, ವಿಪ ಸದಸ್ಯರಾದ ಡಾ.ಬಿ.ಜಿ. ಪಾಟೀಲ್, ಶಶೀಲ ನಮೋಶಿ, ಅಧ್ಯಕ್ಷ ಎಸ್.ವಿ.ಪಸಾರ, ಸಿದ್ರಾಮ ವಾಡಿ, ಅನಿಲಕುಮಾರ್ ಕಾಂಬ್ಳೆ ಸೇರಿ ಹಲವು ಗಣ್ಯರು ಇದ್ದರು. ಆರತಿ ರಾಠೋಡ ಅತಿಥಿಗಳನ್ನು ಪರಿಚಯಿಸಿದರು. ಪೂಜಾ ರಾಘವೇಂದ್ರ ನಿರೂಪಿಸಿದರು.

13.59 ಕೋಟಿ ರೂ. ಲಾಭ | 2,575 ಕೋಟಿ ರೂ. ವ್ಯವಹಾರ

ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಸಾಧನೆ

ಶಿರಸಿ: 120 ವರ್ಷಗಳ ಇತಿಹಾಸ ಹೊಂದಿರುವ ಕರ್ನಾಟಕದ ಪ್ರತಿಷ್ಠಿತ ಪಟ್ಟಣ ಸಹಕಾರಿ ಬ್ಯಾಂಕ್ ಆಗಿರುವ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ 2026ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ 13.59 ಕೋಟಿ ರೂ. ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಜಯದೇವ ನಿಲೇಕಣಿ ತಿಳಿಸಿದ್ದಾರೆ.

ಬ್ಯಾಂಕ್ 1,513 ಕೋಟಿ ರೂ. ಠೇವು ಸಂಗ್ರಹಿಸಿ, 1062 ಕೋಟಿ ರೂ. ಸಾಲ ಮುಂಗಡ ನೀಡಿ ತನ್ನ ಒಟ್ಟೂ ವ್ಯವಹಾರವನ್ನು 2,575 ಕೋಟಿ ರೂ. ಗಳಿಗೆ ವೃದ್ಧಿಸಿ ನೂತನ ದಾಖಲೆಯನ್ನು ನಿರ್ಮಿಸಿದೆ ಹಾಗೂ ರೂ.19.64 ಕೋಟಿ ನಿರ್ವಹಣಾ ಲಾಭ, ರೂ.13.59 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕಿನ ಒಟ್ಟೂ ಸದಸ್ಯರ ಸಂಖ್ಯೆ 50,000ಕ್ಕೂ ಮೀರಿರುವುದು ಕೂಡ ಇನ್ನೊಂದು ದಾಖಲೆಯಾಗಿದೆ. ಬ್ಯಾಂಕಿನ ಠೇವಣಿಗಳು ಕಳೆದ ವರ್ಷದ 1,378 ಕೋಟಿ ರೂ. ಗಳಿಂದ ಪ್ರಸಕ್ತ ವರ್ಷಾಂತ್ಯಕ್ಕೆ 1,513 ಕೋಟಿ ರೂ.ಗಳಿಗೆ ಹಾಗೂ ಒಟ್ಟೂ ಸಾಲ ಮತ್ತು ಮುಂಗಡಗಳು ಕಳೆದ ವರ್ಷದ 983 ಕೋಟಿ ರೂ.ಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 1,062 ಕೋಟಿ ರೂ.ಗಳಿಗೆ ಏರಿಕೆಯಾಗಿದೆ.



ಬ್ಯಾಂಕಿನ ಒಟ್ಟೂ ದುಡಿಯುವ ಬಂಡವಾಳ ಕಳೆದ ವರ್ಷದ 1,605 ಕೋಟಿ ರೂ.ಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 1,769 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು, 164 ಕೋಟಿ ರೂ.ನಷ್ಟು ಹೆಚ್ಚಳವಾಗುವುದರ ಮೂಲಕ ಶೇಕಡಾ 10.22ರಷ್ಟು ವೃದ್ಧಿ ದಾಖಲಿಸಿದೆ. ಅಲ್ಲದೇ ಒಟ್ಟೂ 535 ಕೋಟಿ ರೂ.ಹಣವನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ವಿವಿಧ ಬ್ಯಾಂಕ್‌ಗಳಲ್ಲಿ ಗುಂತಾಯಿಸುವ ಮೂಲಕ ಬ್ಯಾಂಕಿನ ಆರ್ಥಿಕ ಸ್ಥಿರತೆಯನ್ನು ದೃಢೀಕರಿಸಿದೆ.

ತನ್ನ ಶೇರು ಬಂಡವಾಳವನ್ನು ಕಳೆದ ವರ್ಷದ 41.32 ಕೋಟಿ ರೂ.ಗಳಿಂದ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 44.93 ಕೋಟಿ ರೂ. ತಲುಪುವುದರ ಮೂಲಕ ಶೇಕಡಾ 8.74ರಷ್ಟು ವೃದ್ಧಿ ದಾಖಲಿಸಿದೆ ಹಾಗೂ ಸ್ವಂತ ನಿಧಿಗಳನ್ನು 149 ಕೋಟಿ ರೂ.ಗಳಿಗೆ ವೃದ್ಧಿಸುವುದರೊಂದಿಗೆ ಸ್ವಂತ ಬಂಡವಾಳವನ್ನು 194 ಕೋಟಿ ರೂ.ಗಳಿಗೆ ವೃದ್ಧಿಸಿಕೊಂಡಿದೆ. ರಾಜ್ಯದ 9 ಜಿಲ್ಲೆಗಳಲ್ಲಿ ಒಟ್ಟೂ 22 ಶಾಖೆಗಳನ್ನು ಹೊಂದಿ ವ್ಯವಹರಿಸುತ್ತಿರುವ ಬ್ಯಾಂಕಿಗೆ ತನ್ನ ಕಾರ್ಯವ್ಯಾಪ್ತಿಯನ್ನು ರಾಜ್ಯಾದ್ಯಾಂತ ವಿಸ್ತರಿಸಲು ಅನುಮತಿ ದೊರಕಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಾಂತ ಶಾಖೆಗಳನ್ನು ವಿಸ್ತರಿಸುವುದಾಗಿ ಅಧ್ಯಕ್ಷ ಜಯದೇವ ನಿಲೇಕಣಿ, ಉಪಾಧ್ಯಕ್ಷ ಸಂತೋಷ ಎಸ್.ಪಂಡಿತ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರತಿ ಎಸ್.ಶೆಟ್ಟರ್ ತಿಳಿಸಿದ್ದಾರೆ.

ಕೈಗಾರಿಕಾ ಸ್ಥಾಪನೆಗೆ ಮುಂದೆ ಬನ್ನಿ: ಸಚಿವ ಬೋಸರಾಜು

ರಾಯಚೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೈಗಾರಿಕೆಗಳ ಸ್ಥಾಪನೆಗೆ ಸಹಕಾರ ನೀಡುತ್ತಿದ್ದು, ಆಸಕ್ತರು ಉದ್ಯಮಿಗಳು ಕೈಗಾರಿಕಾ ಸ್ಥಾಪನೆಗೆ ಮುಂದೆ ಬರಬೇಕೆಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ನಗರದ ಕೃಷಿ ವಿಶ್ವವಿದ್ಯಾಲಯದ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಭಾರತ ಸರ್ಕಾರ ಉದ್ಯಮ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ, ಸ್ಟಾರ್ಟ್ ಅಪ್ ಇಂಡಿಯಾ ಯೋಜನೆ ಹಾಗೂ ಜಿಲ್ಲಾಡಳಿತ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ತೇಜಸ್ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಲ್ಲಿ ಕೈಗಾರಿಕಾ ಸ್ಥಾಪನೆಗೆ ಒಳ್ಳೆಯ ವಾತಾವರಣ ಇದೆ. ಜಿಲ್ಲೆಯಲ್ಲಿ ಎರಡು ನದಿ, ವಿದ್ಯುತ್ ಉತ್ಪಾದನೆ, ಹತ್ತಿ, ಭತ್ತ ಹೆಚ್ಚಾಗಿ ದೊರೆಯುತ್ತದೆ. ಭಾರತ್ ಮಾಲಾ ರಸ್ತೆಯು ಸಹ ಇದೆ. ಈ ಭಾಗದಲ್ಲಿ ಕೈಗಾರಿಕಾ ಸ್ಥಾಪನೆಗೆ ಯಾರು ಅರ್ಜಿ ಹಾಕುವುದಿಲ್ಲ, ಸ್ಥಳೀಯರು ಕೈಗಾರಿಕೆ ಸ್ಥಾಪಿಸಲು ಮುಂದೆ ಬರಬೇಕು ಎಂದರು.

ದೇಶದಲ್ಲಿ ಮೊದಲ ಬಾರಿಗೆ ರಾಯಚೂರು ಜಿಲ್ಲೆಯಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ವಿವಿಧ ತಾಲೂಕು ಮಟ್ಟದಲ್ಲಿ ಕಾರ್ಯಾಗಾರ ನಡೆಸಿ, ಸಲಹೆ-ಸೂಚನೆಗಳನ್ನು ಪಡೆಯಬೇಕು. ಕೃಷಿಗೆ ಸಂಬಂಧಿಸಿದ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಲು ಶ್ರಮಿಸಬೇಕು. ಇಲ್ಲಿ ಎಲ್ಲಾ ರೀತಿಯ ಕಚ್ಚಾ ವಸ್ತುಗಳ ದೊರೆಯುತ್ತವೆ. ಸೈನ್ಸ್ ಸಿಟಿ ಪ್ರಾರಂಭಿಸಲು ಭೂಮಿಯನ್ನು ಕೇಳಲಾಗಿದ್ದು, ಈಗಾಗಲೇ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ, ಬೆಂಗಳೂರಿನಲ್ಲಿ ನಿರ್ಮಿಸಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.



ಕರ್ನಾಟಕವು ತಲಾ ಆದಾಯದಲ್ಲಿ ದೇಶದಲ್ಲೇ ಮೊದಲನೆಯಸ್ಥಾನವನ್ನು ಪಡೆದಿದೆ. ರಾಯಚೂರು ಜಿಲ್ಲೆಯಲ್ಲಿ ಆದಷ್ಟು ಬೇಗನೆ ವಿಮಾನ ನಿಲ್ದಾಣ ಕಾಮಗಾರಿಯು ಪೂರ್ಣಗೊಳ್ಳಲಿದೆ. ಅಲ್ಲದೆ ರೈಲ್ವೆ ಸಂಪರ್ಕ ಕಾಮಗಾರಿ ಯೋಜನೆಯು ನಡೆಯುತ್ತದೆ ಎಂದರು. ಜಿಲ್ಲಾಧಿಕಾರಿ ನಿತೀಶ.ಕೆ, ಜಿಲ್ಲಾ ನೋಡಲ್ ಅಧಿಕಾರಿ ಮಹಮ್ಮದ್ ಯೂಸುಫ್, ಜಿ.ಪಂ ಸಿಇಒ ಈಶ್ವರ ಕಾಂದೂ, ಐಐಐಟಿ ರಾಯಚೂರು ನಿರ್ದೇಶಕ ಪ್ರೊ.ಹರೀಶ ಕುಮಾರ ಸರ್ದಾನಾ, ವಿಷ್ಣುಕಾಂತ ಭುತಡ, ಡಾ.ರಮೇಶ, ಸಾವಿತ್ರಿ ಪುರುಷೋತ್ತಮ, ಎಸ್.ಕಮಲ್ ಕುಮಾರ, ವಿ.ಲಕ್ಷ್ಮೀಕಾಂತರೆಡ್ಡಿ, ಡಿಪಿಐಐಟಿ ಸ್ಟಾರ್ಟ್‌ಅಪ್ ಇಂಡಿಯಾ ಅಸೋಸಿಯೇಟ್‌ಗಳಾದ ರೋಹನ್ ಸಚ್‌ದೇವ, ರವಿ, ಇಶ್ದೀಪ್ ಸಿಂಗ್, ಆಕಾಂಕ್ಷೆ ಗುಪ್ತ, ಭರತ್ ಚಂದ್ರ ಬಿ.ಕೆ., ಸಿ.ಎಂ.ಪಾಟೀಲ ಸೇರಿದಂತೆ ಇತರರು ಇದ್ದರು.

ಹೈಕಮಾಂಡ್ ಮೆಚ್ಚುಗೆಗಾಗಿ ಆರೋಪ: ಆರ್.ಅಶೋಕ

ಬೆಂಗಳೂರು: ಕೇವಲ ಹೈಕಮಾಂಡ್ ನಾಯಕರ ಮೆಚ್ಚುಗೆಗಾಗಿ ಪದೇ ಪದೇ ಇಲ್ಲಸಲ್ಲದ ಆರೋಪ ಮಾಡಿದರೆ ಅದು ಸತ್ಯ ಆಗುವುದಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಒಂದು ಸುಳ್ಳನ್ನು ನೂರು ಬಾರಿ ಅಲ್ಲ, ಸಾವಿರ ಬಾರಿ ಹೇಳಿದರೂ ಅದು ಸತ್ಯವಾಗುವುದಿಲ್ಲ ಎಂದಿದ್ದಾರೆ. ತೆರಿಗೆ ಹಂಚಿಕೆ ಹೇಗೆ ನಡೆಯುತ್ತದೆ, ಅದಕ್ಕಿರುವ ಮಾನದಂಡಗಳು ಏನು, ಇವೆಲ್ಲ ತಮಗೆ ಚೆನ್ನಾಗಿ ಗೊತ್ತು. ಯುಪಿಎ ಅವಧಿಗೆ ಹೋಲಿಸಿದರೆ ಎನ್‌ಡಿಎ ಅವಧಿ ಯಲ್ಲಿ ಕರ್ನಾಟಕಕ್ಕೆ 3 ಪಟ್ಟು ಹೆಚ್ಚು ಹಣ ದೊರೆತಿದೆ ಎನ್ನುವ ಸತ್ಯ ನಿಮಗೂ ಗೊತ್ತು. ಎರಡೆರಡು ಬಾರಿ ಮುಖ್ಯಮಂತ್ರಿ ಆಗಿರುವ ತಮ್ಮಂತಹವರು ಕೇವಲ ಹೈಕಮಾಂಡ್ ನಾಯಕರ ಮೆಚ್ಚುಗೆಗಾಗಿ ಪದೇ ಪದೇ ಇಲ್ಲಸಲ್ಲದ ಆರೋಪ ಮಾಡಿ ರಾಜ್ಯದ ಜನತೆಯ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುವುದು ತಮಗೆ ಶೋಭೆ ತರುವುದಿಲ್ಲ ಎಂದು ಆಕ್ಷೇಪಿಸಿದ್ದಾರೆ.

ತಮ್ಮ ಮೊದಲ ಅವಧಿಯಲ್ಲಿದ್ದ ಗತ್ತು, ಗಾಂಭೀರ್ಯ, ಆತ್ಮವಿಶ್ವಾಸ ಇವು ಯಾವುದೂ ಈಗ ತಮ್ಮಲ್ಲಿ ಕಾಣುತ್ತಿಲ್ಲ. ಜನತಾ ಪರಿವಾರದಿಂದ, ಸಮಾಜವಾದಿ ಹಿನ್ನೆಲೆಯಿಂದ ಬಂದ ತಮಗೆ ಈ ರೀತಿ ಕುರ್ಚಿಗಾಗಿ, ಮಗನ ಭವಿಷ್ಯಕ್ಕಾಗಿ, ಗಾಂಧಿ ಕುಟುಂಬದ ಓಲೈಕೆ ಮಾಡುವ ಪರಿಸ್ಥಿತಿ ಬರಬಾರದಿತ್ತು . ರಾಜಕೀಯ ಜೀವನದ ಸಂಧ್ಯಾ ಕಾಲದಲ್ಲಿ ನಿಮಗೆ ಬಂದಿರುವ ಈ ದುಸ್ಥಿತಿ ಬಗ್ಗೆ ನನಗೆ ಕನಿಕರವಿದೆ. ಆದರೆ, ಸುಳ್ಳಿನ ಮೇಲೆ ಸುಳ್ಳು ಹೇಳಿ ತಮ್ಮ ವರ್ಚಸ್ಸಿಗೆ ತಾವೇ ಇನ್ನಷ್ಟು ಮಸಿ ಬಳಿಸಿಕೊಳ್ಳಬೇಡಿ ಎಂದು ಹೇಳಿದರು.

ರಾಮ ಬಾಣ



ಬಿಟ್ ಕಾಯಿನ್ ಪ್ರಕರಣ ರದ್ದತಿ ಕೋರಿ ಹೈಗೆ ರಾಬಿನ್ ಅರ್ಜಿ

ಬೆಂಗಳೂರು: ಬಿಟ್ ಕಾಯಿನ್ ಹಗರಣದ ರೂವಾರಿ ಶ್ರೀಕಾಂತ್ ಅಲಿಯಾಸ್ ಶ್ರೀಕಿ ಸ್ನೇಹಿತನಾದ ರಾಬಿನ್ ಖಂಡೇಲವಾಲ್ ಅವರು ತಮ್ಮ ವಿರುದ್ಧದ ವಂಚನೆ ಮತ್ತು ನಂಬಿಕೆ ದ್ರೋಹ ಪ್ರಕರಣ ರದ್ದತಿ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಬೆಂಗಳೂರಿನ ಜಯನಗರದ ಶ್ರೀಕಾಂತ್ ಮತ್ತು ಪಶ್ಚಿಮ ಬಂಗಾಳದ ಮೂಲದವನಾದ ಬಿಟ್ ಕಾಯಿನ್ ಟ್ರೇಡರ್ ರಾಬಿನ್ ಖಂಡೇಲವಾಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ಪೀಠವು ವಿಶೇಷ ಸರ್ಕಾರಿ ಅಭಿಯೋಜಕ ಪಿ.ಪ್ರಸನ್ನಕುಮಾರ್ ಅವರಿಗೆ ದಾಖಲೆಗಳನ್ನು ಪರಿಶೀಲಿಸಿ ವಾದಿಸುವಂತೆ ಸೂಚಿಸಿದೆ.

ಪ್ರಕರಣದ ಹಿನ್ನೆಲೆ : 2019ರಲ್ಲಿ ಕೃಷ್ಣ ಹಾಗೂ ರಾಬಿನ್ ಖಂಡೇಲವಾಲ್ ಅವರು ಭೇಟಿಯಾಗಿ 28 ಲಕ್ಷ ರೂ. ನೀಡಿದರೆ ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿ 28 ಲಕ್ಷದ ಜತೆ 17 ಲಕ್ಷ ಸೇರಿಸಿ ಒಟ್ಟು 45 ಲಕ್ಷ ರೂ. ನೀಡುತ್ತೇವೆ ಎಂದು ಖಾತೆ ನಂಬರ್ ಒಂದನ್ನು ನೀಡಿದ್ದರು. ಆದಕ್ಕೆ ತಾಂತ್ರಿಕ ತೊಂದರೆಯಿಂದಾಗಿ ಹಣ ಹೋಗಿರಲಿಲ್ಲ. ಹೀಗಾಗಿ, ಆನಂತರ ಅಜಿತ್ ಖಂಡೇಲವಾಲ್ ಎಂಬಾತನ ಖಾತೆ ನಂಬರ್‌ಗೆ ಹಣ ಹಾಕುವಂತೆ ಆರೋಪಿಗಳು ಸೂಚಿಸಿದ್ದರು. ಅದರಂತೆಯೇ ಅಜಿತ್ ಖಾತೆಗೆ ಹಣ ವರ್ಗಾಯಿಸಲಾಗಿತ್ತು. ಒಂದು ತಿಂಗಳ ನಂತರ ಹಣ ಕೇಳಿದಾಗ ಸ್ವಲ್ಪ ದಿನಗಳಲ್ಲೇ ವಾಪಸ್ ಮಾಡುವುದಾಗಿ ಹೇಳಿ, ಆನಂತರ ಆರೋಪಿಗಳು ಸಂಪರ್ಕಕ್ಕೆ ಸಿಕ್ಕಿಲ್ಲ. ಹೀಗಾಗಿ, ಆರೋಪಿಗಳ ವಿರುದ್ಧ ಕ್ರಮಕ್ಕೈಗೊಳ್ಳುವಂತೆ ಇಂದಿರಾ ನಗರದ ಯಶೋದಾದೇವಿ ದೂರು ನೀಡಿದ್ದರು. ಇದರ ಅನ್ವಯ ಶ್ರೀ ಕೃಷ್ಣ ಅಲಿಯಾಸ್ ಶ್ರೀಕಿ, ರುಬಿಟ್ ಆನ್‌ಲೈನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ರಾಬಿನ್ ಖಂಡೇವಾಲ್ ಮತ್ತು ಅಜಿತ್ ಖಂಡೇಲವಾಲ್ ವಿರುದ್ಧ ಅಶೋಕ ನಗರ ಠಾಣೆಯಲ್ಲಿ 2020ರ ನವೆಂಬರ್ 19ರಂದು ಪ್ರಕರಣ ದಾಖಲಾಗಿತ್ತು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದೂ ಸಂಗಮ ಮಾಡಲು ಹೊರಟರೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತದೆ, ನಾವೇನೂ ಬಾಂಬುಗಳನ್ನು ತರುತ್ತೇವೆಯೇ?
– ಆರೆಸ್ಸೆಸ್ ಪ್ರಾಂತ ಪ್ರಚಾರಕ್ ಗುರುಪ್ರಸಾದ್
– ಲೋಕದಲ್ಲಿ ಜನ ಬಗ್ಗುವವರನ್ನು ಗುದ್ದುತ್ತಾರೆ, ಗುದ್ದುವವರೆದುರು ಬಗ್ಗುತ್ತಾರೆ!

ದಿನ ಭವಿಷ್ಯ

ಮೇಷ ವೃತ್ತಿ ಕೌಶಲ ಸುಧಾರಣೆಗೆ ಪ್ರೇರಣೆ ಸಿಗಲಿದೆ. ಸಹೋದ್ಯೋಗಿ ಜತೆ ಹೊಂದಾಣಿಕೆ ಮುಖ್ಯ. ಬದಲಾವಣೆ ವಿರೋಧಿಸಬೇಡಿ.

ವೃಷಭ ಸಂಗಾತಿಯ ಅಭಿಪ್ರಾಯಕ್ಕೆ ಮನ್ನಣೆ ಕೊಡಿ. ಆದರಿಂದ ವಿವಾದ ಅಂತ್ಯ. ವೃತ್ತಿಯಲ್ಲಿ ಹಿರಿಯರ ಸಹಕಾರ. ಆರ್ಥಿಕ ಒತ್ತಡ ಅಂತ್ಯ.

ಮಿಥುನ ಭಾವನಾತ್ಮಕ ಏರುಪೇರು. ಸಂಬಂಧದಲ್ಲಿ ಒಡಕು. ಗ್ರಹಗತಿ ಅಷ್ಟೇನೂ ಪೂರಕವಾಗಿಲ್ಲ. ಮುಖ್ಯ ಕಾರ್ಯಕ್ಕೆ ತುಸು ಕಾಲ ಕಾಯುವುದೊಳಿತು.

ಕಟಕ ವೃತ್ತಿಯಲ್ಲೂ ವೈಯಕ್ತಿಕವಾಗಿಯೂ ಸಂಕಷ್ಟ ಎದುರಿಸುವಿರಿ. ಪರಿಸ್ಥಿತಿ ನಿಮಗೆ ಪ್ರತಿಕೂಲ. ಇಷ್ಟದೇವರ ಪ್ರಾರ್ಥನೆ ಮಾಡಿ.

ಸಿಂಹ ಉತ್ಸಾಹದ ದಿನ. ಕಾರ್ಯ ಸಂಪೂರ್ಣ. ಭಿನ್ನಮತ ನಿವಾರಣೆ. ಜಡತ್ವ ಬಿಟ್ಟು ಕೆಲಸ ಮಾಡಿ. ಆರೋಗ್ಯ ಸಮಸ್ಯೆ ಪರಿಹಾರ.

ಕನ್ಯಾ ನಿಮ್ಮ ತಪ್ಪಿಗೆ ಸಂಗಾತಿಯ ಮೇಲೆ ದೂರು ಹಾಕಬೇಡಿ. ವೃತ್ತಿ ಸಮಸ್ಯೆ ನೀವು ತಿಳಿದುಕೊಂಡಷ್ಟು ಕಠಿಣವಾಗಿಲ್ಲ.

ತುಲಾ ಅಶಾಂತ ಮನಸ್ಸು. ನಿಮ್ಮ ಚಿಂತನೆಗಳು ಕಾರ್ಯರೂಪಕ್ಕೆ ಬರದಿರುವ ಚಿಂತೆ. ಅಧ್ಯಾತ್ಮ, ಧ್ಯಾನ ನಿಮಗೆ ಸಹಕಾರಿಯಾದೀತು.

ವೃಶ್ಚಿಕ ಮನೆಯವರ ಜತೆ ಪ್ರೀತಿಯಿಂದ ನಡಕೊಳ್ಳಿ. ಅಧಿಕಾರ ಚಲಾವಣೆ ಒಳಿತು ತರದು. ಮುನಿಸು ನಿವಾರಣೆಗೆ ಗಮನ ಕೊಡಿ. ವೆಚ್ಚ ಅಧಿಕ.

ಧನು ಆರ್ಥಿಕ ಪರಿಸ್ಥಿತಿ ಸುಧಾರಣೆ. ಕಾಡುತ್ತಿದ್ದ ಚಿಂತೆ ಪರಿಹಾರದ ಲಕ್ಷಣ ತೋರಿಬರುತ್ತಿದೆ. ಕೋಪತಾಪ ನಿಯಂತ್ರಿಸಿ. ಸಮಾಧಾನಚಿತ್ತರಾಗಿರಿ.

ಮಕರ ನಿಮ್ಮ ಅಸಹನೆಗೆ ಇತರರ ಮೇಲೆ ರೇಗುವಿರಿ. ಸಂಘರ್ಷದ ಮನೋಭಾವ ಬಿಡಿ. ಇತರರ ಮನಸ್ಥಿತಿ ಅರಿತು ವ್ಯವಹರಿಸಿ.

ಕುಂಭ ಗ್ರಹಗತಿ ಪೂರಕ. ಸಂಬಂಧದಲ್ಲಿ ಸುಧಾರಣೆ. ಮಾನಸಿಕ ನಿರಾಳತೆ. ಹಣದ ಬಿಕ್ಕಟ್ಟು ಪರಿಹಾರ. ಹಳೆಯ ಸ್ನೇಹಿತರ ಭೇಟಿ. ಇಷ್ಟದ ವಸ್ತು ಖರೀದಿ.

ಮೀನ ನಿಮ್ಮ ಸುತ್ತಲಿನ ಬದಲಾವಣೆಗೆ ಹೊಂದಿಕೊಳ್ಳಿ. ದೂರವಾಗಿ ನಿಲ್ಲಬೇಡಿ. ಸಣ್ಣ ವಿಷಯಕ್ಕೆ ಅಸಹನೆಯಿಂದ ರೇಗದಿರಿ. ಶಾಂತಚಿತ್ತತೆ ಮುಖ್ಯ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 2,7,0,3

ಸಿಎಸ್‌ಗೆ ರಾಜ್ಯಪಾಲರ ಪತ್ರ

ಪುಟ ೧➜ ಹೀಗಾಗಿ ಗ್ರೇಡ್ ನೀಡಿದರೆ ಶೈಕ್ಷಣಿಕ ಪ್ರಾಮುಖ್ಯತೆ ಕಡಿಮೆ ಮಾಡಬಹುದು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಸರ್ಕಾರದ ಈ ನಿರ್ಧಾರ ವಿದ್ಯಾರ್ಥಿಗಳು ಕಲಿಯುವ ಆಸಕ್ತಿಯ ಮೇಲೆ ಪರಿಣಾಮ ಬೀರಬಹುದು. ಶಿಕ್ಷಣದ ಮೇಲೆ ಬೀರುವ ಪರಿಣಾಮ ಬಗ್ಗೆ ಪೋಷಕರಿಗೂ ಆತಂಕ ಇದ್ದು, ರಾಜ್ಯಪಾಲರು ಈ ವಿಷಯವನ್ನು ಗಮನಿಸಿದ್ದಾರೆ. ಹೀಗಾಗಿ ಶೈಕ್ಷಣಿಕ, ಆಡಳಿತಾತ್ಮಕ ಅಂಶ ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸಂಬಂಧಿತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಶೈಕ್ಷಣಿಕ ಉದ್ದೇಶಗಳಿಗೆ ಅನುಗುಣವಾಗಿ ಸೂಕ್ತ ಕ್ರಮಕೈಗೊಳ್ಳಿ ಎಂದು ಮುಖ್ಯ ಕಾರ್ಯದರ್ಶಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಬರೆದಿರುವ ಪತ್ರದಲ್ಲಿ ತಿಳಿಸಲಾಗಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೂ ಸಲ್ಲಿಕೆಯಾಗಿರುವ ನಡುವೆ ರಾಜ್ಯಪಾಲರ ಕಡೆಯಿಂದ ಬಂದಿರುವ ಈ ಪತ್ರ ಪ್ರಾಮುಖ್ಯತೆ ಪಡೆದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಬಾರದು ಮತ್ತು ಅಂಕ ಪಟ್ಟಿಯಿಂದ ಹೊರಗಿಡುವಂತೆ ವಿವಿಧ ಕನ್ನಡ ಪರ ಸಂಘಟನೆಗಳು ಸರ್ಕಾರಕ್ಕೆ ಒತ್ತಾಯಿಸಿದ್ದವು. ಆ ಬೆನ್ನಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 525 ಅಂಕಗಳು ನಿಗದಿ ಮಾಡಿ, ತೃತೀಯ ಭಾಷೆಯ ಅಂಕಕ್ಕೆ ಸರ್ಕಾರ ಕೊಕ್ ನೀಡಿತ್ತು. ತೃತೀಯ ಭಾಷೆ ಪರೀಕ್ಷೆಯ ಅಂಕವನ್ನು ಗ್ರೇಡ್ ಮೂಲಕ ನೀಡಲಾಗುತ್ತದೆ. ಆದರೆ, ವಿದ್ಯಾರ್ಥಿಗಳು ತೃತೀಯ ಭಾಷೆಯ ಪರೀಕ್ಷೆಯನ್ನು ಬರೆಯುವುದು ಕಡ್ಡಾಯ ಎಂದು ಶಿಕ್ಷಣ ಇಲಾಖೆ ಹೇಳಿರುವುದು ಭಾರೀ ಚರ್ಚೆಗೂ ಗ್ರಾಸವಾಗಿತ್ತು.

ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾಧನೆ ಶೂನ್ಯ: ಸಂಸದ

ದುರ್ಬಲ ಆರ್ಥಿಕತೆ: ಕಾಗೇರಿ

ಕಲಬುರಗಿ: ರಾಜ್ಯದ ರಾಜಕೀಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನಡುವಿನ ಒಳ ಜಗಳದಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿವೆ ಎಂದು ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆರೋಪಿಸಿದ್ದಾರೆ.

ನಗರರಐವನ್ ಶಾಹಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ತಮ್ಮ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಿಎಂ ಸ್ಥಾನವನ್ನು ಹೇಗೆ ಪಡೆಯಬೇಕು ಎಂಬ ಚಿಂತನೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಈ ಇಬ್ಬರ ನಡುವಿನ ಕಚ್ಚಾಟದಿಂದ ರಾಜ್ಯದ ಆರ್ಥಿಕ ಸ್ಥಿತಿ ದುರ್ಬಲವಾಗುತ್ತಿದ್ದು, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಟೀಕಿಸಿದರು.

ಇದೇ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧವೂ ಅವರು ವಾಗ್ದಾಳಿ ನಡೆಸಿದ ಅವರು, ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಪ್ರಧಾನಿ ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಮಾತನಾಡುವುದೇ ಸಾಧನೆ ಎಂಬ ಭ್ರಮೆಯಲ್ಲಿ ಇರಬಾರದು ಎಂದ ಅವರು, ಕಳೆದ ಮೂರು ವರ್ಷಗಳಲ್ಲಿ ಐಟಿಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವರು ಮಾಡಿದ ಸಾಧನೆಗಳ ಬಗ್ಗೆ ಸ್ಪಷ್ಟನೆ ನೀಡಲಿ ಎಂದು ಸವಾಲು ಹಾಕಿದರು.



ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ವಿಶ್ವಾಸ ಬಲವಾಗಿದೆ. ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿನ ಕಾಂಗ್ರೆಸ್ ಆಡಳಿತದಿಂದ ಜನರು ಭ್ರಮನಿರಸಗೊಂಡಿದ್ದಾರೆ. ಹೀಗಾಗಿ ಬಿಜೆಪಿ ಗೆಲುವು ಸಾಧಿಸಲಿದೆ.
■ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ

ಕಲಬುರಗಿಯಲ್ಲಿ ಕುಡಿಯುವ ನೀರಿನ ಕೊರತೆ, ಹಾಳಾದ ರಸ್ತೆಗಳು ಹಾಗೂ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಉಲ್ಲೇಖಿಸಿದ ಅವರು, ವಿವಿಧ ಮಾಫಿಯಾ ಚಟುವಟಿಕೆಗಳನ್ನೂ ನಿಯಂತ್ರಿಸಲು ಕ್ರಮ ಕೈಗೊಳ್ಳಲಿ ಮೊದಲು ಎಂದು ಸಲಹೆ ನೀಡಿದರು. ಇಸ್ರೇಲ್–ಇರಾನ್ ಯುದ್ಧ ಪರಿಸ್ಥಿತಿಯ ಹಿನ್ನೆಲೆ ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ, ಕೊರೋನಾ ಸಮಯದಂತೆ ಎಚ್ಚರಿಕೆಯಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕಾಗಿದೆ. ಕೇಂದ್ರ ಸರ್ಕಾರದ ದೂರದೃಷ್ಟಿಯಿಂದ ದೇಶದಲ್ಲಿ ಸ್ಥಿರತೆಯಿದ್ದು, ಪಕ್ಕದ ಮನೆಯಲ್ಲ ಬೆಂಕಿ ಬಿದ್ದಾಗ ಚಳಿ ಕಾಯಿಸಿಕೊಳ್ಳುವಂತ ಕೆಲಸವನ್ನು ವಿಪಕ್ಷಗಳು ಮಾಡಬಾರದು. ಯುದ್ಧದಂತಹ ಗಂಭೀರ ವಿಷಯವನ್ನು ರಾಜಕೀಯಕ್ಕೆ ಬಳಸಬಾರದು ಎಂದು ಕಾಗೇರಿ ಎಚ್ಚರಿಸಿದ ಅವರು, ಪೆಟ್ರೋಲ್–ಡೀಸೆಲ್ ಸಮಸ್ಯೆ ಇದ್ದರೆ ರಾಜ್ಯ ಸರ್ಕಾರವೂ ತನ್ನ ಹೊಣೆಗಾರಿಕೆ ನಿರ್ವಹಿಸಬೇಕು ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ಲವ್ ಜಿಹಾದ್ ಯತ್ನ

ಪುಟ ೧➜ ಸದ್ಯ ಪೊಲೀಸ್ ವಶದಲ್ಲಿರುವ ಸಮೀರ್ ಮುಲ್ಲಾ ಗಾಯಗೊಂಡಿದ್ದರಿಂದ ನಗರದ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಜಿಮ್‌ನಲ್ಲಿ ಸಮೀರ್ ಮುಲ್ಲಾ ನನ್ನೊಂದಿಗೆ ಸಲುಗೆ ಬೆಳೆಸಿದ್ದಾನೆ. ನಂಬಿಸಿ ಮನೆಗೆ ಕರೆದು ಆತ ಪಾನೀಯದಲ್ಲಿ ಏನೋ ಬೆರೆಸಿ, ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾನೆ. ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಂಡು ವೈರಲ್ ಮಾಡುವುದಾಗಿ ಬೆದರಿಕೆ ಹಾಕಿ, ಕಿರುಕುಳ ನೀಡುತ್ತಿದ್ದ. ಇದೇ ರೀತಿ ಬೇರೆ ಯುವತಿಯರ ಜತೆ ಮಾಡಿದ್ದಾನೆ ಎಂದು ಆರೋಪಿಸಿ ಯುವತಿ ವಿಡಿಯೋ ಮಾಡಿ ಹರಿಬಿಟ್ಟಿದ್ದಾಳೆ.

ಈ ಪ್ರಕರಣದ ಕುರಿತು ಯುವತಿ ಕುಟುಂಬಸ್ಥರು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಯುವಕ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಯುವಕ ಕುಟುಂಬಸ್ಥರು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸಮೀರ್ ಮುಲ್ಲಾ ಎಂಬ ಯುವಕನ ಜಿಮ್‌ಗೆ ನಮ್ಮ ಮಗಳು ಹೋಗುತ್ತಿದ್ದಳು. ಯುವಕ ನನ್ನ ಮಗಳೊಂದಿಗೆ ಸಲುಗೆ ಬೆಳೆಸಿ, ಒಂದು ದಿನ ಪಾನೀಯದಲ್ಲಿ ಏನೋ ಬೆರೆಸಿ ಅವಳೊಂದಿಗೆ ಅಸಭ್ಯವಾಗಿ ವರ್ತಿಸಿದ್ದಲ್ಲದೇ ಆಗಾಗ ಕಿರುಕುಳ ನೀಡಿ, ಬೆದರಿಕೆ ಹಾಕಿದ್ದಾನೆ ಎಂದು ಯುವತಿ ತಾಯಿ ಆರೋಪಿಸಿದ್ದಾರೆ.

ಸಮೀರ್ ಕುಟುಂಬದಿಂದ ಬೆದರಿಕೆ: ಅಷ್ಟೇ ಅಲ್ಲದೇ ಶುಕ್ರವಾರ ಬೆಳಗ್ಗೆ ಅವನ ಕುಟುಂಬಸ್ಥರು ಮನೆಗೆ ಏಕಾಏಕಿ ಮುತ್ತಿಗೆ ಹಾಕಿ ನನ್ನ ಮಗಳನ್ನು ಹಾಗೂ ನಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾರೆ. ಜಿಮ್‌ನಲ್ಲಿ ಅನೇಕ ಹುಡಿಗಿಯರ ತಲೆಕೆಡೆಸುತ್ತಿದ್ದಾನೆ. ಲವ್ ಜಿಹಾದ್‌ಗೆ ಯತ್ನಿಸುತ್ತಿದ್ದು, ಆತನಿಗೆ ಶಿಕ್ಷೆಯಾಗಬೇಕು. ನನ್ನ ಮಗಳಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿದರು.

ಈ ಆರೋಪವನ್ನು ತಳ್ಳಿಹಾಕಿದ ಯುವಕನ ಸಹೋದರಿ ತೈಸಿನ್ ಮುಲ್ಲಾ, ಸಮೀರ್ ಹಾಗೂ ಯುವತಿ ಕಳೆದ ಮೂರು ವರ್ಷದಿಂದ ಪ್ರೀತಿಸುತಿದ್ದರು. ಅವಳು ನಮ್ಮೊಂದಿಗೆ ಶಾಪಿಂಗ್, ಸಮಾರಂಭ ಹಾಗೂ ಪಾರ್ಟಿಗಳಿಗೆ ಬಂದಿದ್ದಾಳೆ. ಆದರೆ, ಈಗ ಆ ಕುಟುಂಬಸ್ಥರು ಲವ್ ಜಿಹಾದ್ ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ಶುಕ್ರವಾರ ಬೆಳಗ್ಗೆ ಕುಟುಂಬಸ್ಥರು ಅವರ ಸಮಾಜದ ನೂರು ಜನರನ್ನು ಕರೆದುಕೊಂಡು ಮನೆಗೆ ಬಂದು ನಮ್ಮ ಸಹೋದರ ಮೇಲೆ ಹಲ್ಲೆ ನಡೆಸಿ ಅಪಹರಿಕೊಂಡು ಹೋಗಿದ್ದಾರೆ. ಸಹೋದರ ಏನು ತಪ್ಪು ಮಾಡಿಲ್ಲ. ಆತನ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

6ನೇ ತರಗತಿಯಿಂದ 3ನೇ ಭಾಷೆ ಕಡ್ಡಾಯ

ಪುಟ ೧➜ ಒಂದೇ ಭಾಷೆಯನ್ನು ಒಂದಕ್ಕಿಂತ ಹೆಚ್ಚು ಹಂತಗಳಲ್ಲಿ ಕಲಿಯಲು ಅವಕಾಶ ಇರುವುದಿಲ್ಲ; ಪಠ್ಯಪುಸ್ತಕಗಳು ಒಂದೇ ಇದ್ದರೂ ಪಠ್ಯಕ್ರಮ ಹಾಗೂ ಮೌಲ್ಯಮಾಪನ ವಿಧಾನಗಳಲ್ಲಿ ವ್ಯತ್ಯಾಸ ಇರುತ್ತದೆ.

ಇಂಗ್ಲಿಷ್ ವಿದೇಶಿ ಭಾಷೆ: ಹೊಸ ಪಠ್ಯಕ್ರಮದಲ್ಲಿ ಇಂಗ್ಲಿಷ್ ಭಾಷೆಯನ್ನು ವಿದೇಶಿ ಭಾಷೆ ಎಂದು ವರ್ಗೀಕರಿಸಿರುವುದು ಪ್ರಮುಖ ಬದಲಾವಣೆಯಾಗಿದ್ದು, ಮೂರು ಭಾಷೆಗಳಲ್ಲೂ ಒಂದೇ ವಿದೇಶಿ ಭಾಷೆಯನ್ನು ಮಾತ್ರ ಆಯ್ಕೆ ಮಾಡಬಹುದಾಗಿದೆ. ಇದರ ಪರಿಣಾಮವಾಗಿ, ವಿದ್ಯಾರ್ಥಿಗಳು ಇಂಗ್ಲಿಷ್ ಜತೆಗೆ ಮತ್ತೊಂದು ವಿದೇಶಿ ಭಾಷೆಯನ್ನು ಆಯ್ಕೆ ಮಾಡುವ ಅವಕಾಶ ಸೀಮಿತವಾಗಲಿದೆ. ಮಾತ್ರವಲ್ಲದೇ ಮೂರು ಭಾಷೆಗಳಲ್ಲೂ ಕನಿಷ್ಠ ಎರಡು ಭಾಷೆಗಳು ಭಾರತೀಯ ಮೂಲದವಾಗಿರಬೇಕು ಎಂಬ ನಿಯಮವನ್ನು ಪಠ್ಯಕ್ರಮ ಸ್ಪಷ್ಟಪಡಿಸಿದೆ.

ಸಿಟಿ, ಎಐ ಕಲಿಕೆ

ಹೊಸ ಪಠ್ಯಕ್ರಮದಲ್ಲಿ ಕಂಪ್ಯೂಟೇಷನಲ್ ಥಿಂಕಿಂಗ್ (ಸಿಟಿ), ಕೃತಕ ಬುದ್ಧಿಮತ್ತೆ(ಎಐ), ವೃತ್ತಿಪರ ಶಿಕ್ಷಣ, ಕಲೆ ಹಾಗೂ ದೈಹಿಕ ಶಿಕ್ಷಣಗಳನ್ನು ಕಡ್ಡಾಯವಾಗಿ ಸೇರಿಸಲಾಗಿದೆ. ಸಿಟಿ ಮತ್ತು ಎಐ ವಿಷಯಗಳು ಆರಂಭದಲ್ಲಿ ಒಳಮೌಲ್ಯಮಾಪನದ ಮೂಲಕ ಪರಿಚಯವಾಗಲಿದ್ದು, 2029 ರಿಂದ ಬೋರ್ಡ್ ಪರೀಕ್ಷೆಯ ಕಡ್ಡಾಯ ವಿಷಯಗಳಾಗಲಿವೆ. ಸಾಮಾಜಿಕ ವಿಜ್ಞಾನ ವಿಷಯದಲ್ಲಿ ಪ್ರಕರಣ ಅಧ್ಯಯನ, ನಕ್ಷೆ ಕಾರ್ಯ ಮತ್ತು ಡೇಟಾ ವಿಶ್ಲೇಷಣೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಮೌಲ್ಯಮಾಪನ ಮಾದರಿಯಲ್ಲಿ ಯಾವುದೇ ಬದಲಾವಣೆ ಇಲ್ಲದೆ 80 ಅಂಕ ಬೋರ್ಡ್ ಪರೀಕ್ಷೆ ಹಾಗೂ 20 ಅಂಕ ಒಳಮೌಲ್ಯಮಾಪನ ಮುಂದುವರಿಯಲಿದೆ.

ಬಹು ಭಾಷಾ ಆಯ್ಕೆ

ಪುಟ ೧➜ ವಿದೇಶದಲ್ಲಿರುವ ಸಿಬಿಎಸ್‌ಇ ಶಾಲೆಗಳಿಗೆ ಎರಡು ಭಾರತೀಯ ಭಾಷೆಗಳ ಬದಲು ಒಂದೇ ಭಾರತೀಯ ಭಾಷೆ ಕಲಿಸುವ ಸಡಿಲಿಕೆ ನೀಡಲಾಗಿದೆ. ರಾಷ್ಟ್ರೀಯ ಕರಿಕಲಮ್ ಫ್ರೇಮ್ವರ್ಕ್ ಫಾರ್ ಎಜುಕೇಶನ್ 2023 ಶಿಫಾರಸುಗಳ ಆಧಾರದ ಮೇಲೆ ರೂಪುಗೊಂಡ ಈ ಪಠ್ಯಕ್ರಮವು ಮುಂದಿನ ಐದು ವರ್ಷಗಳಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆಯ ರೂಪುರೇಷೆಯನ್ನೇ ಬದಲಾಯಿಸುವ ಪ್ರಮುಖ ಹೆಜ್ಜೆಯಾಗಲಿದೆ.

ಪರೀಕ್ಷಾ ಮಾದರಿಯಲ್ಲಿ ಬದಲಾವಣೆ: ಪರೀಕ್ಷಾ ಮಾದರಿಯಲ್ಲೂ ಹಂತ ಹಂತವಾಗಿ ಬದಲಾವಣೆ ತರಲಾಗುತ್ತಿದೆ. 2027ರ ಬೋರ್ಡ್ ಪರೀಕ್ಷೆಗಳು ಹಳೆಯ ಪಠ್ಯಪುಸ್ತಕಗಳ ಆಧಾರದಲ್ಲಿಯೇ ನಡೆಯಲಿದ್ದು, 2028ರಿಂದ ಆರ್1 ಮತ್ತು ಆರ್2 ಭಾಷೆಗಳಿಗಾಗಿ ಎರಡು ದಿನಗಳಲ್ಲಿ ಪರೀಕ್ಷೆಗಳು ನಡೆಯಲಿವೆ. 2031ರಿಂದ ಮೂರು ದಿನಗಳಲ್ಲಿ ಆರ್1, ಆರ್2 ಮತ್ತು ಆರ್3 ಭಾಷೆಗಳಿಗಾಗಿ ಪ್ರತ್ಯೇಕ ಪರೀಕ್ಷೆಗಳು ನಡೆಯಲಿವೆ.

ಎರಡು ಮಟ್ಟದ ವ್ಯವಸ್ಥೆ: ಇದೇ ವೇಳೆ, 2026-27ರಿಂದ 9ನೇ ತರಗತಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಎರಡು ಮಟ್ಟದ ವ್ಯವಸ್ಥೆ ಪರಿಚಯಿಸಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿಗಳು 80 ಅಂಕಗಳ ಸಾಮಾನ್ಯ ಪರೀಕ್ಷೆ ಬರೆಯಬೇಕಾಗಿದ್ದು, ಹೆಚ್ಚುವರಿ ಸಾಮರ್ಥ್ಯ ಹೊಂದಿರುವವರು 25 ಅಂಕಗಳ ಅಡ್ವಾನ್ಸ್ ಪರೀಕ್ಷೆ ಬರೆಯಬಹುದಾಗಿದೆ. ಈ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಸೇರಿಸಲಾಗುವುದಿಲ್ಲ, ಆದರೆ, ಪ್ರತ್ಯೇಕವಾಗಿ ಅಂಕಪಟ್ಟಿಯಲ್ಲಿ ಉಲ್ಲೇಖಿಸಲಾಗುತ್ತದೆ.

ಭಾರತದಲ್ಲಿ ಪಿಒಕೆ ವಿಲೀನ ಶೀಘ್ರ

ಪುಟ ೧➜ ಆದರೆ ಕಾಶ್ಮೀರದಲ್ಲಿ ಈಗ ಭಯದ ವಾತಾವರಣವಿಲ್ಲದ ಕಾರಣ ಎಲ್ಲರೂ ಭೇಟಿ ನೀಡಬೇಕೆಂದು ನಾನು ಹೇಳಲು ಬಯಸುತ್ತೇನೆ ಎಂದರು.

ಮೋದಿ ಮಧ್ಯಸ್ಥಿಕೆಯಿಂದ ಯುದ್ಧ ಅಂತ್ಯಗೊಂಡು ಶಾಂತಿ: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕುರಿತು ಮಾತನಾಡಿದ ಅವರು, ಯುದ್ಧಗಳು ಎಲ್ಲರಿಗೂ ಹಾನಿ ಮಾಡುತ್ತವೆ; ಅವು ವಿನಾಶದ ಸಂಕೇತ. ಆದರಿಂದ ಯಾರಿಗೂ ಒಳಿತಾಗುವುದಿಲ್ಲ. ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ನನಗೆ ಭರವಸೆ ಇದೆ ಮತ್ತು ದೇವರು ಬಯಸಿದರೆ, ಅವರು ಮಧ್ಯಸ್ಥಿಕೆ ವಹಿಸುತ್ತಾರೆ ಮತ್ತು ಯುದ್ಧವು ಶೀಘ್ರದಲ್ಲೇ ಕೊನೆಗೊಳ್ಳುತ್ತದೆ. ಶಾಂತಿ ಮತ್ತು ನೆಮ್ಮದಿ ಇರುತ್ತದೆ ಎಂದು ಇಲ್ಯಾಸಿ ನುಡಿದರು.

ಇಂದಿನ ಕಾಶ್ಮೀರ ಅತ್ಯುತ್ತಮ

ಪುಟ ೧➜ ಇಲ್ಲಿ ಯುವಕರು, ಮಕ್ಕಳು ಕಲ್ಲು ಎಸೆಯುತ್ತಿದ್ದ ಕಾಲವಿತ್ತು. ಆದರೆ ಇಂದು ಅವರ ಕೈಯಲ್ಲಿ ಪೆನ್ನುಗಳಿವೆ. ಅವರು ಅಧ್ಯಯನ ಮಾಡುತ್ತಿದ್ದಾರೆ ಎಂಬುದನ್ನು ಅಹ್ಮದ್ ಇಲ್ಯಾಸಿ ಬೊಟ್ಟು ಮಾಡಿದರು.

ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯಕ್ಕೆ ಬಲ

ಪುಟ ೧➜ ಈ ಮೂಲಕ ಭಾರತದ ಪರಮಾಣು ತ್ರಿವಿಧ ಸಾಮರ್ಥ್ಯ (ಭೂಮಿ, ಗಗನ, ಸಮುದ್ರ) ಇನ್ನಷ್ಟು ಬಲಿಷ್ಠಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಅತ್ಯಂತ ರಹಸ್ಯವಾಗಿರುವ ಎಸ್‌ಎಸ್‌ಬಿಎನ್ (ಶಿಪ್ ಸಬ್‌ಮರ್ಸಿಬಲ್ ಬ್ಯಾಲಿಸ್ಟಿಕ್ ನ್ಯೂಕ್ಲಿಯರ್) ಯೋಜನೆಯಲ್ಲಿ ನಿರ್ಮಿತವಾದ ಈ ನೌಕೆ, ಹಲವು ತಿಂಗಳ ಸಮುದ್ರ ಪರೀಕ್ಷೆಗಳ ನಂತರ ಕಾರ್ಯಾಚರಣೆಗೆ ಸಜ್ಜಾಗಿದೆ. ಈ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಭಾಗವಹಿಸಿದ್ದರು. ಭಾರತದ ಮೊದಲ ಅಣುಶಕ್ತಿ ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಅರಿಹಂತ 2016ರಲ್ಲಿ ಸೇರ್ಪಡೆಯಾಗಿದ್ದು, ನಂತರ 2024ರಲ್ಲಿ ಐಎನ್‌ಎಸ್ ಅರಿಘಾಟ್ ಸೇರಿತು. ಈಗ ಐಎನ್‌ಎಸ್ ಅರಿದಮನ್ ಸೇರ್ಪಡೆಯಿಂದ ದೇಶದ ಸಮುದ್ರಾಧಾರಿತ ಅಣು ತಡೆ ಸಾಮರ್ಥ್ಯವು ಗಮನಾರ್ಹವಾಗಿ ವೃದ್ಧಿಯಾಗಿದೆ.

ಭಾರತವು ಅಮೆರಿಕ, ರಷ್ಯಾ, ಯುಕೆ, ಫ್ರಾನ್ಸ್ ಮತ್ತು ಚೀನಾ ಸೇರಿದಂತೆ ಅಣುಶಕ್ತಿ ಜಲಾಂತರ್ಗಾಮಿ ಹೊಂದಿರುವ ಕೆಲವು ದೇಶಗಳ ಪಟ್ಟಿಗೆ ಸೇರಿದೆ. ಈ ನೌಕೆಗಳು ದೂರದಿಂದಲೇ ಶತ್ರುಗಳ ಮೇಲೆ ಅಣು ದಾಳಿ ನಡೆಸುವ ಸಾಮರ್ಥ್ಯ ಹೊಂದಿದ್ದು, ದೇಶದ ಭದ್ರತೆಗೆ ಪ್ರಮುಖವಾಗಿವೆ. 1998ರ ಪೋಖ್ರಾಣ್ ಅಣು ಪರೀಕ್ಷೆಗಳ ನಂತರ ಭಾರತ 'ನೋ ಫಸ್ಟ್ ಯೂಸ್' ನೀತಿಯನ್ನು ಅನುಸರಿಸುತ್ತಿದ್ದು, 'ಕ್ರೆಡಿಬಲ್ ಮಿನಿಮಮ್ ಡಿಟರೆನ್ಸ್' ತತ್ವವನ್ನು ಮುಂದುವರಿಸಿದೆ. ಈ ಹಿನ್ನಲೆಯಲ್ಲಿ ಐಎನ್‌ಎಸ್ ಅರಿದಮನ್ ಸೇರ್ಪಡೆ ಮಹತ್ವದ ಹೆಜ್ಜೆ ಎಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಕಲಬುರಗಿಯಲ್ಲಿ ಮಾಜಿ ಸಚಿವರ ಅಳಿಯನ ಹತ್ಯೆ

ಪುಟ ೧➜ ತಡರಾತ್ರಿ ವೇಳೆ ಆಟೋದಲ್ಲಿ ಬಂದ ಮೂವರ ತಂಡ, ಅನಿಲ ಅವರ ಕಚೇರಿಗೆ ನುಗ್ಗಿ ಮಾರಕಾಸ್ತ್ರಗಳಿಂದ ಭೀಕರ ಹಲ್ಲೆ ನಡೆಸಿದೆ. ದಾಳಿಯಿಂದ ಗಂಭೀರವಾಗಿ ಗಾಯಗೊಂಡ ಅನಿಲ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ನಂತರ ಆರೋಪಿಗಳು ಪರಾರಿಯಾಗಿದ್ದಾರೆ. ಹಣಕಾಸು ವ್ಯವಹಾರ ಸಂಬಂಧಿತ ವೈಷಮ್ಯವೇ ಹತ್ಯೆಗೆ ಕಾರಣವಾಗಿರಬಹುದು ಎಂದು ಪ್ರಾಥಮಿಕ ಶಂಕೆ ವ್ಯಕ್ತವಾಗಿದೆ. ಮಾಹಿತಿ ತಿಳಿದು ಸ್ಥಳಕ್ಕೆ ಪೊಲೀಸ್ ಆಯುಕ್ತ ಶರಣಪ್ಪ ಢಗೆ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸೂಕ್ಷ್ಮ ಪರಿಶೀಲನೆಗಾಗಿ ಸೋಕೊ ತಂಡ ಹಾಗೂ ಡಾಗ್ ಸ್ಕ್ವಾಡ್ ನಿಯೋಜಿಸಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಶೋಧಕಾರ್ಯ ತೀವ್ರಗೊಳಿಸಿದ್ದಾರೆ. ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹರಿತವಾದ ಆಯುಧಗಳಿಂದ ಕೊಲೆ ಮಾಡಲಾಗಿದೆ. ಹಣಕಾಸಿನ ವಿಷಯಕ್ಕೆ ಕೊಲೆ ನಡೆದಿದೆ ಎಂಬ ಪ್ರಾಥಮಿಕ ಹಂತದ ಮಾಹಿತಿ ಲಭಿಸಿದ್ದು, ಆರೋಪಿಗಳ ಬಂಧನದ ಬಳಿಕವೇ ಕೊಲೆಗೆ ನಿಖರ ಮಾಹಿತಿ ಒದಗಲಿದೆ. ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತಂಡ ರಚನೆ ಮಾಡಲಾಗಿದ್ದು, ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು.
■ ಡಾ.ಶರಣಪ್ಪ ಎಸ್.ಡಿ., ನಗರ ಕಮಿಷನರ್

ಬಿಗಿ ಭದ್ರತೆ

ಪುಟ ೧➜ ಕೇಂದ್ರ ಸರ್ಕಾರದ ವಿಶೇಷ ಜಾಗೃತ ತಂಡಗಳು ಹೆಚ್ಚಿನ ನಿಗಾ ವಹಿಸಿವೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಬೆಳಗ್ಗೆ 10 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು 11.30ಕ್ಕೆ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಮಧ್ಯಾಹ್ನ 2.30ರ ಸುಮಾರಿಗೆ ಧಾರ್ಮಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ನಿವೃತ್ತ ನ್ಯಾ.ಸಂತೋಷ್ ಹೆಗ್ಡೆ ಆರೋಗ್ಯದಲ್ಲಿ ಏರುಪೇರು

ಪುಟ ೧➜ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವಾಗಲೇ ಸ್ವಲ್ಪಮಟ್ಟಿಗೆ ಅಸ್ವಸ್ಥರಾಗಿದ್ದರು, ಹಾಗಾಗಿ ತುಸು ಮಾತನಾಡಿ ಆಸೀನರಾದರು. ಆಗ ಅಸ್ವಸ್ಥತೆ ತೀವ್ರವಾದಾಗ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸಹಾಯದೊಂದಿಗೆ ಕಾರ್ಯಕ್ರಮದಿಂದ ತೆರಳುತ್ತಿರುವಾಗ ವೇದಿಕೆಯಲ್ಲಿಯೇ ಕುಸಿದು ಬಿದ್ದರು.

ಕೂಡಲೇ ವೇದಿಕೆಯಲ್ಲಿ ನೆರೆದಿದ್ದ ಯು.ಟಿ. ಖಾದರ್ ಇನ್ನಿತರ ಗಣ್ಯರು, ಗಾಳಿ ಬೀಸಿ ತುರ್ತು ಚಿಕಿತ್ಸೆ ನೀಡಿದರು, ಬಳಿಕ ಗೈಡ್ಸ್ ಅವರು ಆಂಬುಲೆನ್ಸ್ ಕರೆಯಲು ಮುಂದಾದರು, ಆಗ ಯು.ಟಿ. ಖಾದರ್ ಅವರು ತಮ್ಮದೇ ವಾಹನದಲ್ಲಿ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು. ವಯೋಸಹಜ ಸುಸ್ತು ಅಥವಾ ರಕ್ತದೊತ್ತಡದ ಏರುಪೇರಿನಿಂದ ಅವರು ಅಸ್ವಸ್ಥರಾಗಿರಬಹುದು ಎಂದು ತಿಳಿದುಬಂದಿದೆ.

ಇರಾನ್ ಸೇತುವೆ ಧ್ವಂಸ

ಪುಟ ೧➜ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಶಿಲಾಯುಗಕ್ಕೆ ತಳ್ಳುವ' ಬೆದರಿಕೆಯನ್ನು ತೀವ್ರವಾಗಿ ಖಂಡಿಸಿ, ಇದು ಅಜ್ಞಾನ ಮತ್ತು ಯುದ್ಧ ಅಪ ರಾಧದ ಉದ್ದೇಶವನ್ನು ತೋರಿಸುತ್ತದೆ ಎಂದು ಹೇಳಿದೆ. ಅಮೆರಿಕ ತನ್ನ ಸೈನಿಕ ಕಾರ್ಯಾಚರಣೆಗಳನ್ನು ಮುಂದುವರಿಸುವುದಾಗಿ ಹೇಳಿದ್ದು, ಇರಾನ್ ತನ್ನ ಪ್ರತಿರೋಧದ ನಿಲುವನ್ನು ಮುಂದುವರಿಸಿದೆ. ಈ ಬೆಳವಣಿಗೆಗಳಿಂದ ಮಧ್ಯಪ್ರಾಚ್ಯದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾಗುವ ಸಾಧ್ಯತೆ ವ್ಯಕ್ತವಾಗಿದೆ.

ಹಾನಿ, ಸಾವಿನ ಸಂಖ್ಯೆ ಹೆಚ್ಚಳ

ಪುಟ ೧➜ ಅಮೆರಿಕ 13 ಸೈನಿಕರನ್ನು ಕಳೆದುಕೊಂಡಿದ್ದು, ಇಸ್ರೇಲ್‌ನಲ್ಲಿ 19 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ಭೂದಾಳಿಯಿಂದ 1,300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಲಕ್ಷಾಂತರ ಜನರು ಸ್ಥಳಾಂತರಗೊಂಡಿದ್ದಾರೆ. ಒಟ್ಟಾರೆ, ಯುದ್ಧದ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುತ್ತಿದ್ದು, ಸೈನಿಕ ದಾಳಿಗಳು ಮತ್ತು ಆರ್ಥಿಕ ಪರಿಣಾಮಗಳು ಜಾಗತಿಕ ಮಟ್ಟದಲ್ಲಿ ಆತಂಕ ಉಂಟುಮಾಡುತ್ತಿವೆ. ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿದರೂ ಶಾಂತಿಯ ಸಾಧ್ಯತೆ ಇನ್ನೂ ಅನಿಶ್ಚಿತವಾಗಿಯೇ ಇದೆ.

ಅಮೆರಿಕ ಸೇನೆ ಉನ್ನತ ಅಧಿಕಾರಿಗಳ ಪದಚ್ಯುತಿ

ಪುಟ ೧➜ ಇದೇ ವೇಳೆ ಅಮೆರಿಕ ಇರಾನ್ ವಿರುದ್ಧ ಯುದ್ಧ ನಡೆಸುತ್ತಿರುವುದರಿಂದ ಈ ಕ್ರಮ ಹೆಚ್ಚು ಗಮನ ಸೆಳೆಯುತ್ತಿದೆ. ಜನರಲ್ ರ್‍ಯಾಂಡಿ ಜಾರ್ಜ್ ಅವರು ತಕ್ಷಣದಿಂದಲೇ ಸೇನಾ ಮುಖ್ಯಸ್ಥ ಹುದ್ದೆಯಿಂದ ನಿವೃತ್ತಿಯಾಗಲಿದ್ದಾರೆ. ಅವರು 2023ರಿಂದ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಜತೆಗೆ ಜನರಲ್ ಡೇವಿಡ್ ಹೋಡ್ನೆ ಮತ್ತು ಮೇಜರ್ ಜನರಲ್ ವಿಲಿಯಂ ಗ್ರೀನ್ ಅವರನ್ನು ಕೂಡ ವಜಾಗೊಳಿಸಲಾಗಿದೆ. ಇವರ ಬದಲಿಗೆ ಜನರಲ್ ಕ್ರಿಸ್ಟೋಫರ್ ಲಾನೇವ್ ಅವರನ್ನು ತಾತ್ಕಾಲಿಕ ಸೇನಾ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಈ ನಾಯಕತ್ವ ಬದಲಾವಣೆಗಳು ಇರಾನ್ ವಿರುದ್ಧದ ಯುದ್ಧ ಮುಂದುವರಿದಿರುವ ಸಮಯದಲ್ಲಿ ಮಾಡಿರುವುದು ವಿಶೇಷ. ಮಧ್ಯಪ್ರಾಚ್ಯಕ್ಕೆ ಅಮೆರಿಕದ ಸೈನ್ಯವನ್ನು ಹೆಚ್ಚಾಗಿ ಕಳುಹಿಸಲಾಗುತ್ತಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯುದ್ಧದ ಅವಧಿ ಬಗ್ಗೆ ಸ್ಪಷ್ಟತೆ ನೀಡದಿದ್ದರೂ ಮುಂದಿನ ವಾರಗಳಲ್ಲಿ ದಾಳಿಗಳು ತೀವ್ರವಾಗಲಿವೆ ಎಂದು ಹೇಳಿದ್ದಾರೆ.

ಗಣತಿಗೆ ಸಚಿವಾಲಯ ಸಿಬ್ಬಂದಿ ಬೇಡ: ವಿಶಾಲಾಕ್ಷಿ

ಬೆಂಗಳೂರು: ವಿಧಾನಸಭೆ ಸಚಿವಾಲಯದ ಅಧಿಕಾರಿ, ನೌಕರರನ್ನು ಜನಗಣತಿ ಕಾರ್ಯಗಳಿಗೆ ಯಾವುದೇ ಕಾರಣಕ್ಕೂ ಬಿಟ್ಟು ಕೊಡಬಾರದೆಂದು ಸಭಾಧ್ಯಕ್ಷರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಎಂ.ಮಹೇಶ್ವರ್ ರಾವ್ ಅವರಿಗೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪತ್ರ ಬರೆದಿದ್ದಾರೆ.



ವಿಧಾನಸಭೆ ಸಚಿವಾಲಯವು ಲೋಕಸಭಾ ಸಚಿವಾಲಯದ ಮಾದರಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಅಧೀನ ಸಂಸ್ಥೆಯಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ 3 ಅಂಗಗಳಲ್ಲಿ ಒಂದಾದ ಶಾಸಕಾಂಗದ ವ್ಯಾಪ್ತಿಗೆ ಒಳಪಡುತ್ತದೆ. ಶಾಸಕಾಂಗದ ಮುಖ್ಯಸ್ಥರು ಸಭಾಧ್ಯಕ್ಷರು. ಅದೊಂದು ಸಾಂವಿಧಾನಿಕ ಹುದ್ದೆ.

ಈ ಸಚಿವಾಲಯವು ಸಭಾಧ್ಯಕ್ಷರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಕಾರ್ಯಾಂಗಕ್ಕೆ ಮತ್ತು ವಿಧಾನಮಂಡಲಕ್ಕೆ ತನ್ನದೇ ಆದ ಮೂಲಭೂತ ವ್ಯವಸ್ಥೆಗಳಿದ್ದು, ಕಾರ್ಯಾಂಗವು ಶಾಸಕಾಂಗಕ್ಕೆ ಉತ್ತರದಾಯಿಯಾಗಿದೆ ವಿನಾ ಕಾರ್ಯಾಂಗಕ್ಕೆ ಅಧೀನವಾಗಿರುವುದಿಲ್ಲ ಎಂದೂ ಪತ್ರದಲ್ಲಿ ಹೇಳಿದ್ದಾರೆ.

ವಿಧಾನಸಭೆಯ ಸಚಿವಾಲಯದಲ್ಲಿ ಕೆಲಸ ಮಾಡುವ ಅಧಿಕಾರಿಗಳು, ನೌಕರರ ಮೇಲೆ ದ್ವಿ-ನಿಯಂತ್ರಣವು ಸಭಾಧ್ಯಕ್ಷರ ಘನತೆ ಮತ್ತು ಶಾಸಕಾಂಗ ಸಭೆಯ ಸ್ವಾತಂತ್ರ್ಯಕ್ಕೆ ಅವಮಾನಕರವಾಗಿದೆ. ಅಲ್ಲದೆ, ಸಚಿವಾಲಯದ ಕೆಲಸ ಕಾರ್ಯಗಳಿಗೆ ಹೆಚ್ಚುವರಿ ಸಿಬ್ಬಂದಿ ಮಂಜೂರಾಗಿಲ್ಲದ ಕಾರಣ ಕಾರ್ಯದೊತ್ತಡ ಹೆಚ್ಚಾಗಿದೆ. ಸಚಿವಾಲಯವು ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಕಾರ್ಯಗಳನ್ನೂ ನಿರ್ವಹಿಸಬೇಕಾಗಿದೆ ಎಂದಿದ್ದಾರೆ.

ಈ ಮಧ್ಯೆ, ಅನೇಕ ಸಚಿವರು, ಸರ್ಕಾರದ ಮುಖ್ಯ ಸಚೇತಕರು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮುಖ್ಯ ತಕರು, ಹಲವು ಶಾಸಕರು ವಿಧಾನಸಭೆ ಸಚಿವಾಲಯದ ಕಾರಿ, ನೌಕರರನ್ನು ಕಾರ್ಯಾಂಗದ ಚುನಾವಣೆ, ಮತದಾರರ ಪಟ್ಟಿ, ಹಿಂದುಳಿದ ವರ್ಗಗಳ ಜಾತಿ ಗಣತಿ, ಮತ ಎಣಿಕೆ ಮತ್ತಿತರ ಯಾವುದೇ ಕೆಲಸ ಕಾರ್ಯಗಳಿಗೆ ನಿಯೋಜಿಸುವುದಕ್ಕೆ ಅವಕಾಶ ಕಲ್ಪಿಸಬಾರದೆಂದು ಸಭಾಧ್ಯಕ್ಷರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ ಎಂದು ಪತ್ರದಲ್ಲಿ ನಮೂದಿಸಿದ್ದಾರೆ.

ಬಾಲ ಗರ್ಭಿಣಿ ಪ್ರಕರಣ: ಪೊಲೀಸರಿಗೆ ವರದಿ ನೀಡಿ

ಬೆಂಗಳೂರು: 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರಲ್ಲಿ ಗರ್ಭಧಾರಣೆ ಪ್ರಕರಣಗಳು ಗಂಭೀರ ಕಾನೂನು ವಿಷಯವಾಗಿದ್ದು, ಇಂತಹ ಪ್ರಕರಣಗಳನ್ನು ಕಡ್ಡಾಯವಾಗಿ ಪೊಲೀಸರಿಗೆ ವರದಿ ಮಾಡಬೇಕು ಎಂದು ಆರೋಗ್ಯ ಇಲಾಖೆ ಖಾಸಗಿ ಆಸ್ಪತ್ರೆಗಳಿಗೆ ಕಟ್ಟುನಿಟ್ಟಿನ ಸರ್ಕಾರ ಸೂಚನೆ ನೀಡಿದೆ.

ಮಕ್ಕಳ ಲೈಂಗಿಕ ಅಪರಾಧಗಳಿಂದ ರಕ್ಷಣೆಯ ಕಾಯ್ದೆ 2012 ಅನ್ವಯ, ಬಾಲಗರ್ಭಿಣಿ ಪ್ರಕರಣಗಳು ವರದಿ ಮಾಡಬೇಕಾದ ಅಪರಾಧಗಳಾಗಿವೆ. ಸೆಕ್ಷನ್ 19(1) ಪ್ರಕಾರ, ಯಾವುದೇ ವ್ಯಕ್ತಿಗೆ ಇಂತಹ ಅಪರಾಧ ನಡೆದಿದೆ ಅಥವಾ ನಡೆಯುವ ಸಾಧ್ಯತೆ ಇದೆ ಎಂಬ ಮಾಹಿತಿ ದೊರೆತರೆ, ಅದನ್ನು ತಕ್ಷಣವೇ ವಿಶೇಷ ಬಾಲ ನ್ಯಾಯ ಪೊಲೀಸ್ ಘಟಕ ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ನೀಡುವುದು ಕಡ್ಡಾಯವಾಗಿದೆ. ಬಾಲ ಗರ್ಭಿಣಿ ಪ್ರಕರಣಗಳು ದಾಖಲಾಗಿದೆಯಾದರೆ, ಸಂಬಂಧಿತ ವೈದ್ಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು. ವರದಿ ಮಾಡಲು ವಿಫಲವಾದಲ್ಲಿ, ವೈದ್ಯರು ಹಾಗೂ ಆಸ್ಪತ್ರೆಗಳ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಖಾಸಗಿ ಆಸ್ಪತ್ರೆಗಳಿಗೆ ಸೂಚನೆ

ಪೋಕ್ಸೋ ಪ್ರಕರಣಗಳ ವಿವರಗಳನ್ನು ಸರಿಯಾಗಿ ದಾಖಲಿಸಬೇಕು. ವೈದ್ಯಕೀಯ ದಾಖಲೆಗಳನ್ನು ಕಾನೂನುಬದ್ಧವಾಗಿ ಸಂಗ್ರಹಿಸಬೇಕು. ರೋಗಿಯ ಗೌಪ್ಯತೆಯನ್ನು ಕಾಪಾಡಬೇಕು. ತನಿಖಾ ಅಧಿಕಾರಿಗಳಿಗೆ ಅಗತ್ಯ ಸಹಕಾರ ನೀಡಬೇಕು. ವೈದ್ಯರು ಹಾಗೂ ಸಿಬ್ಬಂದಿಗೆ ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಮೂಡಿಸಬೇಕು. ಈ ಮಾರ್ಗಸೂಚಿಗಳು ತಕ್ಷಣದಿಂದಲೇ ಜಾರಿಯಾಗಿದ್ದು, ಪಾಲಿಸದಿದ್ದಲ್ಲಿ ಸಂಬಂಧಿತ ಆಸ್ಪತ್ರೆ ಹಾಗೂ ವೈದ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ತಿಳಿಸಿದ್ದಾರೆ.



ಬಾಗಲಕೋಟೆ ನಗರ ಉಪ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿರೂರು ಗ್ರಾಮದಲ್ಲಿ ಮಹಿಳೆಯರು ಭಾರತದ ಸಂವಿಧಾನ ಹಾಗೂ ರಾಜಕೀಯ ಪುಸ್ತಕ ನೀಡಿ ಗೌರವಿಸಿದರು.

ಎಲ್ಲರಿಗೂ ಸಿಂಧ್ಯಾ ಮಾದರಿ: ಖಾದರ್

ಬೆಂಗಳೂರು: ಪಿ.ಜಿ.ಆರ್ ಸಿಂಧ್ಯಾ ಅವರಿಗೆ ಲಭಿಸಿದ ಗೌರವ ಡಾಕ್ಟರೇಟ್ ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಅವರಿಗೆ ಲಭಿಸಿದ ಗೌರವವಾಗಿದ್ದು, ಎಲ್ಲರಿಗೂ ಮಾದರಿಯಾದ ಸಿಂಧ್ಯಾ ಅವರ ವ್ಯಕ್ತಿತ್ವವನ್ನು ಯುವಕರು ಅನುಸರಿಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಕರೆ ನೀಡಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ಶುಕ್ರವಾರ ಕೊಂಡಜ್ಜಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಭಾಜನರಾದ ಡಾ.ಪಿ.ಜಿ.ಆರ್.ಸಿಂಧ್ಯ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗೌರದ ಡಾಕ್ಟರೇಟ್ ಸಿಂಧ್ಯಾ ಅವರ ವ್ಯಕ್ತಿತ್ವ, ರಾಜಕೀಯ ಕ್ಷೇತ್ರದಲ್ಲಿ ಕಪ್ಪುಚುಕ್ಕೆಯಿಲ್ಲದೇ ಮಾಡಿದ ಕೆಲಸ, ಸಾಮಾಜಿಕ ಕಳಕಳಿ, ಪರಿಶ್ರಮಕ್ಕೆ ರಾಜ್ಯದ ಜನತೆ ಗೌರವ ಅರ್ಪಿಸುವ ಪ್ರೀತಿಪೂರ್ವಕ ಗೌರವವಾಗಿದೆ ಎಂದರು.

ಶಾಸಕ ಸುರೇಶ್ ಕುಮಾರ್, ನಿವೃತ್ತ ನ್ಯಾ. ಸಂತೋಷ ಹೆಗ್ಡೆ, ಸಿಂಧ್ಯಾ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಇಂಜಿನಿಯರ್ ಆಗಲು ಇಂಜಿನಿಯರಿಂಗ್ ಕಾಲೇಜು, ವೈದ್ಯರಾಗಲು ವೈದ್ಯಕೀಯ ಕಾಲೇಜು ಹೀಗೆ ನಾನಾ ವಿಷಯಗಳಿಗೆ ವಿವಿಧ ಕಾಲೇಜುಗಳಿದೆ ಎಂದರು.



> ವಿಧಾನಸೌಧದ ಮೂರನೇ ಮಹಡಿ ಹತ್ತುವುದು ಸುಲಭದ ಮಾತಲ್ಲ, ಕಷ್ಟಪಟ್ಟರೆ ಸಾಮಾನ್ಯ ಮನುಷ್ಯನೂ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನದ ಫಲವನ್ನು ಗಳಿಸಬಹುದು ಎಂಬುದಕ್ಕೆ ನನ್ನ ಜೀವನ ಉದಾಹರಣೆಯಾಗಿದೆ.
>
> ■ **ಪಿಜಿಆರ್ ಸಿಂಧ್ಯಾ**, ಮಾಜಿ ಸಚಿವ

ಶಾಸಕ ಸುರೇಶ್ ಕುಮಾರ್ ಮಾತನಾಡಿ, ಸಿಂಧ್ಯಾ ಅವರು ಆದರ್ಶ ರಾಜಕೀಯ ಮುತ್ಸದ್ದಿಯಾಗಿದ್ದು, ಅವರು ಗೌರವ ಡಾಕ್ಟರೇಟ್ ಪಡೆದು ದೊಡ್ಡವರಾಗಲ್ಲ, ಬದಲಾಗಿ ಪ್ರಶಸ್ತಿಯ ಮೌಲ್ಯ ಹೆಚ್ಚಾಗಲಿದೆ ಎಂದರು. ವಿಶ್ರಾಂತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ, ಕೊಂಡಜ್ಜಿ ಬ.ಷಣ್ಮುಖಪ್ಪ ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರಧಾನಿ ಮೋದಿ ಸಾಲವನ್ನೇ ಮಾಡಿಲ್ಲವೇ: ಡಿಕೆಶಿ

ದಾವಣಗೆರೆ: ನಾವು ಸಾಲ ಮಾಡಿದ್ದೀವಿ ಅಂದುಕೊಳ್ಳೋಣ. ಪ್ರಧಾನಿ ನರೇಂದ್ರ ಮೋದಿ ಸಾಲವನ್ನೇ ಮಾಡಿಲ್ಲವೇ? ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಪಕ್ಷದ ನಾಯಕರನ್ನು ಪ್ರಶ್ನಿಸಿದ್ದಾರೆ. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರದಿಂದ ಸಾಧ್ಯವಾಗಿಲ್ಲ, ಈಗ ನಾವು ಜನರಿಗೆ ಹಣ ಕೊಟ್ಟಿರುವುದಕ್ಕೆ ಬಿಜೆಪಿ ಸರ್ಕಾರದ ಹೊರೆ ಒಂದಿಷ್ಟು ಕಡಿಮೆಯಾಗಿದೆ. ಬಿಜೆಪಿಯವರು ಜನರ ಖಾತೆಗೆ 15 ಲಕ್ಷ ಹಾಕುತ್ತೇವೆಂದಿದ್ದರು. ಅಚ್ಛೇ ದಿನ ತರುತ್ತೇವೆಂದಿದ್ದರು. ಅಚ್ಛೇ ದಿನ್ ಬಂತಾ? 15 ಲಕ್ಷ ಖಾತೆಗೆ ಹಾಕಿದ್ರಾ? ನಮಗೆ ಬೇಡ, ನಮ್ಮ ಸರ್ಕಾರವನ್ನು ಟೀಕಿಸುತ್ತಿರುವ ಬಿಜೆಪಿಯವರ ಖಾತೆಗಾದರೂ ಬಂದಿದೆಯಾ? ಕೇಂದ್ರವೂ ನಮ್ಮ ರೀತಿ ಯೋಜನೆ ಕೊಡಲಿ. ಜನರ ಖಾತೆಗಳಿಗೆ ತಿಂಗಳಿಗೆ ಕನಿಷ್ಠ 10 ಸಾವಿರ ರೂ. ಹಾಕಲಿ ಎಂದು ವ್ಯಂಗ್ಯವಾಡಿದರು.



ರಾಜ್ಯದ ಜನರಿಗೆ ಸಿಎಂ ವಂಚನೆ: ವಿ.ಸೋಮಣ್ಣ

ಬಾಗಲಕೋಟೆ: ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರು ತಮ್ಮ ಅಧಿಕಾರವನ್ನು ಸ್ವಂತಕ್ಕೋಸ್ಕರ, ಸ್ವಾರ್ಥಕ್ಕೋಸ್ಕರ ಮತ್ತು ರಾಜ್ಯದ ಜನರಿಗೆ ವಂಚನೆ ಮಾಡುವ ಕೆಲಸ ಮಾಡಿ, ಈ ರಾಜ್ಯವನ್ನು ಕತ್ತಲೆ ಕೋಣೆಯಲ್ಲಿಡುವ ಕೆಲಸ ಮಾಡಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಆರೋಪಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಬೆಂಗಳೂರು ನಗರದ ಅಭಿವೃದ್ಧಿಯಲ್ಲಿ ನಮ್ಮದೇ ಆದ ಪಾಲುದಾರಿಕೆಯನ್ನು ಕೊಟ್ಟಿದ್ದೇವೆ ಎಂದು ತಿಳಿಸಿದರು. ಯಾವುದೇ ಶಾಸಕರೂ ತನ್ನ ಕಾರ್ಯ ಕ್ಷೇತ್ರಕ್ಕೆ ಹೋಗಿ ನಾನು ಒಳ್ಳೆಯ ಕೆಲಸ ಮಾಡಿದ್ದೇನೆ. ನನ್ನಿಂದ ಇಷ್ಟು ಕೆಲಸ ಆಗಿದೆ ಎಂದು ಹೇಳುವ ನೈತಿಕತೆಯನ್ನು ಕೇವಲ ವಿಪಕ್ಷದವರಷ್ಟೇ ಅಲ್ಲ ಆಡಳಿತ ಪಕ್ಷದವರೂ ಕಳಕೊಂಡಿದ್ದಾರೆ ಎಂದು ನುಡಿದರು. ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಿತಿ ಮೀರಿದೆ. ಅವ್ಯವಸ್ಥೆಯ ಆಗರವಾಗಿದೆ. ತಮ್ಮವರೇ ನಿಂದಿಸಿದರೂ ಎಚ್ಚೆತ್ತುಕೊಳ್ಳದ ನಿರ್ಲಿಪ್ತ ಸರ್ಕಾರ ಸಿದ್ದರಾಮಯ್ಯನವರದು ಎಂದು ಟೀಕಿಸಿದ ಅವರು, ಮೂಲಭೂತ ಸೌಕರ್ಯದತ್ತ ಎಲ್ಲೂ ಗಮನ ಕೊಡದೇ ಇಡೀ ಸಚಿವ ಸಂಪುಟ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ ಎಂದು ದೂರಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಕೀ ಉತ್ತರ ಪ್ರಕಟ

ಬೆಂಗಳೂರು: ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ವಿಷಯವಾರು ಕೀ ಉತ್ತರಗಳನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಏ.5 ರವರೆಗೆ ಕಾಲಾವಕಾಶ ನೀಡಲಾಗಿದೆ. ಮಂಡಳಿಯ ಜಾಲತಾಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ –1ರ ವಿಷಯವಾರು ಕೀ ಉತ್ತರಗಳನ್ನು ಪ್ರಕಟಿಸಲಾಗಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ವೆಬ್‌ಸೈಟ್ ಮೂಲಕ ಏ.5ರ ಸಂಜೆ 5.30 ರ ಒಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮಂಡಳಿಯ ನಿರ್ದೇಶಕ ಗೋಪಾಲಕೃಷ್ಣ ಎಚ್. ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮಣ್ಣ ಬಿಜೆಪಿಯಲ್ಲಿ ಕೆಲಸವಿಲ್ಲದಿರುವ ಮಂತ್ರಿ: ಸಿಎಂ ಸಿದ್ದರಾಮಯ್ಯ

ಕೈಗೆ ಬಿಜೆಪಿ ಹೈಕಮಾಂಡಲ್ಲ

ಬಾಗಲಕೋಟೆ: ಬಿಜೆಪಿಯವರು ಮುಖ್ಯಮಂತ್ರಿ ಸ್ಥಾನದ ಕುರಿತು ಪದೇ ಪದೆ ಮಾತನಾಡಲು ಅವರೇನು ನಮ್ಮ ಪಕ್ಷದ ಹೈಕಮಾಂಡ್ ಅಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ನಮ್ಮ ಪಕ್ಷದ ಹೈಕಮಾಂಡ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹದಿನೈದು ದಿನಗಳಲ್ಲಿ ಸಿಎಂ ತಮ್ಮ ಸ್ಥಾನವನ್ನು ಬಿಟ್ಟು ಹೋಗುತ್ತಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ ಸೋಮಣ್ಣ ಬಿಜೆಪಿಯಲ್ಲಿ ಕೆಲಸವಿಲ್ಲದಿರುವ ಮಂತ್ರಿ. ಅವರಿಗೆ ಯಾವ ಕಡತವೂ ಹೋಗುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಸೋಲುತ್ತಾರೆಂದು ತಿಳಿದು ಮುಖ್ಯಮಂತ್ರಿಗಳನ್ನು 5 ದಿನ ಪ್ರಚಾರಕ್ಕೆ ಇಳಿಸಿದ್ದಾರೆ ಹಾಗೂ ಒಂದೂವರೆ ತಿಂಗಳು ಮಾತ್ರ ಸಿಎಂ ಅಧಿಕಾರದಲ್ಲಿರುತ್ತಾರೆ ಎಂಬ ಕೇಂದ್ರ ಸಚಿವ ವಿ. ಸೋಮಣ್ಣ ಅವರ ಹೇಳಿಕೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸೋಮಣ್ಣ ಅವರಿಗೆ ಪ್ರಚಾರ ಮಾಡಲು ಸಮಯವಿಲ್ಲ. ಕ್ಷೇತ್ರದಲ್ಲಿ ಸೋಲುತ್ತೇವೆ ಎಂದು ತಿಳಿದಿರುವುದರಿಂದ ಹೆಚ್ಚು ಪ್ರಚಾರ ಮಾಡುತ್ತಿಲ್ಲ. ಮುಖ್ಯಮಂತ್ರಿಗಳ ಸ್ಥಾನದ ಬಗ್ಗೆ ಮಾತನಾಡಲು ಅವರೇನು ಕಾಂಗ್ರೆಸ್ ಹೈಕಮಾಂಡ್ ಅಲ್ಲ ಎಂದರು.

ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಅವರ ಮಾತಿನಲ್ಲಿ ಸತ್ಯವಿಲ್ಲ ಹಾಗೂ ಹೇಳಿದಂತೆ ನಡೆದುಕೊಳ್ಳುತ್ತಿಲ್ಲವಾದ್ದರಿಂದ ಅವರ ಬಗ್ಗೆ ಹೆಚ್ಚು ಪ್ರತಿಕ್ರಿಯೆ ನೀಡಲಿಚ್ಛಿಸುವುದಿಲ್ಲ. ಬಾಗಲಕೋಟೆ ಕ್ಷೇತ್ರದಲ್ಲಿ ಬಿಜೆಪಿ ಸೋಲುತ್ತಿವೆ ಎಂಬ ಭಯದಿಂದ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದರು.

ಪಕ್ಷದಿಂದ ಉಚ್ಚಾಟಿಸಲ್ಪಟ್ಟಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನೇ ಗೋಗ ರೆದು ಕರೆತಂದು ಪ್ರಚಾರ ಕಾರ್ಯಕ್ಕೆ ಇಳಿಸಿದ್ದಾರೆ. ಇದು ಅವರ ದ್ವಂದ್ವ ನೀತಿ ಎಂದರಲ್ಲದೆ, ಕರ್ನಾಟಕ ದಲ್ಲಿ ಬಿಜೆಪಿ ಹೀನಾಯ ಸ್ಥಿತಿಯಲ್ಲಿದೆ ಎಂದರು.

ಲೋಕಸಭಾ ಸ್ಥಾನಗಳನ್ನು ಹೆಚ್ಚಿಸುವುದರಿಂದ ರಾಜ್ಯಕ್ಕಾಗುವ ಲಾಭವೇನು ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಹೆಚ್ಚಿಸಬೇಕು ಆದರೆ, ಧೋರಣೆ ಇರಬಾರದು. ದಕ್ಷಿಣದ ರಾಜ್ಯಗಳಿಗೆ ಕಡಿಮೆ, ಉತ್ತರದ ರಾಜ್ಯಗಳಿಗೆ ಹೆಚ್ಚಿನ ಸ್ಥಾನ ಕೊಡುವ ಕೆಲಸ ಮಾಡಬಾರದು ಎಂದರು.



ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಲಿ: ಮುಖ್ಯಮಂತ್ರಿ

ಗ್ಯಾಸ್ ಸಿಲಿಂಡರ್ ಅಭಾವದ ಬಗ್ಗೆ ಸಿಎಂ ಸಿದ್ದರಾಮಯ್ಯ ಮಾತನಾಡಿ, ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಅದು ಅವರ ಕರ್ತವ್ಯ. ರಾಜ್ಯ ಸರ್ಕಾರ ವಿತರಣೆ ಮಾಡುತ್ತದೆಯಷ್ಟೇ ಎಂದರು. ಆಟೋ ಚಾಲಕರು ಆಹಾರ ಸಚಿವರ ಮನೆಗೆ ಮುತ್ತಿಗೆ ಹಾಕುವುದಾಗಿ ಹೇಳಿರುವ ಬಗ್ಗೆ ಮಾತನಾಡಿ ನರೇಂದ್ರ ಮೋದಿಯವರ ಮನೆಗೆ ಮುತ್ತಿಗೆ ಹಾಕಬೇಕು ಎಂದರು. ರಾಜ್ಯದ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ಯತ್ನಾಳ್ ಅವರು ಆರೋಪಿಸಿರುವ ಬಗ್ಗೆ ಮಾತನಾಡಿ, ಅಲ್ಪಸಂಖ್ಯಾತರು ಈ ರಾಜ್ಯದ ನಾಗರಿಕರಲ್ಲವೇ? ಅವರ ಜನಸಂಖ್ಯೆ ಶೇ. 14%ರಷ್ಟಿದ್ದು ಎಲ್ಲರಿಗೂ ಅನುದಾನ ನೀಡಿದಂತೆ ಅವರಿಗೂ ನೀಡಲಾಗಿದೆ ಎಂದರು.

ದುರಾಡಳಿತದ ವಿರುದ್ಧ ಮತ ಹಾಕಿ: ಸಿ.ಟಿ.ರವಿ

ಸರ್ಕಾರದ ವಿರುದ್ಧ ಬಿಜೆಪಿ ಚಾರ್ಜ್‌ಶೀಟ್

ದಾವಣಗೆರೆ: ಕಾಂಗ್ರೆಸ್ ದುರಾಡಳಿತಕ್ಕೆ ಸಂಬಂಧಿಸಿದಂತೆ ಬಿಜೆಪಿ ಚಾರ್ಜ್‌ಶೀಟ್ ಬಿಡುಗಡೆ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದ ಮತದಾರರು ಈ ಕೆಟ್ಟ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮನಸ್ಸು ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಶ್ವಾಸ ವ್ಯಕ್ತಪಡಿಸಿದರು.



ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಬೆಲೆ ಏರಿಕೆ, ದುರಾಡಳಿತದ ವಿರುದ್ಧ ಚಾರ್ಜ್ ಶೀಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಚಾರ್ಜ್‌ಶೀಟ್ ಬಿಜೆಪಿ ತಯಾರಿಸಿಲ್ಲ, ಮಾಧ್ಯಮಗಳಲ್ಲಿ ಬಂದ ಸುದ್ದಿಗಳನ್ನು ಆಧರಿಸಿ ಇದನ್ನು ಬಿಡುಗಡೆ ಮಾಡಲಾಗಿದೆ. ಜನಮಾನಸದಲ್ಲಿ ಆಗಿರುವ ಎಲ್ಲಾ ಚರ್ಚೆಯನ್ನು ಇಟ್ಟುಕೊಂಡೇ ಈ ಆರೋಪ ಪಟ್ಟಿಯನ್ನು ತಯಾರು ಮಾಡಿದ್ದೇವೆ ಎಂದರು.

ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಕೆಟ್ಟ ಕಾರಣಕ್ಕೆ ಸುದ್ದಿಯಲ್ಲಿದೆಯೇ ಹೊರತು ಒಂದು ದಿನವೂ ಅಭಿವೃದ್ಧಿ ಕೆಲಸ ಮಾಡಿದ್ದಕ್ಕೆ ಸುದ್ದಿಯಲ್ಲಿರಲಿಲ್ಲ. ಬೆಂಗಳೂರಿನ ರಸ್ತೆ ಗುಂಡಿಗಳಿಗೆ ಬಲಿಯಾದವರ ಸಂಖ್ಯೆ ನೂರಾರು ಇದೆ. ಭ್ರಷ್ಟಾಚಾರ, ಬೆಲೆ ಏರಿಕೆ, ದರೋಡೆ ಪ್ರಕರಣ, ಡ್ರಗ್ಸ್ ದಂಧೆ ಎಗ್ಗಿಲ್ಲದೆ ನಡೆದಿದೆ. ರೈತರ ಆತ್ಮಹತ್ಯೆಯಲ್ಲಿ ಇಡೀ ದೇಶದಲ್ಲೇ ಕರ್ನಾಟಕಕ್ಕೆ ಎರಡನೇ ಸ್ಥಾನ. ಸರ್ಕಾರಿ ನೌಕರರ ಆತ್ಮಹತ್ಯೆ. ಬಾಣಂತಿ ಮತ್ತು ಹಸುಗೂಸುಗಳ ಸರಣಿ ಸಾವುಗಳು ನಡೆದಿವೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಆರ್ಥಿಕ ಶಿಸ್ತೇ ಇಲ್ಲ: ಅಶೋಕ

ಸಿದ್ದರಾಮಯ್ಯ ಸರ್ಕಾರಕ್ಕೆ ಆರ್ಥಿಕ ಶಿಸ್ತೇ ಇಲ್ಲ. ಒಂದೇ ಒಂದು ಅಭಿವೃದ್ಧಿ ಕಾರ್ಯವನ್ನೂ ಮಾಡಿಲ್ಲ. ಸುಳ್ಳು ಹೇಳಿಕೊಂಡೇ ಮೂರು ವರ್ಷ ಕಳೆದಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯಗೆ ಸುಳ್ಳುರಾಮಯ್ಯ ಎಂಬ ಬಿರುದು ಕೊಡಬೇಕು. ಗ್ಯಾರಂಟಿಗಳ ವಿಚಾರವಾಗಿಯಂತೂ ಸುಳ್ಳಿನ ಪುಂಗಿ ಊದುತ್ತಿದ್ದಾರೆ. ಇಂದಿರಾ ಕಿಟ್ ಕೊಡ್ತೀವೆ ಅಂದ್ರು, ಎಲ್ಲಿ ಕೊಟ್ಟಿದ್ದಾರೆ? ಅನ್ನಭಾಗ್ಯ ಯೋಜನೆಗೆ ಅಕ್ಕಿ ಕೊಡುತ್ತಿರುವುದು ಕೇಂದ್ರ ಸರ್ಕಾರ. ಆದರೆ ಚೀಲ ಮಾತ್ರ ಸಿದ್ದರಾಮಯ್ಯ ಅವರದ್ದು. ಕೇಂದ್ರ ಸರ್ಕಾರದ ಅಕ್ಕಿಗೆ ಕನ್ನ ಹಾಕುವ ಇವರು ಕನ್ನರಾಮಯ್ಯ ಎಂದು ವ್ಯಂಗ್ಯವಾಡಿದರು.

ಐವರು ಸಾಧಕರಿಗೆ ಬಾಬೂಜಿ ಪ್ರಶಸ್ತಿ

ಬೆಂಗಳೂರು: ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರ ನೀಡುವ 2026ನೇ ಸಾಲಿನ ಪ್ರತಿಷ್ಠಿತ ಡಾ. ಬಾಬು ಜಗಜೀವನ ರಾಮ್ ಪ್ರಶಸ್ತಿಯನ್ನು ಘೋಷಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶೋಷಿತರ ಪರವಾಗಿ ಮತ್ತು ಕಲೆ, ಸಾಹಿತ್ಯ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದ ಐವರು ಗಣ್ಯರನ್ನು ಈ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಚಿಸಲಾಗಿದ್ದ ಉನ್ನತ ಮಟ್ಟದ ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಅರ್ಹ ಸಾಧಕರ ಪಟ್ಟಿಗೆ ಸರ್ಕಾರವು ಅನುಮೋದನೆ ನೀಡಿದೆ. ಪ್ರಶಸ್ತಿ ಪುರಸ್ಕೃತರಿಗೆ ತಲಾ ರೂ. 5.00 ಲಕ್ಷ ನಗದು ಬಹುಮಾನ ಹಾಗೂ 20 ಗ್ರಾಂ ಚಿನ್ನದ ಪದಕ ನೀಡಿ ಗೌರವಿಸಲಾಗುವುದು.

ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮದಿನವಾದ ಏ.5 ರಂದು ವಿಧಾನಸೌಧ ಪೂರ್ವ ದ್ವಾರದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗುವ ವಿಶೇಷ ಕಾರ್ಯಕ್ರಮದಲ್ಲಿ ಈ ಎಲ್ಲಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್‌ಕುಮಾರ್ ತಿಳಿಸಿದ್ದಾರೆ.


ಡಿಂಗ್ರಿ ನರಸಪ್ಪ


ಚಂದ್ರಮ್ಮ


ನಾರಾಯಣ


ನರಸೀಯಪ್ಪ


ಸರಜೂ

ಪ್ರಶಸ್ತಿ ಪುರಸ್ಕೃತರ ವಿವರ: ಚಂದ್ರಮ್ಮ (ಬೆಂಗಳೂರು ಕೇಂದ್ರ): ಬೆಂಗಳೂರಿನ ಭುವನೇಶ್ವರಿನಗರದ ನಿವಾಸಿಯಾದ ಇವರು, ಸಂಘಟನೆ, ಸಾಮಾಜಿಕ ಹೋರಾಟ ಹಾಗೂ ಭೂ ಆಂದೋಲನ ಕ್ಷೇತ್ರಗಳಲ್ಲಿ ಸಲ್ಲಿಸಿದ ಸುದೀರ್ಘ ಸೇವೆಯನ್ನು ಗುರುತಿಸಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಡಿಂಗ್ರಿ ನರಸಪ್ಪ (ಕಲಬುರಗಿ ವಿಭಾಗ): ರಾಯಚೂರು ಜಿಲ್ಲೆಯ ಆಶಾಪುರ ನಿವಾಸಿಯಾದ ಇವರು, ಜಾನಪದ ಕಲಾ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಕೊಡುಗೆಗಾಗಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸರಜೂ ಕಾಟ್ಕರ್ (ಬೆಳಗಾವಿ ವಿಭಾಗ): ಬೆಳಗಾವಿಯವರಾದ ಇವರು, ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ನಾರಾಯಣ (ಮೈಸೂರು ವಿಭಾಗ): ಮೈಸೂರಿನ ಮಾಜಿ ಮೇಯರ್ ಆಗಿರುವ ಇವರು, ಆಡಳಿತ ಮತ್ತು ಸಮಾಜ ಸೇವೆಯಲ್ಲಿನ ತಮ್ಮ ದಕ್ಷ ಹಾಗೂ ಜನಪರ ಕಾರ್ಯಗಳಿಗಾಗಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನರಸೀಯಪ್ಪ (ಬೆಂಗಳೂರು ವಿಭಾಗ): ತುಮಕೂರಿನ ಮಾಜಿ ನಗರಸಭೆ ಸದಸ್ಯರಾದ ಇವರು, ಜನಸಾಮಾನ್ಯರ ಪರವಾದ ಹೋರಾಟ ಮತ್ತು ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಕ್ಕಾಗಿ ಆಯ್ಕೆಯಾಗಿದ್ದಾರೆ.

ಡ್ರಗ್ಸ್ ಜಾಲ: ಮುಂಬೈಗೆ ಮೈಸೂರು ಪೊಲೀಸರು

ಮೈಸೂರು: ಜಿಲ್ಲೆಯ ಹುಣಸೂರು ಸಮೀಪ ತೋಟದ ಮನೆಯಲ್ಲಿ ಕೋಟ್ಯಂತರ ರೂ. ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದು ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಪ್ರಕರಣದ ತನಿಖೆ ಯನ್ನು ಚುರುಕುಗೊಳಿಸಿದ್ದು, ಡ್ರಗ್ಸ್ ದಂಧೆಯ ಜಾಲದ ಜಾಡು ಹಿಡಿದು ಪೊಲೀಸರ ಒಂದು ತಂಡ ಮುಂಬೈಗೆ ತೆರಳಿದೆ.

ಹುಣಸೂರಿನ ರತ್ನಪುರಿ ಬಳಿ ದಾಸನಪುರ ತೋಟದ ಮನೆಯ ಮೇಲೆ ದಾಳಿ ನಡೆಸಿದ್ದ ಪೊಲೀಸರು ಕೋಟ್ಯಂತರ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಕ್ಕೆ ಪಡೆದು ಇಬ್ಬರನ್ನು ಬಂಧಿಸಿ ದ್ದರು. ಮಾದಕ ವಸ್ತುಗಳನ್ನು ಜಿಲ್ಲಾ ಪೊಲೀಸರು ನ್ಯಾಯಾಲಯಕ್ಕೆ ತೆರಳಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ಎಫ್‌ಎಸ್‌ಎಲ್ ವಿಭಾಗಕ್ಕೆ ರವಾನಿಸಿದ್ದರು.

ಬಂಧಿತ ಇಬ್ಬರು ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದ್ದು, ಅವರುಗಳ ಸಿಮ್ ಕಾರ್ಡ್‌ಗಳ ಪರಿಶೀಲನೆ ನಡೆಸಿದ ವೇಳೆ ಆರೋಪಿಗಳ ಸಂಪರ್ಕದಲ್ಲಿ ಇದ್ದ ಇಬ್ಬರು ಮುಂಬೈನಲ್ಲಿ ನೆಲೆಸಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ದೊರಕಿದೆ. ಎಸ್‌ಪಿ ಅವರ ಸೂಚನೆ ಮೇರೆಗೆ ಐವರ ತಂಡ ತನಿಖೆಗಾಗಿ ಮುಂಬೈಗೆ ತೆರಳಿದೆ. ಬಂಧಿತರ ಸಂಪರ್ಕದಲ್ಲಿದ್ದ ಆ ಇಬ್ಬರ ವಿಳಾಸವನ್ನೂ ಪಡೆದಿರುವ ಪೊಲೀಸರು, ಅಲ್ಲಿನ ಪೊಲೀಸ್ ಅಧಿಕಾರಿಗಳ ನೆರವಿನಲ್ಲಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಏ.24ರಿಂದ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶ



ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ವತಿಯಿಂದ ಏಪ್ರಿಲ್ 24 ರಿಂದ 26 ರವರೆಗೆ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಮಾವೇಶವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಫ್‌ಕೆಸಿಸಿಐನ ಅಧ್ಯಕ್ಷೆ ಉಮಾರೆಡ್ಡಿ ತಿಳಿಸಿದರು.

ಎಫ್‌ಕೆಸಿಸಿಐನ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 3 ದಿನಗಳ ಈ ಸಮಾವೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಮತ್ತು ಆಹಾರ ಸಂರಕ್ಷಣಾ ಕ್ಷೇತ್ರಗಳಲ್ಲಿ ಇರುವ ಅವಕಾಶಗಳು, ಹೂಡಿಕೆ ಮತ್ತು ನಾವೀನ್ಯತೆಗೆ ಒಂದು ಜಾಗತಿಕ ವೇದಿಕೆಯಾಗಲಿದೆ. ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ರೈತರು, ಉದ್ಯಮಿಗಳು ಭೇಟಿ ನೀಡುವ ಸಾಧ್ಯತೆ ಇದೆ ಎಂದರು.

ಸ್ಟಾರ್ಟ್‌ಪ್ ಮತ್ತು ಹಲವು ಉದ್ದಿಮೆಗಳು ಹೂಡಿಕೆಗೆ ಈ ಸಮಾವೇಶ ಸಹಕಾರಿಯಾಗಲಿದೆ. ಭೂಮಿ, ಬೀಜ, ವಿಜ್ಞಾನ, ಸಂಶೋಧನೆ, ಕೈಗಾರಿಕೆ ಮತ್ತು ಸರಬರಾಜು ಸರಪಳಿಗಳನ್ನು ಸಂಪರ್ಕಿಸುವ ಜಾಗತಿಕ ವೇದಿಕೆಯಂತೆ ವಿನ್ಯಾಸಗೊಳಿಸಲಾಗಿದೆ. ಕೃಷಿಕರು, ತಂತ್ರಜ್ಞಾನ ಕ್ಷೇತ್ರದ ಉದ್ಯಮಿಗಳು, ಸರ್ಕಾರದ ಪ್ರತಿನಿಧಿಗಳು ಇದರಲ್ಲಿ ನೇರ ಸಂವಾದ ನಡೆಸುವ ಅವಕಾಶಗಳು ಇದೆ ಎಂದು ಮಾಹಿತಿ ನೀಡಿದರು. ಈ ಸಮಾವೇಶ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಆದಾಯ ಹೆಚ್ಚಳಕ್ಕೆ ಆರ್ಥಿಕವಾಗಿ ಅವರು ಸಬಲರಾಗಲು ಇದು ಸಹಕಾರಿಯಾಗಲಿದೆ. ಸುಮಾರು 300 ಕ್ಕೂ ಹೆಚ್ಚು ಪ್ರದರ್ಶಕರು, 30 ಸಾವಿರಕ್ಕೂ ಹೆಚ್ಚು ವ್ಯವಹಾರ ಪ್ರತಿನಿಧಿಗಳು, ಹಣಕಾಸು ಸಂಸ್ಥೆಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರೈತರಿಂದ 2227 ತಳಿಗಳ ಸಂಗ್ರಹ | ಸರ್ಕಾರದಿಂದ 490 ರೈತರಿಗೆ ಪ್ರೋತ್ಸಾಹಧನ

ದೇಸಿ ತಳಿ ಸಂರಕ್ಷಣೆಗೆ ಕೃಷಿ ಇಲಾಖೆ ಉತ್ತೇಜನ

▸ **ದೇವಿತಾ.ಸಿ.ಎಸ್**

ಬೆಂಗಳೂರು: ದೇಸಿ ಬೆಳೆ ತಳಿಗಳ ಸಂರಕ್ಷಣೆ ಹಾಗೂ ಪುನರುಜ್ಜೀವನಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೃಷಿ ಇಲಾಖೆ ಯು ಆರಂಭಿಸಿದ್ದ ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮಕ್ಕೆ ರೈತರಿಂದ ಉತ್ತಮ ಪತ್ರಿಕ್ರಿಯೆ ವ್ಯಕ್ತವಾಗಿದೆ.

ಹವಾಮಾನ ಬದಲಾವಣೆ ಮತ್ತು ರಾಸಾಯನಿಕ ಕೃಷಿ ಹೆಚ್ಚುತ್ತಿರುವ ಪರಿಣಾಮಗಳ ನಡುವೆಯೂ ದೇಸಿ ಬೆಳೆ ತಳಿಗಳು ಹೆಚ್ಚು ಸಹನಶೀಲತೆ ಹಾಗೂ ಪೌಷ್ಟಿಕ ಗುಣಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಅವುಗಳ ಉತ್ತೇಜನಕ್ಕೆ ಕೃಷಿ ಇಲಾಖೆಯು ವಿಶೇಷ ಆದ್ಯತೆ ನೀಡುತ್ತಿದೆ. ಈ ನಿಟ್ಟಿನಲ್ಲಿ ದೇಸಿ ತಳಿಗಳ ಸಂರಕ್ಷಣೆ ಹಾಗೂ ಉತ್ತೇಜನ ಕಾರ್ಯಕ್ರಮದಡಿ, ಇಲ್ಲಿಯವರೆಗೆ ಒಟ್ಟು 609 ರೈತರಿಂದ 2227 ತಳಿಗಳನ್ನು ಸಂರಕ್ಷಿಸಲಾಗಿದ್ದು, ಮೊದಲನೆ ಹಂತದ ಮೌಲ್ಯಮಾಪನವನ್ನು ಪೂರ್ಣಗೊಳಿಸಲಾಗಿದೆ.



> ಇಂದಿನ ದಿನಗಳಲ್ಲಿ ಬರುತ್ತಿರುವ ಅಧಿಕ ಇಳುವರಿ ತಳಿಗಳಿಂದಾಗಿ ದೇಸಿ ತಳಿಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ನಮ್ಮ ತಳಿಗಳ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.
>
> ■ **ಡಾ.ಜಿ.ಟಿ.ಪುತ್ರ**, ನಿರ್ದೇಶಕ

ಇಲಾಖೆ ಕಳೆದ ವರ್ಷದ ಏಪ್ರಿಲ್ –ಮೇ ತಿಂಗಳಲ್ಲಿ ದೇಸಿ ತಳಿಗಳನ್ನು ಸಂಗ್ರಹಿಸಲು ಆರಂಭಿಸಿತ್ತು. ಸಂಗ್ರಹಿತ ತಳಿಗಳ 20 ಬೆಳೆಗಳನ್ನು 8 ಆಯ್ದ ಸ್ಥಳಗಳಲ್ಲಿ ಈಗಾಗಲೇ ಬೆಳೆಯಲಾಗಿದೆ. 15 ಮಂದಿ ವಿಜ್ಞಾನಿಗಳ ತಂಡ ಪ್ರಾಯೋಗಿಕವಾಗಿ ಬೆಳೆದು ಅವುಗಳ ಗುಣಲಕ್ಷಣಗಳು, ಪೌಷ್ಟಿಕಾಂಶಗಳ ಮೌಲ್ಯಮಾಪನ ಕಾರ್ಯ ಕೈಗೊಳ್ಳಲಾಗುತ್ತದೆ. ನಂತರ ಇವುಗಳನ್ನು ಶುದ್ಧೀಕರಿಸಿ, ಎರಡನೇ ಹಂತದ ಬೆಳೆಯನ್ನು ಶೀಘ್ರದಲ್ಲೇ ಬೆಳೆಯಲಾಗುತ್ತದೆ. ಇದಾದ ಬಳಿಕ ಯಾವ ತಳಿಗಳು ನಕಲಿ ಎಂಬುದು ಪತ್ತೆಹಚ್ಚಿ, ಜೀನೊಮಿಕ್ ಅಧ್ಯಯನ ಮತ್ತು ಪೋಷಕಾಂಶಗಳ ಗುಣಗಳನ್ನು ಮೌಲೀಕರಿಸಲಾಗುತ್ತದೆ.

609 ರೈತರಿಂದ ಸಂಗ್ರಹ: ಉತ್ತರ ಕನ್ನಡ, ಮಂಡ್ಯ, ಬೆಳಗಾವಿ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ರೈತರಿಂದ ಭತ್ತ, ರಾಗಿ, ಜೋಳ, ತೊಗರಿ, ಹುರುಳಿ, ಅವರೆ, ಅಲಸಂದೆ, ಮಡಕೆಕಾಳು, ಹುಚ್ಚೆಳ್ಳು, ಕುಸುಬೆ, ಎಳ್ಳು, ನವಣೆ, ಸಾಮೆ, ಊದಲು, ಕೊರಲೆ, ಹಾರಕ, ಬರಗು, ಗೋಧಿ, ಮೆಣಸಿನಕಾಯಿ, ಮೆಕ್ಕೆ, ಹುಚ್ಚೆಳ್ಳು, ಗೋರಿ, ಮೆಣಸಿನಕಾಯಿ ಹೀಗೆ ನಾನಾ 2200ಕ್ಕೂ ಹೆಚ್ಚು ತಳಿಗಳನ್ನು 609 ಕ್ಕೂ ಹೆಚ್ಚು ರೈತರಿಂದ ಸಂಗ್ರಹಿಸಲಾಗಿದೆ.

ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಣಿ

ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಜಿಕೆವಿಕೆಯಲ್ಲಿ (ಯುಎಎಸ್) ಬೀಜ ಬ್ಯಾಂಕ್ ಸ್ಥಾಪಿಸಲಾಗಿದೆ. ಅಳಿವಿನ ಅಂಚಿನಲ್ಲಿರುವ ಸಾಂಪ್ರದಾಯಿಕ ತಳಿಗಳಾದ ಭತ್ತ, ರಾಗಿ, ಜೋಳ, ಹೆಸರುಕಾಳು, ತೊಗರಿ, ಉದ್ದು ಸೇರಿದಂತೆ ಇತರ ಸ್ಥಳೀಯ ಧಾನ್ಯಗಳನ್ನು ಸಂರಕ್ಷಿಸಲಾಗುತ್ತಿದೆ. ರೈತರು ಈಗಲೂ ತಮ್ಮ ಬಳಿ ಇರುವ ಪುರಾತನ ದೇಸಿ ತಳಿಗಳನ್ನು ಕೃಷಿ ಇಲಾಖೆಯ ಕೆ-ಕಿಸಾನ್ ಆ್ಯಪ್ ಮೂಲಕ ಹೆಸರು ನೋಂದಾಯಿಸಿಕೊಂಡು, ಇಲಾಖೆಗೆ ದೇಸಿ ತಳಿಗಳನ್ನು ಕೊಡಬಹುದಾಗಿದೆ. ನಂತರ ತಳಿಗಳಲ್ಲಿನ ಬೆಳವಣಿಗೆಯನ್ನು ಗುರುತಿಸಿ ರೈತರಿಗೆ ಪ್ರೋತ್ಸಹ ಧನವನ್ನು ನೀಡಲಾಗುತ್ತಿದ್ದು, ಇಲ್ಲಿಯವರೆಗೆ ಒಟ್ಟು 490 ರೈತರಿಗೆ ಪ್ರೋತ್ಸಾಹಧನ ನೀಡಲಾಗಿದೆ.

ಸಿಎಂರಿಂದ ಕುಟುಂಬ ರಾಜಕೀಯ

ಪಾಂಡವಪುರ: ಸಿಎಂ ಸಿದ್ದರಾಮಯ್ಯಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ತಾಲೂಕಿನ ಟಿ.ಎಸ್.ಛತ್ರ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಸರ್ಕಾರಿ ಶಾಲೆಯ ಕಟ್ಟಡ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಟ್ಟಡ ವೀಕ್ಷಣೆ ಮಾಡಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರು ತಮ್ಮ ಮೊದಲ ಮಗ ರಾಕೇಶ ಇದ್ದಾಗ ಅವರನ್ನು ರಾಜಕೀಯವಾಗಿ ಬೆಳೆಸಿದರು. ಆತನ ಅಕಾಲಿಕ ಮರಣದ ನಂತರ ಅವರ ಎರಡನೇ ಮಗನನ್ನು ಡಾ. ಯತೀಂದ್ರನನ್ನು ಬೆಳೆಸುತ್ತಿದ್ದಾರೆ. ಯಾತಕ್ಕಾಗಿ ತಮ್ಮ ಎರಡನೇ ಮಗನಿಗೆ ಅಧಿಕಾರಕೊಟ್ಟು ಕೂರಿಸಿದ್ದೀರಿ. ಹಣ ವಸೂಲಿ ಮಾಡುವುದಕ್ಕಾ ಎಂದು ಪ್ರಶ್ನಿಸಿದರು.



ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕುಟುಂಬದಲ್ಲಿ ಕುಟುಂಬ ರಾಜಕೀಯ ಇಲ್ಲವೇ? ಅವರ ಕುಟುಂಬದಲ್ಲಿ ಎಷ್ಟು ಮಂದಿ ರಾಜಕೀಯದಲ್ಲಿದ್ದಾರೆ, ಇದೀಗ ಅವರ ಕುಟುಂಬದ ಸದಸ್ಯರನ್ನು ಕೆಎಂಎಫ್ ಅಧ್ಯಕ್ಷರನ್ನಾಗಿ ಮಾಡಲು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬದ 2–3 ಮಂದಿ ಶಾಸಕರಾಗಿರುವ ಕುಟುಂಬಗಳಿಲ್ಲವೇ? 2018ರಲ್ಲಿ ದೇವೇಗೌಡರು ನನ್ನ ಮಗನನ್ನು ಮುಖ್ಯಮಂತ್ರಿ ಮಾಡಿ ಎಂದು ಅರ್ಜಿಹಿಡಿದುಕೊಂಡು ಹೋಗಿದ್ರಾ? ಹೀಗಿರುವಾಗ ನನ್ನ ಕುಟುಂಬದ ರಾಕೀಯದ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ ಎಂದು ಹರಿಹಾಯ್ದರು.

ಸಿಎಂ ಕುರ್ಚಿ ಬಿಡಲ್ಲ: ಎಚ್ಡಿಕೆ

ಸಿಎಂ ಅಧಿಕಾರದ ರುಚಿ ನೋಡಿರುವ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡೋದಿಲ್ಲ. 2013ರ ಚುನಾವಣೆಯ ವೇಳೆ ಇದೇ ನನ್ನ ಕೊನೆಯ ಚುನಾವಣೆ ಎಂಬುದಾಗಿ ಹೇಳಿದ್ದರು. ಇದೀಗ ಕೊನೆಯವರೆಗೂ ಚುನಾವಣಾ ರಾಜಕೀಯದಿಂದ ದೂರ ಆಗೋದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಬಿಜೆಪಿ ಆಡಳಿತದ ಬಗ್ಗೆ ಆರೋಪಿಸುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು.

ಸಂಪಾದಕೀಯ

ಜನಗಣತಿಗೆ ಚಾಲನೆ

ದೇಶದಲ್ಲಿ ಸಮಗ್ರ ಜನಗಣತಿಗೆ ಕೊನೆಗೂ ಚಾಲನೆ ನೀಡಲಾಗಿದೆ. ಪ್ರತೀ ಹತ್ತು ವರ್ಷಗಳಿಗೊಮ್ಮೆ ನಡೆಯುತ್ತಿದ್ದ ಜನಗಣತಿಯು ನಿಯಮಪ್ರಕಾರ 2021ರಲ್ಲಿ ನಡೆಯಬೇಕಿತ್ತಾದರೂ, ಕೊರೊನಾ ಕಾರಣದಿಂದಾಗಿ ಮುಂದೂಡಲ್ಪಟ್ಟಿತ್ತು. ಅಲ್ಲಿಂದ ಬಳಿಕ ವಿವಿಧ ಕಾರಣಗಳಿಂದಾಗಿ ಮುಂದೂಡುತ್ತಲೇ ಬಂದ ಜನಗಣತಿ ಇದೀಗ ಕೊನೆಗೂ ಅಧಿಕೃತವಾಗಿ ಚಾಲನೆ ಪಡೆದಿರುವುದು ವಿಶೇಷ ಬೆಳವಣಿಗೆ. ಈಗಾಗಲೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಪರಿಗಣಿತವಾಗಿರುವ ಭಾರತದ ಜನಸಂಖ್ಯೆಯು 140 ಕೋಟಿ ದಾಟಿದೆ ಎಂದು ಹೇಳಲಾಗುತ್ತಿದ್ದು, ಜನಗಣತಿಯಿಂದ ನಿಖರ ಅಂಕಿಅಂಶ ದೊರಕಲಿದೆ. ಇದರ ಜತೆಗೆ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ಹಾಗೂ



ಇನ್ನಿತರ ವಿವರಗಳೂ ಜನಗಣತಿಯಿಂದ ನಿಖರವಾಗಿ ದಾಖಲಾಗಲಿದೆ. ಸರಕಾರವು ಇದಕ್ಕಾಗಿ ಸಕಲ ಸಿದ್ಧತೆಗಳನ್ನು ನಡೆಸಿದ್ದು, ಡಿಜಿಟಲ್ ತಂತ್ರಜ್ಞಾನವನ್ನು ಇದಕ್ಕೆ ಬಳಸಿಕೊಳ್ಳುವುದರಿಂದ ಜನಗಣತಿಯು ಹೆಚ್ಚು ಸುಲಭವಾಗಿ ಮತ್ತು ನಿಖರವಾಗಿ ನಡೆಯಲಿದೆಯೆಂದು ನಿರೀಕ್ಷಿಸಲಾಗಿದೆ. ಇದರ ಜತೆಗೆ, ಜನರೇ ಸ್ವಯಂ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸರಕಾರದ ಅಧಿಕೃತ ಜಾಲತಾಣದಲ್ಲಿ ಜನರು ಸ್ವಯಂ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಆ ಜನಗಣತಿಯು ಕೆಲವು ಹಂತಗಳಲ್ಲಿ ನಡೆಯಲಿದ್ದು, 2027ರ ವೇಳೆಗೆ ದೇಶದ ಒಟ್ಟು ಜನಸಂಖ್ಯೆಯ ಬಗ್ಗೆ ತಾತ್ಕಾಲಿಕ ವರದಿ ಬಿಡುಗಡೆಯಾಗುವ ಸಾಧ್ಯತೆಯಿದೆ. ಮೊದಲ ಹಂತದಲ್ಲಿ ಮನೆ ಪಟ್ಟಿ ಮತ್ತು ಮನೆಗಳ ಗಣತಿ ನಡೆಯಲಿದ್ದು, ಬಳಿಕ ಎರಡನೇ ಹಂತದಲ್ಲಿ ವ್ಯಕ್ತಿಗತ ಮಾಹಿತಿಗಳನ್ನು ಕಲೆ ಹಾಕಲಾಗುತ್ತದೆ.

ಸರಕಾರದ ಯೋಜನೆಗಳ ಸಮಗ್ರ ಅನುಷ್ಠಾನಕ್ಕೆ, ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಜನಗಣತಿಯು ಅತ್ಯಗತ್ಯವಾಗಿದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲು, ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜನಗಣತಿಯು ಅವಶ್ಯ ಮಾಹಿತಿಗಳನ್ನು ಒದಗಿಸುತ್ತದೆ.

ಈ ಹಿನ್ನೆಲೆಯಲ್ಲಿ ಜನಗಣತಿ ಕಾರ್ಯದಲ್ಲಿ ಸರಕಾರದೊಂದಿಗೆ ಸಹಕರಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು. ಹಾಗಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಸರಕಾರ ಬಯಸುವ ಮಾಹಿತಿಗಳನ್ನು ಪ್ರಾಮಾಣಿಕವಾಗಿ ನೀಡಬೇಕಾದುದು ಅಗತ್ಯವಾಗಿದೆ. ಜನರು ನೀಡುವ ಮಾಹಿತಿಯು ಗೌಪ್ಯವಾಗಿರಲಿದ್ದು, ಮಾಹಿತಿ ಸೋರಿಕೆಯಾಗುವ ಸಾಧ್ಯತೆಗಳೇ ಇಲ್ಲ ಎಂಬುದಾಗಿ ಸರಕಾರವು ಈಗಾಗಲೆ ಆಶ್ವಾಸನೆ ನೀಡಿದೆ. ಈ ವಿಷಯದಲ್ಲಿ ಸರಕಾರವು ಹೆಚ್ಚಿನ ನಿಗಾ ವಹಿಸುವುದು ಅತ್ಯವಶ್ಯವಾಗಿದೆ. ಒಟ್ಟಿನಲ್ಲಿ 15 ವರ್ಷಗಳ ಅಂತರದ ಬಳಿಕ ನಡೆಯುತ್ತಿರುವ ಜನಗಣತಿಯು ದೇಶದ ಜನಸಂಖ್ಯೆಯ ಸಮಗ್ರ ಚಿತ್ರಣ ನೀಡುವಂತಾಗಲಿ.

ಅಂಗಾದಿತ್ಯ ಎಂದರೇನು?

ಸೂರ್ಯನು ಜಾತಕದಲ್ಲಿ ಆತ್ಮಕಾರಕ. ಇದು ವ್ಯಕ್ತಿಯೊಬ್ಬನ ಜೀವನದ ದಿಕ್ಕನ್ನು ನಿರ್ಧರಿಸುತ್ತದೆ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವೇದ ಜ್ಯೋತಿಷ್ಯದ ಪ್ರಕಾರ ಅಂಗಾದಿತ್ಯ ಎಂದರೆ; ಒಬ್ಬ ವ್ಯಕ್ತಿಯ ಜಾತಕದಲ್ಲಿ ಅಥವಾ ಆತ ಹುಟ್ಟಿದ ಸಮಯದಲ್ಲಿ ಸೂರ್ಯನು ಯಾವ ನಕ್ಷತ್ರದಲ್ಲಿ ಇದ್ದಾನೋ ಅದರ ಆಧಾರದ ಮೇಲೆ, ಸೂರ್ಯನ ಪ್ರಭಾವ ಅಥವಾ ಆಶೀರ್ವಾದವು ಆತನ ದೇಹದ ಯಾವ ಅಂಗದ ಮೇಲೆ ಉಂಟಾಗಿದೆ ಎನ್ನುವ ಪರಿಕಲ್ಪನೆ. ಹೀಗೆ ಆತನ ಪ್ರಭಾವವು ಯಾವ ರೀತಿಯಲ್ಲಿ ಅವನ ಆರೋಗ್ಯ, ಆರ್ಥಿಕತೆ, ಆಯುಸ್ಸು, ಯಶಸ್ಸು ಮತ್ತು ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದನ್ನು ವ್ಯಕ್ತಿಯ ಅಂಗದ ಮೇಲೆ ಬೀಳುವ ಸೂರ್ಯನ ದೃಷ್ಟಿಯನ್ನು ಅವಲಂಬಿಸಿ ನಿರ್ಧರಿಸಲಾಗುತ್ತದೆ. ಅದರೊಂದಿಗೆಜಾತಕದಲ್ಲಿಲಗ್ನದಿಂದಎರಡನೇಮನೆಮತ್ತುಹನ್ನೊಂದನೇಮನೆಯನ್ನೂ ಪರಿಗಣಿಸಬೇಕಾಗುತ್ತದೆ. ಗುರು ಶುಕ್ರ ಮತ್ತು ಬುಧ ಗ್ರಹಗಳು ಜಾತಕ ನಲ್ಲಿಯಾವಮನೆಗಳಲ್ಲಿ ಇದ್ದುಏನೆಲ್ಲಾಫಲಗಳನ್ನು,ಪರಿಣಾಮಗಳನ್ನು ಬೀರುತ್ತಿದ್ದಾರೆ ಎನ್ನುವುದನ್ನು ಪರಿಗಣಿಸಿ ಸೂಕ್ತ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಸೂರ್ಯನು ಜಾತಕದಲ್ಲಿ ಆತ್ಮಕಾರಕ. ಇದು ವ್ಯಕ್ತಿಯೊಬ್ಬನ ಜೀವನದ ದಿಕ್ಕನ್ನು ನಿರ್ಧರಿಸುತ್ತದೆ. ಜನ್ಮ ಸಮಯದಲ್ಲಿ ಸೂರ್ಯನು ಯಾವ ನಕ್ಷತ್ರದಲ್ಲಿ ಇದ್ದಾನೆ ಎನ್ನುವುದನ್ನು ಮೊದಲಿಗೆ ಲೆಕ್ಕಾಚಾರ ಹಾಕಿಕೊಳ್ಳಬೇಕಾಗುತ್ತದೆ. ಬಳಿಕ ಅದನ್ನು ಆಧರಿಸಿ ಸೂರ್ಯನು ಜಾತಕನ ಯಾವ ಅಂಗದ ಮೇಲೆ ಪ್ರಭಾವ ಬೀರುತ್ತಿದ್ದಾನೆ ಎನ್ನುವುದನ್ನು ಲೆಕ್ಕ ಹಾಕಲಾಗುತ್ತದೆ. ಸೂರ್ಯನಿರುವ ನಕ್ಷತ್ರದಿಂದ ಪ್ರಾರಂಭಿಸಿ ಉಳಿದ ಎಲ್ಲಾ ನಕ್ಷತ್ರಗಳನ್ನು ನಿಯಮದ ಪ್ರಕಾರ ಲೆಕ್ಕ ಹಾಕುತ್ತಾ ದೇಹದ ವಿವಿಧ ಅಂಗಗಳಿಗೆ ಆ ನಕ್ಷತ್ರಗಳನ್ನು ವಿಂಗಡಿಸಲಾಗುತ್ತದೆ.

ಲೆಕ್ಕಾಚಾರದ ಕ್ರಮ

ತಲೆಯ ಮೇಲೆ ಪ್ರಭಾವ: ನೀವು ಹುಟ್ಟಿದ ಸಮಯದಲ್ಲಿ ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದಾನೆ ಎಂದು ತೆಗೆದುಕೊಳ್ಳೋಣ. ಆ ಸಮಯದಲ್ಲಿ ಅಶ್ವಿನಿ, ಭರಣಿ ಮತ್ತು ಕೃತಿಕಾ ನಕ್ಷತ್ರಗಳಲ್ಲಿ ಜನಿಸಿದವರಿಗೆ ಅಂದರೆ ಒಟ್ಟು ಸರಣಿಯಲ್ಲಿರುವ ಮೂರು ನಕ್ಷತ್ರಗಳಲ್ಲಿ ಜನಿಸಿದವರಿಗೆ ಸೂರ್ಯನ ಪ್ರಭಾವ ತಲೆಯ ಮೇಲಿರುತ್ತದೆ. ಅಥವಾ ಶ್ರವಣ ನಕ್ಷತ್ರದಲ್ಲಿ ಸೂರ್ಯನಿದ್ದಾನೆ ಎಂದುಕೊಳ್ಳೋಣ. ಆಗ ಶ್ರವಣ, ಧನಿಷ್ಠ ಮತ್ತು ಶತಭಿಷ ನಕ್ಷತ್ರದಲ್ಲಿ ಜನಿಸಿದವರಿಗೆ ಸೂರ್ಯನ ಪ್ರಭಾವ ತಲೆಯ ಮೇಲಿರುತ್ತದೆ.

ಸೂರ್ಯನ ಪ್ರಭಾವ ತಲೆಯ ಮೇಲಿದ್ದರೆ ಅಂತಹಾ ವ್ಯಕ್ತಿಯು ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳುತ್ತಾರೆ. ಸಂಸ್ಥೆಗಳಲ್ಲಿ, ಇಲಾಖೆಗಳಲ್ಲಿ ಒಳ್ಳೆಯ ಅಧಿಕಾರವನ್ನು ಪಡೆದುಕೊಳ್ಳುತ್ತಾರೆ. ಉತ್ತಮ ಮತ್ತು ಪ್ರಖರವಾದ ನಾಯಕನೆಂದು ಹೆಸರು ಗಳಿಸುತ್ತಾರೆ. ಅಷ್ಟೇ ಅಲ್ಲ ಜ್ಞಾನವಂತನೂ, ವಿಜ್ಞಾನಿಯೂ, ಬುಯಿಂದ ಕೆಲಸ ಮಾಡುವವರೂ, ತೀಕ್ಷ್ಣಮತಿಯೂ, ತಕ್ಷಣದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವವರೂ ಆಗುತ್ತಾರೆ. ಆದರೆ ಅಸೂಯೆ, ಕಾಮ ಮತ್ತು ಮದಗಳಿಂದ ಕೂಡಿದವರೂ ಆಗಿರುತ್ತಾರೆ. ಇದು ಹೆಚ್ಚಾದರೆ ಅಂತಹ ವ್ಯಕ್ತಿಯ ಅವನತಿಯೂ ಅದರಿಂದಲೇ ಆಗುತ್ತದೆ. ಅಸೂಯೆ ಹೆಚ್ಚಾದರೆ ಅದರಿಂದ ಅವರ ಗೌರವವು ಕ್ರಮೇಣ ಕ್ಷೀಣಿಸುತ್ತಾ ಹೋಗುತ್ತದೆ. ಕಾಮ ಹೆಚ್ಚಾದರೆ ಅಂತಹಾ ಹೆಣ್ಣು ಅಥವಾ ಗಂಡಿನಿಂದಲೇ ಆ ವ್ಯಕ್ತಿಯು ಅವನತಿಗೆ, ಅವಮಾನಕ್ಕೆ ಈಡಾಗುತ್ತಾರೆ. ಮದ ಹೆಚ್ಚಾದರೆ ಅವರ ಹಣ ನೀರಿನಂತೆ ಖರ್ಚಾಗುತ್ತದೆ.

ಮುಖದ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ರೋಹಿಣಿ, ಮೃಗಶಿರಾ ಮತ್ತು ಆರಿದ್ರಾಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಮುಖದ ಮೇಲೆ ಆಗುತ್ತದೆ. ಅಂತಹಾ ವ್ಯಕ್ತಿಯ ಮುಖ ತುಂಬಾ ಹೊಳಪಿನಿಂದ ತುಂಬಿರುತ್ತದೆ. ಸದಾ ಲವಲವಿಕೆ ಅವರಲ್ಲಿ ಕಾಣುತ್ತದೆ. ಸೂರ್ಯಚಂದ್ರರನ್ನು ಬಿಂಬಿಸುವ ಕಣ್ಣುಗಳು ಫಳಫಳ ಎಂದು ಮಿಂಚುತ್ತಿರುತ್ತವೆ. ವ್ಯಕ್ತಿಯು ಆಕರ್ಷಕವಾಗಿರುತ್ತಾರೆ. ಭೌತಿಕವಾದ ಎಲ್ಲಾ ಲಾಭಗಳೂ ಅವರಿಗೆ ಲಭ್ಯವಾಗುತ್ತದೆ. ಕೀರ್ತಿ ಅವರನ್ನು ಹುಡುಕಿಕೊಂಡು ಬರುತ್ತದೆ. ಅವರು ಉತ್ತಮ ವಾಗ್ಮಿಗಳಾಗುತ್ತಾರೆ. ಅಥವಾ ಸಂಗೀತಗಾರರು, ಗಮಕಿಗಳು ಹರಿಕತೆ ದಾಸರು, ಮಾತುಗಾರರು,ಭಾಷಣಕಾರರು,ಉಪನ್ಯಾಸಕರು,ಪ್ರವಚನಕಾರರು,ಯೋಗಿಗಳು, ಗುರುಗಳು ಮುಂತಾದ ಹೆಸರಾಂತ ಸ್ಥಾನಗಳನ್ನು ಪಡೆಯುತ್ತಾರೆ.

ಇವರನ್ನು ದುರಹಂಕಾರವು ಆವರಿಸಿಕೊಳ್ಳುತ್ತದೆ. ನಾನು ಎನ್ನುವ ಅಹಂಕಾರಕ್ಕಿಂತ ಮೇಲಿನದಾದ 'ನಾನೇ ಎಲ್ಲಾ' ಎನ್ನುವ ದುರಹಂಕಾರದಿಂದಾಗಿ ಅವರಿಗೆ ಸಿಕ್ಕ ಗೌರವವು ನಿಧಾನವಾಗಿ ಕಡಿಮೆಯಾಗುತ್ತಾ ಬರುತ್ತದೆ. ಅಷ್ಟರೊಳಗೆ ಇವರು ಸಮಾಜದ ಮೇಲೇ ತುಂಬಾ ಪರಿಣಾಮಗಳನ್ನು ಬೀರಿರುತ್ತಾರೆ. ತಮ್ಮದೇ ಗುಂಪನ್ನು, ಶಿಷ್ಯಂದಿರನ್ನು, ಅನುಯಾಯಿಗಳನ್ನು, ಹಿಂಬಾಲಕರನ್ನು, ಅಭಿಮಾನಿಗಳನ್ನು, ಪ್ರೀತಿಸುವವರನ್ನು, ಆರಾಧಕರನ್ನು ಹೊಂದಿರುತ್ತಾರೆ. ಹೀಗಾಗಿ ಅವರ ಪ್ರಭಾವ ಇಲ್ಲದಿದ್ದಾಗಲೂ ಅವರು ಮರಣ ಹೊಂದಿದ ಮೇಲೂ ಮೇಲಿನ ಜನ ಅವರ ಹೆಸರನ್ನು ಅಜರಾಮರ ಮಾಡುವ ಪ್ರಯತ್ನದಲ್ಲಿ ಇರುತ್ತಾರೆ.

ಹೊಟ್ಟೆಯ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಮುಂದಿನ ಐದು ನಕ್ಷತ್ರಗಳಾದ ಪುನರ್ವಸು, ಪುಷ್ಯ, ಆಶ್ಲೇಷಾ, ಮುಖಾ ಮತ್ತು ಪೂರ್ವಫಲ್ಗುಣಿ ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಹೊಟ್ಟೆಯ ಮೇಲೆ ಆಗುತ್ತದೆ. ಹೊಟ್ಟೆ ಎಂದರೆ ಆ ವ್ಯಕ್ತಿಯು ಆರ್ಥಿಕವಾಗಿ ಅಪಾರ ಸಂಪತ್ತನ್ನು ಹೊಂದಿರುತ್ತಾರೆ ಅಥವಾ ಸಂಪಾದನೆ ಮಾಡುತ್ತಾರೆ. ಏನೇ ಆದರೂ ಸುಖವಾದ ಜೀವನ ನಡೆಸುತ್ತಿರುತ್ತಾರೆ. ಯಾವುದನ್ನೂ ಹೆಚ್ಚು ಹಚ್ಚಿ ಕೊಳ್ಳುವುದಿಲ್ಲ, ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ, ಅವರಾಯಿತು ಅವರ ಪಾಡಾಯಿತು ಎನ್ನುವಂತೆ ಇರುತ್ತಾರೆ. ಅವರ ಸಂಸಾರ ಸಹಾ ಚೆನ್ನಾಗಿಯೇ ನಡೆಯುತ್ತದೆ. ಪರಿಶ್ರಮ ಪಡುವಷ್ಟು ಕಾಲ ಇವರು ಶ್ರೀಮಂತರಾಗಿಯೇ ಇರುತ್ತಾರೆ.

ಇವರು ಪ್ರೀತಿಯ ಅಮಲಿನಲ್ಲಿ ಬಿದ್ದು, ಕುಡುಕರಾಗುತ್ತಾರೆ. ಸೋಮಾರಿಗಳಾಗುತ್ತಾರೆ. ಹೀಗೆ ತಮ್ಮ ಬದುಕನ್ನು ಗಂಭೀರವಾಗಿ ಪರಿಗಣಿಸದೇ ಇದ್ದಾಗ ಇರುವ ಶ್ರೀಮಂತಿಕೆ ಹೊರಟು ಹೋಗುತ್ತದೆ. ಯಾವುದೇ ನಿರ್ದಿಷ್ಟವಾದ ಕೆಲಸವನ್ನೂ ಮಾಡದ ಕಾರಣ ಗಳಿಸಿದ್ದನ್ನು ಕಳೆದುಕೊಳ್ಳತೊಡಗುತ್ತಾರೆ. ಯಾವುದೇ ನೌಕರಿಗೂ ಹೋಗದೇ, ವ್ಯಾಪಾರ -ವ್ಯವಹಾರಗಳನ್ನೂ ಮಾಡದೇ ಸೋಮಾರಿಗಳಾಗಿ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಅದಕ್ಕಿಂತಲೂ ಪ್ರೀತಿಯ ಹುಚ್ಚು ಹೆಚ್ಚಾದರೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡುತ್ತಾರೆ. ಬಳಿಕ ಕುಡಿತ ಇವರನ್ನು ಆವರಿಸಿಕೊಳ್ಳುತ್ತದೆ.

ಕೈಗಳ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಉತ್ತರ ಫಲ್ಗುಣಿ, ಹಸ್ತ, ಚಿತ್ತೆ, ಸ್ವಾತಿ, ವಿಶಾಖ, ಅನುರಾಧ, ಜೇಷ್ಠ, ಮೂಲ ಈ ಎಂಟು ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಕೈಗಳ ಮೇಲೆ ಆಗುತ್ತದೆ. ಇವರು ತುಂಬಾ ಶ್ರಮಜೀವಿಗಳಾಗಿರುತ್ತಾರೆ. ಹಣ ಇವರ ಕೈಯಲ್ಲಿ ಸದಾ ಹರಿದಾಡುತ್ತಿರುತ್ತದೆ. ಆದರೆ ಸ್ವಲ್ಪವೂ ಉಳಿಯುವುದಿಲ್ಲ, ಕಾರಣ ಇವರು ತಮಗೆ ಅಥವಾ ತಾವು ಇಷ್ಟಪಡುವವರಿಗೆ ಸಂತೋಷವಾದರೂ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾರೆ. ದುಃಖವಾದರೂ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾರೆ. ಇವರ ಈ ಗುಣವೇ ಇವರಿಗೆ ಶತ್ರು.

ಇವರು ಯಾವಾಗಲೂ ಐಶಾರಾಮದ ಜೀವನವನ್ನು ಆಸ್ವಾದಿಸಬೇಕು ಎನ್ನುವ ಮನೋಭಾವದವರು. ಸಾಲ ಇವರಿಗೆ ತೀರಾ ಸಾಮಾನ್ಯ. ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕು ಎನ್ನುವ ಸ್ವಭಾವ ಇವರದ್ದು. ಆದರೆ ಇವರಿಗೆ ಸಾಲ ಕೊಟ್ಟವ ಮಾತ್ರ ಕೋಡಂಗಿಯಾಗುತ್ತಾನೆ. ಕಾರಣ ಇವರಿಗೆ ಸಾಲ ಮಾಡಿದ ನೆನಪೇ ಇರುವುದಿಲ್ಲ, ಕೊಡುವ ಮಾತು ದೂರದ್ದು. ಹೀಗೆ ಮತ್ತೆ ಮತ್ತೆ ಹೊಸಬರನ್ನು ಹುಡುಕಿ ಸಾಲ ಮಾಡುವುದು ಇವರ ಚಾಳಿ. ಲಕ್ಷಾಂತರ ಸಾಲ ಮಾಡಿ ಪರಿತಪಿಸುತ್ತ, ದುಡಿದಿದ್ದನ್ನೆಲ್ಲಾ ಅದಕ್ಕೆ ಕಟ್ಟುತ್ತಾ ಇರುತ್ತಾರೆ. ಇದಕ್ಕಾಗಿ ಇವರು ಎಂದಿಗೂ ಪಶ್ಚಾತ್ತಾಪ ಪಡುವುದಿಲ್ಲ.

ಪಾದಗಳ ಮೇಲೆ ಪ್ರಭಾವ

ಸೂರ್ಯನು ಅಶ್ವಿನಿ ನಕ್ಷತ್ರದಲ್ಲಿ ಇದ್ದು, ಜಾತಕನು ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠಾ, ಶತಭೀಷಾ, ಪೂರ್ವಾಭಾದ್ರ, ಉತ್ತರಾಭಾದ್ರ, ರೇವತಿ ಈ ಎಂಟು ನಕ್ಷತ್ರಗಳಲ್ಲಿ ಹುಟ್ಟಿದರೆ ಅಂತಹಾ ವ್ಯಕ್ತಿಯಲ್ಲಿ ಸೂರ್ಯನ ಪ್ರಭಾವವು ಪಾದಗಳ ಮೇಲೆ ಆಗುತ್ತದೆ. ಇಂತಹಾ ವ್ಯಕ್ತಿಗಳ ಜೀವನದಲ್ಲಿ ನಿರಂತರ ಬದಲಾವಣೆಗಳು ಆಗುತ್ತಿರುತ್ತವೆ. ಸದಾ ಕಾಲ ಪ್ರಯಾಣ ಮಾಡುವುದನ್ನು ಇವರು ಇಷ್ಟ ಪಡುತ್ತಾರೆ. ಅಥವಾ ಇವರದು ಅಲೆದಾಟದ ಸ್ವಭಾವ ಆಗಿರುತ್ತದೆ. ಇವರ ಪ್ರಯಾಣ ಅಥವಾ ಅಲೆದಾಟಕ್ಕೆ ವಿವಿಧ ಮುಖಗಳಿವೆ; ಇವರು ಯಾವುದಾದರೂ ಖಾಸಗಿ ಕಂಪನಿಗಳಲ್ಲಿ ಇದ್ದರೆ ಒಂದೋ ವಿವಿಧ ಬ್ರಾಂಚುಗಳಿಗೆ ಅಲೆದಾಡುತ್ತಾರೆ. ಅಥವಾ ಕಂಪನಿಯಿಂದ ಕಂಪನಿಗೆ ಅಲೆದಾಡುತ್ತಾರೆ. ಸರ್ಕಾರಿ ಇಲಾಖೆಗಳಲ್ಲಿ ಇದ್ದರೆ ಇವರನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಮತ್ತೆಲ್ಲಿಗೋ ಎತ್ತಿ ಹಾಕುತ್ತಾ ಇರುತ್ತಾರೆ. ಅದೇ ಇವರು ಯಾವುದರಲ್ಲಿಯೂ ಇಲ್ಲದಿದ್ದರೆ ತಾವೇ ಚಾರಣ, ಪ್ರವಾಸ, ತೀರ್ಥಯಾತ್ರೆ, ಸೈಕಲ್-ಬೈಕ್‌ಯಾತ್ರೆ, ಹೀಗೆ ಒಂದಲ್ಲಾ ಒಂದು ಕಡೆಗೆ ಹೋಗುತ್ತಲೇ ಇರುತ್ತಾರೆ. ಕೊನೆಗೆ ಸ್ನೇಹಿತರ ಮನೆ, ನೆಂಟರ ಮನೆ, ಮದುವೆ, ಮುಂಜಿ, ಮುಂತಾದ ಸಮಾರಂಭಗಳಾದರೂ ಇವರಿಗೆ ಹೋಗಲೇಬೇಕು. ಇವೂ ಇಲ್ಲದಿದ್ದಾಗ ದಿನಾ ಸಂಜೆ ಹತ್ತಿರದ ಪೇಟೆಗಾದರೂ ಹೋಗುತ್ತಾರೆ. ಇದು ಇವರ ಬದುಕಿನ ಬದಲಾವಣೆಗೂ ಕಾರಣವಾಗುತ್ತದೆ, ಇವರ ದೌರ್ಬಲ್ಯವೂ ಆಗಿರುತ್ತದೆ.

ದುರ್ಜನರ ಗುಣಸ್ವಭಾವ

ಸಜ್ಜನೈಃ ವರ್ಷಕಾಲೇನ ಸಾಧಿತಂ ದುರ್ಜನಾಃ ಕ್ಷಣಾತ್ ।
ನಾಶಯಂತಿ ಯಥಾ ವೃಕ್ಷಂ ವಹ್ನಿಜ್ವಾಲಾಃ ಸಮಂತತಃ ॥ –ಸುವಚನ ಶತಕಮ್

ಸಜ್ಜನರು ವರ್ಷದಲ್ಲಿ ಸಾಧಿಸಿದುದನ್ನು ದುರ್ಜನರು ಕ್ಷಣ ಮಾತ್ರದಲ್ಲಿ ನಾಶ ಮಾಡುತ್ತಾರೆ. ಎಷ್ಟೋ ವರ್ಷ ಕಾಲ ಬೆಳೆದ ಮರವನ್ನು ಬೆಂಕಿಯ ಜ್ವಾಲೆಗಳು ಬೇಗನೇ ಸುಟ್ಟ ಹಾಗೆ –ಎಂಬುದು ಶ್ಲೋಕಾರ್ಥ.

ಲೋಕದಲ್ಲಿರುವ ಜನರ ನಡೆ–ನುಡಿಗಳನ್ನು ಅನುಲಕ್ಷಿಸಿ ಸಜ್ಜನರು, ದುರ್ಜನರು ಎಂದು ಗುರುತಿಸಲಾಗುತ್ತದೆ. ಎಲ್ಲರೂ ಒಳ್ಳೆಯವರಾಗಲಿ 'ದುರ್ಜನೋ ಸಜ್ಜನೋ ಭೂಯಾತ್' ಎಂಬುದು ಸುಸಂಸ್ಕೃತ ಮನಸ್ಸುಗಳ ಚಿಂತನೆ. ಆದರೆ ಅದು ಸುಲಭದ ಮಾತಲ್ಲ. ಲೋಕದ ಒಳಿತನ್ನು ಹಾರೈಸುವುದು, ಜನರಿಗೆ ಒಳ್ಳೆಯದು ಮಾಡುವುದು... ಇವು ಸಜ್ಜನರ ಕಾಯಕವಾದರೆ ಇದಕ್ಕೆ ವಿರುದ್ಧವಾದ ಸ್ವಭಾವ ದುರ್ಜನರದ್ದು.



ಸಜ್ಜನರು ಒಳ್ಳೆಯ ಕಾರ್ಯವನ್ನು ಮಾಡುತ್ತಾ ಸಾಗಿದರೆ ಅದನ್ನು ಹಾಳು ಮಾಡುವುದೇ ದುರ್ಜನರ ಸ್ವಭಾವ. ಯಾವಾಗಲೂ ಒಳ್ಳೆಯ ಕರ್ಮದ ಫಲ ಸಿಗುವುದಕ್ಕೆ ಸಮಯ ಬೇಕು. ವರ್ಷಾನುಗಟ್ಟಲೆ ಕಾಯಬೇಕು. ಆದರೆ ಅದನ್ನು ಹಾಳು ಮಾಡುವುದಕ್ಕೆ ದುಷ್ಟರಿಗೆ ಹೆಚ್ಚು ಸಮಯ ಬೇಡ. ಕ್ಷಣಾರ್ಧದಲ್ಲಿ ನಾಶ ಮಾಡುತ್ತಾರೆ. ಆ ಬಗ್ಗೆ ಅವರಿಗೆ ಬೇಸರವೂ ಇಲ್ಲ.

ಇದಕ್ಕೆ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧವೇ ಸಾಕ್ಷಿ. ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಈ ದೇಶಗಳ ನಡುವೆ ಯುದ್ಧ ಜೋರಾಗಿ ನಡೆಯುತ್ತಿದೆ. ತಮ್ಮ ತಮ್ಮ ಸ್ವಾರ್ಥಕ್ಕಾಗಿ ಈ ಯುದ್ಧ. ಆದರೆ ಅದರ ದುಷ್ಪರಿಣಾಮ ಇಡೀ ಜಗತ್ತಿಗೇ ಆಗುತ್ತಿದೆ. ಜಗತ್ತು ಭಯದಿಂದ ಕಂಪಿಸುತ್ತಿದೆ. ದಿನನಿತ್ಯದ ಜೀವನ ದುರ್ಭರವಾಗಿ ಜನರು ಕಂಗಾಲಾಗಿದ್ದಾರೆ. ಇದು ಹೀಗೇ ಮುಂದುವರಿದರೆ ಭವಿಷ್ಯ ಭಯಾನಕವಾಗಲಿದೆ.

ಈಗಾಗಲೇ ಸಾವಿರಾರು ಜನ ಪ್ರಾಣ ಕಳಕೊಂಡಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳು, ಆಯಕಟ್ಟಿನ ಸ್ಥಳಗಳು ಬಾಂಬ್ ದಾಳಿಗೆ ತುತ್ತಾಗಿವೆ. ತೈಲ ಸ್ಥಾನಗಳು ಹೊತ್ತಿ ಉರಿಯುತ್ತಿವೆ. ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರುತ್ತಿವೆ.

ಇಷ್ಟು ವರ್ಷಗಳ ಕಾಲ ಮಾಡಿದ ಸಾಧನೆ ದುಷ್ಟ ಜನರ ಪರಮ ಸ್ವಾರ್ಥದಿಂದಾಗಿ ನಾಶವಾಗುತ್ತಿದೆ. ಎಷ್ಟೋ ವರ್ಷಗಳ ಕಾಲ ಬೆಳೆದ ಮರ ಬೆಂಕಿಗೆ ಆಹುತಿಯಾದಂತಾಯಿತು. ಹುಲುಸಾಗಿ ಬೆಳೆದ ಹುಲ್ಲುಗಾವಲು ಬೆಂಕಿಯ ಕೆನ್ನಾಲಿಗೆಗೆ ಬಲಿಯಾದಂತಾಯಿತು. ಚೆನ್ನಾಗಿ ಬೆಳೆದು ನಿಂತ ಪೈರನ್ನು ಪ್ರವಾಹ ಕೊಚ್ಚಿಕೊಂಡು ಹೋದಂತಾಯಿತು. 'ಕುಂಬಾರಗೆ ವರುಷ ದೊಣ್ಣೆಗೆ ನಿಮಿಷ' ಎಂಬಂತೆ ಬಹುವರ್ಷದ ಸಾಧನೆಯುದ್ಧಪಿಪಾಸುಗಳಿಂದಾಗಿಧರಾಶಾಯಿಯಾಯಿತು. ಒಳ್ಳೆಯದನ್ನು ಮಾಡಲು ತುಂಬಾ ಪರಿಶ್ರಮ ಬೇಕು. ಸಾಕಷ್ಟು ವೆಚ್ಚ ಮಾಡಬೇಕು. ಹಾಳು ಮಾಡುವುದಕ್ಕೆ ಒಂದೇ ಒಂದು ಕ್ಷಣ ಸಾಕು. ಮನುಕುಲ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ನಾವೆಲ್ಲರೂ ಈ ಜಗತ್ತಿಗೆ ಅತಿಥಿಯಾಗಿ ಬಂದವರು. ಸಾಧ್ಯವಾದರೆ ಒಳಿತನ್ನು ಮಾಡಬೇಕು. ಇಲ್ಲವಾದರೆ ಸುಮ್ಮನಿರಬೇಕು. ವ್ಯವಸ್ಥೆಯನ್ನು ಹಾಳು ಮಾಡಲು ಮುಂದಾಗಬಾರದು. ಭಗವಂತನ ಸೃಷ್ಟಿ ಈ ಪ್ರಪಂಚ. ಇದನ್ನು ಹಾಳು ಮಾಡುವ ಅಧಿಕಾರ ಯಾರಿಗೂ ಇಲ್ಲ. ನಮ್ಮಿಂದೇನು ಒಳ್ಳೆಯದನ್ನು ಮಾಡಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ, ದ್ರೋಹ, ನಾಶದಂತಹ ಮಹಾಪಾತಕಕ್ಕೆ ಮುಂದಾಗಬಾರದು.

ಆತ್ಮಪ್ರಶಂಸೆ-ಇನ್ನೊಬ್ಬರ ದೋಷಗಳತ್ತ ದೃಷ್ಟಿ

ಆತ್ಮರತಿ ಅಪಾಯಕಾರಿಯಾಗುವುದು ಇತರರ ಜಾತಿ, ಮತ, ಪಂಥ, ನಂಬಿಕೆಗಳಲ್ಲಿ ದೋಷಗಳನ್ನು ಹುಡುಕಿದಾಗ.

ಒಳನೋಟ
• ಹೆ.ಬಾ. ಮಲ್ಯ



ಮನುಷ್ಯ ಜೀವಿಯಲ್ಲಿ ದೇವರು ಅನೇಕ ವಿಧದ ಗುಣಸ್ವಭಾವಗಳನ್ನು ತುಂಬಿದ್ದಾನೆ. ಸಂದರ್ಭಕ್ಕನುಸಾರವಾಗಿ, ಮಾನವನ ಪ್ರತಿಸ್ಪಂದನೆಗನುಗುಣವಾಗಿ ಕೆಲವು ಒಳ್ಳೆಯವು, ಕೆಲವು ಕೆಟ್ಟವು ಎಂದು ಮಾನವ ನಿರ್ಧರಿಸಿಬಿಡುತ್ತಾನೆ. ಉದಾಹರಣೆಗೆ ಅರಿಷಡ್ವರ್ಗಗಳನ್ನೇ ತೆಗೆದುಕೊಳ್ಳುವ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇತ್ಯಾದಿ. ವಾಸ್ತವದಲ್ಲಿ ಇವುಗಳಲ್ಲಿ ಯಾವುದೂ ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ, ಮಾನವ ಜೀವನದಲ್ಲಿ ಈ ಎಲ್ಲ ಗುಣಗಳೂ ಸಂದರ್ಭಕ್ಕನುಗುಣವಾಗಿ ಉಪಯೋಗಕ್ಕೂ ಬರುತ್ತವೆ. ಮಿತಿ ಮೀರಿದರೆ ಕೆಡುಕೂ ಸಂಭವಿಸುತ್ತದೆ. ಊಟದಲ್ಲಿ ಷಡ್ರಸಗಳಿರಬೇಕು. ಉಪ್ಪು, ಹುಳಿ, ಖಾರ, ಆಮ್ಲ, ಕಹಿ, ಸಿಹಿ ಇತ್ಯಾದಿ. ಆದರೆ ಯಾವುದನ್ನು ಯಾವ ಖಾದ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕು ಎಂಬುದಕ್ಕೆ ಲೆಕ್ಕಾಚಾರ ಇದೆ. ಸಮ ಪ್ರಮಾಣ ಅಥವಾ ಅಗತ್ಯಕ್ಕೆ ಹಾಗೂ ರುಚಿ ಮತ್ತು ಆರೋಗ್ಯಕ್ಕೆ ಪೂರಕವಾಗುವಂತೆ ಉಪಯೋಗಿಸಿದಾಗ ಅದು ಹಿತ ಹಾಗೂ ತೃಪ್ತಿಯನ್ನು ನೀಡುತ್ತದೆ, ಅದು ಮೃಷ್ಟಾನ್ನವಾಗುತ್ತದೆ. ಮಾನವ ಗುಣ ಸ್ವಭಾವಗಳ ಬಗ್ಗೆಯೂ ಇದೇ ಮಾತು ಸತ್ಯ.

ಹೆಚ್ಚು ಕಮ್ಮಿ, ಪ್ರತಿಯೋರ್ವ ಮಾನವನಲ್ಲೂ ಆತ್ಮಪ್ರಶಂಸೆ ಎಂಬ ಗುಣ ಅಥವಾ ದೋಷ ಇದ್ದೇ ಇರುತ್ತದೆ. ಕೆಲವರು ಪರೋಕ್ಷವಾಗಿ ತನ್ನನ್ನು ಹೊಗಳಿಕೊಂಡರೆ, ಕೆಲವರು ನೇರವಾಗಿ ಹೊಗಳಿಕೊಳ್ಳುತ್ತಾರೆ. ತಾನು, ತನ್ನ ಹೆಂಡತಿ, ಮಗು, ತನ್ನ ಹಿರಿಯರು ಎಲ್ಲರೂ ಒಳ್ಳೆಯವರು, ಸಾಹಸಿಗಳು, ಆದರ್ಶಪ್ರಾಯರು ಎಂದು ಹೇಳಿಕೊಳ್ಳುವುದುಂಟು. ವಾಸ್ತವ ಬೇರೆಯೇ ಇರುತ್ತದೆ. ಮಿತ್ರರು, ಸಂಬಂಧಿಗಳ ಮನೆಗೆ ಹೋದಾಗ, ಬಂದವರ ಬಗೆಗಿಂತ ತನ್ನ ವಿಷಯಗಳನ್ನೇ ಹೇಳುತ್ತಾ ಹೋಗುತ್ತಾರೆ. ತಮ್ಮ ಮಗು, ಅದರ ಗುಣ, ಪ್ರತಿಭೆಗಳ ಬಗ್ಗೆ ಇನ್ನಿಲ್ಲದಂತೆ ಹೊಗಳುತ್ತಾರೆ. ಮುಂದೆ ಅದು ಬೆಳೆದು ಅಹಂಕಾರದ ಸ್ವಭಾವ ಬೆಳೆಸಿಕೊಳ್ಳುವುದೇ ಹೆಚ್ಚು. ತಮ್ಮ ವಂಶ ಹಾಗೂ ಕುಟುಂಬದ ಹಿರಿಮೆಯನ್ನು ಬಣ್ಣಿಸುವುದುಂಟು. ವ್ಯಕ್ತಿ ಮಾತ್ರವಲ್ಲ ಜಾತಿ ಬಗ್ಗೆ ಹೊಗಳಿಕೊಳ್ಳುವುದು ಉಂಟು. 84 ಲಕ್ಷ ಯೋನಿಗಳಲ್ಲಿ ಮಾನವ ಜೀವಿಯೇ ಶ್ರೇಷ್ಠ, ಅದರಲ್ಲೂ ತಮ್ಮ ಜಾತಿಯೇ ಶ್ರೇಷ್ಠ– ಹೀಗೆ ಸಾಗುತ್ತದೆ ಪ್ರಶಂಸೆಯ ಧಾಟಿ.

ಇದರಲ್ಲಿ ಬಹಳ ಅಪಾಯವಿದೆ ಎಂದೇನೂ ಅಲ್ಲ. ತೊಂದರೆ ಉಂಟಾಗುವುದು ಈ ಆತ್ಮರತಿ ಮಿತಿಮೀರಿದಾಗ. ಆಗಲೂ ಅದನ್ನು ಕ್ಷಮಿಸಿ ಬಿಡಬಹುದು. ಆದರೆ ಬಹಳ ಅಪಾಯ ಎರಗುವುದು ಇತರರ ಜಾತಿ, ಮತ, ಪಂಥ, ನಂಬಿಕೆಗಳಲ್ಲಿ ದೋಷಗಳನ್ನು ಹುಡುಕುವ ಸ್ವಭಾವ ಬೆಳೆಸಿಕೊಂಡಾಗ. ಆಗ ಪರಸ್ಪರ ಅಪನಂಬಿಕೆ, ದ್ವೇಷ, ತಿರಸ್ಕಾರ ಬೆಳೆಯಲು ಕಾರಣವಾಗುತ್ತದೆ. ಸಾಮಾಜಿಕ ಸಾಮರಸ್ಯ ಕೆಡುತ್ತದೆ. ಇಂದು ಹಿಂದು ಸಮಾಜವನ್ನು ಕಾಡುತ್ತಿರುವ ಸಮಸ್ಯೆ ಇದೇ. ಢೋಂಗೀ ಬುದ್ಧಿಜೀವಿಗಳಿಗಂತೂ ಸದಾ ಇತರರ, ಇತರ ಸಂಘಟನೆ, ಪಕ್ಷದೊಳಗೆ ದೋಷ ಹುಡುಕುವುದೇ ಕೆಲಸ. ಇದನ್ನು ಪೂರ್ವಗ್ರಹ ಎನ್ನುತ್ತಾರೆ. ಇಂದು ದೇಶದಲ್ಲಿ ಪರಸ್ಪರ ದ್ವೇಷ, ಈರ್ಷ್ಯೆ, ಸಂಘರ್ಷ, ಅಸಹಿಷ್ಣುತೆ ಉಂಟಾಗಲು ಈ ಸ್ವಭಾವವೇ ಕಾರಣ. ತಮಗೆ ಒಪ್ಪಿಗೆ ಇಲ್ಲದ ಸಿದ್ಧಾಂತ, ಸಂಗತಿಗಳು, ನಂಬಿಕೆ, ಆಚರಣೆಗಳ ಬಗ್ಗೆ ಗುಣಾತ್ಮಕವಾಗಿ ವಿರೋಧಿಸುವುದರಲ್ಲಿ, ಟೀಕಿಸುವುದರಲ್ಲಿ ತಪ್ಪೇನಿಲ್ಲ, ಅದು ಅವರ ಸಂವಿಧಾನಾತ್ಮಕ ಹಕ್ಕು. ಆದರೆ ತೀರಾ ಕೆಳಮಟ್ಟದ, ವೈಯಕ್ತಿಕ, ಅವಮಾನಕರ ಟೀಕೆ, ಆರೋಪಗಳನ್ನು ಮಾಡುವುದು ಅಭಿಪ್ರಾಯ ಸ್ವಾತಂತ್ರ್ಯ ನೀಡಿದ ಸಂವಿಧಾನಾತ್ಮಕ ಹಕ್ಕಿನ ದುರುಪಯೋಗವಾಗುತ್ತದೆ. ಮೂಲಭೂತ ಹಕ್ಕಿನೊಂದಿಗೆ ಮೂಲಭೂತ ಕರ್ತವ್ಯಗಳೂ ಇವೆ ಎಂಬುದನ್ನು ಮರೆಯಬಾರದು. ಇಂಥ ನಡತೆಯಿಂದ ಸಾಮಾಜಿಕ ಸಾಮರಸ್ಯ ಕೆಡುವಂತಾಗಬಾರದು. ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯಬಾರದು. ಆದರೆ ಇಂದು ಕೆಲವು ಪಕ್ಷಗಳ ನಾಯಕರು, ಶಾಸಕರು, ಸಾಂಸದರು ಈ ಸಾಂವಿಧಾನಿಕ ಕಟ್ಟುಪಾಡುಗಳನ್ನು ಹರಿದೊಗೆದು ಬಾಯಿಗೆ ಬಂದಂತೆ ಮಾತನಾಡುವ, ನಿಂದಿಸುವ ಪ್ರವೃತ್ತಿ ಬೆಳೆದಿರುವುದರಿಂದಲೇ ರಾಜಕೀಯ, ಸಾಮಾಜಿಕ ಸ್ವಾಸ್ಥ್ಯ ಹದಗೆಟ್ಟಿದೆ. ಸಾಮಾಜಿಕ ಹಿತಕ್ಕಿಂತಲೂ ತಮ್ಮ ಸ್ವಂತ ಸ್ವಾರ್ಥಕ್ಕಾಗಿ ಹೀಗೆ ನಡೆದುಕೊಳ್ಳುವುದು ಕಂಡುಬರುತ್ತದೆ. ಸಂಸತ್ ಭವನದಲ್ಲಿ ಇವರು ನಡಕೊಂಡ ರೀತಿ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಶೋಭೆ ತರುವಂಥದ್ದಲ್ಲ.

ಈ ವರ್ಗದ ಜನರ ಮೊದಲ ಮೆಟ್ಟಿಲು ಆತ್ಮಪ್ರಶಂಸೆ, ಸ್ವಪ್ರತಿಷ್ಠೆ, ಪ್ರಸಿದ್ಧಿ ಗಳಿಸಲು ಮಾಡುವ ಪ್ರಯತ್ನ. ಇವರು ಇತರರ ಭಾವನೆಗಳಿಗೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ಬೆಲೆ ಕೊಡುವುದಿಲ್ಲ. ಕುತರ್ಕ ಮಾಡುವುದು, ಕಿರಿಚಾಡುವುದು, ಇದಿರಾಳಿಯು ತನ್ನ ಅಭಿಪ್ರಾಯ ವ್ಯಕ್ತಪಡಿಸಲು ಅಡ್ಡಿ ಪಡಿಸುವುದು, ಪಲಾಯನ ಮಾಡುವುದು (hit & run policy) ಇವರ ಸ್ವಭಾವ. ಆತ್ಮಪ್ರಶಂಸೆಯಿಂದ ಕೆಲವರಿಗೆ ಆತ್ಮತೃಪ್ತಿಯಾದಂತೆ ಅನಿಸುತ್ತದೆ. ಆದರೆ ಇದು ಶಾಶ್ವತ ತೃಪ್ತಿ ಅಲ್ಲ, ಆತ್ಮಪ್ರಶಂಸೆ ಜಂಕ್ ಫುಡ್ ಇದ್ದಂತೆ. ತಿನ್ನುವಾಗ ರುಚಿ ಎನ್ನಿಸುತ್ತದೆ. ಆದರೆ ಆರೋಗ್ಯ ಹದಗೆಡುತ್ತದೆ. ಇನ್ನು ಇತರರಲ್ಲಿನ ಹುಳುಕುಗಳನ್ನು ಹುಡುಕಿ ತಿನ್ನುವುದರಿಂದ ಕೆಲವರಿಗೆ ತೃಪ್ತಿ ಎನಿಸುತ್ತದೆ. ಹೊಲಗಳಲ್ಲಿ ಜಾನುವಾರುಗಳು ಮೇಯುತ್ತಿರುವಾಗ ಕೊಕ್ಕರೆಯೊಂದು ಹಸುವಿನ ಮೈಯಲ್ಲಿನ ಉಣುಗು, ಹುಳಗಳನ್ನು ಹುಡುಕಿ, ತಿಂದು ಹೊಟ್ಟೆ ಹೊರೆದುಕೊಳ್ಳುತ್ತದೆ. ಇತರರ ಹುಳುಕುಗಳನ್ನು ಹುಡುಕಿ ಅದನ್ನು ಹೇಳಿಕೊಂಡು ಚಪ್ಪರಿಸುವವರು ಈ ಕೊಕ್ಕರೆಯ ಜಾತಿಗೆ ಸೇರಿದವರು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಆತ್ಮಪ್ರಶಂಸೆ ಅಥವಾ ಸ್ವಪ್ರತಿಷ್ಠೆ, ಸ್ವಂತದ ಪ್ರಸಿದ್ಧಿ, ಪ್ರಚಾರ, ಇತರರಲ್ಲಿ ದೋಷಗಳನ್ನು ಹುಡುಕಿ ಆಡಿಕೊಳ್ಳುವ ಸಂಸ್ಕೃತಿ ಇಲ್ಲ. ಮಾತು ಮಾಣಿಕ್ಯ ಎನ್ನಲಾಗಿದೆ. ಮಾತಿಗೆ ಬಹಳ ಮಹತ್ವ ಇದೆ. ಸಭ್ಯ, ಅನ್ಯರಿಗೆ ನೋವಾಗದ ಮೃದು ಮಾತು ಇತರರನ್ನು ಹತ್ತಿರ ಸೆಳೆದುಕೊಳ್ಳುತ್ತದೆ. ಇತರರಲ್ಲಿನ ದೋಷಗಳ ಬಗ್ಗೆ ಅರಿವಿದ್ದರೂ ಅವುಗಳ ಬಗ್ಗೆ ಅನಾಸಕ್ತಿಯಿಂದಿರುವುದು, ಅವರಲ್ಲಿನ ಸದ್ಗುಣಗಳನ್ನು ಎತ್ತಿ ಹೇಳುವುದು ಈ ಮಣ್ಣಿನ ಸಂಸ್ಕೃತಿ. ಇತರರ ದೋಷಗಳ ಬಗ್ಗೆ ಸಾರ್ವಜನಿಕವಾಗಿ ಆಡಿಕೊಳ್ಳುವ ಸ್ವಭಾವ ಈ ನೆಲದ ಸಂಸ್ಕೃತಿಯಲ್ಲ. ಹೇಳಲೇಬೇಕೆಂದೆನಿಸಿದಾಗ ವೈಯಕ್ತಿಕವಾಗಿ ಸಂಬಂಧಪಟ್ಟವರ ಬಳಿ ನೇರವಾಗಿ ಒಳ್ಳೆ ಮಾತುಗಳಿಂದ ತಿಳಿಸಿ ಹೇಳುವುದು ತಪ್ಪಲ್ಲ. ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗಲೂ ಇದೇ ಸೂತ್ರ ಅನ್ವಯವಾಗುತ್ತದೆ. ಕೀಳು ಭಾಷೆಯ ಉಪಯೋಗ, ಇತರ ವ್ಯಕ್ತಿಗಳ ಜಾತಿ, ವರ್ಗ, ಸಮುದಾಯಗಳನ್ನು ಅವಮಾನಿಸುವುದು ಉತ್ತಮ ಸಂಸ್ಕೃತಿಯಂತೂ ಅಲ್ಲ. ಮಾತು ಹಾಗೂ ಭಾವನೆಗಳ ಮೇಲೆ ಹಿಡಿತವಿದ್ದರೆ ಉತ್ತಮ. ತಮ್ಮನ್ನು ತಾವೇ ಹೊಗಳಿಕೊಳ್ಳುವುದು ಪಕ್ವತೆಯ ಲಕ್ಷಣವಲ್ಲ. ಇತರರು ನಮ್ಮ ಬಗ್ಗೆ ಹೊಗಳುವಂತಾಗಬೇಕು. ಆಗಲೂ ಹೊಗಳಿಕೆಯಿಂದ ಉಬ್ಬಿ ಹೋಗಬಾರದು. ಆ ಮಟ್ಟಕ್ಕೆ ಬೆಳೆದು ತಾನು ಇನ್ನೂ ಹೆಚ್ಚಿನ ಯೋಗ್ಯತೆ ಗಳಿಸಬೇಕು ಎಂಬ ವಿನಮ್ರ ಭಾವ ಇರಬೇಕು. ಇಂಥವರು ಬೆಳೆಯುತ್ತಾರೆ.

ಡಾಕ್ಟರ್ ಹೆಡಗೇವಾರರಲ್ಲಿ ಇಂತಹ ಅನೇಕ ಸದ್ಗುಣಗಳಿದ್ದುದರಿಂದ, ಅನುಭವದಿಂದ ಅವರು ಅವುಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದರಿಂದ ಅವರು ಯುಗಪುರುಷರಾದರು. ತಾನು ಸಂಘಟನೆಯ ಗುರುವಾಗದೆ ಭಗವಾಧ್ವಜವನ್ನು ಗುರುವಾಗಿಟ್ಟದ್ದು ಅವರ ವಿನಮ್ರತೆ ಹಾಗೂ ದೂರದೃಷ್ಟಿಗೆ ಸಾಕ್ಷಿ. ಇಂಥ ಗುಣಗಳಿದ್ದುದರಿಂದಲೇ ಅವರು ಅನೇಕ ಯುವಕರ, ಬಾಲಕರ, ಹಿರಿಯರ ಮನಸ್ಸನ್ನಾಕರ್ಷಿಸಿ, ಸಂಪರ್ಕದ ಮೂಲಕ ಸಂಘಟನೆಗೆ ಜೋಡಿಸಲು ಸಾಧ್ಯವಾಯಿತು. ಶುದ್ಧ ಚರಿತ್ರೆ ಅವರದು. ಪ್ರಾಮಾಣಿಕ ವ್ಯಕ್ತಿತ್ವ. ರಾಜಕೀಯವಾಗಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ತನ್ನ ಪ್ರಾಮಾಣಿಕತೆಯಿಂದ, ನೈತಿಕತೆ, ಚಾರಿತ್ರ್ಯದಿಂದ ಅವರ ಮನಗೆದ್ದು ಮಿತ್ರತ್ವ ಬೆಳೆಸಿಕೊಳ್ಳುತ್ತಿದ್ದರು. ಅವರು ಹಿಂದು ಮಹಾಸಭೆಯ ನಾಯಕ ಡಾ. ಮೂಂಜೆಯವರ ಅನುಯಾಯಿ. ಸ್ವಾಭಾವಿಕವಾಗಿ ಅಂದಿನ ಕಾಂಗ್ರೆಸ್ ನಾಯಕರು ಇವರುಗಳನ್ನು ಸಾರ್ವಜನಿಕ ಸಭೆಗಳಲ್ಲಿ ಹೀನಾಯವಾಗಿ ಟೀಕಿಸುವುದು ಸಾಮಾನ್ಯವಾಗಿತ್ತು. ಡಾಕ್ಟರ್‌ಜೀಯವರ ಮಿತ್ರರಾಗಿದ್ದ ಓರ್ವ ಕಟ್ಟರ್ ಕಾಂಗ್ರೆಸ್ ನಾಯಕರು ನಾಗಪುರದ ಒಂದು ಸಾರ್ವಜನಿಕ ಸಭೆಯಲ್ಲಿ ಡಾ. ಮೂಂಜೆಯವರ ಬಗ್ಗೆ ಇನ್ನಿಲ್ಲದ ಟೀಕೆ ಮಾಡಿದರು. ಡಾಕ್ಟರ್‌ಜೀ ಹೆಸರು ಉಲ್ಲೇಖ ಮಾಡಿ ಟೀಕಿಸಬೇಕೆಂದು ಅಂದುಕೊಂಡರೂ ಡಾಕ್ಟರ್‌ಜೀ ಬಗ್ಗೆ ಒಂದೇ ಒಂದು ದೋಷ ಹುಡುಕಲಾಗದೆ ಅವರ ನಾಲಿಗೆ ಕಟ್ಟಿ ಹೋಯಿತು. ಅಂತ ಚಾರಿತ್ರ್ಯ ಡಾಕ್ಟರ್‌ಜೀಯವರದು. ಒಮ್ಮೆ ಡಾಕ್ಟರ್‌ಜೀಗೆ ಹಣದ ಅವಶ್ಯಕತೆ ಬಿದ್ದಾಗ ಅವರು ಅದೇ ಕಾಂಗ್ರೆಸ್ ನಾಯಕರ ಬಳಿ ಹೋದರು. ವೈಯಕ್ತಿಕವಾಗಿ ಡಾಕ್ಟರ್‌ಜೀ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದ ಆ ಕಾಂಗ್ರೆಸ್ ನಾಯಕರು ತಕ್ಷಣ ಅವಶ್ಯವಿದ್ದ ಹಣ ನೀಡಿದರು. ಆಗ ಡಾಕ್ಟರ್‌ಜೀ "ಒಂದು ಖಾಲಿ ಕಾಗದ ನೀಡಿ, ಸಾಲ ಪತ್ರ ಬರೆದು ಸಹಿ ಮಾಡಿಕೊಡುತ್ತೇನೆ" ಎಂದರು. ಆಗ ಆ ಕಾಂಗ್ರೆಸ್ ನಾಯಕರು "ಡಾಕ್ಟರ್‌ಜೀ, ನನಗೆ ತಲೆಕೆಟ್ಟಿದೆ ಎಂದುಕೊಂಡಿರಾ... ನಿಮ್ಮಂಥ ಪ್ರಾಮಾಣಿಕ ಚಾರಿತ್ರ್ಯದ ವ್ಯಕ್ತಿಯಿಂದ ಸಾಲಕ್ಕೆ ಪಾವತಿ ಪತ್ರ ಬರೆಸಿಕೊಳ್ಳಲು? ಏನೂ ಬೇಡ. ನಿಮ್ಮ ಮಾತೇ ಪಾವತಿ" ಎಂದುಬಿಟ್ಟರು. ಅಂತ ಧವಳ, ಪರಿಶುದ್ಧ, ನಿಷ್ಕಳಂಕ ಚಾರಿತ್ರ್ಯ ಡಾಕ್ಟರ್‌ಜೀಯವರದು. ವಿರೋಧಿಗಳೂ ಗೌರವಿಸುವಂಥ ಗುಣನಡತೆ. ಅವರೊಬ್ಬ ಅಜಾತಶತ್ರುವಾಗಿದ್ದರು. ಎಲ್ಲಾ ಕಾರ್ಯಕರ್ತರು ಅವರ ಆದರ್ಶಗಳನ್ನು ಪಾಲಿಸುವುದು ಸಂಘಟನೆಗೆ ಶಕ್ತಿ ನೀಡುತ್ತದೆ. ಆತ್ಮಪ್ರಶಂಸೆ, ಪ್ರಸಿದ್ಧಿ, ಸ್ವ ಪ್ರತಿಷ್ಠೆ, ಸ್ವಪ್ರಚಾರಗಳಿಗೆ ಸಂಘಟನೆಯಲ್ಲಿ ಸ್ಥಾನವಿಲ್ಲ.

ನಮ್ಮ ಡಿಜಿಟಲ್ ಜಗತ್ತಿನ ಕರುಳಬಳ್ಳಿ ಈ ಸಾಗರದಾಳದ ಬೆಳ್ಳಿರೇಖೆ

ಹರ್ಷ ಹೆಗಡೆ ಕೊಂಡದಕುಳಿ


ಈ ಕಥೆ ಶುರುವಾಗುವುದು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ. ಅದು ತಂತ್ರಜ್ಞಾನದೆಡೆಗಿನ ಮನುಷ್ಯನ ಕುತೂಹಲ ಆಗತಾನೇ ಹೆಪ್ಪುಗಟ್ಟುತ್ತಿದ್ದ ಕಾಲ. ಆಗಷ್ಟೇ ವಿದ್ಯುತ್ತಿನ ಆವಿಷ್ಕಾರವಾಗಿ, ಅದು ಸೃಷ್ಟಿಸಿದ ವಿಸ್ಮಯಕ್ಕೆ ಮಾನವ ಜಗತ್ತು ಬೆರಗಾಗಿತ್ತು. ವಿದ್ಯುತ್ತಿನ ಮೂಲಕ ನಡೆಯಬಹುದಾದ ನಾನಾ ಸಾಧ್ಯತೆಗಳೆಡೆಗೆ ನಿರೀಕ್ಷೆಯ ಕಣ್ಣುಗಳಿಂದಲೇ ಜಗತ್ತು ನೋಡುತ್ತಿತ್ತು.

ಅಂತಹ ಒಂದು ಸಾಧ್ಯತೆಯಾಗಿ ಟೆಲಿಗ್ರಾಫ್‌ಗಳು ಮುನ್ನೆಲೆಗೆ ಬಂದಿದ್ದವು. ನೆಲದ ಮೇಲಿನ ಸಂದೇಶಗಳ ರವಾನೆಯಲ್ಲಿ ಇವು ಹೊಸ ಅಲೆಯನ್ನೇ ಸೃಷ್ಟಿಸಿದ್ದವು. ಆದರೆ ಆವತ್ತಿನ ಕಾಲಕ್ಕೆ ಅಟ್ಲಾಂಟಿಕ್ ಸಾಗರದ ಆಚೆಗಿನ ದೇಶಕ್ಕೆ ಒಂದು ಸಣ್ಣ ಸಂದೇಶ ಕಳುಹಿಸಬೇಕೆಂದರೂ ಹಡಗುಗಳು ವಾರಗಟ್ಟಲೆ ಸಮುದ್ರದ ಅಲೆಗಳ ಮೇಲೆ ಹೊಯ್ದಾಡಬೇಕಿತ್ತು. ಅಷ್ಟಾಗಿಯೂ ಮಾಹಿತಿ ಗಮ್ಯವನ್ನು ತಲುಪುತ್ತದೆ ಎಂಬ ಯಾವ ಖಾತ್ರಿಯೂ ಇರುತ್ತಿರಲಿಲ್ಲ. ಹವಾಮಾನ ವೈಪರೀತ್ಯ, ಕಡಲ್ಗಳ್ಳರ ಭಯ ಇವೆಲ್ಲಾ ಅನಿಶ್ಚಿತತೆಗಳ ನಡುವೆಯೇ ಈ ಸಂವಹನ ನಡೆಯಬೇಕಿತ್ತು. ಅಂತಹ ದಿನಗಳಲ್ಲಿ, ಮನುಷ್ಯನ ಹಠಕ್ಕೆ ಮೊದಲ ಬಾರಿಗೆ ರೂಪ ಸಿಕ್ಕಿದ್ದು ಸಾಗರದ ಆಳದಲ್ಲಿ, ತಾಮ್ರದ ತಂತಿಯನ್ನು 'ಗಟ್ಟಾ-ಪರ್ಚಾ' ಎಂಬ ಮರದ ಅಂಟಿನಿಂದ ಸವರಿ ಸಮುದ್ರಕ್ಕೆ ಇಳಿಸಿದ ಆ ಮೊದಲ ಪ್ರಯತ್ನವು ಆಧುನಿಕ ಸಂವಹನ ಇತಿಹಾಸದಲ್ಲಿ ಕ್ರಾಂತಿಯನ್ನೇ ಮಾಡಿತು. ಜಗತ್ತಿನ ಮಾಹಿತಿ ವಿನಿಮಯದ ಮೊದಲ ನಾಡಿಮಿಡಿತವೆಂದೇ ಅದನ್ನು ಗುರುತಿಸಬಹುದು. ಆರಂಭಿಕ ದಿನಗಳಲ್ಲಿ ವೈಫಲ್ಯಗಳನ್ನು ಪದೇ ಪದೇ ಕಂಡರೂ, ಅಲೆಗಳ ಅಬ್ಬರದ ಕೆಳಗೆ ಮೌನವಾಗಿ ಮಲಗುವ ಆ ತಂತಿಗಳು ಮುಂದೊಂದು ದಿನ ಇಡೀ ಭೂಮಿಯನ್ನೇ ಒಂದುಗೂಡಿಸಿ ಪುಟ್ಟ ಹಳ್ಳಿಯಂತೆ ಮಾಡಲಿವೆ ಎಂಬ ಸತ್ಯ ಅಂದು ಯಾರೂ ಊಹಿಸಿರಲಿಲ್ಲ.

ನಮ್ಮದಿವತ್ತು ಫಾಸ್ಟ್ ಫಾರ್ವರ್ಡ್ ಜಗತ್ತು. ಎಲ್ಲವೂ ಬೆರಳ ತುದಿಯಲ್ಲಿಯೇ ಲಭ್ಯ. ಕನಿಷ್ಠ ಅವಶ್ಯಕತೆಯಾದ ಆಹಾರದಿಂದ ಹಿಡಿದು, ಮನರಂಜನೆ, ಬ್ಯಾಂಕಿಂಗ್ ಕ್ಷೇತ್ರದವರೆಗೆ ಎಲ್ಲವೂ ಇಂದು ಅಂಗೈ ಗೆರೆಗಳ ನಡುವೆಯೇ ನಡೆಯುತ್ತದೆ. ಇದಕ್ಕೆ ಮುಖ್ಯ ಕಾರಣ ಅಂತರ್ಜಾಲದಲ್ಲಿ ಮನುಷ್ಯ ಸಾಧಿಸಿದ ಪ್ರಗತಿ. ಸಹಜವಾಗಿ ಇಂಟರ್ನೆಟ್ ಅಂದಾಕ್ಷಣ ನಮ್ಮ ತಲೆಗೆ ತಟ್ಟನೆ ಬರುವುದೇ ಉಪಗ್ರಹಗಳು ಅಥವಾ ಮೊಬೈಲ್ ಟವರ್‌ಗಳು. ಆದರೆ ಜಗತ್ತು ಇಷ್ಟು ಗಟ್ಟಿಯಾಗಿ ಬೆಸೆದುಕೊಂಡಿರುವುದು ಗಗನದಲ್ಲಿರುವ ಉಪಗ್ರಹಗಳಿಗಿಂತಲೂ ಹೆಚ್ಚಾಗಿ, ನೀರಿನ ಆಳದಲ್ಲಿ ಮುಳುಗಿರುವ ಕೇಬಲ್‌ಗಳಿಂದ ಎನ್ನುವುದು ಅಚ್ಚರಿಯಾದರೂ ನಿಜ.

ಹೌದು, ಇಂದಿನ ಇಂಟರ್ನೆಟ್ ಸಂಚಾರದ ಶೇಕಡಾ 98 ರಷ್ಟು ಭಾಗ ಈ ಸಮುದ್ರದಾಳದ ಕೇಬಲ್‌ಗಳ ಮೂಲಕವೇ ನಡೆಯುತ್ತದೆ. ಕೇವಲ ಶೇಕಡಾ 2 ರಷ್ಟನ್ನು ಮಾತ್ರ ಉಪಗ್ರಹಗಳು ನಿಭಾಯಿಸುತ್ತವೆ. ಜಗತ್ತಿನಲ್ಲಿರುವ ವಿವಿಧ ಸಾಗರದಂಚಿನ ನಗರಗಳೇ ಈ ಸಂವಹನ ವ್ಯವಸ್ಥೆಯ ಹೆಬ್ಬಾಗಿಲು. ಮುಂಬೈ, ಚೆನ್ನೈ ಮತ್ತು ಕೊಚ್ಚಿಯಂತಹ ಕರಾವಳಿ ತೀರಗಳಲ್ಲಿ ಭೂಮಿಯನ್ನು ಬಂದು ಸೇರುವ ಈ ಕೇಬಲ್‌ಗಳು ಭಾರತದ ಸಂವಹನ ವ್ಯವಸ್ಥೆಯ ಮುಖ್ಯ ದ್ವಾರಗಳು.

ಈ ವ್ಯವಸ್ಥೆ ಕೆಲಸ ಮಾಡುವ ರೀತಿ ಅರ್ಥ ಮಾಡಿಕೊಂಡರೆ ಮನುಷ್ಯ ಈ ದಿಕ್ಕಿನಲ್ಲಿ ಕ್ರಮಿಸಿದ ಅಗಾಧತೆಯ ಅರಿವಾಗುತ್ತದೆ. ಇವತ್ತಿಗೂ ಇದು ಯಾವುದೇ ಜಾದೂವಿಗಿಂತ ಕಡಿಮೆ ಎನಿಸುವುದೇ ಇಲ್ಲ. ನೀವು ಮುಂಬೈನಲ್ಲಿ ಕುಳಿತು ಲಂಡನ್‌ನಲ್ಲಿರುವ ಸಂಬಂಧಿಯೊಬ್ಬರಿಗೆ ಒಂದು ಮೆಸೇಜ್ ಕಳುಹಿಸಿದರೆ, ಆ ಮಾಹಿತಿ ಮೊದಲು ನಿಮ್ಮ ಮೊಬೈಲ್‌ನಿಂದ ಟವರ್‌ಗೆ ಹೋಗಿ, ಅಲ್ಲಿಂದ



ಭೂಮಿಯ ಮೇಲಣ ಬೇರೆ ಬೇರೆ ಟವರ್‌ಗಳಲ್ಲಿ ವರ್ಗಾವಣೆಯಾಗಿ ಕೊನೆಗೆ ಭೂಮಿಯಡಿಯ ಕೇಬಲ್ ಮೂಲಕ ಸಮುದ್ರ ತೀರದ 'ಲ್ಯಾಂಡಿಂಗ್ ಸ್ಟೇಷನ್'ಗೆ ತಲುಪುತ್ತದೆ. ಅಲ್ಲಿಂದ ಅದು ಲೇಸರ್ ಬೆಳಕಿನ ಕಿರಣವಾಗಿ ಬದಲಾಗಿ, ಸಮುದ್ರದ ತಳದಲ್ಲಿರುವ ಕೂದಲಿನಷ್ಟು ತೆಳುವಾದ ಆಪ್ಟಿಕಲ್ ಫೈಬರ್ ಎಳೆಗಳ ಮೂಲಕ ಲಕ್ಷಾಂತರ ಕಿಲೋಮೀಟರ್‌ಗಟ್ಟಲೆ ಪ್ರಯಾಣಿಸುತ್ತದೆ. ಸಮುದ್ರದ ಅತಿ ಹೆಚ್ಚು ಒತ್ತಡ ಮತ್ತು ಉಪ್ಪುನೀರಿನಿಂದ ರಕ್ಷಿಸಲು ಇವುಗಳಿಗೆ ಸ್ಟೀಲ್ ಮತ್ತು ಪ್ಲಾಸ್ಟಿಕ್‌ನ ಏಳು ಪದರಗಳ ಕವಚವಿರುತ್ತದೆ. ಟಾಟಾ ಕಮ್ಯುನಿಕೇಶನ್ಸ್, ರಿಲಯನ್ಸ್ ಜಿಯೋ, ಭಾರತೀ ಏರ್ಟೆಲ್‌ದಂತಹ ಸಂಸ್ಥೆಗಳು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿ ಈ ಜಾಲವನ್ನು ನಿರ್ವಹಿಸುತ್ತವೆ. ಪ್ರತಿ 80 ಕಿ.ಮೀಟರ್‌ಗೆ ಇರುವ ರಿಪೀಟರ್‌ಗಳು ವೇಗವನ್ನು ಕಳೆದುಕೊಂಡು ಮಂಕಾಗುವ ಬೆಳಕನ್ನು ವರ್ಧಿಸಿ ಮತ್ತೆ ವೇಗ ನೀಡುತ್ತಾ ಗುರಿ ತಲುಪಿಸುತ್ತವೆ. ಇವೆಲ್ಲಾ ನಡೆಯುವುದು ಕ್ಷಣಾರ್ಧದಲ್ಲಿ. ಒಂದು ಸೆಕೆಂಡನ್ನು 100 ಭಾಗಗಳಾಗಿಸಿದರೆ ಅದರ ಒಂದು ಭಾಗದಷ್ಟು ಅತ್ಯಲ್ಪ ಸಮಯದಲ್ಲಿ.

ಇಷ್ಟೆಲ್ಲಾ ಆದಾಗ್ಯೂ, ಪ್ರಕೃತಿಯ ಅನಿಶ್ಚಿತತೆ ಅಥವಾ ಮನುಷ್ಯನ ಅಜಾಗರೂಕತೆ ಈ ವ್ಯವಸ್ಥೆಯನ್ನು ಕ್ಷಣಮಾತ್ರದಲ್ಲಿ ಅಸ್ತವ್ಯಸ್ತಗೊಳಿಸಬಲ್ಲದು. ಸಮುದ್ರದಾಳದ ಭೂಕಂಪದಿಂದಲೋ ಅಥವಾ ಹಡಗಿನ ಬೃಹತ್ ಲಂಗರುಗಳು ತಗುಲಿಯೋ ಈ ಕೇಬಲ್‌ಗಳು ಕತ್ತರಿಸಲ್ಪಟ್ಟರೆ, ಇಡೀ ಪ್ರಪಂಚದ ನಾಡಿಮಿಡಿತವೇ ಸ್ತಬ್ಧವಾಗಿಬಿಡುತ್ತದೆ. ಅಂತಹ ಸಂದರ್ಭದಲ್ಲಿ ಇದೇ ಉದ್ದೇಶಕ್ಕಾಗಿಯೇ ಇರುವ 'ಕೇಬಲ್ ಶಿಪ್'ಗಳು ಸಮುದ್ರದ ಮಧ್ಯಕ್ಕೆ ಹೋಗಿ, ಸೋನಾರ್ ಬಳಸಿ ತುಂಡಾದ ಜಾಗವನ್ನು ಹುಡುಕುತ್ತವೆ. ಬಳಿಕ ರೋಬೋಟ್‌ಗಳು ಸಮುದ್ರದ ತಳದಿಂದ ಆ ತುದಿಗಳನ್ನು ಮೇಲೆತ್ತಿ ತಂದು, ಹಡಗಿನ ಮೇಲಿರುವ ಇಂಜಿನಿಯರ್‌ಗಳು ಮೈಕ್ರೋಸ್ಕೋಪ್ ಅಡಿಯಲ್ಲಿ ಆ ಕೇಬಲ್‌ಗಳನ್ನು ಮತ್ತೆ ಜೋಡಿಸುತ್ತಾರೆ. ಈ ನಿರಂತರ ಹೋರಾಟವಿಲ್ಲದಿದ್ದರೆ, ನಾವು ಇಂದು ಅನುಭವಿಸುತ್ತಿರುವ ಡಿಜಿಟಲ್ ಲೋಕ ಕೇವಲ ಒಂದು ಕನಸು ಅಷ್ಟೇ.

ಸಮುದ್ರದ ಕಗ್ಗತ್ತಲಲ್ಲಿ ಮಲಗಿರುವ ಈ ಮಾಹಿತಿ ಹೆದ್ದಾರಿಗಳು ಮನುಷ್ಯನ ಬುದ್ಧಿವಂತಿಕೆಗೆ ಸಾಕ್ಷಿಯಾಗಿವೆ ನಿಜ. ಆದರೆ, ಅವೇ ನಮ್ಮ ಸೌಕರ್ಯಗಳಾಗಿ, ದಾಳಿಯ ನೆರಳಿನಲ್ಲಿಯೂ ಬಂದಿರುವುದೂ ಕೂಡ ಒಪ್ಪಲೇಬೇಕಾದ ಸತ್ಯ. ಕೇಬಲಗಳನ್ನು ಧ್ವಂಸ ಮಾಡುತ್ತೇವೆ ಎಂಬಂತಹ ಇರಾನ್‌ನ ಹೇಳಿಕೆಗಳು – ಬೆದರಿಕೆಗಳು ಇಷ್ಟೆಲ್ಲಾ ಒದ್ದಾಟ ಗುದ್ದಾಟಗಳ ಅರ್ಥವೇನು ಎಂಬ ಪ್ರಶ್ನೆಯನ್ನೇ ಹುಟ್ಟುಹಾಕುತ್ತವೆ. ಒಟ್ಟಿನಲ್ಲಿ ಏನನ್ನೋ ಸಾಧಿಸಬೇಕೆನ್ನುವ ದಾವಂತದಲ್ಲಿ ಬಿದ್ದು, ಖಂಡಾಂತರಗಳನ್ನು ಬೆಸೆದು ಮನುಷ್ಯನ ಏಳಿಗೆಯನ್ನು ಬಯಸಬೇಕಾಗಿದ್ದ ನಾವುಗಳು, ಈ ಅಗೋಚರ ತಂತಿಗಳ ಮೇಲೆ ನಮ್ಮ ಇಡೀ ಅಸ್ತಿತ್ವವನ್ನೇ ಅವಲಂಬಿತವಾಗಿಸಿಕೊಂಡು ವಿಕಾಸದೆಡೆಗೆ ಮುಖ ಮಾಡಿದ್ದೇವೆಯೋ ಅಥವಾ ಅರಿವಿಲ್ಲದ ವಿನಾಶದೆಡೆಗೋ ಎಂಬುದು ಇಂದಿಗೂ ಬಿಡಿಸಲಾಗದ ಒಗಟು.

ಯುಎಇ ಪ್ರತಿದಾಳಿ ನಡೆಸುತ್ತಿಲ್ಲ ಯಾಕೆ?



ಟೆಹ್ರಾನ್: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಮೇಲೆ ಇರಾನ್ ಶುಕ್ರವಾರವೂ ದಾಳಿ ನಡೆಸಿದೆ. ತನ್ನ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ಮತ್ತು ಸುಮಾರು 5 ಲಕ್ಷ ಇರಾನಿಯನ್ನರಿಗೆ ಆಶ್ರಯದಾತ ರಾಷ್ಟ್ರವಾದ ಯುಎಇ ಮೇಲೆ ಇರಾನ್ ನಿರಂತರ ದಾಳಿ ನಡೆಸುತ್ತಿರುವುದು ಅಚ್ಚರಿ ಮೂಡಿಸಿದೆ. ಆದರೆ ಯುಎಇ ಪ್ರತಿದಾಳಿ ನಡೆಸದೆ ಸಂಯಮ ಕಾಯ್ದುಕೊಂಡಿದೆ. ಇರಾನ್ ಮೇಲೆ ದಾಳಿ ನಡೆಸಲು ಯುಎಇ ಯಾಕೆ ಹಿಂಜರಿಯುತ್ತಿದೆ ಎಂಬ ಪ್ರಶ್ನೆ ಮೂಡಿಸಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ಶಕ್ತಿಶಾಲಿಯಾದರೆ ಪ್ರಾದೇಶಿಕ ಭದ್ರತೆಗೆ ಸಮಸ್ಯೆ ಎಂಬ ಕಾರಣದಿಂದ ಯುಎಇ, ಸೌದಿ ಅರೇಬಿಯಾ ಸೇರಿದಂತೆ ಹೆಚ್ಚಿನ ಗಲ್ಫ್ ರಾಷ್ಟ್ರಗಳು ಇರಾನ್ ಅನ್ನು ಉದ್ದೇಶಪೂರ್ವಕ ದೂರವಿಟ್ಟು, ಅಮೆರಿಕ ಜತೆ ವ್ಯಾಪಾರ ಸಂಬಂಧ ಬೆಳೆಸಿಕೊಂಡಿವೆ. ಸುನ್ನಿ ಮತ್ತು ಶಿಯಾ ಎರಡೂ ಇಸ್ಲಾಮಿಕ್ ಮೂಲಭೂತವಾದಿ ಸಿದ್ಧಾಂತಗಳನ್ನು ಯುಎಇ ಮತ್ತು ಸೌದಿ ಅರೇಬಿಯಾ ವಿರೋಧಿಸುತ್ತವೆ. ಇರಾನ್ ಜತೆ ವ್ಯಾಪಾರ ಸಂಬಂಧ ಉಳಿಸಿಕೊಂಡಿದ್ದರೂ ಸೈದ್ಧಾಂತಿಕವಾಗಿ ಬಹಳ ವ್ಯತ್ಯಾಸ ಅಭಿಪ್ರಾಯಗಳನ್ನು ಹೊಂದಿವೆ.



ಆದರೆ ಇರಾನ್ ಸೇನಾ ಸಾಮರ್ಥ್ಯ ಗೊತ್ತಿರುವ ಗಲ್ಫ್ ರಾಷ್ಟ್ರಗಳು ಭಯದಿಂದ ಪ್ರತಿದಾಳಿ ನಡೆಸುತ್ತಿಲ್ಲ. ವಿಶೇಷವಾಗಿ ಯುಎಇ ಮತ್ತು ಸೌದಿ ಅರೇಬಿಯಾ ಶಾಂತಿ, ಮಾತುಕತೆ, ವ್ಯಾಪಾರ, ಪ್ರಾದೇಶಿಕ ಸ್ಥಿರತೆ ಮತ್ತು ಅಭಿವೃದ್ಧಿ ದೃಷ್ಟಿಕೋನದಲ್ಲಿ ಚಿಂತನೆ ನಡೆಸುತ್ತವೆ. ಇರಾನ್ ಮೇಲೆ ಪ್ರತಿದಾಳಿ ನಡೆಸುವ ಮೂಲಕ ಮಧ್ಯಪ್ರಾಚ್ಯ ಯುದ್ಧದಲ್ಲಿ ಭಾಗವಹಿಸಲು ಯುಎಇ ಬಯಸುತ್ತಿಲ್ಲ. ಇರಾನ್ ಮೇಲೆ ಪ್ರತಿದಾಳಿ ನಡೆಸಿದ ಹಲವು ವದಂತಿಗಳನ್ನು ಯುಎಇ ಅಲ್ಲಗಳೆದಿದೆ.

ಪಾಲುದಾರ ರಾಷ್ಟ್ರವೇ ಪ್ರಮುಖ ಟಾರ್ಗೆಟ್!: ಇತ್ತೀಚೆಗೆ ಇರಾನ್ 457 ಖಂಡಾಂತರ ಕ್ಷಿಪಣಿಗಳು, 19 ಕ್ರೂಸ್ ಕ್ಷಿಪಣಿಗಳು ಮತ್ತು 2,038 ಡ್ರೋನ್‌ಗಳಿಂದ ನಮ್ಮ ಮೇಲೆ ದಾಳಿ ನಡೆಸಿದೆಯೆಂದು ಯುಎಇ ರಕ್ಷಣಾ ಸಚಿವಾಲಯ ದಾಖಲೆ ಬಿಡುಗಡೆಗೊಳಿಸಿದೆ. ಗಲ್ಫ್ ರಾಷ್ಟ್ರಗಳು ಮತ್ತು ಇಸ್ರೇಲ್ ಮೇಲೆ ಇರಾನ್ ದಾಳಿ ನಡೆಸುತ್ತಿದ್ದು, ಇದರಲ್ಲಿ ಅತ್ಯಧಿಕ ದಾಳಿ ತನ್ನ ವ್ಯಾಪಾರ ಪಾಲುದಾರ ರಾಷ್ಟ್ರ ಯುಎಇ ಮೇಲೆ ನಡೆಸಿದೆ.

ಫೆ.28ರ ಬಳಿಕ ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ನಡೆಸಿದ ಅತಿ ದೊಡ್ಡ ದಾಳಿ ಇದಾಗಿದೆ. ದುಬೈ ವಿಮಾನ ನಿಲ್ದಾಣ, ಬುರ್ಜ್ ಅಲ್-ಅರಬ್ ಹೋಟೆಲ್, ಪಾಮ್ ಜುಮೈರಾ ಮತ್ತು ಜಬೇಲಿ ಅಲಿ ಬಂದರನ್ನು ಗುರಿಯಾಗಿಸಿ ಇರಾನ್ ಮೊದಲ ದಿನವೇ ದಾಳಿ ನಡೆಸಿತ್ತು. ಮಧ್ಯಪ್ರಾಚ್ಯ ಯುದ್ಧವು ಕೇವಲ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಮಧ್ಯೆ ನಡೆಯುತ್ತಿಲ್ಲ.

ನಾವಿಕರನ್ನು ಕಳೆದುಕೊಂಡ ಏಕೈಕ ರಾಷ್ಟ್ರ ಭಾರತ: ಮಿಸ್ರಿ

ಮಧ್ಯಪ್ರಾಚ್ಯ ಯುದ್ಧದ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ನಾವಿಕರನ್ನು ಕಳೆದುಕೊಂಡಿರುವ ಏಕೈಕ ರಾಷ್ಟ್ರ ಭಾರತವೆಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹೇಳಿದ್ದಾರೆ. ಹಾರ್ಮುಜ್ ಸೇವೆ ಪುನರಾರಂಭಕ್ಕಾಗಿ ಬ್ರಿಟನ್ ನೇತೃತ್ವದಲ್ಲಿ ನಡೆದ 60 ರಾಷ್ಟ್ರಗಳ ಸಭೆಯಲ್ಲಿ ಮಿಸ್ರಿ ಹೇಳಿಕೆ ನೀಡಿದ್ದಾರೆ. ವರ್ಚುವಲ್ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ಮಿಸ್ರಿ, ಮಧ್ಯಪ್ರಾಚ್ಯ ಯುದ್ಧದಲ್ಲಿ ಪಾಲ್ಗೊಂಡ ರಾಷ್ಟ್ರಗಳೆಲ್ಲವೂ ರಾಜತಾಂತ್ರಿಕ ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಈ ಬಿಕ್ಕಟ್ಟಿನಿಂದ ಹೊರಬರಲು ಕದನವಿರಾಮವೊಂದೇ ಪರಿಹಾರ ಎಂದು ಮಿಸ್ರಿ ಸಲಹೆ ನೀಡಿದ್ದಾರೆ. ಮಧ್ಯಪ್ರಾಚ್ಯ ಯುದ್ಧ ಭಾರತದ ಇಂಧನ ಭದ್ರತೆಯ ಮೇಲೆ ಹೇಗೆ ಪರಿಣಾಮವನ್ನು ಬೀರಿದೆಯೆಂಬ ವಿಚಾರವನ್ನು ಮಿಸ್ರಿ ಸಭೆಯಲ್ಲಿ ಮಂಡಿಸಿದ್ದಾರೆ. ಗಲ್ಫ್‌ನಲ್ಲಿ ವ್ಯಾಪಾರ ಹಡಗುಗಳ ಮೇಲಿನ ದಾಳಿಯಲ್ಲಿ ನಾವಿಕರನ್ನು ಕಳೆದುಕೊಂಡಿರುವ ಏಕೈಕ ರಾಷ್ಟ್ರವು ಭಾರತವೆಂಬ ವಾದವನ್ನು ಮಿಸ್ರಿ ಮುಂದಿಟ್ಟಿದ್ದಾರೆಂದು ವಿದೇಶಾಂಗ ಸಚಿವಾಲಯ (ಎಂಇಎ) ಶುಕ್ರವಾರ ತಿಳಿಸಿದೆ.

ಹೆಚ್ಚಿನ ತೈಲ, ಎಲ್‌ಎನ್‌ಜಿ ಪೂರೈಕೆಗೆ ರಷ್ಯಾ ಭರವಸೆ

ಪಶ್ಚಿಮ ಏಷ್ಯಾದಲ್ಲಿ ಜಾಗತಿಕ ಕಚ್ಚಾ ತೈಲ ಪೂರೈಕೆಯನ್ನು ಅಡ್ಡಿಪಡಿಸುವ ಸಂಘರ್ಷವು ಉಲ್ಬಣಗೊಳ್ಳುತ್ತಿದ್ದಂತೆ, ರಷ್ಯಾ ಭಾರತಕ್ಕೆ ತೈಲ ಮತ್ತು' ಎಲ್‌ಎನ್‌ಜಿ ಪೂರೈಕೆ ಹೆಚ್ಚಿಸಲು ಮುಂದಾಗಿದೆ. ದಿಲ್ಲಿಯಲ್ಲಿ ನಡೆದ ಸಭೆ ಕುರಿತು ರಷ್ಯಾದ ಅಧಿಕೃತ ಹೇಳಿಕೆಯು, ಭಾರತೀಯ ಮಾರುಕಟ್ಟೆಗೆ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಸರಬರಾಜನ್ನು ಸ್ಥಿರವಾಗಿ ಹೆಚ್ಚಿಸುವ ಸಾಮರ್ಥ್ಯವನ್ನು ರಷ್ಯಾದ ಕಂಪನಿಗಳು ಹೊಂದಿವೆ ಎಂದು ರಷ್ಯಾದ ಡೆನಿಸ್ ಮಾಂಟುರೊವ್ ದೃಢಪಡಿಸಿದೆ.

ಅಮೆರಿಕದ ಯುದ್ಧವಿಮಾನ ಪತನ

ಟೆಹ್ರಾನ್/ವಾಷಿಂಗ್ಟನ್: ಇರಾನ್ ವಾಯು ರಕ್ಷಣಾ ದಳದ ದಾಳಿಯಿಂದ ಅಮೆರಿಕದ ಎಫ್-15 ಸ್ಟ್ರೈಕ್ ಈಗಲ್ ಯುದ್ಧ ವಿಮಾನ ಪತನವಾಗಿದ್ದು, ಇಬ್ಬರು ಪೈಲಟ್‌ಗಳು ಇದರಿಂದ ಆಚೆ ಜಿಗಿದಿದ್ದಾರೆ. ಅಮೆರಿಕವೂ ಈ ಯುದ್ಧ ವಿಮಾನದ ಮೇಲಿನ ದಾಳಿಯನ್ನು ದೃಢೀಕರಿಸಿದ್ದು, ಒಬ್ಬ ಪೈಲಟ್‌ನನ್ನು ರಕ್ಷಿಸಿರುವುದಾಗಿ ಹೇಳಿದೆ. ಹಾಗೆಯೇ, ಮತ್ತೊಬ್ಬನಿಗಾಗಿ ಶೋಧ ನಡೆಯುತ್ತಿದೆ ಎಂದು ಹೇಳಿಕೊಂಡಿದೆ. ಇದೇ ವೇಳೆ, ಇರಾನ್ ಅಧಿಕಾರಿಗಳು ಸಹ ತಮ್ಮ ಪ್ರದೇಶದಲ್ಲಿ ಪತನಗೊಂಡ ಸಿಬ್ಬಂದಿಯನ್ನು ಹುಡುಕಲು ನಾಗರಿಕರಿಗೆ ಕರೆ ನೀಡಿದ್ದು, ಈ ಘಟನೆಗೆ ಇನ್ನಷ್ಟು ರಾಜಕೀಯ ಹಾಗೂ ಸೈನಿಕ ಮಹತ್ವ ಸಿಕ್ಕಿದೆ. ಇದು ಸುಮಾರು ಐದು ವಾರಗಳಿಂದ ಮುಂದುವರಿಯುತ್ತಿರುವ ಅಮೆರಿಕ-ಇರಾನ್ ಸಂಘರ್ಷದಲ್ಲಿ ಮೊದಲ ಬಾರಿಗೆ ಅಮೆರಿಕದ ಯುದ್ಧವಿಮಾನವನ್ನು ನೇರವಾಗಿ ಹೊಡೆದು ಹಾಕಲಾಗಿದೆ.

ವಿಮಾನ ಪತನದ ನಂತರ ಅಮೆರಿಕ ಸೇನೆ ತುರ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದು, ಹೆಲಿಕಾಪ್ಟರ್‌ಗಳು ಮತ್ತು ವಿಶೇಷ ವಿಮಾನಗಳ ಮೂಲಕ ಹುಡುಕಾಟ ನಡೆಯುತ್ತಿದೆ ಎಂದು ವರದಿಯಾಗಿದೆ. ಈ ಘಟನೆಯಿಂದ ಈಗಾಗಲೇ ಉದ್ವಿಗ್ನಗೊಂಡಿರುವ ಮಧ್ಯಪೂರ್ವ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದ್ದು, ಎರಡೂ ದೇಶಗಳ ನಡುವಿನ ಘರ್ಷಣೆ ಹೆಚ್ಚುವ ಸಾಧ್ಯತೆ ಇದೆ. ಈಗಾಗಲೇ ಈ ಯುದ್ಧದಲ್ಲಿ ಅಮೆರಿಕದ ಹಲವು ಸೈನಿಕರು ಮೃತಪಟ್ಟಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಇರಾನ್ ಇನ್ನೂ ತನ್ನ ಕ್ಷಿಪಣಿ ಮತ್ತು ಡ್ರೋನ್ ಸಾಮರ್ಥ್ಯವನ್ನು ಉಳಿಸಿಕೊಂಡಿದೆ ಎಂದು ಅಮೆರಿಕ ಗುಪ್ತಚರ ಮಾಹಿತಿ ಸೂಚಿಸಿದೆ.

ಇರಾನ್ ನೆಲ ದಾಳಿಕೋರರ ಸ್ಮಶಾನ: ಕಮಾಂಡರ್ ಅಲಿ

ಇರಾನ್ ಅನ್ನು ಮತ್ತೆ ಶಿಲಾಯುಗಕ್ಕೆ ಕಳುಹಿಸುತ್ತೇವೆಂಬ ಅಮೆರಿಕದ ಬೆದರಿಕೆಗೆ ಇರಾನ್ ಸೇನಾ ಕಮಾಂಡರ್ ಅಲಿ ಜಹನ್‌ಶಾಹಿ, ಇರಾನ್ ನೆಲ ದಾಳಿಕೋರರ ಪಾಲಿಗೆ ಸ್ಮಶಾನ ಎಂದು ತಿರುಗೇಟು ನೀಡಿದ್ದಾರೆ. ಅಮೆರಿಕ ಸೈನ್ಯವನ್ನು ಶಿಲಾಯುಗ ಅಲ್ಲ, ಅದಕ್ಕಿಂತಲೂ ಹಿಂದಿನ ಕಾಲಕ್ಕೆ ಕಳುಹಿಸುತ್ತೇವೆ. ಇರಾನ್‌ನ ವಿಶೇಷ ಪಡೆಗಳು ಎಲ್ಲದಕ್ಕೂ ಸಿದ್ಧವಾಗಿವೆ ಎಂದು ಕಮಾಂಡರ್ ಜಹನ್‌ಶಾಹಿ ಹೇಳಿದ್ದಾರೆ.

ಇರಾನ್-ಯುಎಇ ನಡುವಿನ ವಿವಾದ

ಇರಾನ್ ಮತ್ತು ಯುಎಇ ನಡುವೆ ಅಬು ಮೂಸ, ಗ್ರೇಟರ್ ಟುನಬ್ ಮತ್ತು ಲೆಸ್ಸರ್ ಟುನಬ್ ಎಂಬ ಮೂರು ಸಣ್ಣ ದ್ವೀಪಗಳಿಗಾಗಿ ಭೌಗೋಳಿಕ ಭಿನ್ನಾಭಿಪ್ರಾಯಗಳಿವೆ. ಅಂದಾಜು 2000 ಜನಸಂಖ್ಯೆ ಇರುವ ಅಬು ಮೂಸ, ಮೂರು ದ್ವೀಪಗಳಲ್ಲಿ ದೊಡ್ಡ ದ್ವೀಪವಾಗಿದೆ. ಭೌಗೋಳಿಕವಾಗಿ ಮೂರೂ ದ್ವೀಪಗಳು ಹಾರ್ಮುಜ್ ಜಲಸಂಧಿಯ ದ್ವಾರದಂತೆ ಕುಳಿತುಕೊಂಡಿವೆ. ಈ ಮೂರು ದ್ವೀಪಗಳನ್ನು 1908ರಲ್ಲಿ ಬ್ರಿಟಿಷರು ವಶಪಡಿಸಿದ್ದರು. ಆದರೆ 1971ರಲ್ಲಿ ಯುಎಇ ಬ್ರಿಟಿಷರಿಂದ ಸ್ವಾತಂತ್ರ ಪಡೆದಾಗ ಬ್ರಿಟಿಷರು ದ್ವೀಪಗಳನ್ನು ಬಿಟ್ಟುಹೋದರು. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಶಾಹ್ ರೇಜಾ ಪಹ್ಲವಿ ನೇತೃತ್ವದ ಇರಾನ್ ದ್ವೀಪಗಳನ್ನು ವಶಪಡಿಸಿತು. ಹಳೆಯ ನಕ್ಷೆ ಆಧಾರದಲ್ಲಿ ರೇಜಾ ಪಹ್ಲವಿ ವಶಪಡಿಸಿದ್ದನ್ನು ಸಮರ್ಥಿಸಿದ್ದು, ಯುಎಇ ತಾನು ಅಸಲಿ ಒಡೆಯನೆಂದು ಹೇಳುತ್ತದೆ.

- ಯುಎಇ ಮೇಲೆಯೇ ಅತ್ಯಧಿಕ ದಾಳಿ ನಡೆಸಿರುವ ಇರಾನ್
- ಅಂದಾಜು 5 ಲಕ್ಷ ಇರಾನಿಯನ್ನರಿಗೆ ಯುಎಇ ಆಶ್ರಯದಾತ
- ಇರಾನ್ ಕ್ಷಿಪಣಿ, ಡ್ರೋನ್ ಸಾಮರ್ಥ್ಯ ಅರಿತಿರುವ ಯುಎಇ
- ಇತ್ತೀಚೆಗೆ 457 ಖಂಡಾಂತರ, 19 ಕ್ರೂಸ್ ಕ್ಷಿಪಣಿಗಳು ಮತ್ತು 2,038 ಡ್ರೋನ್‌ಗಳಿಂದ ಯುಎಇ ಮೇಲೆ ಇರಾನ್ ದಾಳಿ

ಇರಾನ್ ದಾಳಿಗೆ ಕಾರಣವೇನು?

ಇಸ್ರೇಲ್ ಜತೆ ಯುಎಇ ರಾಜತಾಂತ್ರಿಕ ಸಂಬಂಧ ಹೊಂದಿದ್ದು, ಅಮೆರಿಕದ ಜತೆ ಭದ್ರತಾ ಒಪ್ಪಂದಗಳನ್ನು ಮಾಡಿಕೊಂಡಿದೆ. ಜಾಗತಿಕ ಮಟ್ಟದಲ್ಲಿ ಹಣಕಾಸಿನ ಕೇಂದ್ರ ಎನಿಸಿಕೊಂಡಿರುವ ಯುಎಇ ಮೇಲೆ ದಾಳಿ ನಡೆಸುವುದರಿಂದ ಜಾಗತಿಕ ವ್ಯಾಪಾರ ವ್ಯತ್ಯಯ ಉಂಟಾಗುತ್ತದೆ. ಅಲ್ಲದೆ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಯುಎಇ ಸ್ನೇಹ ಕಡಿಮೆಗೊಳಿಸಲು ಒತ್ತಡ ಹೇರುವ ತಂತ್ರವೂ ಆಗಿದೆ. ಮಧ್ಯಪ್ರಾಚ್ಯ ಯುದ್ಧವನ್ನು ನಿಲ್ಲಿಸಲು ಗಲ್ಫ್ ರಾಷ್ಟ್ರಗಳೆಲ್ಲವೂ ಅಮೆರಿಕ ಮತ್ತು ಇಸ್ರೇಲ್‌ಗೆ ಒತ್ತಡ ಹಾಕಬೇಕೆಂಬ ಪ್ರಯತ್ನವೂ ಇದಾಗಿದೆ.

ಯುಎಇ ವ್ಯಾಪಾರ ಮತ್ತು ಹಾರ್ಮುಜ್

ಯುಎಇ ತೈಲ ವ್ಯಾಪಾರವು ಸಂಪೂರ್ಣವಾಗಿ ಇರಾನ್ ನಿಯಂತ್ರಣದ ಹಾರ್ಮುಜ್ ಜಲಸಂಧಿಯ ಮೇಲೆ ಅವಲಂಬಿಸಿದೆ. ಯುಎಇಯ ಪ್ರಾಥಮಿಕ ರಫ್ತು ಮಾರ್ಗವು ಹಾರ್ಮುಜ್ ಅನ್ನು ಅವಲಂಬಿಸಿದ್ದು, ಏಷ್ಯಾ ಮಾರುಕಟ್ಟೆಗೆ ಶೇ.75ರಷ್ಟು ತೈಲ ರಫ್ತು ಇದೇ ಜಲಸಂಧಿಯ ಮೂಲಕ ನಡೆಸುತ್ತದೆ.

ಯುಎಸ್‌ಯುಎಚ್-60 ಬ್ಲ್ಯಾಕ್ ಹಾಕ್ ಕಾಪ್ಟರ್ ಪತನ

ಇರಾನಿನ ವಾಯು ರಕ್ಷಣಾ ವ್ಯವಸ್ಥೆಗಳು ಇರಾಕ್‌ನ ವಾಯುಪ್ರದೇಶದಲ್ಲಿ ಯುಎಸ್‌ಯುಎಚ್ -60 ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಅನ್ನು ಹೊಡೆದುರುಳಿಸಿವೆ ಎಂದು ವರದಿಯಾಗಿದೆ.ಬ್ಲ್ಯಾಕ್ ಹಾಕ್ ಅನ್ನು ಸಾಮಾನ್ಯವಾಗಿ ವಿಶೇಷ ಕಾರ್ಯಾಚರಣೆಗಳು, ಪಡೆಗಳ ಸಾಗಣೆ ಮತ್ತು ಪ್ರತಿಕೂಲ ಪರಿಸರದಲ್ಲಿ ಶೋಧನೆ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.

ಟೆಲ್ ಅವೀವ್, ಹೈಫಾ ಮೇಲೆ ಇರಾನ್ ಕ್ಷಿಪಣಿ ದಾಳಿ

ಇಸ್ರೇಲ್‌ನ ಟೆಲ್ ಅವೀವ್ ಮತ್ತು ಹೈಫಾ ನಗರಗಳನ್ನು ಗುರಿಯಾಗಿಸಿ ಇರಾನ್ ಸೇನೆ, ಆಪರೇಷನ್ ಟ್ರೂ ಪ್ರಾಮಿಸ್-4ರ 91ನೇ ದಾಳಿಯನ್ನು ನಡೆಸಿತು. ಟೆಲ್ ಅವೀವ್ ಮತ್ತು ಹೈಫಾ ನಗರಗಳ ಹೃದಯ ಭಾಗದ ಮೇಲೆ ದಾಳಿ ನಡೆಸಿರುವುದಾಗಿ ಇರಾನ್ ಪತ್ರಿಕೆಗಳು ವರದಿ ಮಾಡಿವೆ. ದಾಳಿ ತೀವ್ರತೆ ಪರಿಗಣಿಸಿ 50 ಲಕ್ಷ ಇಸ್ರೇಲ್ ನಾಗರಿಕರನ್ನು ಬಂಕರ್‌ಗೆ ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ.

ಕುವೈತ್ ತೈಲಾಗಾರಕ್ಕೆ ಇರಾನ್ ಡ್ರೋನ್ ದಾಳಿ

ಕುವೈತ್‌ನ ಪ್ರಮುಖ ತೈಲ ಸಂಸ್ಕರಣಾಗಾರಗಳ ಮೇಲೆ ಇರಾನ್ ಶುಕ್ರವಾರ ಡ್ರೋನ್ ದಾಳಿ ನಡೆಸಿದೆ. ಕುವೈತ್‌ನ ಪ್ರಮುಖ ತೈಲ ಸಂಸ್ಕರಣಾಗಾರಗಳಲ್ಲಿ ಒಂದಾದ ಮಿನಾ ಅಲ್-ಅಹ್ಮದಿ ಮೇಲೆ ಡ್ರೋನ್ ದಾಳಿ ನಡೆದಿದೆ. ಸರ್ಕಾರಿ ಸ್ವಾಮ್ಯದ ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ ಮೇಲಿನ ದಾಳಿಯಿಂದ ಯಾರಿಗೂ ಗಾಯವಾಗಿಲ್ಲ ಎಂದು ವರದಿಯಾಗಿದೆ.

ಕಿರುಸುದ್ದಿ

ಪಾಕ್‌ನಲ್ಲಿ ಇಂಧನ ದರ ಮತ್ತೆ ಭಾರೀ ಏರಿಕೆ

ಇಸ್ಲಾಮಾಬಾದ್: ಜಾಗತಿಕವಾಗಿ ಇಂಧನ ಪೂರೈಕೆ ಮೇಲೆ ಗಂಭೀರ ಪರಿಣಾಮಗಳು ಬೀರುತ್ತಿರುವ ಬೆನ್ನಲ್ಲೇ ಪಾಕಿಸ್ತಾನ ಪೆಟ್ರೋಲ್,ಡೀಸೆಲ್ ಮತ್ತು ಸೀಮೆಎಣ್ಣೆ ದರಗಳನ್ನು ಭಾರೀ ಏರಿಕೆ ಮಾಡಿದೆ. ಈ ಹಿಂದೆ ಪಾಕಿಸ್ತಾನದಲ್ಲಿ ಇಂಧನ ದರ ದುಬಾರಿ ಮಾಡಲಾಗಿತ್ತು. ಮೂಲಗಳ ಪ್ರಕಾರ ಪ್ರತೀ ಲೀಟರ್ ಪೆಟ್ರೋಲ್ ದರದಲ್ಲಿ ಶೇ.42.7 ರಷ್ಟು ಅಂದರೆ 137.24 ರೂ. ಏರಿಕೆಯಾಗಿ 458.40 ರೂ.ಗೆ ಹೆಚ್ಚಳವಾಗಿದೆ. ಅಂತೆಯೇ ಡೀಸೆಲ್ ದರದಲ್ಲಿ ಕೂಡ ಶೇ.54.9ರಷ್ಟು ಅಂದರೆ 184.49 ರೂ. ಏರಿಕೆಯಾಗಿ 520.35 ಹೆಚ್ಚಳವಾಗಿದೆ. ನವೀಕೃತ ದರವೂ ಶುಕ್ರವಾರದಿಂದಲೇ ಜಾರಿಯಾಗಿದೆ.

ಪೇಟೆಂಟ್ ಔಷಧಗಳ ಮೇಲೆ ಶೇ.100 ಸುಂಕ

ವಾಷಿಂಗ್ಟನ್: ತಮ್ಮ ಸರ್ಕಾರದೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳದ ಕಂಪನಿಗಳಿಂದ ಕೆಲವು ವಿದೇಶಿ ನಿರ್ಮಿತ ಪೇಟೆಂಟ್ ಪಡೆದ ಔಷಧೀಯ ಉತ್ಪನ್ನಗಳ ಮೇಲೆ ಅಮೆರಿಕ ಡೊನಾಲ್ಡ್ ಟ್ರಂಪ್ ಸರ್ಕಾರ ಶೇ.100ರಷ್ಟು ಸುಂಕ ವಿಧಿಸಿದೆ. ಯಾವ ಕಂಪನಿಗಳು ಮುಂದಿನ 4 ವರ್ಷಗಳಲ್ಲಿ ಅಮೆರಿಕದಲ್ಲಿ ಕಾರ್ಖಾನೆ ತೆರೆಯಲು ಒಪ್ಪುತ್ತವೋ ಅವುಗಳ ಮೇಲಿನ ಸುಂಕವನ್ನು ಶೇ.20ಕ್ಕೆ ಇಳಿಸಲು ಈ ಕಾರ್ಯಾದೇಶದಲ್ಲಿ ಅವಕಾಶ ನೀಡಲಾಗಿದೆ. ಇದು ಔಷಧ ಕಂಪನಿಗಳು ತಮ್ಮ ಉತ್ಪಾದನಾ ಸೌಲಭ್ಯಗಳನ್ನು ಅಮೆರಿಕಕ್ಕೆ ಸ್ಥಳಾಂತರಿಸಲು ಮತ್ತು ಅಮೆರಿಕದ ಗ್ರಾಹಕರಿಗೆ ಕಡಿಮೆ ಬೆಲೆಗಳಿಗೆ ಒದಗಿಸಲು ಒತ್ತಾಯಿಸುವ ಗುರಿ ಹೊಂದಿದೆ.



ಪಾಕ್ ಆತ್ಮಾಹುತಿ ಬಾಂಬ್ ಸ್ಫೋಟ: ಐವರ ಸಾವು

ಇಸ್ಲಾಮಾಬಾದ್: ವಾಯುವ್ಯ ಪಾಕಿಸ್ತಾನದ ಪೊಲೀಸ್ ಠಾಣೆಯನ್ನು ಗುರಿಯಾಗಿಸಿಕೊಂಡು ಗುರುವಾರ ತಡರಾತ್ರಿ ನಡೆದ ಆತ್ಮಹತ್ಯಾ ಕಾರು ಬಾಂಬ್ ಸ್ಫೋಟದಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿದಂತೆ ಐವರು ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ. ಖೈಬರ್ ಪಖ್ತುನ್ಖ್ವಾದ ಬನ್ನು ಜಿಲ್ಲೆ ಡೊಮೆಲ್ ತಹಸಿಲ್‌ನಲ್ಲಿರುವ ಪೊಲೀಸ್ ಠಾಣೆ ಹಿಂಭಾಗಕ್ಕೆ ಆತ್ಮಾಹುತಿ ಬಾಂಬರ್ ತನ್ನ ಸ್ಫೋಟಕ ತುಂಬಿದ ವಾಹನವನ್ನು ಡಿಕ್ಕಿ ಹೊಡೆದಿದ್ದಾನೆ.ಇದು ಪ್ರಬಲ ಸ್ಫೋಟಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೇಷ್ಠ ಪುದುಚೇರಿಗಾಗಿ ಮತ್ತೆ ಅಧಿಕಾರ: ಮೋದಿ

ಪುದುಚ್ಚೇರಿ: ಶ್ರೇಷ್ಠ ಪುದುಚೇರಿ ನಿರ್ಮಾಣಕ್ಕಾಗಿ ಜನತೆ ಎನ್‌ಡಿಎಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ನಿರ್ಧರಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ. ಪುದುಚ್ಚೇರಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಬೃಹತ್ ರೋಡ್‌ಶೋದಲ್ಲಿ ಮೋದಿ ಮಾತನಾಡಿದರು. ಏ.9ರಂದು ಪುದುಚ್ಚೇರಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಭಾರತೀಯ ಜನತಾ ಪಕ್ಷ, ಎಐಎನ್‌ಆರ್ ಕಾಂಗ್ರೆಸ್ ಮತ್ತು ಎಐಎಡಿಎಂಕೆ ಮತ್ತಿತರ ಪಕ್ಷಗಳ ಎನ್‌ಡಿಎ ಮೈತ್ರಿಕೂಟವನ್ನು ಪುನರಾಯ್ಕೆ ಮಾಡುವಂತೆ ಪ್ರಧಾನಿ ಮೋದಿ ಪುದುಚ್ಚೇರಿ ಜನತೆಗೆ ಮನವಿ ಮಾಡಿದರು. ದಿಲ್ಲಿಯಿಂದ ಚೆನ್ನೈ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಅಲ್ಲಿಂದ ಪುದುಚ್ಚೇರಿಗೆ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಿದ್ದರು. ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿಯನ್ನು ಮುಖ್ಯಮಂತ್ರಿ ಎನ್. ರಂಗಸ್ವಾಮಿ, ಗೃಹ ಸಚಿವ ಆರುಮುಗಂ ನಮಃಶಿವಾಯ ಮತ್ತು ಎನ್‌ಡಿಎ ನಾಯಕರು ಆತ್ಮೀಯವಾಗಿ ಸ್ವಾಗತಿಸಿದರು.ಪುದುಚ್ಚೇರಿಯಲ್ಲಿ ನಡೆದ ಬೃಹತ್ ರೋಡ್‌ಶೋನಲ್ಲಿ ರಾಷ್ಟ್ರಧ್ವಜ ಮತ್ತು ಬಿಜೆಪಿ ಸೇರಿ ಎನ್‌ಡಿಎ ಪಕ್ಷಗಳ ಧ್ವಜಗಳೊಂದಿಗೆ ಬೆಂಬಲಿಗರು ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ರಸ್ತೆಯ ಎರಡೂ ಬದಿಯಲ್ಲಿ ಸಾವಿರಾರು ಸ್ಥಳೀಯರು ಮತ್ತು ವಿದೇಶಿ ಪ್ರವಾಸಿಗರು ಪ್ರಧಾನಿ ಮೋದಿಯವರನ್ನು ಒಂದು ಕ್ಷಣ ನೋಡಿ ಕಣ್ತುಂಬಿಕೊಳ್ಳಲು ಭಾರೀ ಉತ್ಸಾಹದಲ್ಲಿ ಕಾದು ನಿಂತಿದ್ದರು.

ಅಸ್ಸಾಂ ಬುಡಕಟ್ಟು ಪ್ರಗತಿ ನಕ್ಷೆ ಸಿದ್ಧ: ಅಮಿತ್ ಶಾ

ದುದ್ನೋಯಿ: ಅಸ್ಸಾಂನಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಪ್ರಧಾನಿ ಮೋದಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಅಭಿವೃದ್ಧಿ ನಕ್ಷೆ ಸಿದ್ಧಪಡಿಸಿದ್ದಾರೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೇ ಈ ನಕ್ಷೆಯಲ್ಲಿರುವಂತೆ ಅಭಿವೃದ್ಧಿಯನ್ನು ಕಾರ್ಯರೂಪಕ್ಕೆ ತರಲಾಗುತ್ತದೆ ಎಂದು ಭರವಸೆ ನೀಡಿದ್ದಾರೆ. ಗೋಲ್ಪಾರಾ ಜಿಲ್ಲೆಯ ದುದ್ನೋಯಿಯಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಶಾ, ಕಾಂಗ್ರೆಸ್ ಎಂದಿಗೂ ಆದಿವಾಸಿ ಮಹಿಳೆಯನ್ನು ದೇಶದ ರಾಷ್ಟ್ರಪತಿಯನ್ನಾಗಿ ಮಾಡಲಿಲ್ಲ, ಆದರೆ ಮೋದಿ ಅದನ್ನು ಬದಲಾಯಿಸಿದರು. ದ್ರೌಪದಿ ಮುರ್ಮು ರಾಷ್ಟ್ರದ ಮೊದಲ ಪ್ರಜೆಯಾದರು. ಕೇಂದ್ರದಲ್ಲಿ ಪ್ರಧಾನಿ ಇದ್ದಾರೆ, ಮತ್ತು ರಾಜ್ಯದಲ್ಲಿ ಮುಖ್ಯಮಂತ್ರಿ ಬಿಸ್ವ ಶರ್ಮಾ ಇದ್ದಾರೆ. ಇಬ್ಬರೂ ರಾಜ್ಯದ ಬುಡಕಟ್ಟು ಜನಾಂಗದವರ ಅಭಿವೃದ್ಧಿಗೆ ಮಾರ್ಗಸೂಚಿ ಸಿದ್ಧಪಡಿಸಿದ್ದಾರೆ. ಜನರು ಸತತ ಮೂರನೇ ಬಾರಿಗೆ ಬಿಜೆಪಿಗೆ ಜನಾದೇಶ ನೀಡಿದರೆ ಅದನ್ನು ಮುಂದಕ್ಕೆ ಕೊಂಡೊಯ್ಯಲಾಗುತ್ತದೆ ಎಂದು ಶಾ ಹೇಳಿದರು.

ಕಾಂಗ್ರೆಸ್ ಎಂದಿಗೂ ಬುಡಕಟ್ಟು ಕಲ್ಯಾಣದ ಬಗ್ಗೆ ಮಾತನಾಡಿಲ್ಲ, ಸ್ವಾತಂತ್ರ್ಯದ ನಂತರದ ಸರ್ಕಾರಗಳು ಬುಡಕಟ್ಟು ಅಭಿವೃದ್ಧಿಗಾಗಿ ಕೇವಲ 25,000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದವು ಆದರೆ ಕಳೆದ 11 ವರ್ಷಗಳಲ್ಲಿ ಪ್ರಧಾನಿ ಅವರಿಗೆ 1.38 ಲಕ್ಷ ಕೋಟಿ ರೂ.ಗಳನ್ನು ನೀಡಿದ್ದಾರೆ ಎಂದು ಅವರು ಆರೋಪಿಸಿದರು. ಅಂತೆಯೇ ಏಕರೂಪ ನಾಗರಿಕ ಸಂಹಿತ(ಏನಾಸಂ) ಬುಡಕಟ್ಟು ವ್ಯಾಪ್ತಿಗೆ ಬರುತ್ತದೆ. ಆದರೆ ಏನಾಸಂ ಜಾರಿಯಾದರೇ ಬುಡಕಟ್ಟು ಜನರಿಗೆ ಸಮಸ್ಯೆಯಾಗುತ್ತಿದೆ ಎಂದು ಕಾಂಗ್ರೆಸ್ ಈ ಇಲ್ಲಸಲ್ಲದ ವದಂತಿಗಳನ್ನು ಹಬ್ಬುತ್ತಿದೆ ಎಂದಿದ್ದಾರೆ.

ಪರಂಪರೆ, ಅಭಿವೃದ್ಧಿ ಜತೆ ಜತೆಯಾಗಿರಲು ಶ್ರಮ

ಬರ್ಪೇಟ /ಬರ್ಭಲಾ : ಅಸ್ಸಾಂನ್ನು ಅಕ್ರಮ ನುಸುಳುಕೋರರ ಹಾವಳಿಯಿಂದ ಮುಕ್ತಗೊಳಿಸಿ, ರಾಜ್ಯದ ಜನಸಂಖ್ಯಾ ಸ್ವರೂಪದಲ್ಲಿ ಯಾವುದೇ ವ್ಯತ್ಯಯವಾಗದಂತೆ ತಡೆಯುವ ಸಾಮರ್ಥ್ಯವಿರುವುದು ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಾತ್ರ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಭರವಸೆ ನೀಡಿದ್ದಾರೆ.

ಬಿಜೆಪಿ ಸರಕಾರಗಳು ಕೊಟ್ಟ ಆಶ್ವಾಸನೆಯನ್ನು ತಪ್ಪದೆ ಪಾಲಿಸುತ್ತವೆ, ಸಾಕಾರಗೊಳಿಸುತ್ತವೆ. ಅಸ್ಸಾಂನಲ್ಲಿ ಪರಂಪರೆ ಮತ್ತು ಅಭಿವೃದ್ಧಿ ಜತೆಜತೆಯಾಗಿರಲು ಬಿಜೆಪಿ ಶ್ರಮಿಸಲಿದೆ ಎಂದು ಭರವಸೆಯಿತ್ತ ಸಿಎಂ ಯೋಗಿ, ಬಿಜೆಪಿ ಆಳ್ವಿಕೆಯ ಇತರ ರಾಜ್ಯಗಳಲ್ಲಿ ಇದು ಸಾಕಾರಗೊಂಡಿದೆ. ಕಾಂಗ್ರೆಸ್ ಪಕ್ಷ ಸುದೀರ್ಘಾವಧಿ ಆಡಳಿತದಲ್ಲಿದ್ದರೂ ರಾಜ್ಯದ ಜನರು ಮತ್ತು ರಾಜ್ಯವನ್ನು ಸಂರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. 60ವರ್ಷಗಳ ಕಾಲ ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷ ಕೇವಲ ಹಣದುಬ್ಬರ, ಹಿಂಸೆ, ದೊಂಬಿಗಳಿಗೆ ಪ್ರಚೋದನೆ ನೀಡಿತ್ತು. ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಗಳನ್ನು ಆತಂಕಕ್ಕೊಡ್ಡಿತ್ತು. ಅಕ್ರಮ ನುಸುಳುಕೋರರ ಬೆಂಬಲದಿಂದ ಅಧಿಕಾರ ಸೂತ್ರ ಹಿಡಿಯುವ ಸ್ವಾರ್ಥಕ್ಕೆ ಬಲಿಬಿದ್ದಿರುವ ಎಐಯುಡಿಎಫ್, ಇದಕ್ಕಾಗೇ ಅಕ್ರಮ ನುಸುಳುಕೋರರಿಗೆ ಉತ್ತೇಜನವೀಯುತ್ತಿದೆ. ರಾಜ್ಯದ ಪರಂಪರೆ ಮತ್ತು ಸಂಸ್ಕೃತಿಗಳನ್ನು ಬಲಿಕೊಡುವ ನಿಟ್ಟಿನಲ್ಲಿ ಕಾಂಗ್ರೆಸ್, ಎಐಯುಡಿಎಫ್‌ಗಳು ಜತೆಯಾಗಿ ಕಾರ್ಯತತ್ಪರವಾಗಿವೆ ಎಂದು ಆರೋಪಿಸಿದರು. ಪ್ರತಿಯೋರ್ವ ಅಕ್ರಮ ನುಸುಳುಕೋರರನ್ನು ಹುಡುಕಿ ಹೊರದಬ್ಬಲಾಗುವುದು .ಲವ್ ಜಿಹಾದ್, ಭೂ ಜಿಹಾದ್‌ಗೆ ಹಾಗೂ ಜನಸಂಖ್ಯಾ ಸ್ವರೂಪ ಬದಲಿಸಲು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅವಕಾಶಗೊಡುವುದಿಲ್ಲ ಎಂದರು.

ಚುನಾವಣೆ ನಂತರವೂ 500 ಪಡೆಗಳ ನಿಯೋಜನೆ

ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಆತಂಕದ ಮಧ್ಯೆ, ಮೇ 4ರಂದು ಮತ ಎಣಿಕೆ ಮುಗಿದ ನಂತರವೂ ರಾಜ್ಯದಲ್ಲಿ ಕೇಂದ್ರ ಪಡೆಗಳ 500 ಕಂಪನಿಗಳನ್ನು ನಿಯೋಜಿಸಲು ಚುನಾವಣಾ ಆಯೋಗ ಶುಕ್ರವಾರ ನಿರ್ಧರಿಸಿದೆ. ರಾಜ್ಯದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಕಳೆದ ವಿಧಾನಸಭಾ ಚುನಾವಣೆ ವೇಳೆ, ಮತದಾನದ ನಂತರದ ಹಿಂಸಾಚಾರ ನಡೆದಿತ್ತು. ಆದ್ದರಿಂದ ಈ ನಿರ್ಧಾರಕ್ಕೆ ಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಂದು ಕಂಪನಿಯಲ್ಲಿ 90ರಿಂದ 125 ಸಿಬ್ಬಂದಿ ಇರುತ್ತಾರೆ. ಹೆಚ್ಚುವರಿಯಾಗಿ, ವಿದ್ಯುನ್ಮಾನ ಮತದಾನ ಯಂತ್ರಗಳು (ಇವಿಎಂ), ಸ್ಟ್ರಾಂಗ್ ರೂಮ್ ಮತ್ತು ಎಣಿಕೆ ಕೇಂದ್ರಗಳ ಭದ್ರತಾ ವ್ಯವಸ್ಥೆಗಾಗಿ ರಾಜ್ಯದಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) 200 ಕಂಪನಿಗಳನ್ನು ಉಳಿಸಿಕೊಳ್ಳಲಾಗುವುದು. ರಾಜ್ಯದಲ್ಲಿ ಮತ ಎಣಿಕೆ ಪೂರ್ಣಗೊಳ್ಳುವವರೆಗೆ ಈ ಕಂಪನಿಗಳನ್ನು ನಿಯೋಜಿಸಲಾಗುವುದು ಎಂದು ಇಸಿ ತಿಳಿಸಿದೆ.

ಪರಮಾಣು ಶಕ್ತಿಯಾಧಾರಿತ ಹೊಸ ಖಂಡಾಂತರ ಕ್ಷಿಪಣಿ

ಐಎನ್‌ಎಸ್ ತಾರಾಗಿರಿ ನೌಕಾಪಡೆ ಸೇರ್ಪಡೆ

ವಿಶಾಖಪಟ್ಟಣಂ: ಎದುರಾಗುತ್ತಿರುವ ಸಾಗರ ಬೆದರಿಕೆಗಳ ಹೊರತೂ, ವಾಣಿಜ್ಯಿಕ ತೈಲ ಟ್ಯಾಂಕರ್‌ಗಳು -ನೌಕಾಯಾನಕ್ಕೆ ಸೂಕ್ತ ಮಾರ್ಗಗಳ ಗುರುತಿಸುವಲ್ಲಿ ಭಾರತೀಯ ನೌಕಾಪಡೆಯ ಪಾತ್ರ ಅತಿ ನಿರ್ಣಾಯಕವೆಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಕೊಂಡಾಡಿದ್ದಾರೆ. ಇಂಧನ ಪೂರೈಕೆ ಸಹಿತ ದೇಶದ ಶೇ.95 ವ್ಯಾಪಾರ ವಹಿವಾಟುಗಳು ನಿರ್ವಹಣೆಯಾಗೋದು ಸಮುದ್ರ ಮಾರ್ಗ ಮುಖೇನ ಎಂದವರು ಗಮನ ಸೆಳೆದಿದ್ದಾರೆ. ಪರ್ಶಿಯನ್ ಗಲ್ಫ್ ಇರಲಿ, ಮಲಕ್ಕಾ ಜಲಸಂಧಿಯೇ ಆಗಿರಲಿ, ಭಾರತೀಯ ನೌಕಾಪಡೆಯು ಹಿಂದು ಮಹಾಸಾಗರದಲ್ಲಿ ನಿರಂತರ ನೆಲೆಯಲ್ಲಿ ತನ್ನ ಉಪಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ದೇಶೀ ನಿರ್ಮಿತ ಅತ್ಯಾಧುನಿಕ ಯುದ್ಧನೌಕೆ ಐಎನ್‌ಎಸ್ ತಾರಾಗಿರಿಯ ಲೋಕಾರ್ಪಣೆ ಸಮಾರಂಭದಲ್ಲಿ ಸಚಿವರು ಪಾಲ್ಗೊಂಡರು.

ಭಾರತ ಜವಾಬ್ದಾರಿಯುತ ಸಾಗರ ಶಕ್ತಿಯಾಗಿದೆ: ಸಮುದ್ರದಲ್ಲಿ ಹಲವು ಸೂಕ್ಷ್ಮಸಂವೇದಿ ಕೇಂದ್ರಗಳಿವೆ. ಈ ನಿಟ್ಟಿನಲ್ಲಿ ನಮ್ಮ ನೌಕಾಪಡೆ ಅಂತಹ ಕೇಂದ್ರಗಳಲ್ಲಿ ನಿರಂತರವಾಗಿದ್ದುಕೊಂಡು ವಸ್ತುಗಳ ಸುಗಮ ಸರಬರಾಜಿಗೆ ನೆರವಾಗುತ್ತಿದೆ. ಉದ್ವಿಗ್ನ ಸನ್ನಿವೇಶಗಳಲ್ಲಿ ಭಾರತೀಯ ನೌಕಾಪಡೆ ನಮ್ಮ ವಾಣಿಜ್ಯಿಕ ಹಡಗುಗಳು ಮತ್ತು ತೈಲ ಟ್ಯಾಂಕರ್‌ಗಳಿಗೆ ಸೂಕ್ತ ಭದ್ರತೆ ಒದಗಿಸಿದೆ. ಭಾರತೀಯ ನೌಕಾಪಡೆಯು ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ಸಮರ್ಥವಷ್ಟೇ ಅಲ್ಲ, ಅಗತ್ಯ ಬಿದ್ದಲ್ಲಿ ಜಗತ್ತಿನಾದ್ಯಂತದ ತನ್ನ ಪ್ರಜೆಗಳನ್ನು ಮತ್ತು ವ್ಯಾಪಾರ ಮಾರ್ಗಗಳನ್ನು ಕಾಪಾಡಲು ದೌಡಾಯಿಸಬಲ್ಲುದು ಎಂದು ಸಚಿವ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.



6,670ಟನ್ ಸಾಮರ್ಥ್ಯದ ಸಮರ ನೌಕೆ: ಮುಂಬೈಯ ಮಜಗಾನ್ ಡಾಕ್ ಶಿಪ್ ಬಿಲ್ಡರ್ಸ್ ನಿಯಮಿತದಿಂದ ನಿರ್ಮಿತ 6,670ಟನ್ ಸಾಮರ್ಥ್ಯದ ಸಮರ ನೌಕೆ ತಾರಾಗಿರಿ , ಅತ್ಯಾಧುನಿಕ ವಿನ್ಯಾಸ ಮತ್ತು ಇಂಜಿನಿಯರಿಂಗ್ ತಜ್ಞತೆಯನ್ನು ಒಳಗೊಂಡಿದೆ. ಬ್ರಹ್ಮೋಸ್ ಕ್ಷಿಪಣಿ ಸಮಾನ ಸಾಮರ್ಥ್ಯವನ್ನು ಹೊಂದಿದೆ. ತೀರಾ ಕುಗ್ಗಿದ ರಾಡಾರ್ ಕ್ರಾಸ್ ಸೆಕ್ಷನ್‌ನೊಂದಿಗೆ ನಯವಾದ ರಚನೆಯುಕ್ತ ಸಮರ ನೌಕೆ, ಅತ್ಯಂತ ಸಂಕ್ಲಿಷ್ಟ ಸಾಗರ ಸನ್ನಿವೇಶಗಳ ಹೊರತೂ, ರಹಸ್ಯ ಕಾರ್ಯಾಚರಣೆ ನಡೆಸಲು ಮತ್ತು ವಿಸ್ತೃತವಾಗಿ ಅಸ್ತಿತ್ವ ಉಳಿಸಿಕೊಳ್ಳಲು ಶಕ್ತವಿದೆ ಎಂದು ನೌಕಾಮೂಲಗಳು ತಿಳಿಸಿವೆ.

ಧಾರ್ಮಿಕ ಆಚರಣೆ ತೀರ್ಮಾನ ನ್ಯಾಯಾಲಯಕ್ಕೆ ಪರಿಣತಿ ಇಲ್ಲ

ಹೊಸದಿಲ್ಲಿ: ಧಾರ್ಮಿಕ ಆಚರಣೆಗಳ ಮೂಲಭೂತ ಅಂಶಗಳನ್ನು ತೀರ್ಮಾನಿಸುವುದು ನ್ಯಾಯಾಲಯಗಳ ಕಾರ್ಯವಲ್ಲ; ಅವು ಭಕ್ತರ ನಂಬಿಕೆ ಮತ್ತು ಶ್ರದ್ಧೆಗೆ ಸೇರಿದ ವಿಚಾರಗಳು ಎಂದು ಅಖಿಲ ಭಾರತೀಯ ಸಂತ ಸಮಿತಿ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಶಬರಿಮಲೆ ಪ್ರಕರಣದ ಮರುಪರಿಶೀಲನಾ ವಿಚಾರಣೆಯಲ್ಲಿ ಹಸ್ತಕ್ಷೇಪಿಸಲು ಅನುಮತಿ ಕೋರಿ ಸಮಿತಿ ಅರ್ಜಿ ಸಲ್ಲಿಸಿದೆ.

ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಪೀಠವು ಏ.7ರಿಂದ ಶಬರಿಮಲೆ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶದ ಪ್ರಶ್ನೆ ಹಾಗೂ ವಿವಿಧ ಧರ್ಮಗಳ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ಅಂತಿಮ ವಿಚಾರಣೆ ಆರಂಭಿಸಲು ಸಜ್ಜಾಗಿದೆ. 2018ರ ಸೆಪ್ಟೆಂಬರ್‌ನಲ್ಲಿ ಐದು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 4:1 ಬಹುಮತದಿಂದ, 10ರಿಂದ 50 ವರ್ಷದ ಮಹಿಳೆಯರಿಗೆ ಶಬರಿಮಲೆ ಅಯ್ಯಪ್ಪ ದೇವಾಲಯ ಪ್ರವೇಶಕ್ಕೆ ವಿಧಿಸಿದ್ದ ನಿಷೇಧವನ್ನು ತೆರವುಗೊಳಿಸಿತ್ತು. ಶತಮಾನಗಳ ಹಿಂದಿನಿಂದಲೂ ನಡೆದುಬಂದಿದ್ದ ಈ ಆಚರಣೆ ಸಂವಿಧಾನ ವಿರೋಧಿಯಾಗಿದೆ ಎಂದು ನ್ಯಾಯಾಲಯ ಹೇಳಿತ್ತು. ಅಖಿಲ ಭಾರತೀಯ ಸಂತ ಸಮಿತಿ ತನ್ನ ಅರ್ಜಿಯನ್ನು ವಕೀಲ ಅತುಲೇಶ್ ಕುಮಾರ್ ಮೂಲಕ ಸಲ್ಲಿಸಿದ್ದು, ಶಬರಿಮಲೆ ಮರುಪರಿಶೀಲನೆ ವಿಚಾರಣೆಯಲ್ಲಿ ತನ್ನ ವಾದ ಮಂಡಿಸಲು ಅವಕಾಶ ನೀಡುವಂತೆ ಮನವಿ ಮಾಡಿದೆ. ಸುಮಾರು 127 ಸಂಪ್ರದಾಯಗಳನ್ನು ಪ್ರತಿನಿಧಿಸುವ ಈ ಸಮಿತಿಯಲ್ಲಿ 18.5 ಲಕ್ಷ ಪೂಜಾರಿಗಳು ಹಾಗೂ 12 ಲಕ್ಷ ಸಂತರು ಸೇರಿದ್ದಾರೆ ಎಂದು ಹೇಳಲಾಗಿದೆ.

ನಿರ್ಬಂಧಕ್ಕೆ ಸಮರ್ಥನೆ: ಶಬರಿಮಲೆ ದೇವಾಲಯದ ನಿರ್ಬಂಧಗಳನ್ನು ಸಮರ್ಥಿಸಿಕೊಂಡ ಸಮಿತಿ, ಕೆಲವು ದೇವಸ್ಥಾನಗಳು ವಿಶೇಷ ಶುದ್ಧತಾ ಆಚರಣೆಗಳನ್ನು ಅನುಸರಿಸುತ್ತವೆ ಎಂದು ತಿಳಿಸಿದೆ. ಈ ಅವಧಿಯಲ್ಲಿ ಮಹಿಳೆಯರಿಗೆ ಅಡ್ಡಿ ಉಂಟಾಗುತ್ತದೆ ಎಂಬ ಪರಂಪರೆಯ ನಂಬಿಕೆಯನ್ನು ಉಲ್ಲೇಖಿಸಿದೆ. ಇದು ಮಹಿಳೆಯರ ಮೇಲೆ ಸಂಪೂರ್ಣ ನಿಷೇಧವಲ್ಲ, ನಿರ್ದಿಷ್ಟ ವಯೋಮಿತಿಗೆ ಮಾತ್ರ ಅನ್ವಯಿಸುವ ಆಚರಣೆ. ಆದ್ದರಿಂದ ಇದು ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುವುದಿಲ್ಲ ಎಂದು ಸಮಿತಿ ವಾದಿಸಿದೆ.

ಕಿರುಸುದ್ದಿ

ಪಾಲಿಕೆ ಎಂಜಿನಿಯರ್ ಮೇಲೆ ಹಲ್ಲೆ: ಪ್ರತಿಭಟನೆ

ಬಳ್ಳಾರಿ: ಮಹಾನಗರ ಪಾಲಿಕೆ ಇಂಜಿನಿಯರ್ ವೀರೇಶ್ ಮೇಲೆ ಪಾಲಿಕೆ ಕಾಂಗ್ರೆಸ್ ಸದಸ್ಯ ಕುಬೇರ ಹಾಗೂ ಬೆಂಬಲಿಗರು ಹಲ್ಲೆ ನಡೆಸಿದ ಕ್ರಮ ಖಂಡಿಸಿ ನಗರ ಮಹಾನಗರ ಪಾಲಿಕೆ ಕಚೇರಿ ಎದುರು ಪಾಲಿಕೆಯ ಬಿಜೆಪಿ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್ ಮಾತನಾಡಿ, ಕರ್ತವ್ಯನಿರತ ಪಾಲಿಕೆ ಇಂಜಿನೀಯರ್ ವೀರೇಶ್ ಅವರ ಮೇಲೆ ಪಾಲಿಕೆಯ ಕಾಂಗ್ರೆಸ್ ಸದಸ್ಯ ಕುಬೇರ ಹಾಗೂ ಅವರ ಬೆಂಬಲಿಗರು ಹಲ್ಲೆ ನಡೆಸಿದ್ದು, ಅತ್ಯಂತ ಖಂಡನೀಯ. ಯಾವುದೇ ಸಮಸ್ಯೆ ಇರಲಿ ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವುದು ಸರಿಯಲ್ಲ, ಅವರು ಕೆಲಸ ಮಾಡದಿದ್ದರೆ ಮೇಲಧಿಕಾರಿಗಳ ಗಮನ ಸೆಳೆಯಬಹುದಿತ್ತು, ಅದನ್ನು ಬಿಟ್ಟು ಅವರ ಮೇಲೆ ಹಲ್ಲೆ ಮಾಡುವುದು ಸರಿಯಲ್ಲ, ನಾವು ಕಳೆದ ಸುಮಾರು ವರ್ಷಗಳಿಂದ ಅಧಿಕಾರದಲ್ಲಿದ್ದೇವೆ, ಈ ರೀತಿ ನಡೆದುಕೊಂಡಿಲ್ಲ, ದೌರ್ಜನ್ಯ, ಗೂಂಡಾಗಿರಿ, ದಬ್ಬಾಳಿಕೆಗೆ ಕಾಂಗ್ರೆಸ್ ಹೆಸರಾಗಿದೆ, ಇದಕ್ಕೆ ಈ ಘಟನೆಯೇ ಉದಾಹರಣೆ ಎಂದರು.

ಪಾಲಿಕೆ ಸದಸ್ಯ ಎಂ.ಗೋವಿಂದರಾಜಲು ಮಾತನಾಡಿ, ನಾನು ನನ್ನ ಜನರ ಬೆಂಬಲ, ಆಶೀರ್ವಾದದಿಂದ 3 ಬಾರಿ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿರುವೆ. ಅವಧಿಯಲ್ಲಿ ಒಮ್ಮೆಯೂ ಈ ರೀತಿ ನಡೆದುಕೊಂಡಿಲ್ಲ, ಅಧಿಕಾರಿಗಳು ತಪ್ಪು ಮಾಡಿದರೆ, ಮೇಲಧಿಕಾರಿಗಳ ಗಮನಸೆಳೆಯುವುದನ್ನು ಬಿಟ್ಟು ಹಲ್ಲೆ ನಡೆಸಿರುವುದು ಸರಿಯಲ್ಲ ಎಂದರು. ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಚೇತನಾ ವೇಮಣ್ಣ, ಕಲ್ಪನಾ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಇತರರು ಉಪಸ್ಥಿತರಿದ್ದರು.

ಅಪರಿಚಿತ ವಾಹನ ಡಿಕ್ಕಿ ಚಿರತೆ ಸ್ಥಳದಲ್ಲೇ ಸಾವು



ವಿಜಯನಗರ: ಅಪರಿಚತ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಿರತೆಯೊಂದು ಸ್ಥಳದಲ್ಲೇ ಮೃತ ಪಟ್ಟಿರುವ ಘಟನೆ ಮರಿಯಮ್ಮನಹಳ್ಳಿ ಇಲ್ಲಿಗೆ ಸಮೀಪದ ತಿಮ್ಮಲಾಪುರ ಟೋಲ್ ಪ್ಲಾಜಾ ಬಳಿ ರಾಷ್ಟ್ರೀಯ ಹೆದ್ದಾರಿ -50ರಲ್ಲಿ ಶುಕ್ರವಾರ ಬೆಳಗಿನಜಾವ ಸಂಭವಿಸಿದೆ.ಸುಮಾರು 3 ವರ್ಷದ ಗಂಡು ಚಿರತೆ ಮೃತಪಟ್ಟಿದೆ. ಈ ಕುರಿತು ಮಾಹಿತಿ ತಿಳಿಯುತ್ತಿದ್ದಂತೆ ಆರಣ್ಯ ಇಲಾಖೆಯ ಸಹಾಯಕ ಆರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್. ಟಿ, ವಲಯ ಆರಣ್ಯ ಅಧಿಕಾರಿ ಕೌಶಿಕ್ ದಳವಾಯಿ, ಚಿಲಕನಹಟ್ಟಿ ಪಶು ಆಸ್ಪತ್ರೆಯ ಪಶು ವೈದ್ಯಧಿಕಾರಿ ಕಾರ್ತಿಕ್ ಎನ್, ಉಪವಲಯ ಆರಣ್ಯ ಅಧಿಕಾರಿ ನಾಗರಾಜ್ ಎಚ್, ಗಸ್ತು ವನಪಾಲಕರಾದ ರಾಮಣ್ಣ ಮತ್ತು ಮಲ್ಲಿಕಾರ್ಜುನ ಭೇಟಿ ನೀಡಿ ಪರಿಶೀಲಿಸಿದರು.ಈ ಕುರಿತು ವನ್ಯಜೀವಿ ಸಂರಕ್ಷಣಾ ಕಾಯ್ದೆ- 1972ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಿಧನ ಸುದ್ದಿ

ಚಾಯಪ್ಪ ಶೆಟ್ಟಿ



ಕುರುಗೋಡು: ತಾಲೂಕಿನ ಎಮ್ಮಿಗನೂರು ಗ್ರಾಮದ ಹಿರಿಯ ಕಿರಾಣಿ ವರ್ತಕರು ವೈಶ್ಯ ಸಮಾಜ ಮುಖಂಡ ಮಣ್ಣೂರು ಚಾಯಪ್ಪ ಶೆಟ್ಟಿ (87) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಗಾದಿಲಿಂಗಮ್ಮ



ಸಿರುಗುಪ್ಪ: ನಗರದ ಬೂದುಗುಪ್ಪ ಕುಟುಂಬದ ಗಾದಿಲಿಂಗಮ್ಮ(54) ಅವರು ಮಂಗಳವಾರ ರಾತ್ರಿ ನಿಧನರಾದರು. ಮೃತರಿಗೆ ಓರ್ವ ಪುತ್ರಿ, ಇಬ್ಬರು ಪುತ್ರರಿದ್ದಾರೆ. ಬಳ್ಳಾರಿ ಬಿಮ್ಸ್‌ನೇತ್ರ ಭಂಡಾರಕ್ಕೆ ನೇತ್ರದಾನ ಮಾಡಿ ಇತರರಿಗೆ ಮಾದರಿಯಾಗಿದ್ದಾರೆ.

ಗುರುವಿನ ಕೊಟ್ರಯ್ಯ



ಹೂವಿನಹಡಗಲಿ: ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು, ಕುರುಬ ಸಮಾಜದ ಹಿರಿಯರು ಹಡಗಲಿ ತಾಲೂಕು ಕುರುಬ ಸಂಘದ ಮಾಜಿ ಅಧ್ಯಕ್ಷ, ಆಹಿಂದ ನಾಯಕ, ಹಡಗಲಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ, ತುಂಗಭದ್ರಾ ವಿದ್ಯಾ ಸಂಸ್ಥೆಯ ಮೊದಲ ಅಧ್ಯಕ್ಷ ಗುರುವಿನ ಕೊಟ್ರಯ್ಯ (91) ಶುಕ್ರವಾರ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಇದ್ದಾರೆ.

ನರಸಾಪುರ, ತರಲಕಟ್ಟೆಯಲ್ಲಿ ನೀರಿಗಾಗಿ ಪರದಾಟ | ಗ್ರಾಪಂ ವಿರುದ್ಧ ಆಕ್ರೋಶ

ಕುಡಿಯುವ ನೀರಿಗೆ ಹಾಹಾಕಾರ

ಯಲಬುರ್ಗಾ: ತಾಲೂಕಿನ ನರಸಾಪೂರ ಹಾಗೂ ತರಲಕಟ್ಟಿ ಗ್ರಾಮದಲ್ಲಿ ಜನಜೀವನ ನೀರು ಸರಬರಾಜು ಆಗದ ಕಾರಣ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಕಳೆದ ಒಂದು ವಾರದಿಂದ ನರಸಾಪುರ ಗ್ರಾಮದಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ಈ ಕುರಿತು ಗ್ರಾಪಂ ಆಡಳಿತದ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಿಲ್ಲ ಎಂದು ನರಸಾಪುರ ಹಾಗೂ ತರಲಕಟ್ಟಿ ಗ್ರಾಮಸ್ಥರು ದೂರಿದ್ದಾರೆ.

ತರಲಕಟ್ಟಿ ಗ್ರಾಮದ ಅನೇಕ ಓಣಿಗಳಲ್ಲಿ ಸಮರ್ಪಕವಾಗಿ ನೀರು ಸಿಗುತ್ತಿಲ್ಲ ಎಲ್ಲಿಂದಲೋ ನೀರು ತಂದು ಕುಡಿಯೋಣವೆಂದು ನೆರೆ ಮನೆಯ ನಲ್ಲಿಯ ನೀರಿಗೆ ಹೋದರೆ ಅವರ ಮನೆಗೆ ನೀರು ಸಾಕಾಗುವವರಗೂ ನಮಗೆ ನೀರು ಸಿಗುವುದಿಲ್ಲ, ಅವರಿಗೆ ನೀರು ಸಾಕಾಗುವಷ್ಟರಲ್ಲಿ ನೀರು ಖಾಲಿಯಾಗಿ ಖಾಲಿ ಕೊಡ ಹಿಡಿದುಕೊಂಡು ಮನೆಗೆ ಹಿಂದಿರುಗುವ ಪರಿಸ್ಥಿತಿ ಎದುರಾಗಿದೆ.

ತರಲಕಟ್ಟಿ ಗ್ರಾಮದ ಅನೇಕ ಕಡೆಗಳಲ್ಲಿ ನೀರು ವ್ಯರ್ಥವಾಗುತ್ತಿದೆ. ಇನ್ನೊಂದು ಕಡೆ ನೀರೇ ಬರುತ್ತಿಲ್ಲ, ಪಿಡಿಒ ಹಾಗೂ ಗ್ರಾಪಂ ವಾರ್ಡ್ ಸದಸ್ಯರ ಗಮನಕ್ಕೆ ತಂದರೂ ಅವರು ಕೂಡ ಸಮಸ್ಯೆ ಪರಿಹಾರಕ್ಕೆ ಮುಂದಾಗುತ್ತಿಲ್ಲ ಎಂದು ತರಲಕಟ್ಟಿ ಗ್ರಾಮದ ಅನ್ನಪೂರ್ಣ ಚೆನ್ನಬಸಪ್ಪನವರ, ಕಲ್ಲವ್ವ ಎಸ್ ಮಾಲಿಪಾಟೀಲ, ಶಿವವ್ವ ಕಂಬಳಿ, ಮಲ್ಲಪ್ಪ ಹಡಪದ, ಬಾಳಪ್ಪ ನಾಗೂರ, ಶಾಂತವ್ವ ಕೋಳೂರು ಮತ್ತಿತರರು ಗ್ರಾಮ ಪಂಚಾಯಿತಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.



ನರಸಾಪುರ ಗ್ರಾಮದಲ್ಲಿ ಒಂದು ಕೊಳವೆ ಬಾವಿ ನೀರು ಇದ್ದು ಆ ನೀರು ನಮಗೆ ಸಮರ್ಪಕವಾಗಿ ಸಾಕಾಗುವುದಿಲ್ಲ. ಇನ್ನೊಂದು ಕೊಳವೆಬಾವಿ ಇದೇ ಅದಕ್ಕೆ ಪಂಪ್ ಮೋಟಾರ್ ಅಳವಡಿಸಿದರೆ ನಮಗೆ ಕುಡಿಯುವ ನೀರಿನ ತೊಂದರೆ ಇಲ್ಲ ಪಂಪು ಮೋಟಾರ್ ಅಳವಡಿಸಲು ಸ್ಥಳಿಯ ಗ್ರಾಪಂ ಪಿಡಿಒ ಗಮನಕ್ಕೆ ತಂದರೂ ಏನು ಕ್ರಮ ಕೈಗೊಳ್ಳುತ್ತಿಲ್ಲ, ನಮಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

■ ಹನುಮಗೌಡ ಮಾಲಿ ಪಾಟೀಲ, ಗ್ರಾಪಂ ಮಾಜಿ ಸದಸ್ಯ, ನರಸಾಪುರ

ತರಲಕಟ್ಟಿ ಗ್ರಾಮದಲ್ಲಿ ಕಳೆದ ಒಂದು ವರ್ಷದಿಂದಲೂ ನಮ್ಮ ಓಣಿಗಳಲ್ಲಿ ಸಮರ್ಪಕ ನೀರು ಬರುತ್ತಿಲ್ಲ, ನಾವೂ ಬೇರೆ ಓಣಿಗೆ ಹೋಗಿ ನೀರು ತರಬೇಕು. ಮುರಡಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರು ಇತ್ತ ಗಮನ ಹರಿಸುತ್ತಿಲ್ಲ. ನಮ್ಮ ಗ್ರಾಮದಲ್ಲಿ ಅನೇಕ ಕಡೆ ನೀರು ಅನಾವಶ್ಯಕವಾಗಿ ವ್ಯರ್ಥವಾಗಿ ಹರಿಯುತ್ತಿದ್ದರೆ ಇನ್ನೂ ಕೆಲ ಓಣಿಗಳಿಗೆ ಸರಿಯಾಗಿ ನೀರು ಬರುತ್ತಿಲ್ಲ.

■ ಹನುಮಗೌಡ ಮಾಲಿಪಾಟೀಲ, ಕೃಷಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ

ನೂತನ ಡಾರ್ಮೆಟರಿ ಉದ್ಘಾಟನೆ

ವಿಜಯನಗರ: ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಡಾರ್ಮೆಟರಿಯನ್ನು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಶುಕ್ರವಾರ ಉದ್ಘಾಟಿಸಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಹೆರಿಗೆ ಹಾಗೂ ತಪಾಸಣೆಗಾಗಿ ಬರುವ ಗರ್ಭಿಣಿ, ಬಾಣಂತಿಯರು ಹಾಗೂ ಹೆರಿಗೆ ಸಂದರ್ಭದಲ್ಲಿ ಬಾಣಂತಿಗೆ ನೆರವಾಗಲು ಅವರೊಂದಿಗೆ ಬರುವ ಪೋಷಕರು ತಾತ್ಕಾಲಿಕವಾಗಿ ಉಳಿದುಕೊಳ್ಳಲು ಇದು ಅನುಕೂಲವಾಗಲಿದೆ. ಡಾರ್ಮೆಟರಿಯಲ್ಲಿ ತಂಗಲು, ಇಲ್ಲಿನ ಎಲ್ಲ ಸೌಲಭ್ಯಗಳು ಸಂಪೂರ್ಣ ಉಚಿತವಾಗಿವೆ. ಅಗತ್ಯ ಇದ್ದವರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ ಮಾತನಾಡಿ, ಉಚಿತ ವಸತಿ ನಿಲಯದಲ್ಲಿ (ಡಾರ್ಮೆಟರಿ) ಉಳಿದುಕೊಳ್ಳಲು ಸುಸಜ್ಜಿತ ಕಾಟ್ -ಬೆಡ್, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯ ವಸತಿ ನಿಲಯ(ಡಾರ್ಮೆಟರಿ) ಹೊಂದಿದೆ ಎಂದು ತಿಳಿಸಿದರು.

ಇದೇ ವೇಳೆ ಬಿಎಂಎಂ ಕಂಪನಿಯಿಂದ ನಿರ್ಮಿಸಿರುವ ಡಾರ್ಮೆಟರಿಯನ್ನು ಎಂಸಿಎಚ್ ಆಸ್ಪತ್ರೆಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಬಿಎಂಎಂ ಕಂಪನಿಯ ಉನ್ನತಾಧಿಕಾರಿ ಗಣೇಶ ಹೆಗ್ಡೆ, ಆರೋಗ್ಯ ಇಲಾಖೆಯ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ಶಸ್ತ್ರಚಿಕಿತ್ಸಕರು ಹಾಗೂ ಎಲ್ಲಾ ಕಾರ್ಯಕ್ರಮಧಿಕಾರಿಗಳು, ಹಿರಿಯ ತಜ್ಞ ವೈದ್ಯಾಧಿಕಾರಿಗಳು, ಸಿಬ್ಬಂದಿ ಇದ್ದರು.



ನೀರಿನ ಅರವಟ್ಟಿಗೆಗೆ ಸೋಮಶೇಖರ್ ರೆಡ್ಡಿ ಚಾಲನೆ



ಬಳ್ಳಾರಿ: ಬೇಸಿಗೆ ಹಿನ್ನೆಲೆ ಪ್ರತಿಯೊಬ್ಬ ನಾಗರಿಕರು ನೀರನ್ನು ಮಿತವಾಗಿ ಬಳಸಬೇಕು, ಯಾವುದೇ ಕಾರಣಕ್ಕೂ ನೀರನ್ನು ವ್ಯರ್ಥ ಮಾಡಕೂಡದು ಎಂದು ಬಳ್ಳಾರಿ ನಗರ ಕ್ಷೇತ್ರದ ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಮನವಿ ಮಾಡಿದರು.

ನಗರದ 11ನೇ ವಾರ್ಡ್ ವ್ಯಾಪ್ತಿಯ ಬ್ರೂಸ್ ಪೇಟೆ ವೃತ್ತದ ಬಳಿ ಪಾಲಿಕೆ ಸದಸ್ಯ ಎಂ.ಗೋವಿಂದರಾಜುಲೂ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಜನರಿಗೆ ಆಯೋಜಿಸಿದ್ದ ಉಚಿತತಂಪುಮಜ್ಜಿಗೆಹಾಗೂ ಕುಡಿವ ನೀರು ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಬೇಸಿಗೆ ಹಿನ್ನೆಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಪಾಲಿಕೆ ಸದಸ್ಯ ಎಂ.ಗೋವಿಂದರಾಜಲೂ ಅವರು, ವಾರ್ಡ್ ವ್ಯಾಪ್ತಿಯಲ್ಲಿ ಜನರಿಗೆ ಅನುಕೂಲವಾಗಲೆಂದು ಉಚಿತ ತಂಪಾದ ಮಜ್ಜಿಗೆ ಹಾಗೂ ಶುದ್ಧ ನೀರು ವಿತರಣೆ ಮಾಡುವ ಮೂಲಕ ಜನರ ಸೇವೆ ಮಾಡುತ್ತಿದ್ದಾರೆ. ನಿತ್ಯ 1 ಸಾವಿರ ಲೀಟರ್ ತಂಪಾದ ಮಜ್ಜಿಗೆ ಹಾಗೂ 1 ಸಾವಿರ ಲೀಟರ್ ತಂಪಾದ ನೀರನ್ನು ವಿತರಿಸಲಾಗುವುದು ಎಂದು ಗೋವಿಂದರಾಜಲೂ ತಿಳಿಸಿದ್ದು, ಅವರ ಈ ಸೇವೆ ಇದೇರೀತಿ ಮುಂದುವರೆಯಲಿ, ಜನರ ಸೇವೆಯೇ ಸೌಭಾಗ್ಯ ಎಂದರು.

ಪಾಲಿಕೆ ಸದಸ್ಯ ಎಂ.ಗೋವಿಂದರಾಜಲು ಮಾತನಾಡಿ, ಹಣ, ಅಧಿಕಾರ, ಅಂತಸ್ತು ಯಾವುದು ಯಾರಿಗೂ ಶಾಶ್ವತವಲ್ಲ, ಜನರು ನಮಗೇನು ಮಾಡಿದರೂ ಎನ್ನುವುದು ಮುಖ್ಯವಲ್ಲ, ಜನರಿಗೆ ನಾವೇನು ಮಾಡಿದ್ದೇವೆ ಎನ್ನುವುದು ಮುಖ್ಯ, ಕೈಲಾದಷ್ಟು ನನ್ನ ಬಳ್ಳಾರಿ ಜನರ ಸೇವೆ ಮಾಡುವ ಸ್ವಭಾವ ನನ್ನದು, ಎಲ್ಲರ ಸಹಕಾರ ಅತ್ಯಗತ್ಯ ಎಂದರು.

ಪಾಲಿಕೆ ಮಾಜಿ ಸದಸ್ಯ ದೇಸಾಯಿ, ಮುಖಂಡರಾದ ರಮೇಶ್ ಬುಜ್ಜಿ, ಲಕ್ಷ್ಮೀ ನಾರಾಯಣ ಸೇರಿದಂತೆ ವಾರ್ಡ್ ವ್ಯಾಪ್ತಿಯ ಪ್ರಮುಖರು, ವಿವಿಧ ಗಣ್ಯರು, ಗೋವಿಂದರಾಜಲೂ ಅಭಿಮಾನಿಗಳು, ಕಾರ್ಯಕರ್ತರು ಇದ್ದರು.

ಬಲ್ಡೋಟ ಹಠಾವೋ ಧರಣಿ 155 ದಿನ ಪೂರ್ಣ



ಕೊಪ್ಪಳ: ನಗರಸಭೆ ಮುಂದೆ ನಡೆದ ಬಲ್ಡೋಟ ಕಾರ್ಖಾನೆ ಹಟಾವೋ ಕೊಪ್ಪಳ ಬಚಾವೋ, 20 ಕಾರ್ಖಾನೆ ಬಾಧಿತ ಹಳ್ಳಿಯ 50 ಸಾವಿರ ಜನರ ಜೀವ, ಆರೋಗ್ಯ ಉಳಿಸಿ, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಿ, ತುಂಗಭದ್ರಾ ನದಿ ವಿಷ ಗೊಳಿಸುವ ಕಾರ್ಖಾನೆಗಳನ್ನು ಸೀಜ್ ಮಾಡಲು, ಬಾಧಿತ ಹಳ್ಳಿಗಳ ಪುನರುಜ್ಜೀವನಕ್ಕಾಗಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡಲು ಆಗ್ರಹಿಸಿ ನಡೆದ 155ನೇ ದಿನದ ಧರಣಿಯಲ್ಲಿ ನಿವೃತ್ತ ಪ್ರಾಚಾರ್ಯ ಎಲ್.ಎಫ್.ಪಾಟೀಲ ಮಾತನಾಡಿದರು.

ಯೇಸುಕ್ರಿಸ್ತಜಗತ್ತಿಗೆಶಾಂತಿಸಾರಿದಕ್ಷಮಾಗುಣಿ. ಆತನು ಶಿಲುಬೆಗೆ ಏರಿ ಶಿಲುಬೆಗೇರಿಸಿದವರನ್ನೇ ಕ್ಷಮಿಸು ಎಂದು ಹೇಳಿದ ದಿನವಿದು ಎಂದರು. ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಸೊಸೈಟಿಯಿಂದ ಧರಣಿ ನಿರತರಿಗೆ ಲಘು ಪಾನೀಯ ಮಜ್ಜಿಗೆಯನ್ನು ಹಂಚಿ ಶಾಂತಿದೂತ ಯೇಸುವಿನ ಸ್ಮರಣೆ ಮಾಡಿರಿ ಎಂದು ಕೇಳಿಕೊಂಡ ಅನುಯಾಯಿಗಳನ್ನು ಉದ್ದೇಶಿಸಿ ಮಾತುಮುಂದುವರೆಸಿದ ಪಾಟೀಲರು ಯೇಸುವಿನ ಮರಣವನ್ನು ಪಾಪದ ಮೇಲಿನ ವಿಜಯ, ಮಾನವ ಕುಲಕ್ಕೆ ಶಾಶ್ವತ ಜೀವನವನ್ನು ನೀಡುವ ತ್ಯಾಗ ಎಂದು ಭಾವಿಸಿ, ಇಂದು ಹಣ್ಣು ಹಾಲು ಮಜ್ಜಿಗೆ ಸಿಹಿ ಹಂಚಿ ನೆರೆಯವರನ್ನು ಪ್ರೀತಿಸು ಎಂದು ಹೇಳುವುದು ಇವರ ಆದರ್ಶವಾಗಿದೆ. ಈತನ ಸೂಕ್ತಿಗಳು ಮಾನವನ ಸಂಸ್ಕಾರಕ್ಕೆ ದಾರಿ ದೀಪವಾಗುತ್ತವೆ ಎಂದರು.

ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು, ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ಡಾ.ವಿ.ಬಿ.ರಡ್ಡೆರ, ಡಾ.ಬಸವರಾಜ ಪೂಜಾರ, ಬಿ.ಜಿ.ಕರಿಗಾರ, ಎಂ.ಎಸ್.ಗಂಟೆ, ದೊಡ್ಡಬಸಪ್ಪ ಅಂಗಡಿ, ರಾಜಶೇಖರ ಏಳುಬಾವಿ, ಫಾಸ್ಟರ್ ಪೀಟರ್ ಪಾಲ್, ಕಿಟ್ಟು ಪ್ಯಾಟ್ರೋಟಿಕ್, ಪ್ರಕಾಶ ದೇವರಮನೆ, ಸಂಗಮ್ಮ ರೇವಣಕಿ, ತುಕಾರಾಮ ಪಾತ್ರೋಟಿ, ಚನ್ನವೀರಯ್ಯ ಹಿರೇಮಠ, ಪಂಪಣ್ಣ ಚಿಂತಪಲ್ಲಿ, ಆದಯ್ಯ ರೇವಣಕಿ, ನಾಗರಾಜ ಕುಷ್ಟಗಿ, ಭೀಮಪ್ಪ ಯಲಬುರ್ಗಾ, ಮಂಗಳೇಶ ರಾಠೋಡ್, ಶಿವಪ್ಪ ಹಲಗೇರಿ, ಹನುಮಪ್ಪ ಕಟಗಿ, ಮಹಾದೇವಪ್ಪ ಮಾವಿನಮಡು, ವಿಜಯ ಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ ಇದ್ದರು.

18 ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು

ರಾಯಚೂರು: ಜಿಲ್ಲೆಯಲ್ಲಿ ವೈದ್ಯರೆಂದು ಸುಳ್ಳು ಹೇಳಿ ಅಮಾಯಕ ಜನರಿಗೆ ಮೋಸ ಮಾಡಿ ಗೊತ್ತಿಲ್ಲದ ಔಷಧಿಗಳ ಮೂಲಕ ಚಿಕಿತ್ಸೆ ನೀಡುವುದನ್ನೆ ವೃತ್ತಿಯಾಗಿ ಮಾಡಿಕೊಂಡಿರುವ ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ಜಿಲ್ಲಾದ್ಯಂತ 31 ನಕಲಿ ವೈದ್ಯರ ವಿರುದ್ಧ ದಾಳಿ ಮಾಡಿ 18 ನಕಲಿ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು ಹಾಗೂ 13 ಕ್ಲಿನಿಕ್ ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಮತ್ತು ಜಿಲ್ಲಾಧಿಕಾರಿ ನಿತೀ.ಕೆ ಹಾಗೂ ಜಿ.ಪಂ ಸಿಇಓ ಈಶ್ವರ ಕಾಂದೂ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿರುವ ನಕಲಿ ವೈದ್ಯರುಗಳ ವಿರುದ್ಧ ಕ್ರಮ ಕೈಗೊಳ್ಳಲು ಕಂದಾಯ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಆಯುಷ್ಯ ಇಲಾಖೆ ಸೇರಿದಂತೆ ಜಿಲ್ಲಾ ಮತ್ತು ತಾಲೂಕ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಸಮಿತಿಗಳನ್ನು ರಚನೆ ಮಾಡಿ ಏಕ ಕಾಲಕ್ಕೆ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ತಂಡವು ಸಕ್ರಿಯವಾಗಿ ಭಾಗವಹಿಸಿ ಈ ವಿಶೇಷ ಕಾರ್ಯಚರಣೆಯಲ್ಲಿ ವಿವಿಧ ಪ್ರದೇಶಗಳಲ್ಲಿ ಒಂದೇ ಸಮಯದಲ್ಲಿ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿದ್ದ ನಕಲಿ ವೈದ್ಯರು ಹಾಗೂ ಕೆಪಿಎಂಇ ಕಾಯ್ದೆ ಅಡಿಯಲ್ಲಿ ನೋಂದಣಿಯಾಗದ ಖಾಸಗಿ ಕ್ಲೀನಿಕ್‌ಗಳ ಮೇಲೆ ದಾಳಿ ನಡೆಸಲಾಗಿದೆ.

ಈ ದಾಳಿಯಲ್ಲಿ ವೈದ್ಯಕೀಯ ಅರ್ಹತೆ ಇಲ್ಲದೆ ಕ್ಲಿನಿಕ್ ನಡೆಸುತ್ತಿದ್ದ ಹಲವಾರು ನಕಲಿ ವೈದ್ಯರುಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ದಾಳಿ ವೇಳೆ ನಕಲಿ ವೈದ್ಯರು ಬಳಸುತ್ತಿದ್ದ ಔಷಧಿಗಳು, ಉಪಕರಣಗಳು ಮತ್ತು ದಾಖಲೆಗಳನ್ನು ವಶಪಡಿಸಿಕೊಂಡು ಸಿಲ್ ಮಾಡಲಾಗಿದೆ. ಜಿಲ್ಲೆಯಲ್ಲಿ ನಕಲಿ ವೈದ್ಯರ ವಿರುದ್ಧ ಕಾರ್ಯಚರಣೆ ಮುಂದುವರೆಯಲಿದ್ದು, ಜಿಲ್ಲೆಯಲ್ಲಿ ನಕಲಿ ವೈದ್ಯರು ಇಲ್ಲದಂತೆ ಕ್ರಮ ವಹಿಸಲಾಗುವುದು ಎಂದರು.

ನೀರಿನ ಸಮಸ್ಯೆ ಆಗದಂತೆ ಕ್ರಮವಹಿಸಿ



ಕುರುಗೋಡು: ಕ್ಷೇತ್ರದಲ್ಲಿ ಪ್ರಸ್ತುತ ಬೇಸಿಗೆ ಕುಡಿಯುವ ನೀರು ಅಭಾವ ಸೃಷ್ಟಿ ಆಗದೇ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕಂಪ್ಲಿ ಕ್ಷೇತ್ರದ ಶಾಸಕ ಜೆಎನ್.ಗಣೇಶ ಹೇಳಿದರು ಅವರು ತಾಲೂಕಿನ ಓರ್ವಾಯಿ ಗ್ರಾಪಂನ ಮಾರುತಿ ಕ್ಯಾಂಪಿನಲ್ಲಿ ಶುಕ್ರವಾರ ಮಾರುತಿ ಕ್ಯಾಂಪ್ ನಲ್ಲಿ 2025-26ನೇ ಸಾಲಿನ 5054ರ ಅಟೆಂಡೆನ್ಸ್ ಯೋಜನೆ ಅಡಿಯಲ್ಲಿ 5 ಕೋಟಿ ರೂಪಾಯಿ ವೆಚ್ಚದಲ್ಲಿ ಯಲ್ಲಾಪುರ ಗ್ರಾಮದಿಂದ ಮಾರುತಿ ಕ್ಯಾಂಪ್ ಹಾಗೂ ಶ್ರೀರಂಗಪುರ ಕ್ಯಾಂಪ್ ನಿಂದ ಜಿಲ್ಲಾ ಮುಖ್ಯ ರಸ್ತೆ ವರೆಗೆ ರಸ್ತೆ ಕಾಮಗಾರಿಗೆ ರಸ್ತೆ ಚರಂಡಿ ನಿರ್ಮಾಣ ಕಾಮಗಾರಿ ಮೊದಲ ಆದ್ಯತೆಯಾಗಬೇಕು, ಅಂದಾಗ ಮಾತ್ರ ಸಾರ್ವಜನಿಕರಿಗೆ ಉಪಯೋಗವಾಗಲು ಸಾಧ್ಯ ಸಲಹೆ ನೀಡಿದರು. ಪೂರ್ವದಲ್ಲಿ ಗುತ್ತಿಗನೂರು ಗ್ರಾಮದಿಂದ ಬಾಳಪುರ ಹಾಗೂ ಪಟ್ಟಣ ಸೆರುಗು ಗ್ರಾಮದ ಮುಖ್ಯ ರಸ್ತೆ 2025-26ನೇ ಸಾಲಿನ ಕೆಕೆಆರ್ ಡಿಬಿ ಯೋಜನೆಅಡಿಯಲ್ಲಿ ರೂ.3 ಕೋಟಿ ರೂ. ವೆಚ್ಚದಿಂದ ನಿರ್ಮಾಣವಾಗುವ ಸಿಸಿರಸ್ತೆ, ಹಾಗು ಭೂಮಿ ಯೋಜನೆ ಅಡಿಯ ಕಾಮಗಾರಿಗೆ ಗುತ್ತಿಗೆದಾರರು ಮಾಡದೇ ಉತ್ತಮ ಗುಣಮಟ್ಟಆದ್ಯತೆ ಇರಬೇಕು ಎಂದು ಗುತ್ತಿಗೆಧಾರು ಸೂಚಿಸಲಾಗಿತು. ಓರ್ವಾಯಿ, ಗುತ್ತಿಗನೂರು, ಮಾರುತಿ ಕ್ಯಾಂಪು ಗ್ರಾಪಂ ಮುಖಂಡರು ಗ್ರಾಪಂ ಸದಸ್ಯರು, ಕಾಂಗ್ರೆಸ್ ಪಕ್ಷದ ಕಾರ್ಯಕತರು ಇದ್ದರು.

ಶಂಭುಲಿಂಗೇಶ್ವರ ಮಹಾರಥೋತ್ಸವ



ಸಿರುಗುಪ್ಪ: ನಗರದಲ್ಲಿ ಶ್ರೀಶಂಭುಲಿಂಗೇಶ್ವರ ಮಹಾ ರಥೋತ್ಸವ ಸಾವಿರಾರು ಭಕ್ತರ ಮಧ್ಯೆ ಅದ್ದೂರಿಯಾಗಿ ನೆರವೇರಿತು. ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ಭಕ್ತರು ರಥೋತ್ಸವಕ್ಕೆ ಹೂವು, ಹಣ್ಣು, ಉತ್ತತ್ತಿ ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವ ಹಿನ್ನೆಲೆ

ಶಂಭುಲಿಂಗೇಶ್ವರ ದೇವಾಲಯ ದಲ್ಲಿ ಬೆಳಿಗ್ಗೆ ವಿಶೇಷ ಪೂಜೆ, ಅರ್ಚನೆ, ಅಭಿಷೇಕ, ವಿಶೇಷ ಅಲಂಕಾರ, ಸಾಮೂಹಿಕ ಭಜನೆ ಸೇರಿದಂತೆ ವಿವಿಧ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು. ದೇವಾಲಯದ ಜೀರ್ಣೋದ್ಧಾರ ಸಮಿತಿ ಮತ್ತು ವಿದ್ಯಾವರ್ಧಕ ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳಾದ ಅಂಬರೀಶ್ ಮಿಠಾಯಿ ಹಾಗೂ ವಿಶ್ವನಾಥ್ ಸ್ವಾಮಿ ಸೇರಿದಂತೆ ದೇಗುಲ ಸಮಿತಿ ಎಲ್ಲ ಪದಾಧಿಕಾರಿಗಳು ಆಗಮಿಸಿದ ಭಕ್ತರಿಗೆ ತೀರ್ಥ ಪ್ರಸಾದದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕಲ್ಪಿಸಿದ್ದರು.

ನಂತರ ಎಲ್ಲ ಪದಾಧಿಕಾರಿಗಳು, ಪ್ರಮುಖರು, ಗಣ್ಯರು ರಥೋತ್ಸವದಲ್ಲಿ ಭಾಗವಹಿಸಿ ಭಕ್ತಿ ಸಮರ್ಪಿಸಿದರು.

ಜಾತ್ರೆ ಹಿನ್ನೆಲೆ ಕಂಕಣ ಕಟ್ಟುವುದು ಸೇರಿದಂತೆ ಕಲ್ಯಾಣೋತ್ಸವ ಕಾರ್ಯಕ್ರಮಗಳು ಅದ್ದೂರಿಯಾಗಿ ಜರುಗಿದವು. ರಥೋತ್ಸವ ದಿನದಂದು ಬೆಳಗಿನ ಜಾವ ಬ್ರಾಹ್ಮೀ ಮುಹೂರ್ತದಲ್ಲಿ ದೇವರಿಗೆ ಮಹಾರುದ್ರಾಭಿಷೇಕ, ತಿಮ್ಮಾಪುರ ಶ್ರೀಬಸಯ್ಯ ಸ್ವಾಮೀ ವೀರಗಾಸೆ ವಡುವು ಹಾಗೂ ತೆಕ್ಕಲಕೋಟೆ ರಾಚಯ್ಯ ಸ್ವಾಮಿ ಇವರ ಸಾಮಾಳದೊಂದಿಗೆ ಅಗ್ನಿಕುಂಡ ಪುಟಾರಾಧನೆ ಕಾರ್ಯಕ್ರಮ ನಡೆಯಿತು.

ನಂತರ ಶಂಭುಲಿಂಗೇಶ್ವರ ದೇವಾಲಯದಿಂದ ವೀರಭದ್ರೇಶ್ವರ ದೇವಾಲಯದ ವರೆಗೆ (ಮರಿ ತೇರು) ಉಚ್ಚಾಯ ನೆರವೇರಿತು. ರಥೋತ್ಸವ ಹಿನ್ನೆಲೆ ದೇವಾಲಯ ವಿವಿಧ ಬಣ್ಣಗಳ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿತ್ತು.

ಹನುಮ ಜಯಂತಿ ಅದ್ದೂರಿ ಆಚರಣೆ

ಗಾದಿಗನೂರು: ಹೊಸಪೇಟೆ ತಾಲೂಕು ಭುವನಹಳ್ಳಿ ಗ್ರಾಮದಲ್ಲಿ ಹನುಮ ಜಯಂತಿ ಉತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತು.

ಊರಿನ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಅಭಿಷೇಕ ಕಾರ್ಯಕ್ರಮಗಳು ನಡೆದವು. ಭಕ್ತಾದಿಗಳು ದೇವಸ್ಥಾನಕ್ಕೆ ಪುಷ್ಪಗಳಿಂದ ಅಲಂಕರಿಸಿ ದೇವಸ್ಥಾನದಲ್ಲಿ ಬುಧವಾರ ಬೆಳಗ್ಗೆ 6 ಗಂಟೆಯಿಂದ ಅಖಂಡ ಭಜನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಊರಿನ ಭಕ್ತರು ಹಾಗೂ ಸುತ್ತಮುತ್ತಲಿನ ಭಜನೆ ಮಂಡಳಿಯವರು ಗುರುವಾರ ಬೆಳಗಿನ ಜಾವ 6ವರೆಗೆ ಭಜನೆ ಕಾರ್ಯಕ್ರಮ ನೆರವೇರಿತು. ಹನುಮ ಜಯಂತಿ ಪ್ರಯುಕ್ತ ದೇವಸ್ಥಾನದಲ್ಲಿ ಊರಿನ ಎಲ್ಲಾ ಮುಖಂಡರು ಸೇರಿ ಮಹಾಪ್ರಸಾದ ವ್ಯವಸ್ಥೆಯನ್ನು ನೆರವೇರಿಸಿದರು.

ಸಂಜೆ 6ಗಂಟೆಗೆ ಊರಿನ ಪ್ರಮುಖ ಬೀದಿಗಳಲ್ಲಿ ಆಂಜನೇಯ ಸ್ವಾಮಿಯ ಫೋಟೋವನ್ನು ಎತ್ತಿನ ಬಂಡಿಯಲ್ಲಿ ಕೂರಿಸಿ ವಿಶೇಷ ಅಲಂಕಾರವನ್ನು ಮಾಡಿ ತಾಳ ಮೇಳ ವಾದ್ಯಗಳೊಂದಿಗೆ ಆಂಜನೇಯ ಸ್ವಾಮಿ ಮೆರವಣಿಗೆ ಮಾಡಿದರು. ಊರಿನ ಮುಖಂಡರು ಭಜರಂಗಿ ಭಕ್ತರು ಗುರು ಹಿರಿಯರು ಭಾಗವಹಿಸಿದ್ದರು.



ವೈಭವದಿಂದ ನಡೆದ ಭೋಗೇಶ್ವರನ ರಥೋತ್ಸವ

ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಸುಕ್ಷೇತ್ರ ಝುಳಕಿ ಬಿ ಗ್ರಾಮದಲ್ಲಿ ಆರಾಧ್ಯ ದೈವ ಶ್ರೀಭೋಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಅದ್ದೂರಿ ಹಾಗೂ ವೈಭವಮಯ ರಥೋತ್ಸವ ಸಾವಿರಾರು ಭಕ್ತರ ಜಯಘೋಷಗಳ ಮಧ್ಯೆ ನೆರವೇರಿತು. ಗ್ರಾಮದೆಲ್ಲೆಡೆ ಭಕ್ತಿ ವಾತಾವರಣ ಮೆರೆಯುತ್ತ, ಭೋಗೇಶ್ವರ ಮಹಾರಾಜ ಕೀ ಜೈ ಎಂಬ ಘೋಷಣೆಗಳು ಮೊಳಗಿದವು.

ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಿಗ್ಗೆ ನಸುಕಿನ ಜಾವ 5 ಗಂಟೆಗೆ ಭೋಗೇಶ್ವರ ಲಿಂಗ ಪೀಠದಲ್ಲಿ ರುದ್ರಾಭಿಷೇಕ ಸೇರಿದಂತೆ ವಿವಿಧ ವಿಶೇಷ ಪೂಜಾ ಕೈಂಕರ್ಯಗಳು ಶ್ರದ್ಧಾಭಕ್ತಿ ಯಿಂದ ನೆರವೇರಿದವು. ಭಕ್ತರು ಬೆಳಗ್ಗೆಯಿಂದಲೇ ದೇವಾಲಯಕ್ಕೆ ಹರಿದುಬಂದು ದರ್ಶನ ಪಡೆದು ಪೂಜೆಯಲ್ಲಿ ಭಾಗವಹಿಸಿದರು.



ಸಂಜೆವೇಳೆಗೆ ಪಲ್ಲಕ್ಕಿ ಉತ್ಸವ, ಪುರವಂತರ ಕುಣಿತದೊಂದಿಗೆ ಪಾದಯಾತ್ರೆಯೊಂದಿಗೆ ಗ್ರಾಮಸ್ಥರು ರಥೋತ್ಸವದತ್ತ ಸಾಗಿ, ಸಂಜೆ 7 ಗಂಟೆಗೆ ರಥೋತ್ಸವ ಜರುಗಿತು.ಸಂಭ್ರಮದ ರಥೋತ್ಸವಕ್ಕೆ ಹಡಲಗಿಯ ಶಾಂತಬಸವ ಶಿವಾಚಾರ್ಯರು ಚಾಲನೆ ನೀಡಿದ ಬಳಿಕ, ಭಕ್ತರು ಭಕ್ತಿ ಭಾವದಿಂದ ರಥವನ್ನು ಎಳೆದು ಸೇವೆ ಸಲ್ಲಿಸಿದರು. ಕಲಬುರಗಿ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಉತ್ಸವದಲ್ಲಿ ಭಾಗಿಯಾಗಿ ಭೋಗೇಶ್ವರನ ಆಶೀರ್ವಾದ ಪಡೆದರು.



ರಥೋತ್ಸವಕ್ಕೆ ಹೂವಿನ ಅಲಂಕಾರ: ಜಿಲ್ಲೆಯ ಆಳಂದ ತಾಲೂಕಿನ ಝುಳಕಿ ಬಿ ಗ್ರಾಮದ ಭೋಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರಥೋತ್ಸವಕ್ಕೆ ಕೆಸರ ಜವಳಗಿಯ ರಮೇಶ್ ಆಲೂರ್, ಆಳಂದದ ದತ್ತ ಎಂ ಪೂಜಾರಿ ಹೂವಿನ ಸೇವೆ ಮಾಡುವ ಮೂಲಕ ರಥಕ್ಕೆ ಅಲಂಕಾರಿಕ ಸೇವೆಯನ್ನು ಸಮರ್ಪಣೆ ಮಾಡಿದರು.ಈ ಬಾರಿಯ ಜಾತ್ರಾ ಮಹೋತ್ಸವ ಹಿನ್ನೆಲೆ,ಗ್ರಾಮದ ತುಂಬೆಲ್ಲ ವಿದ್ಯುತ್ ಕಂಬಗಳಿಗೆ ಕೇಸರಿ ಭಗವಾ ಧ್ವಜಗಳನ್ನು ಅಳವಡಿಸಲಾಗಿದ್ದು,ಜಾತ್ರೆಗೆ ಕಳೆ ತಂದಿತ್ತು. ಇನ್ನೂ ದೂರದ ಊರುಗಳಿಂದ ಆಗಮಿಸಿದ್ದ ಭಕ್ತರಿಗಾಗಿ ಹಾಗೂ ಗ್ರಾಮದವರಿಗಾಗಿ ಅನ್ನ,ಸಾಂಬಾರ್, ಕರಿಗಡಗ ತುಪ್ಪ ಒಳಗೊಂಡ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ತೇರಿಗೆನೈವೇದ್ಯ ಅರ್ಪಿಸಿದ ಗ್ರಾಮಸ್ಥರು!: ಇದಕ್ಕೂ ಮುನ್ನ ಗ್ರಾಮಸ್ಥರು ಬೆಳಿಗ್ಗೆಯಿಂದಲೇ ಭೋಗೇಶ್ವರ ಜಾತ್ರಾ ಮಹೋತ್ಸವದ ಹಿನ್ನೆಲೆ ಮನೆಯಲ್ಲಿ ಹೋಳಿಗೆ ವಿವಿಧ ತಿಂಡಿ ತಿನಿಸುಗಳನ್ನು ತಯಾರಿಸಿ,ಗ್ರಾಮದ ಆರಾಧ್ಯ ದೈವ ಭೋಗೇಶ್ವರನಿಗೆ ಹಾಗೂ ರಥೋತ್ಸವಕ್ಕೆ ನೈವೇದ್ಯ ಅರ್ಪಣೆ ಮಾಡಿದರು. ಜಾತ್ರಾ ಮಹೋತ್ಸವ ಅಂಗವಾಗಿ ಎರಡು ದಿನಗಳ ಸಂಜೆ ಹಾಸ್ಯ ರಸಮಂಜರಿ ಕಾರ್ಯಕ್ರಮಗಳು, ಜಂಗಿ ಕುಸ್ತಿ ಪಂದ್ಯಾವಳಿ ನಡೆದವು. ಅದ್ದೂರಿ ರಥೋತ್ಸವಕ್ಕೆ ಸದ್ಭಕ್ತ ಮಂಡಳಿ ಗ್ರಾಮದ ಸಾವಿರಾರು ಭಕ್ತರು ಸಾಕ್ಷಿಯಾದರು.

ಮಹಾಬಲೇಶ್ವರ ದಿವಾಕರ ಆಯ್ಕೆ



ಹೂವಿನಹಡಗಲಿ: ಪಟ್ಟಣದ ನಿಸರ್ಗ ಬಳಗದ ತಾಲೂಕು ಅಧ್ಯಕ್ಷರು, ಸಮಾಜ ಸೇವಕರು, ದೀನ ದಲಿತರ ಆಶಾಕಿರಣ ಮಹಾಬಲೇಶ್ವರ ಎನ್ ದಿವಾಕರ ಇವರು ಜೆಸಿ ವಲಯ 24ರ ಜೋನ್ ಚೇರ್ಮನ್ ಆಗಿ ಮಹಾಬಲೇಶ್ವರ ದಿವಾಕರ ಅವರು ಪದಗ್ರಹಣ ಸ್ಥಾನ ಪಡೆದರು.

ಪಟ್ಟಣದ ದಿವಂ ಕಂಫರ್ಟ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಧುಸೂದನ್ ನವಾಡ ಅವರು ಉದ್ಘಾಟಿಸಿದರು.

ರಾಷ್ಟ್ರೀಯ ಜೆಸಿಐ ಚೆರ್ಮನ್ ನರೇನ್ ಕರಿಯಪ್ಪ ಮಾತನಾಡಿ, ಮಹಾಬಲೇಶ್ವರ ಅವರು ಈಗಾಗಲೇ ಹೂವಿನಹಡಗಲಿಯಲ್ಲಿ ನಿಸರ್ಗ ಬಳಗ, ಜೆಸಿ, ಜೆಸಿಐ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ 2025ನೇ ಸಾಲಿನ ನವೆಂಬರ್‌ನಲ್ಲಿ ಜಲಶಕ್ತಿ ಅಭಿಯಾನದಡಿ ಜೆಎಸ್ಜೆಬಿ (ಎಖಿಖಃ) ಪ್ರಶಸ್ತಿ ಪ್ರದಾನ ಕಾರ್ಯಕ್ರಮದಡಿ ನೀರು ಸಂರಕ್ಷಣೆ ಕಾರ್ಯಕ್ರಮಗಳು ಜರುಗಿವೆ ಸಾಕಷ್ಟು ಸಾಮಾಜಿಕವಾಗಿ ಜನರಿಗೆ ಒಳಿತನ್ನು ಬಯಸುವಂತಹ ಅತ್ಯಂತ ಪ್ರಮುಖವಾದ ಕಾರ್ಯಕ್ರಮಗಳನ್ನು ಮಾಡುತ್ತಾ ಸಾಗುತ್ತಿದ್ದಾರೆ. ಅವರಿಗೆ ನಮ್ಮ ಜೆಸಿಐ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ ಎಂದರು.ಬಿ.ಕೆ.ಭಾರತಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಶಿಗ್ಗಾವ್, ಮುಖ್ಯ ಅತಿಥಿಗಳಾಗಿ ಕಿಶೋರ್ ಕುಮಾರ್ ಕೆ.ಮುರಳಿಧರನ್ ಜೊಷ್ಸಿ, ರಾಜೇಶ್ ಕೀಲಾಂಬಿ ಹಾಗೂ ಇತರರಿದ್ದರು.

ಕಿರುಸುದ್ದಿ

90 ತೊಲೆ ಚಿನ್ನಾಭರಣ ಕಳುವು

ಬೆಳಗಾವಿ: ಶಹಾಪುರದ ಲಕ್ಷ್ಮೀ ರಸ್ತೆಯಲ್ಲಿ ಸಿನಿಮೀಯ ಮಾದರಿಯಲ್ಲೊಂದು ಭಾರೀ ಕಳ್ಳತನ ನಡೆದಿದೆ. ಕುಟುಂಬದವರು ಶುಭ ಕಾರ್ಯಕ್ಕೆಂದು ಊರಿಗೆ ತೆರಳಿದ ಹಿನ್ನೆಲೆ ಸಂಚು ರೂಪಿಸಿದ ಖದೀಮರು, ಮನೆಯ ಬೀಗ ಮುರಿದು ಸುಮಾರು 90 ತೊಲೆ ಚಿನ್ನ ದೋಚಿಕೊಂಡು ಪರಾರಿಯಾಗಿರುವ ಘಟನೆ ನಡೆದಿದೆ.

ಶಹಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮೀ ರಸ್ತೆಯ ಭಾರತ ನಗರದಲ್ಲಿ ಈ ಘಟನೆ ನಡೆದಿದೆ. ಇಲ್ಲಿನ ನಿವಾಸಿ ಕಲ್ಪನಾ ಮುರಳೀಧರ ಕಾಟವಾ ಎಂಬುವರ ಬಂಗಲೆಯನ್ನು ಗುರಿಯಾಗಿಸಿಕೊಂಡ ಕಳ್ಳರು ಸುಮಾರು 80 ರಿಂದ 90 ತೊಲೆ ಚಿನ್ನದ ಆಭರಣಗಳನ್ನು ದೋಚಿದ್ದಾರೆ. ಮಾರ್ಚ್ 28ರಂದು ಕಾಟವಾ ಕುಟುಂಬದವರು ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಕೌಟುಂಬಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಮನೆಗೆ ಬೀಗ ಹಾಕಿ ತೆರಳಿದ್ದರು. ಗುರುವಾರ ಮಧ್ಯಾಹ್ನ ಮನೆಗೆ ವಾಪಸ್ಸಾದಾಗ ಕಳ್ಳತನದ ಪ್ರಕರಣ ಬೆಳಕಿಗೆ ಬಂದಿದ್ದು, ಇಡೀ ಕುಟುಂಬ ಕಂಗೆಟ್ಟಿದೆ. ಮನೆಯವರು ಇಲ್ಲದ ಸಮಯವನ್ನೇ ಕಾದು ಕುಳಿತಿದ್ದ ಖದೀಮರು, ಬಾಗಿಲು ಮುರಿದು ಒಳನುಗ್ಗಿದ್ದಾರೆ. ಮನೆಯಲ್ಲಿದ್ದ ಕಪಾಟು ಮತ್ತು ಡ್ರಾಯರ್‌ಗಳನ್ನು ಜಾಲಾಡಿ, ಲಾಕರ್‌ನಲ್ಲಿದ್ದ ಲಕ್ಷಾಂತರ ರೂ.ಮೌಲ್ಯದ ಚಿನ್ನಾಭರಣಗಳನ್ನು ಹೊತ್ತೊಯ್ದಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ನಾರಾಯಣ ಬರಮನಿ ಹಾಗೂ ಅಪರಾಧ ವಿಭಾಗದ ಡಿಸಿಪಿ ನಿರಂಜನರಾಜ ಅರಸ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶ್ವಾನದಳ ಮತ್ತು ಬೆರಳಚ್ಚು ತಜ್ಞರ ಸಹಾಯದೊಂದಿಗೆ ಶಹಾಪುರ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

13 ಜನ ಕೈದಿಗಳ ವಿರುದ್ಧ ಪ್ರಕರಣ ದಾಖಲು

ಹುಬ್ಬಳ್ಳಿ: ನಗರದ ಸಬ್ ಜೈಲ್‌ನ ಬ್ಯಾರಕ್ ನಂಬರ್ 8ರಲ್ಲಿ ಮೊಬೈಲ್, ಚಾರ್ಜರ್, ಕನೆಕ್ಟರ್ ಸಿಕ್ಕ ಹಿನ್ನೆಲೆ ಬ್ಯಾರಕ್‌ನಲ್ಲಿದ್ದ 13 ಜನ ಕೈದಿಗಳ ವಿರುದ್ಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ವಿನೋದ, ದೀಪಕ, ನಟರಾಜ, ಆಖೀಬ್, ಸಾಧಿಕ್, ಕಿರಣ್, ಮೇಘರ್, ಭಗವಾನದಾಸ್, ಚರಣಪ್ರಸಾದ, ಮಲ್ಲಿಕಜಾನ್, ಅಶೋಕ, ಮಹಾಂತೇಶ, ವಂಶ ಎಂಬುವರ ವಿರುದ್ಧ ಜೈಲು ಅಧೀಕ್ಷಕ ಶಹಾಬುದ್ದೀನ್ ಕಾಲೇಖಾನ್ ದೂರು ನೀಡಿದ್ದಾರೆ. ಇತ್ತೀಚೆಗೆ ಬಂದಿ ಮಾಡುವ ವೇಳೆಯಲ್ಲಿ ಬ್ಯಾರಕ್ 8ರಲ್ಲಿ ತಪಾಸಣೆ ಮಾಡುವ ಮೂಲೆಯ ಗೋಡೆಯಲ್ಲಿಟ್ಟಿದ್ದ ವಿವೋ ಸ್ಮಾರ್ಟ್ ಪೋನ್, ಚಾರ್ಜರ್, ಕನೆಕ್ಟರ್ ದೊರೆತಿವೆ. ಮೊಬೈಲ್ ಯಾರದು ಎಂಬುವುದರ ಕುರಿತು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

72.93 ಲಕ್ಷ ರೂ. ವಂಚನೆ: ವೃದ್ಧೆಯೊಬ್ಬರಿಗೆ ಅಪರಿಚಿತರು ಕಾನೂನು ಬಾಹೀರ ಆಗಿ ಬೇರೆ ದೇಶದಿಂದ ಡ್ರಗ್ಸ್ ಆಮದು ಮಾಡಿಕೊಂಡು ವಿವಿಧ ಕಡೆ ಸಾಗಾಟ ಮಾಡಿದ್ದೀರಿ ಹಾಗೂ ಮನಿ ಲಾಂಡ್ರಿಂಗ್ ಕೇಸ್ ಇದೆ ಎಂದು ಹೆದರಿಸಿ 72,93 ಲಕ್ಷ ರೂ. ವಂಚಿಸಿದರ ಪ್ರಕರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ನಗರದ ಪ್ರಭಾ ಎಂ.(81) ಎಂಬುವರಿಗೆ ಶರತ್ ವರ್ಮಾ, ವಿಜನ ಖನ್ನಾ ಎಂಬ ಅಪರಿಚಿತರು ವಂಚಿಸಿದ್ದಾರೆ. ಬೇರೆ ಬೇರೆ ನಂಬರ್‌ಗಳಿಂದ ಕರೆ ಮಾಡಿದ ಶರತ್ ವರ್ಮಾ, ವಿಜನ ಖನ್ನಾ, ನಿಮ್ಮ ಮೇಲಿನ ಪ್ರಕರಣ ತೆಗೆದು ಹಾಕಬೇಕಾದರೆ, ಹಣವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಬೇಕು ಎಂದು ಹೇಳಿ ಹಣ ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಯರ್ರಿಂಗಳಿಯಲ್ಲಿ ನೀರಿಗಾಗಿ ಪರದಾಟ

▸ ಪುಷ್ಪವತಿ ಜಿಎಂ ಬಸಯ್ಯ

ಕುರುಗೋಡು: ತಾಲೂಕಿನ ಯರ್ರಿಂಗಳಿ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಗೌರಿಶಂಕರ ನಗರ ಕುಡಿಯವ ನೀರಿನ ವಿಚಾರದಲ್ಲಿ ಮಲತಾಯಿ ಧೋರಣೆ ತೋರಿಸಲಾಗುತ್ತಿದೆ ಎಂದು ಒಂದನೇ ವಾರ್ಡ್‌ನ ಮಹಿಳೆಯರು ನೀರು ಪೂರೈಕೆಯಾಗದೆ ನಲ್ಲಿ ಮುಂದೆ ಖಾಲಿ ಕೊಡಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ದಿಗಂತ ವಿಶೇಷ

ಬೇಸಿಗೆಯಲ್ಲಿ ನೀರು ಸಮರ್ಪಕವಾಗಿ ಪೂರೈಕೆ ಮಾಡುವುದು ಸ್ಥಳೀಯ ಆಡಳಿತದ ಆದ್ಯ ಕರ್ತವ್ಯವಾಗಿದೆ ಆದರೆ ಗ್ರಾಮದ ಎಲ್ಲಾ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿದೆ. ಆದರೆ ಒಂದನೇ ವಾರ್ಡ್‌ನ ಗೌರಿ ಶಂಕರ ನಗರದಲ್ಲಿ ಮಾತ್ರ ಇಪ್ಪತ್ತು ದಿನಗಳಿಗೊಮ್ಮೆ ನೀರು ಪೂರೈಕೆ ಆಗುತ್ತಿದೆ. ಸುಮಾರು 130 ಮನೆಗಳಿದ್ದು ಒಂದೇ ಒಂದು ಹನಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಕೊಡುತ್ತಿಲ್ಲ. ಇದರ ವಿಚಾರವಾಗಿ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಅಧಿಕಾರಿಗಳು ಎಷ್ಟೇ ಭಾರಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಮನವಿ ಮಾಡಿದರು ಕಿವಿಗೊಡದೆ ಅಧಿಕಾರಿಗಳು ಕುಡಿಯವ ಮತ್ತು ಬಳಕೆ ನೀರು ಒಂದೇ ಆಗಿವೆ. ಆದರೂ ಸಹ 15ರಿಂದ 20ದಿನ ಆದರೂ ಕುಡಿಯುವ ನೀರಿಲ್ಲ ಹೀಗೆ ಮುಂದುವರೆದರೆ ಖಾಲಿ ಕೊಡಗಳನ್ನು ಹಿಡಿದು ಗ್ರಾಪಂ ಮುಂಭಾಗದಲ್ಲಿ ಧರಣಿ ನಡೆಸಲಾಗುವುದು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಒಂದನೇ ವಾರ್ಡ್‌ನ ಗೌರಿ ಶಂಕರ ನಗರದಲ್ಲಿ ಸಮಪರ್ಕವಾಗಿ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ ಬಿರು ಬೇಸಿಗೆಯಲ್ಲಿ ನೀರು ಪೂರೈಕೆ ಆಗದೆ ಬಹಳ ತೊಂದರೆಯಾಗಿದೆ. ಬೇರೆ ವಾರ್ಡ್‌ಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಮಾಡಿ ನಮ್ಮ ವಾರ್ಡ್‌ನಲ್ಲಿ ನೀರು ಪೂರೈಕೆ ಮಾಡಲು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ.

■ ಎ.ಚಿದಾನಂದ, ಗೌರಿ ಶಂಕರ, ಯರ್ರಿಂಗಳಿ ಗ್ರಾಮ ನಿವಾಸಿಗಳು

ಕುಡಿಯುವ ನೀರಿಗೆ ಹೊಸ ಬೋರ್‌ವೆಲ್ ಕೊರೆಯಿಸಿ ಗ್ರಾಮದ ಗೌರಿ ಶಂಕರ ನಗರದಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುವಂತೆ ಮಾಡಲಾಗುವುದು. ಎರಡು ದಿನಗಳಲ್ಲಿ ನೀರಿನ ಸಮಸ್ಯೆಗೆ ಪರಿಹಾರ ನೀಡಲಾಗುವುದು.

■ ಪರುಶುರಾಮ, ಯರ್ರಿಂಗಳಿ ಗ್ರಾಪಂ ಪಿಡಿಒ

ಜಂಬುನಾಥೇಶ್ವರ ಸ್ವಾಮಿ ರಥೋತ್ಸವ ಅದ್ಧೂರಿ

ವಿಜಯನಗರ: ಹೊಸಪೇಟೆ ನಗರದ ಹೊರವಲಯದಲ್ಲಿರುವ ಜಂಬುನಾಥ ಬೆಟ್ಟದಲ್ಲಿರುವ ಐತಿಹಾಸಿಕ ಜಂಬುನಾಥೇಶ್ವರ ಸ್ವಾಮಿಯ ರಥೋತ್ಸವ ಸಾವಿರಾರು ಭಕ್ತರ ಮಧ್ಯೆ ಸಂಭ್ರಮ, ಸಡಗರದಿಂದ ನಡೆಯಿತು.

ಪ್ರತಿ ವರ್ಷ ಚೈತ್ರ ಮಾಸ ಶುಕ್ಲ ಪಕ್ಷದ ತ್ರಯೋದಶಿ ನಿಮಿತ್ತ ಮಂಗಳವಾರ ಸಂಜೆ ನಡೆದ ಜಾತ್ರಾ ವೈಭವದಲ್ಲಿ ಭಕ್ತರು ಮಿಂದೆದ್ದರು. ದೇವಸ್ಥಾನದ ಆವರಣದಲ್ಲಿ ರಥವನ್ನು ಎಳೆದು ಮತ್ತೆ ಮೂಲ ಸ್ಥಾನಕ್ಕೆ ತಂದು ನಿಲ್ಲಿಸಿದರು.

ರಥೋತ್ಸವದ ಉದ್ದಕ್ಕೂ ಭಕ್ತರು ಭಕ್ತಿ ಭಾವದೊಂದಿಗೆ ಬಾಳೆಹಣ್ಣು, ಉತ್ತತ್ತಿ ಅರ್ಪಿಸಿ ಸಂಭ್ರಮಿಸಿದರು.

ಇದಕ್ಕೂ ಮೊದಲು ಅರ್ಚಕರು ದೇವಸ್ಥಾನದಲ್ಲಿ ವಿಶೇಷ ಪೂಜೆಯ ನಂತರ ಪಲ್ಲಕ್ಕಿಯಲ್ಲಿ ಜಂಬುನಾಥೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಜಾನಪದ ಕಲಾತಂಡಗಳಾದ ಡೊಳ್ಳು ಕುಣಿತ, ವೀರಗಾಸೆ, ಸುಗ್ಗಿ ಕುಣಿತ ಗಮನ ಸೆಳೆದವು.

ದಾವಣಗೆರೆ, ಕೊಪ್ಪಳ, ಗದಗ, ಹಾವೇರಿ ಸೇರಿದಂತೆ ಬಳ್ಳಾರಿ ಜಿಲ್ಲೆಯ ಕಂಪ್ಲಿ, ಸಿರುಗುಪ್ಪ, ಸಂಡೂರು, ಕೂಡ್ಲಿಗಿ, ಹೂವಿನಹಡಗಲಿ ಸೇರಿದಂತೆ ತಾಲ್ಲೂಕಿನ ಕಲ್ಲಳ್ಳಿ, ಗಾದಿಗನೂರು, ಕಾರಿಗನೂರು, ಕೊಂಡ ನಾಯಕನಹಳ್ಳಿಗಳ ಗ್ರಾಮಸ್ಥರು ರಥೋತ್ಸವಕ್ಕೆ ಸಾಕ್ಷಿಯಾದರು.



ಬಾಲಭಾರತಿಯಲ್ಲಿ ಉಚಿತ ಸಂಸ್ಕಾರ ಶಿಬಿರ

ಹೂವಿನ ಹಡಗಲಿ: ಶೃಂಗೇರಿಯ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ದಕ್ಷಿಣಾಮ್ನಾಯ ಶ್ರೀಶಾರದಾ ಪೀಠದ ವತಿಯಿಂದ ವಿಧುಶೇಖರ ಭಾರತೀ ಮಹಾಸ್ವಾಮಿಗಳ ದಿವ್ಯ ಮಾರ್ಗದರ್ಶನದಲ್ಲಿ ಇದೆ ಮೊಟ್ಟ ಮೊದಲ ಬಾರಿಗೆ ಬಾಲಭಾರತಿ' ಹೆಸರಿನ ಅಡಿಯಲ್ಲಿ 8 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಸಂಸ್ಕಾರ ಶಿಬಿರವನ್ನು ಕರ್ನಾಟಕದಾದ್ಯಂತ ಏರ್ಪಡಿಸಲಾಗಿದೆ.



ಈ ನಿಟ್ಟನಲ್ಲಿ ಇಡೀ ರಾಜ್ಯದಲ್ಲಿಯೇ ಪ್ರಪ್ರಥಮ ಶಿಬಿರವನ್ನು ಹೂವಿನಹಡಗಲಿ ಪಟ್ಟಣದಲ್ಲಿ ಇದೇ 2026ನೇ ಏ.5ರಿಂದ 15ರವರೆಗೆ ವಿಜಯನಗರ ಬಡಾವಣೆಯ ಶ್ರೀನಾವಿಕ ಪ್ರತಿಷ್ಠಾನದ ಸಭಾಭವನದಲ್ಲಿ ಆಯೋಜಿಸಿರುವುದು ಹೆಮ್ಮೆಯ ಸಂಗತಿ. ಪ್ರತಿದಿನ ಸಂಜೆ 5ರಿಂದ ರಾತ್ರಿ 8 ಘಂಟೆಯವರೆಗೆ ನಡೆಯುವ ಈ ಶಿಬಿರದಲ್ಲಿ ವಿದ್ವಾನ್ ಕರಣಂ ಶಶಿಕಾಂತ ಗುರೂಜಿ ಅವರು ಮಕ್ಕಳಿಗೆ ಸ್ತೋತ್ರ, ನೀತಿ ಶಿಕ್ಷಣ, ಸಂಸ್ಕೃತ ಸಂಭಾಷಣೆ, ಹಾಡು, ಕಥೆ, ಗಣಿತ, ಮನೋರಂಜನೆ ಇತ್ಯಾದಿ ವಿಷಯಗಳನ್ನು ಕಲಿಸುತ್ತಾರೆ. ಶಿಬಿರಾಂತ್ಯದಲ್ಲಿ ಮಕ್ಕಳಿಗೆ ಪ್ರಮಾಣಪತ್ರವನ್ನು ಶೃಂಗೇರಿ ಮಠದಿಂದಲೇ ನೀಡಲಾಗುವುದು. ಈ ಶಿಬಿರವು ಸಂಪೂರ್ಣವಾಗಿ ಉಚಿತವಾಗಿದ್ದು ಸೀಮಿತ ಸಂಖ್ಯೆಯಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ಅವಕಾಶ ಇರುವುದರಿಂದ ಮೊದಲು ಪ್ರವೇಶಾತಿ ಪಡೆದವರಿಗೆ ಮಾತ್ರ ಕಲಿಕೆಗೆ ಅವಕಾಶ. ನಿಮ್ಮ ಮಕ್ಕಳ ಹೆಸರನ್ನು ಬೇಗನೇ ನೋಂದಾಯಿಸಲು ಮಹೇಶ ಬೀರಬ್ಬಿ 8266868682 ಅವರನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ದ್ರಾಕ್ಷಿ ಬೆಳೆಗಾರರ ನೆರವಿಗೆ ಸರ್ಕಾರ ತಕ್ಷಣ ಧಾವಿಸಲಿ: ಕೇಶವ ಪ್ರಸಾದ್

ವಿಜಯಪುರ: ಕಳೆದ ಎರಡು ದಿನಗಳಿಂದ ಸುರಿದ ಭಾರೀ ಆಲಿಕಲ್ಲು ಮಳೆಯಿಂದ ವಿಜಯಪುರ ತಾಲೂಕು, ಬಬಲೇಶ್ವರ ತಾಲೂಕು, ನಾಗಠಾಣ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ದ್ರಾಕ್ಷಿ ಬೆಳೆಗಳಿಗೆ ಭಾರೀ ಹಾನಿಯಾಗಿದೆ. ಇದರಿಂದಾಗಿ ದ್ರಾಕ್ಷಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಅಪಾರ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ರೈತರ ನೆರವಿಗೆ ಸರ್ಕಾರ ಧಾವಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್ ಎಸ್.ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹಾಗೂ ಸ್ಥಳೀಯ ಜಿಲ್ಲಾಡಳಿತವು ಕೂಡಲೇ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ, ಬೆಳೆ ನಷ್ಟದ ಸಮಗ್ರ ಸರ್ವೇ ನಡೆಸಿ ರೈತರ ನೆರವಿಗೆ ಮುಂದಾಗಬೇಕು. ಪ್ರತಿಕೂಲ ಅಲ್ಲದ ವಾತಾವರಣದ ಮಧ್ಯದಲ್ಲಿಯು ಕೂಡ ಲಕ್ಷಾನುಗಟ್ಟಲೆ ಖರ್ಚು ಮಾಡಿ ಬೆಳದಂತಹ ಬೆಳೆಯು ಕಳೆದ 15 ದಿನಗಳಿಂದ ಜಿಲ್ಲೆಯ ಬೇರೆ ಬೇರೆ ಪ್ರದೇಶದಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ಕಟಾವಿಗೆ ಬಂದಂತ ಹಾಗೂ ಕಟಾವಾದಂತ ದ್ರಾಕ್ಷಿ ಬೆಳೆಯು ಮಳೆಗೆ ಮಣ್ಣು ಪಾಲಾಗುತ್ತಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಹಾನಿಗೊಳಗಾದ ದ್ರಾಕ್ಷಿ ಬೆಳೆಗಾರರಿಗೆ ಗರಿಷ್ಠ ಮೊತ್ತದ ಪರಿಹಾರವನ್ನು ಘೋಷಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಬಿಜೆಪಿ ಪ್ರಚಾರ ಸಭೆ | ಸಚಿವ ಸೋಮಣ್ಣ ಅಸಮಾಧಾನ
ಕೈ ಕಾರ್ಯಕರ್ತರಿಂದ ಕೇಕೆ, ಬೈಕ್‌ನಿಂದ ಕರ್ಕಶ ಶಬ್ಧ

ಬಾಗಲಕೋಟೆ: ಉಪಚುನಾವಣೆಯ ಹಿನ್ನೆಲೆಯಲ್ಲಿ ಐಹೊಳೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಸಭೆ ನಡೆಯುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಧ್ವಜವನ್ನು ಹಿಡಿದುಕೊಂಡು ಬೈಕ್‌ದಿಂದ ಕರ್ಕಶ ಶಬ್ಧವನ್ನು ಮಾಡುವ ಮೂಲಕ ಸಭೆಗೆ ಅಡ್ಡಿಪಡಿಸುವ ಘಟನೆ ನಡೆಯಿತು.

ಶಾಂತರೀತಿಯಲ್ಲಿ ಬಿಜೆಪಿ ಸಭೆನಡೆದಸ್ಥಳಕ್ಕೆ ಬಂದ ಕಾಂಗ್ರೆಸ್ ಕಾರ್ಯಕರ್ತರ ಗುಂಪು ಸಭೆಗೆ ತೊಂದರೆ ಕೊಡಲು ಯತ್ನಿಸಿತು. ಕಾಂಗ್ರೆಸ್ ಧ್ವಜ ಹಿಡಿದು ಬೈಕ್ ಮೇಲೆ ಬಂದ ಕೈ ಕಾರ್ಯಕರ್ತರು ದೊಡ್ಡ ಧ್ವನಿಯಲ್ಲಿ ಕೂಗಾಡಿ, ಕೇಕೆ ಹಾಕಿ ಬೈಕ್ ಶಬ್ದ ಮಾಡುತ್ತ ಬಿಜೆಪಿ ಕಾರ್ಯಕರ್ತರನ್ನು ಪ್ರಚೋದಿಸುವ ಯತ್ನ ಮಾಡಿದರು. ತಕ್ಷಣವೇ ಬಿಜೆಪಿ ನಾಯಕರು ಕಾರ್ಯಕರ್ತರಿಗೆ ಶಾಂತ ರೀತಿಯಿಂದ ಇರಲು ಮನವಿ ಮಾಡಿದರು.



ನಿಯಂತ್ರಣಕ್ಕೆ ಬಾರದ ಕಾಂಗ್ರೆಸ್ ಕಾರ್ಯಕರ್ತರ ವರ್ತನೆ ನೋಡಿ ಕೇಂದ್ರ ಸಚೀವ ವಿ.ಸೋಮಣ್ಣ ಅವರು ಅಧಿಕಾರಿಗಳಿಗೆ ಕರೆ ಮಾಡಿ ಬಿಜೆಪಿ ಸಭೆಗೆ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಿದರು.

ಈ ವೇಳೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಮಾತನಾಡಿ, ಬಾಗಲಕೋಟೆ ಮತಕ್ಷೇತ್ರದಲ್ಲಿ ಮತದಾರರು ನಿರ್ಭೀತವಾಗಿ ಮತಯಾಚನೆ ಮಾಡದ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಸಭೆಯನ್ನು ಸಹಿಸದ ಕಾಂಗ್ರೆಸ್ಸಿಗರು ಚುನಾವಣೆಯಲ್ಲಿ ಮತದಾರರಿಗೆ ಮಾಡುವ ತೊಂದರೆಯನ್ನು ಅರ್ಥೈಸಿಕೊಳ್ಳಿ. ಎಲ್ಲ ಮತಗಟ್ಟೆಗಳನ್ನು ಸೂಕ್ಷ್ಮ ಮತಗಟ್ಟೆಗಳನ್ನಾಗಿ ಘೋಷಿಸಿ. ರಕ್ಷಣೆಗಾಗಿ ಪ್ಯಾರಾ ಮಿಲಿಟರಿ ನೇಮಿಸಿ ಎಂದು ಮನವಿ ಮಾಡಿದರು. ಕಾಂಗ್ರೆಸ್ ಗಲಾಟೆಯ ಬಳಿಕ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದರು.



ಮಿಂಚಿದ ಸಿಎಸ್‌ಕೆ ಬ್ಯಾಟರ್ಸ್ | ಸರ್ಫರಾಜ್ ಖಾನ್ ಮೋಡಿ

ಆಯುಷ್ ಮಾತ್ರೆ ಅಬ್ಬರ: ಚೆನ್ನೈ 209

•ಚೆನ್ನೈ: ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ದುಬೆ ಹಾಗೂ ಸರ್ಫರಾಜ್ ಖಾನ್ ಅವರ ಅಬ್ಬರದ ಫಿನಿಶಿಂಗ್ ಸಿಕ್ಕ ನಂತರ ಚೆನ್ನೈ ಸೂಪರ್ ಕಿಂಗ್ಸ್ ಪಂಜಾಬ್ ತಂಡದ ವಿರುದ್ಧ ದೊಡ್ಡ ಸ್ಕೋರ್ ನಿರ್ಮಿಸಿತು.

ಮೊದಲ ಪಂದ್ಯದಲ್ಲಿ ಹೀನಾಯ ಸೋಲು ಕಂಡ ನಂತರ ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್ ಪಡೆ ಚೇತರಿಸಿಕೊಂಡಿತು. 19ವರ್ಷದ ಆಯುಷ್ ಮಾತ್ರೆ, ಬಿರುಸಿನ ಅರ್ಧ ಶತಕ ಬಾರಿಸಿದರೆ, ಸರ್ಫರಾಜ್ ಖಾನ್ ಮಧ್ಯಮ ಕ್ರಮಾಂಕದಲ್ಲಿ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಬೌಲರ್‌ಗಳನ್ನು ದಂಡಿಸಿದರು. ದುಬೆ ಅಂತಿಮ ಓವರ್‌ಗಳಲ್ಲಿ ಕಮಾಲ್ ಮಾಡಿದರು. ಇದರೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 209 ರನ್ ಗಳಿಸಿದೆ. ಪಂಜಾಬ್ ಕಿಂಗ್ಸ್ 5 ವಿಕೆಟ್‌ಗಳನ್ನು ಪಡೆಯಿತು.

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಚೆನ್ನೈ ಸೂಪರ್ ಕಿಂಗ್ಸ್ ಕಳಪೆ ಆರಂಭದಲ್ಲಿ ಸಂಜು ಸ್ಯಾಮ್ಸನ್ ವಿಕೆಟ್ ಕಳೆದುಕೊಂಡಿತು. ರುತುರಾಜ್ ಸೆಟ್ ಆಗುವುದಕ್ಕೆ ಸಮಯ ತೆಗೆದುಕೊಂಡರು. ಈ ನಡುವೆ ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾತ್ರೆ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಚಾಹಲ್ ಮತ್ತು ವೈಶಾಕ್ ತಡೆಯಲು ಪ್ರಯತ್ನಿಸಿದರೂ ಮಾತ್ರೆ, ಮಾತ್ರ ಅಬ್ಬರದ ಬ್ಯಾಟಿಂಗ್ ಅನ್ನೇ ಮುಂದುವರಿಸಿದರು. ಗಾಯಕ್ವಾಡ್ ಸಿಂಗಲ್‌ಗಳ ಮೂಲಕ ಜವಾಬ್ದಾರಿ ನಿಭಾಯಿಸಿ 28 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಕಾರ್ತಿಕ್ ಶರ್ಮ ಬೇಗನೆ ವಿಕೆಟ್ ಒಪ್ಪಿಸಿದರು.

ಮಾತ್ರೆ ಅರ್ಭಟ: ಒಂದು ಹಂತದಲ್ಲಿ ಮತ್ತೊಮ್ಮೆ ಕುಸಿತದ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 19 ವರ್ಷದ ಯುವಕ ಆಯುಷ್ ಮಾತ್ರೆ, ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೊದಲಿನ ಮೂರು–ನಾಲ್ಕು ಬಾಲ್‌ಗಳನ್ನು ಗೌರವಿಸಿದ ಆಯುಷ್ ಮುಂದೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸೆಟ್ ಆಗುವ ಮುಲಾಜಿಕೆ ಹೋಗದೆ ಬಿರುಸಿನ ಸಿಕ್ಸರ್‌ಗಳನ್ನು ಬಾರಿಸುತ್ತಾ, ಚೆನ್ನೈ ತಂಡವನ್ನು ಕುಸಿತದಿಂದ ಪಾರು ಮಾಡಿದರು. ವೇಗಿಗಳನ್ನು ದಂಡಿಸುತ್ತಾ ಬಂದ ಅವರಿಗೆ ಇತ್ತ ನಾಯಕ ರುತುರಾಜ್ ಗಾಯಕ್ವಾಡ್ ಸಾಥ್ ನೀಡಿದರು. ಆರಂಭಿಕರಾಗಿ ಬಂದರೂ ಗಾಯಕ್ವಾಡ್ ಹೆಚ್ಚಿನ ಬಾಲ್ ಎದುರಿಸಲೇ ಇಲ್ಲ. ಆಯುಷ್ ಮಾತ್ರೆ 5 ಗಗನದೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. 6 ಆಕರ್ಷಕ ಬೌಂಡರಿಗಳನ್ನು ಬಾರಿಸಿದರು. 29 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ಅವರು, ಒಟ್ಟು 43 ಬಾಲ್ ಎದುರಿಸಿ 73 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು.



ಸರ್ಫರಾಜ್ ಮಿಂಚಿನಾಟ: ಉತ್ತಮ ಆರಂಭ ಪಡೆದರೂ ಮಧ್ಯಮ ಓವರ್‌ಗಳಲ್ಲಿ ದಿಢೀರ್ ಎರಡು ವಿಕೆಟ್ ಕಳೆದುಕೊಂಡ ಚೆನ್ನೈ ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕಿಕೊಂಡಿತ್ತು. ದುಬೆ ಸೆಟ್ ಆಗುವುದಕ್ಕೆ ಸಮಯ ತೆಗೆದುಕೊಂಡರು. ದಿಢೀರ್ 2 ವಿಕೆಟ್ ಬಿದ್ದವು. ಈ ಹಂತದಲ್ಲಿ ಬ್ಯಾಟಿಂಗ್‌ಗೆ ಬಂದ ಸರ್ಫರಾಜ್ ಖಾನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 12 ಬಾಲ್ ಮಾತ್ರ ಎದುರಿಸಿದ ಅವರು, 6 ಬೌಂಡರಿ 1 ಸಿಕ್ಸರ್ ಬಾರಿಸಿದರು. ಆರು ಬೌಂಡರಿಗಳಲ್ಲಿ 5 ಬೌಂಡರಿಗಳು ವಿಕೆಟಿನ ಹಿಂದುಗಡೆ ಇದ್ದವು. ಬೌಲರ್‌ನ ವೇಗ ಬಳಸಿಕೊಂಡು ಅತ್ಯುತ್ತಮ ಆಟವಾಡಿ ತಂಡದ ಮೊತ್ತವನ್ನು ಹಿಗ್ಗಿಸಿದ್ದಲ್ಲದೆ, ಒತ್ತಡವನ್ನು ಪಂಜಾಬ್‌ನತ್ತ ನೂಕಿದರು. 32 ರನ್ ಬಾರಿಸಿ ಅವರು ವಿಕೆಟ್ ಕಳೆದುಕೊಂಡಂತೆ ಇತ್ತ ಸೆಟ್ ಆಗಿ ಸ್ಲಾಗ್ ಓವರ್‌ಗಳಿಗಾಗಿ ಕಾಯುತ್ತಿದ್ದ ದುಬೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಂದು ಹಂತದಲ್ಲಿ 14 ಬಾಲ್‌ಗಳಲ್ಲಿ 14 ರನ್ ಗಳಿಸಿದ್ದ ದುಬೆ ಕೊನೆಯ ಓವರ್‌ಗಳಲ್ಲಿ ಸಿಕ್ಸರ್ ಹಾಗೂ ಬೌಂಡರಿಗಳ ಮೂಲಕ ಮುಂದಿನ 13 ಬಾಲ್‌ಗಳಲ್ಲಿ ಬರೋಬ್ಬರಿ 31 ರನ್ ಬಾರಿಸಿದರು. ಇದರೊಂದಿಗೆ ತಂಡದ ಮೊತ್ತ 209ಕ್ಕೆ ಹಿಗ್ಗಿತು. ದುಬೆ 45 ರನ್‌ಗಳಿಸಿದರು.

ಎರಡನೇ ಪಂದ್ಯದಲ್ಲಿ ಗುಜರಾತ್–ರಾಜಸ್ಥಾನ ಫೈಟ್

ದಿಲ್ಲಿ–ಮುಂಬೈ ಸೆಣಸು ಇಂದು

ಹೊಸದಿಲ್ಲಿ: ಶನಿವಾರದ ಸೂಪರ್ ವಿಕೆಂಡ್ ಪಂದ್ಯಗಳಲ್ಲಿ ದಿಲ್ಲಿ–ಮುಂಬೈ, ಗುಜರಾತ್–ರಾಜಸ್ಥಾನ ಪಂದ್ಯಗಳು ನಡೆಯಲಿವೆ. ಇಂಡಿಯನ್ ಪ್ರೀಮಿಯರ್ ಲೀಗ್‌ನ ಬ್ಲಾಕ್‌ಬಾಸ್ಟರ್ ಪಂದ್ಯಗಳು ಶುರುವಾಗಿವೆ. ಚುಟುಕು ಕ್ರಿಕೆಟ್ ಹಬ್ಬಕ್ಕೆ ಇನ್ನಷ್ಟು ಕಿಕ್ ನೀಡುವ ನಿಟ್ಟಿನಲ್ಲಿ ಎಂಟು ವಾರಾಂತ್ಯ ದಿನಕ್ಕೆ ಎರಡು ಪಂದ್ಯಗಳು ನಡೆಯುತ್ತವೆ.

ಮೊದಲ ಪಂದ್ಯದಲ್ಲಿ ಗೆಲುವಿನೊಂದಿಗೆ ಶುರು ಮಾಡಿರುವ ಮುಂಬೈ ಇಂಡಿಯನ್ಸ್ ಹಾಗೂ ದಿಲ್ಲಿ ಕ್ಯಾಪಿಟಲ್ಸ್ ತಂಡಗಳು ಸೆಣಸಾಟ ನಡೆಸಲಿವೆ. ಕಳೆದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ಕೊನೆಯಲ್ಲಿ ಎಡವಿ ಹೊರಬಿದ್ದಿತ್ತು ಮುಂಬೈ. ಇತ್ತ ದಿಲ್ಲಿ ಕೂಡ ಅಂಥದ್ದೇ ಪ್ರದರ್ಶನದಿಂದ ಗಮನ ಸೆಳೆದಿತ್ತು. ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಗೆಲ್ಲಲೇಬೇಕಾದ ಕೊನೆ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿತ್ತು. ಹೊಸ ಪಂದ್ಯಾವಳಿಯಲ್ಲಿ ನಿರೀಕ್ಷಿತ ಆರಂಭ ಪಡೆದಿರುವ ಉಭಯ ತಂಡಗಳು ಗೆಲುವಿನ ನಾಗಾಲೋಟ ಮುಂದುವರಿಸುವ ಭರವಸೆಯಲ್ಲಿವೆ.

ಎರಡನೇ ಪಂದ್ಯದಲ್ಲಿ ಗೆದ್ದಿರುವ ರಾಜಸ್ಥಾನ ಮತ್ತು ಪರಭಾವ ಕಂಡಿರುವ ಗುಜರಾತ್ ತಂಡಗಳು ಮುಖಾಮುಖಿಯಾಗಲಿವೆ. ಗುಜರಾತ್ ತನ್ನ ನಿರೀಕ್ಷಿತ ಪ್ರದರ್ಶನ ನೀಡದೆ ಹಿನ್ನಡೆ ಅನುಭವಿಸಿತ್ತು. ಇತ್ತ ರಾಜಸ್ಥಾನ ತಂಡ ಚೆನ್ನೈ ವಿರುದ್ಧ ಗೆದ್ದು ಬೀಗಿತ್ತು. ಎರಡನೇ ಪಂದ್ಯದಲ್ಲಿ ಅದೇ ಗೆಲುವಿನ ಆಟ ಆಡುವುದಕ್ಕೆ ಆರ್‌ಆರ್ ಸಿದ್ಧವಾದರೆ ಪುಟಿದೇಳಲು ಅಣಿಯಾಗಿದೆ.

ರಾಜಸ್ಥಾನಕ್ಕೆ ಭರವಸೆ



ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸಮಸ್ತ ರಾಜಸ್ಥಾನ ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿ ಹೆಚ್ಚಿಸಿದ್ದಾರೆ. ಜೈಸ್ವಾಲ್ ಕೂಡ ಅದೇ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ತಂಡದಲ್ಲಿ ಆರ್ಚರ್, ಜಡೇಜಾ, ನಾಂದ್ರೆ ಅಂತಹ ಬೌಲರ್‌ಗಳಿದ್ದಾರೆ. ಅದೇ ರೀತಿ, ರಿಯಾನ್ ಪರಾಗ್, ಜುರೇಲ್, ಫೆರಾರಿಯಾ ಅಂತಹ ಬ್ಯಾಟರ್‌ಗಳೂ ಇದ್ದಾರೆ.

ಪುಟಿದೇಳುವುದೇ ಗುಜರಾತ್?



ನಾಲ್ಕು ಪ್ರಮುಖ ಬ್ಯಾಟರ್‌ಗಳೊಂದಿಗೆ ಕಣಕ್ಕಿಳಿಯುವ ಗುಜರಾತ್ ಪುಟಿದೇಳುವ ಭರವಸೆಯಲ್ಲಿದೆ. ಗಿಲ್, ಸುದರ್ಶನ್, ಬಟ್ಲರ್ ಮತ್ತು ಪಿಲಿಪ್ಸ್ ಅವರು ತಂಡದ ಬ್ಯಾಟಿಂಗ್ ಜವಾಬ್ದಾರಿ ತೆಗೆದುಕೊಂಡರೆ, ಬೌಲಿಂಗ್‌ನಲ್ಲಿ ಸುಂದರ್, ಅರ್ಶದ್ ಖಾನ್, ಪ್ರಸಿದ್ಧ ಕೃಷ್ಣ, ರಬಾಡ ಅಂಥವರಿದ್ದಾರೆ. ಕಳೆದ ಪಂದ್ಯದಲ್ಲಿ ಸೋತರು ಕಂಬ್ಯಾಕ್ ಮಾಡಿ ಒತ್ತಡ ಹೇರಿದ ವಿಶ್ವಾಸವೂ ತಂಡಕ್ಕಿದೆ.

» ಯಾವಾಗ: ಶನಿವಾರ
» ಎಲ್ಲಿ: ಅಮದಾಬಾದ್
» ಸಮಯ: 7:30

ಮುಂಬೈಗೆ ಗೆಲುವಿನ ವಿಶ್ವಾಸ



ಮೊದಲ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದ ಮುಂಬೈ ಇಂಡಿಯನ್ಸ್ ಭಾರೀ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಮುಖ್ಯವಾಗಿ ತಂಡದ ಆನೆ ಬಲ ರೋಹಿತ್ ಶರ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದರು. ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಹಾರ್ದಿಕ್ ಪಂಡ್ಯ ಹೀಗೆ ಬ್ಯಾಟಿಗರ ಪಡೆಯನ್ನೇ ಹೊತ್ತಿಕೊಂಡಿರುವ ಮುಂಬೈ ಸವಾಲಿಗೆ ಸಿದ್ಧ ಎಂದಿದೆ. ಬೌಲಿಂಗ್‌ನಲ್ಲೂ ಬೂಮ್ರಾ, ಬೋಲ್ಟ್ ಅಂಥವರು ಭರವಸೆ ಹೆಚ್ಚಿಸಿದ್ದಾರೆ.

ದಿಲ್ಲಿಯಲ್ಲಿ ಯುವಕರ ಆಟ



ಇತ್ತ ಹೋದ ಪಂದ್ಯವನ್ನು ಗೆದ್ದು ಬೀಗಿದ ದಿಲ್ಲಿ ಕೂಡ ವಿಶ್ವಾಸದಲ್ಲಿದೆ. ಮುಖ್ಯವಾಗಿ ಸಮೀರ್ ರಿಜ್ವಿ ಕಳೆದ ಪಂದ್ಯದಲ್ಲಿ ಆಡಿದ ಬ್ಯಾಟಿಂಗ್ ತಂಡದ ಬಲವನ್ನು ತೋರಿಸಿದೆ. ರಾಹುಲ್, ಅಕ್ಷರ್ ಅಂತಹ ಅನುಭವಿ ಬ್ಯಾಟರ್‌ಗಳು ತಂಡದಲ್ಲಿದ್ದಾರೆ. ಮುಖ್ಯವಾಗಿ ಯುವಕರು ತಂಡದಲ್ಲಿದ್ದು, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ತಂಡದ ಭರವಸೆ ಹೆಚ್ಚಿಸಿದ್ದಾರೆ.

» ಯಾವಾಗ: ಶನಿವಾರ
» ಎಲ್ಲಿ: ದಿಲ್ಲಿ
» ಸಮಯ: 3:30

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕಿರುಸುದ್ದಿ

ಅಭಿಷೇಕ್ ಶರ್ಮಗೆ ದಂಡ

•ಕೋಲ್ಕತ್ತಾ: ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮ ಅವರಿಗೆ ಬಿಸಿಸಿಐ ಭಾರೀ ದಂಡ ವಿಧಿಸಿದೆ. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಪಂದ್ಯದ ವೇಳೆ ಭರ್ಜರಿ ಬ್ಯಾಟಿಂಗ್ ಮಾಡಿ ಪಂದ್ಯ ಗೆಲುವಿನ ರೂವಾರಿ ಎನ್ನಿಸಿಕೊಂಡಿರುವ ಅವರು, ಐಪಿಎಲ್ ಮಾನದಂಡಗಳನ್ನು ಉಲ್ಲಂಘಿಸಿರುವ ನಿಟ್ಟಿನಲ್ಲಿ ಪಂದ್ಯ ಗಳಿಕೆಯ ಶೇ. 20ರಷ್ಟು ಹಣವನ್ನು ದಂಡವಾಗಿ ವಿಧಿಸಿದೆ. ಅಭಿಷೇಕ್ ಶರ್ಮ ಪಂದ್ಯದ ವೇಳೆ ಅನುಚಿತ ಭಾಷೆ ಪ್ರಯೋಗಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈಡನ್ ಗಾರ್ಡನ್ಸ್ ಪಂದ್ಯದ ವೇಳೆ ಅವರು ಅನುಚಿತ ಭಾಷೆ ಪ್ರಯೋಗಿಸಿದ್ದು, ಇದು ಐಪಿಎಲ್ ಮಾನದಂಡಗಳ 2.3ನೇ ವಿಧಿಯ ಪ್ರಕಾರ ಪ್ರಥಮ ದರ್ಜೆ ತಪ್ಪಾಗಿದೆ ಎಂದು ಬಣ್ಣಿಸಲಾಗಿದೆ. 48 ರನ್ ಗಳಿಸಿದ್ದ ಅವರು ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದ್ದರು.

ಬಾಕ್ಸಿಂಗ್: ಸೆಮಿಫೈನಲ್‌ಗೆ ಲಿನ್ ಯು–ಟಿಂಗ್

•ಹೊಸದಿಲ್ಲಿ: ಒಲಿಂಪಿಕ್ ಚಿನ್ನದ ಪದಕ ವಿಜೇತೆ ಲಿನ್ ಯು–ಟಿಂಗ್ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕ್ವಾರ್ಟರ್‌ಫೈನಲ್ ಪಂದ್ಯವನ್ನು ಗೆದ್ದು ಉತ್ತಮ ಆರಂಭ ಮಾಡಿದ್ದಾರೆ. ಲಿಂಗ ದೃಢೀಕರಣಕ್ಕಾಗಿ ಜೀನ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರ ಮೊದಲ ಸ್ಪರ್ಧೆಯಾಗಿದ್ದು, ಲಿನ್ ಭರ್ಜರಿ ಪ್ರದರ್ಶನ ನೀಡಿದ್ದಾರೆ. ತೈವಾನ್‌ನ ಈ ಆಟಗಾರ್ತಿ ಮಹಿಳೆಯರ 60 ಕೆಜಿ ವಿಭಾಗದಲ್ಲಿ ಥೈಲ್ಯಾಂಡ್‌ನ ತನನ್ಯ ಸೋಮ್ನುಕ್ ವಿರುದ್ಧ ಮೊದಲ ಪಂದ್ಯದಲ್ಲೇ 5–0 ಅಂತರದಲ್ಲಿ ಸುಲಭ ಜಯ ಸಾಧಿಸಿದರು. ಅದರ ಮುಂದುವರಿದಂತೆ, ಕ್ವಾರ್ಟರ್‌ಫೈನಲ್‌ನಲ್ಲಿ ಜಪಾನ್‌ನ ಟಾಪ್ ಸೀಡ್ ಆಯಾಕಾ ಟಗುಚಿ ವಿರುದ್ಧವೂ 5–0 ಅಂತರದಲ್ಲಿ ಗೆದ್ದು ಪ್ರಾಬಲ್ಯ ಮೆರೆದರು. ಪ್ರತಿ ರೌಂಡ್‌ನಲ್ಲೂ ಐದು ನ್ಯಾಯಾಧೀಶರಿಂದಲೂ ಪೂರ್ಣ 10 ಅಂಕಗಳನ್ನು ಪಡೆದು ಪರಿಪೂರ್ಣ ಪ್ರದರ್ಶನ ನೀಡಿದರು. 30 ವರ್ಷದ ಲಿನ್, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 57 ಕೆಜಿ ವಿಭಾಗದಲ್ಲಿ ಚಿನ್ನ ಗೆದ್ದ ನಂತರ ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ.

ಭಾರತ ಮೂಲದ ಬೋಧನಾ ಇಂಗ್ಲೆಂಡಿನ ನಂ.1 ಚೆಸ್ ಆಟಗಾರ್ತಿ



•ಲಂಡನ್: ಇಂಗ್ಲೆಂಡ್‌ನಲ್ಲಿ ಭಾರತೀಯ ಮೂಲದ ಚೆಸ್ ಪ್ರತಿಭೆ ಬೋಧನಾ ಶಿವನಂದನ್ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇತ್ತೀಚಿನ ಫಿಡೆ ರೇಟಿಂಗ್ ಪಟ್ಟಿಯ ಪ್ರಕಾರ, ಅವರು ಇಂಗ್ಲೆಂಡ್‌ನ ಅಗ್ರ ಮಹಿಳಾ ಚೆಸ್ ಆಟಗಾರ್ತಿಯಾಗಿದ್ದಾರೆ. ಕೇವಲ 11 ವರ್ಷದ ಬೋಧನಾ 2366 ರೇಟಿಂಗ್ ಅಂಕಗಳನ್ನು ಹೊಂದಿದ್ದು, ನಾಲ್ಕು ಬಾರಿ ಬ್ರಿಟಿಷ್ ಮಹಿಳಾ ಚಾಂಪಿಯನ್ ಲಾನ್ ಯಾವೋ ಅವರನ್ನು ಮೀರಿಸಿದ್ದಾರೆ. ಈ ಸಾಧನೆಯೊಂದಿಗೆ ಅವರು ಮೊದಲ ಬಾರಿಗೆ ವಿಶ್ವದ ಟಾಪ್ 100 ಮಹಿಳಾ ಆಟಗಾರ್ತಿಯರ ಪಟ್ಟಿಗೆ ಪ್ರವೇಶಿಸಿ, ಪ್ರಸ್ತುತ 72ನೇ ಸ್ಥಾನದಲ್ಲಿದ್ದಾರೆ. ತಮಿಳುನಾಡಿನ ತಿರುಚಿರಾಪಳ್ಳಿಯಿಂದ ಇಂಗ್ಲೆಂಡ್‌ಗೆ ವಲಸೆ ಹೋದ ಕುಟುಂಬದ ಮಗಳು ಬೋಧನಾ, 2020ರ ಲಾಕ್‌ಡೌನ್ ಸಮಯದಲ್ಲಿ ಚೆಸ್ ಆಟ ಆರಂಭಿಸಿದ್ದರು. ಈಗ ಅವರು ವೇಗವಾಗಿ ಬೆಳೆಯುತ್ತಿರುವ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದಾರೆ. ಕಳೆದ ವರ್ಷವೇ ಅವರು ವುಮನ್ ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟವನ್ನು ಪಡೆದಿದ್ದರು. ಈ ಸಾಧನೆಗೆ ಬ್ರಿಟನ್‌ನ ಮಾಜಿ ಪ್ರಧಾನಿ ರಿಷಿ ಸುನಕ್ ಕೂಡ ಅಭಿನಂದನೆ ಸಲ್ಲಿಸಿದ್ದು, ತಮ್ಮ ನಿವಾಸದಲ್ಲಿ ಅವರೊಂದಿಗೆ ಆಡಿದ ಅನುಭವವನ್ನು ನೆನಪಿಸಿಕೊಂಡಿದ್ದಾರೆ. ಒಟ್ಟಿನಲ್ಲಿ, ಅತಿ ಚಿಕ್ಕ ವಯಸ್ಸಿನಲ್ಲಿ ಬೋಧನಾ ಸಾಧಿಸಿರುವ ಈ ಯಶಸ್ಸು ಜಾಗತಿಕ ಚೆಸ್ ವಲಯದ ಗಮನ ಸೆಳೆದಿದೆ.

ಬಿಸಿಬಿಯಿಂದ ಬಿಸಿಸಿಐಗೆ ಪತ್ರ

» ಗೊಂದಲಗಳ ತೆರೆಗೆ – ವಿವಾದ ಬಗೆಹರಿಸಿಕೊಳ್ಳಲು ಮನವಿ
» ಬಾಂಗ್ಲಾ ಸರಣಿ ಮರುಪರಿಶೀಲನೆಗೆ ಕಳಕಳಿ

•ಮುಂಬೈ: ಹಿಂದೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಿರುದ್ಧ ಹತಾಶೆ ಹೊರಹಾಕಿ ನಾಟಕ ಮಾಡಿದ್ದ ಬಾಂಗ್ಲಾ ಕ್ರಿಕೆಟ್ ಸಂಸ್ಥೆ ವಿಶ್ವಕಪ್ ಪಂದ್ಯಾವಳಿ ನಂತರ ಮತ್ತೊಮ್ಮೆ ಮಂಡಿಯೂರಿದ್ದು, ವಿವಾದಗಳನ್ನು ಬಗೆಹರಿಸಿಕೊಳ್ಳಲು ಬಿಸಿಸಿಐ ಮುಂದೆ ಕೈಚಾಚಿದೆ.

ಬಾಂಗ್ಲಾದೇಶ ಹಾಗೂ ಭಾರತದ ರಾಜಕೀಯ ಬಿಕ್ಕಟ್ಟಿನ ನಂತರ ಬಿಸಿಸಿಐ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಕೆಕೆಆರ್ ತಂಡಕ್ಕೆ ಖರೀದಿಯಾಗಿದ್ದ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಪಂದ್ಯಾವಳಿಯಿಂದಲೇ ಹೊರಹಾಕಿತ್ತು. ಬದಲಾಗಿ ಬಿಸಿಸಿಐ ವಿರುದ್ಧ ಹತಾಶೆ ಹೊರಹಾಕಿದ್ದ ಬಿಸಿಬಿ ವಿಶ್ವಕಪ್ ಅನ್ನು ಬಹಿಷ್ಕರಿಸುವ ನಾಟಕ ಮಾಡಿ ಭಾರೀ ನಷ್ಟ ಎದುರಿಸಿತ್ತು. ಇದಲ್ಲದೆ ದೇಶದಲ್ಲಿ ಐಪಿಎಲ್ ಪ್ರಸಾರಕ್ಕೆ ನಿಷೇಧ ಹೇರಿತ್ತು.

ಇದೆಲ್ಲಾ ಚಟುವಟಿಕೆಗಳ ನಂತರ ಭಾರತ ಕ್ರಿಕೆಟ್ ಸಂಸ್ಥೆ ಮುಂದೆ ಕೈಚಾಚಿರುವ ಬಾಂಗ್ಲಾದೇಶ ಕ್ರಿಕೆಟ್ ಎಲ್ಲ ಗೊಂದಲಗಳನ್ನು ಸರಿಪಡಿಸಿಕೊಳ್ಳೋಣ ಎಂಬ ಮನವಿ ಪತ್ರ ಸಲ್ಲಿಸಿದೆ. ದೈನಿಕ್ ಜಾಗರಣ್ ವರದಿಯ ಬಾಂಗ್ಲಾದಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಿಸಿಬಿ ಈ ಕ್ರಮ ಕೈಗೊಂಡಿದೆ. ಮುಖ್ಯವಾಗಿ ಬಾಂಗ್ಲಾದೇಶ ವಿರುದ್ಧದ ಮುಂದೂಡಲಾಗಿದ್ದ ಸರಣಿಯ ಬಗ್ಗೆ ಮರುಪರಿಶೀಲನೆ ಮಾಡಿ, ಆಗಸ್ಟ್‌ನಲ್ಲಿ ಬಾಂಗ್ಲಾ ಪ್ರವಾಸ ಮಾಡಲು ಮನವಿ ಮಾಡಿಕೊಂಡಿದೆ. ಇದಲ್ಲದೆ, ಬಾಂಗ್ಲಾ ಸರ್ಕಾರ ಈ ಹಿಂದೆ ಐಪಿಎಲ್ ಪ್ರಸಾರಕ್ಕೆ ಅನುಮತಿ ನೀಡಿತ್ತು. ಆದಾಗ್ಯೂ ಯಾವುದೇ ಚಾನಲ್‌ಗಳು ಮುಂದೆಬರಲಿಲ್ಲ.

ಭಾರತೀಯರಿಗೆ ಜಯದ ಹುಡುಕಾಟ



•ಹೊಸದಿಲ್ಲಿ: ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಭಾರತದ ಆರ್. ಪ್ರಜ್ಞಾನಂದ, ಆರ್. ವೈಶಾಲಿ ಮತ್ತು ದಿವ್ಯ ದೇಶಮುಖ್ ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ನಾಲ್ಕನೇ ಸುತ್ತಿನ ಅಂತ್ಯದ ವೇಳೆಗೆ, ಈ ಮೂವರಲ್ಲಿ ಗೆಲುವು ಸಾಧಿಸಿದ ಏಕೈಕ ಆಟಗಾರ ಪ್ರಜ್ಞಾನಂದ. ಆರಂಭಿಕ ಪಂದ್ಯದಲ್ಲಿ ನೆದರ್ಲೆಂಡ್ಸ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ ವಿರುದ್ಧ ಜಯ ಸಾಧಿಸಿದ್ದರು. ಆದರೆ ಈಗ ಅವರು ಒಟ್ಟಾರೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಮುನ್ನಡೆ ಸಾಧಿಸಿರುವ ಉಜ್ಬೆಕಿಸ್ತಾನದ ಜವೋಖಿರ್ ಸಿಂದಾರೋವ್‌ಗಿಂತ 1.5 ಅಂಕ ಹಿಂದುಳಿದಿದ್ದಾರೆ.

ಮಹಿಳಾ ವಿಭಾಗದಲ್ಲಿ ವೈಶಾಲಿ ನಾಲ್ಕು ಪಂದ್ಯಗಳನ್ನು ಡ್ರಾಗೆ ಮುಕ್ತಾಯಗೊಳಿಸಿದ್ದು, ಸಂಯುಕ್ತ ಮೂರನೇ ಸ್ಥಾನದಲ್ಲಿದ್ದಾರೆ. ಅವರು ಮುನ್ನಡೆಯಲ್ಲಿರುವ ಅನ್ನಾ ಮುಜಿಚುಕ್ ಮತ್ತು ಬಿಬಿಸಾರಾ ಅಸ್ಸೌಬಯೇವಾ ಗಿಂತ ಕೇವಲ 0.5 ಅಂಕ ಹಿಂದಿದ್ದಾರೆ. ಇನ್ನೊಂದೆಡೆ, ಕ್ಯಾಂಡಿಡೇಟ್ಸ್ ಟೂರ್ನಿಗೆ ಮೊದಲ ಬಾರಿಗೆ ಕಾಲಿಟ್ಟ ದಿವ್ಯ ದೇಶಮುಖ್ ಕಠಿಣ ಆರಂಭ ಅನುಭವಿಸಿದ್ದಾರೆ. ಮೊದಲ ಮೂರು ಪಂದ್ಯಗಳಲ್ಲಿ ಡ್ರಾ ಸಾಧಿಸಿದ ಬಳಿಕ ನಾಲ್ಕನೇ ಸುತ್ತಿನಲ್ಲಿ ಝು ಜಿನರ್ ವಿರುದ್ಧ ಸೋಲು ಕಂಡು ಅಂಕಪಟ್ಟಿಯ ತಳಗೆ ಇಳಿದಿದ್ದಾರೆ. ಪ್ರಜ್ಞಾನಂದಗೆ ಉಳಿದ 10 ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳು ಪ್ರಮುಖ ಆಟಗಾರರಾದ ಫ್ಯಾಬಿಯಾನೊ ಕಾರುವಾನಾ ಮತ್ತು ಹಿಕಾರು ನಕಮುರಾ ವಿರುದ್ಧ ಇರುವುದರಿಂದ ಸವಾಲು ಹೆಚ್ಚಿದೆ. ವೈಶಾಲಿಗೆ ಚೀನಾದ ಉನ್ನತ ರ್‍ಯಾಂಕ್ ಆಟಗಾರರಾದ ತಾನ್ ಝೊಂಗ್‌ಇ ಮತ್ತು ಝು ವಿರುದ್ಧ ನಾಲ್ಕು ಪಂದ್ಯಗಳು ಎದುರಿವೆ. ಜೊತೆಗೆ ಒಂಬತ್ತನೇ ಸುತ್ತಿನಲ್ಲಿ ದಿವ್ಯ ದೇಶಮುಖ್ ವಿರುದ್ಧ ಆಡಬೇಕಿರುವುದರಿಂದ ಭಾರತೀಯರ ನಡುವೆಯೇ ಅಂಕ ಹಂಚಿಕೆ ಆಗುವ ಸಾಧ್ಯತೆ ಇದೆ.

ಅಭಿಷೇಕ್‌ಗೆ ನಾಯಕತ್ವ ಸಿಗಬೇಕಿತ್ತು: ಯುವರಾಜ್

•ಹೊಸದಿಲ್ಲಿ: ಅಭಿಷೇಕ್ ಶರ್ಮ ತಂಡದಲ್ಲಿದ್ದರೂ ಇಶಾನ್ ಕಿಶನ್ ಅವರನ್ನು ನಾಯಕರನ್ನಾಗಿ ಮಾಡಿರುವ ವಿಚಾರದಲ್ಲಿ ಅಭಿಷೇಕ್ ಶರ್ಮ ಪರ ಬ್ಯಾಟ್ ಬೀಸಿರುವ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ವೈಯಕ್ತಿಕವಾಗಿ ಅವರಿಗೆ ನಿರಾಶೆಯಾಗಿರಬಹುದು ಎಂದಿದ್ದಾರೆ.

ಯುವರಾಜ್, ಇಶಾನ್ ಕಿಶನ್ ಮೇಲೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರೂ, ಒಂದು ಆಟಗಾರನ ದೃಷ್ಟಿಯಿಂದ ಅಭಿಷೇಕ್‌ಗೆ ಇದು ನಿರಾಶೆ ತಂದಿರಬಹುದು ಎಂದರು. ಹಲವು ವರ್ಷಗಳಿಂದ ಫ್ರಾಂಚೈಸಿಗೆ ಸೇವೆ ಸಲ್ಲಿಸಿ, ರಾಜ್ಯ ತಂಡಕ್ಕೂ ನಾಯಕತ್ವ ವಹಿಸಿರುವ ಅಭಿಷೇಕ್‌ಗೆ ಈ ಅವಕಾಶ ಸಿಗದಿದ್ದರೆ ಅದು ಮನೋಭಾವದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು. ಆದರೆ, ಇಶಾನ್ ಮತ್ತು ಅಭಿಷೇಕ್ ನಡುವೆ ಉತ್ತಮ ಸಂಬಂಧವಿರುವುದು ಒಳ್ಳೆಯ ಸಂಗತಿ ಎಂದು ಅವರು ಹೇಳಿದ್ದಾರೆ. ತಮ್ಮದೇ ಅನುಭವವನ್ನು ಉದಾಹರಣೆಯಾಗಿ ನೀಡಿದ ಯುವರಾಜ್, 2007ರಲ್ಲಿ ತಾವು ಉಪನಾಯಕನಾಗಿದ್ದಾಗ ಮಹೇಂದ್ರ ಸಿಂಗ್ ಧೋನಿ ಅಚ್ಚರಿಯಾಗಿ ನಾಯಕನಾಗಿದ್ದನ್ನು ನೆನಪಿಸಿಕೊಂಡರು. ತಮ್ಮ ಜೊತೆಗೆ ಹರ್ಭಜನ್ ಸಿಂಗ್ ಮತ್ತು ವಿರೇಂದ್ರ ಸೇಹ್ವಾಗ್ ಅಂಥವರು ತಂಡದಲ್ಲಿ ಇದ್ದರೂ ಧೋನಿ ಆಯ್ಕೆ ಆಗಿದ್ದು ಅಚ್ಚರಿಯಾಯಿತಾದರೂ, ನಂತರ ಅದು ಭಾರತದ ಪರ ಮಹತ್ವದ ನಿರ್ಧಾರವಾಯಿತು ಎಂದು ಹೇಳಿದರು.

ಹೈದರಾಬಾದ್‌ಗೆ ಮೊದಲ ಗೆಲುವು

•ಕೋಲ್ಕತ್ತಾ: ಭರ್ಜರಿ ಬ್ಯಾಟಿಂಗ್ ನಂತರ ಮಾರಕ ಬೌಲಿಂಗ್ ದಾಳಿ ಸಂಘಟಿಸಿದ ಸನ್‌ರೈಸರ್ಸ್ ಹೈದರಾಬಾದ್, ಇಂಡಿಯನ್ ಪ್ರೀಮಿಯರ್ ಲೀಗ್ 19ನೇ ಆವೃತ್ತಿಯಲ್ಲಿ ಮೊದಲನೇ ಗೆಲುವು ಸಾಧಿಸಿದೆ. ಗೆಲುವಿನ ಪ್ರಯತ್ನಗಳನ್ನು ಮಾಡುತ್ತಾ ಆತುರ ಪಟ್ಟು ಕೊನೆಯಲ್ಲಿ ಪರಭವಗೊಂಡಿರುವ ಕೆಕೆಆರ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸತತ ಎರಡನೇ ಸೋಲು ಕಂಡಿದೆ. ಗುರುವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 226 ರನ್ ಗಳಿಸಿತ್ತು. ಅಭಿಷೇಕ್ 48, ಹೆಡ್ 46, ರೆಡ್ಡಿ 39 ಮತ್ತು ಕ್ಲಾಸೆನ್ 52 ರನ್ ಗಳಿಸಿದ್ದರು. ಕೆಕೆಆರ್ ಪರ ಬ್ಲೆಸ್ಸಿಂಗ್ 4 ವಿಕೆಟ್ ಕಿತ್ತರು. ದೊಡ್ಡ ಗುರಿ ಬೆನ್ನತ್ತಿದ ಕೆಕೆಆರ್ ಸ್ಫೋಟಕ ಆರಂಭ ಪಡೆದರೂ ಕೊನೆಯಲ್ಲಿ ಆತುರಕ್ಕೆ ತುತ್ತಾಯಿತು. 16 ಓವರ್ ಬ್ಯಾಟಿಂಗ್ ಮಾಡಿ 161 ರನ್ ಗಳಿಗೆ ಸರ್ವಪತನಗೊಂಡಿತು. ಆಂಗ್ರಿಶ್ 52, ರಿಂಕು 35 ರನ್ ಗಳಿಸಿದರು. ಹೈದರಾಬಾದ್ ಪರ ಉನಾಡ್‌ಕಟ್ 3, ರೆಡ್ಡಿ ಹಾಗೂ ಇಶಾನ್ ಮಾಲಿಂಗ್ ತಲಾ 2 ವಿಕೆಟ್ ಕಿತ್ತರು.

ಸಾಂಘಿಕ ದಾಳಿ: ಹೈದರಾಬಾದ್ ಪಂದ್ಯ ಪೂರ್ತಿ ಸಾಂಘಿಕ ಪ್ರದರ್ಶನವನ್ನೇ ನೀಡಿತು. ಬ್ಯಾಟಿಂಗ್‌ನಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲೂ ಹಾಗೇ ಪ್ರದರ್ಶನ ನೀಡಿತು. ಮೊದಲನೇ ಇನ್ನಿಂಗ್ಸ್‌ನಲ್ಲಿ ಇಶಾನ್ ಕಿಶನ್ ಪಡೆದಿದ್ದ ಆರೆಂಜ್ ಕ್ಯಾಪ್ ಎರಡನೇ ಇನ್ನಿಂಗ್ಸ್ ಮುಕ್ತಾಯಕ್ಕೆ ಆಂಗ್ರಿಶ್ ಪಡೆದುಕೊಂಡರು. ಮೊದಲ ಇನ್ನಿಂಗ್ಸ್‌ನಲ್ಲಿ ಬ್ಲೆಸ್ಸಿಂಗ್ ಪಡೆದಿದ್ದ ಪರ್ಪಲ್ ಕ್ಯಾಪ್ ಅನ್ನು ಜಯದೇವ್ ಉನಾಡ್‌ಕಟ್ ಪಡೆದುಕೊಂಡರು. ಪಂದ್ಯದಲ್ಲಿ 39 ರನ್, 2 ವಿಕೆಟ್ ಕಿತ್ತ ನಿತಿಶ್‌ಕುಮಾರ್ ರೆಡ್ಡಿ ಪಂದ್ಯಶ್ರೇಷ್ಠ ಆಟಗಾರ ಅನ್ನಿಸಿಕೊಂಡರು. ಮುಂದಿನ ಪಂದ್ಯದಲ್ಲಿ ಹೈದರಾಬಾದ್, ಲಖನೌ ತಂಡವನ್ನು ಮತ್ತು ಕೆಕೆಆರ್ ಪಂಜಾಬ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್

» **ಹೈದರಾಬಾದ್ 20 ಓವರ್‌ಗಳಲ್ಲಿ 226/8: ಕ್ಲಾಸೆನ್ 52, ಅಭಿಷೇಕ್ 48, ರೆಡ್ಡಿ 39; ಬ್ಲೆಸ್ಸಿಂಗ್ 41/4**

» **ಕೆಕೆಆರ್ 16 ಓವರ್‌ಗಳಲ್ಲಿ 161/10: ಆಂಗ್ರಿಶ್ 52, ರಿಂಕು 35, ಉನಾಡ್‌ಕಟ್ 21/3, ರೆಡ್ಡಿ 17/2**

ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯರ ದರ್ಬಾರ್

ಬಾಕ್ಸಿಂಗ್: ಭಾರತಕ್ಕೆ 3 ಪದಕ ಖಚಿತ





•ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ 2026ರಲ್ಲಿ ಭಾರತ ಮೂರು ಪದಕಗಳನ್ನು ಖಚಿತಪಡಿಸಿಕೊಂಡಿದೆ. ನಿಖತ್ ಜರೀನ್, ಪ್ರಿಯಾ ಮತ್ತು ಪ್ರೀತಿ ಪವಾರ್ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.


ಮಹಿಳೆಯರ 51 ಕೆಜಿ ವಿಭಾಗದಲ್ಲಿ ನಿಖತ್ ಜರೀನ್ ಸಂಪೂರ್ಣ ಪ್ರಾಬಲ್ಯ ತೋರಿಸಿ ಫಿಲಿಪ್ಪೈನ್ಸ್‌ನ ಝಿಯಾನ್ ಬಾಗುಹಿನ್ ವಿರುದ್ಧ ಮೊದಲ ರೌಂಡ್‌ನಲ್ಲೇ ಆರ್‌ಎಸ್‌ಸಿ ಮೂಲಕ ಜಯ ಸಾಧಿಸಿದರು. ಈಗ ಅವರು ಸೆಮಿಫೈನಲ್‌ನಲ್ಲಿ ಪ್ಯಾರಿಸ್ 2024 ಒಲಿಂಪಿಕ್ ಚಿನ್ನದ ಪದಕ ವಿಜೇತೆ ಚೀನಾದ ವು ಯು ವಿರುದ್ಧ ಕಠಿಣ ಸವಾಲನ್ನು ಎದುರಿಸಲಿದ್ದಾರೆ.

ಮಹಿಳೆಯರ 60 ಕೆಜಿ ವಿಭಾಗದಲ್ಲಿ ಪ್ರಿಯಾ ಚೀನಾದ ಚೆಂಗ್ಯು ಯಾಂಗ್ ವಿರುದ್ಧ 4–1 ಅಂತರದಲ್ಲಿ ಗೆದ್ದು ತಮ್ಮ ಉತ್ತಮ ಪ್ರದರ್ಶನ ಮುಂದುವರಿಸಿದರು. ಅವರು ಫೈನಲ್ ಪ್ರವೇಶಕ್ಕಾಗಿ ಮುಂದಿನ ಪಂದ್ಯದಲ್ಲಿ ಮಂಗೋಲಿಯಾದ ನಮೂನ್ ಮೋನ್ಖೋರ್ ವಿರುದ್ಧ ಸೆಣಸಲಿದ್ದಾರೆ. ಮಹಿಳೆಯರ 54 ಕೆಜಿ ವಿಭಾಗದಲ್ಲಿ ಪ್ರೀತಿ ಪವಾರ್ ಅತ್ಯುತ್ತಮ ಆಟ ಪ್ರದರ್ಶಿಸಿ ಮಂಗೋಲಿಯಾದ ಮುಂಗುಂಟ್ಸೆಟ್ಸೆಂಗ್ ವಿರುದ್ಧ 5–0 ಅಂತರದಲ್ಲಿ ಏಕಪಕ್ಷೀಯ ಜಯ ಸಾಧಿಸಿದರು. ಸೆಮಿಫೈನಲ್‌ನಲ್ಲಿ ಅವರು ಕೊರಿಯಾದ ಇಮ್ ಎಜಿ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಇನ್ನೊಂದೆಡೆ, ಪುರುಷರ 70 ಕೆಜಿ ವಿಭಾಗದಲ್ಲಿ ದೀಪಕ್ ಕ್ವಾರ್ಟರ್ ಫೈನಲ್‌ನಲ್ಲಿ ಜೋರ್ಡನ್‌ನ ಜೆಯಾದ್ ಈಶಾಶ್ ವಿರುದ್ಧ 1–4 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಂದರು. ಒಟ್ಟಿನಲ್ಲಿ, ಭಾರತೀಯ ಬಾಕ್ಸರ್‌ಗಳು ಉತ್ತಮ ಪ್ರದರ್ಶನ ನೀಡಿದ್ದು, ಪದಕಗಳ ಭರವಸೆ ಮೂಡಿಸಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5943



ಎಡದಿಂದ ಬಲಕ್ಕೆ
2. ಚಿತ್ತಾರವಿರುವ ಚಿನ್ನದ ಗುಂಡಿಗಳಿರುವ ಸರ (5)
5. ಪ್ರೀತಿಪಾತ್ರರ ಅಗಲಿಕೆಯ ನೋವು (3)
6. ವಸ್ತು–ಸೇವೆಯನ್ನು ಕ್ರಯಕ್ಕೆ ತೆಗೆದುಕೊಳ್ಳುವುದು (3)
7. ಮನದಾಳದಲ್ಲಿರುವ ವಿಚಾರ (4)
8. ಅನುಭವವನ್ನು ಪಡೆ ಎಂಬರ್ಥದ ನುಡಿಗಟ್ಟು (4)
10. ವೇದ ನಡುವೆ ಇರುವ ಅರಿಕೆ (4)
12. ಮನೆಯ ಜನ ಕುಳಿತದ್ದು ಈ ನೂಲುಗಂಬಳಿಯ ಮೇಲೆ (4)
14. ಜಾಳು ಜಾಳಾದ ಬಟ್ಟೆಯಿಲ್ಲಿ ತಿರುಗಿದೆ (3)
15. ತವಕದಿಂದ ಹೊರಟದ್ದು ಈ ಕೆರೆಯಡೆಗೆ (3)
17. ಇದು ಶತ್ರುಗಳ ಕಾದಾಟ (5)

ಮೇಲಿನಿಂದ ಕೆಳಕ್ಕೆ
1. ಕೂಪ ಸರಳಭಾಷೆಯಲ್ಲಿ (2)
2. ಮನೋಹರವಾದ ರೂಪವುಳ್ಳವನು (4)
3. ಬೆಟ್ಟದ ಹುಡುಗಿ ತಲೆಕೆಳಗಾಗಿದ್ದಾಳೆ (4)
4. ಕಾವು–ತಳಮಳ ಎಂಬರ್ಥದ ಶಬ್ದ (2)
7. ವಿಶ್ರಾಂತಿ–ಸ್ವಸ್ಥತೆಯಿಲ್ಲಿ ತಲೆಕೆಳಗಾಗಿದೆ (3)
9. ಏನೇನೂ ಕಾರಣವಿಲ್ಲದೆ ಎಂಬರ್ಥದ ಶಬ್ದ (3)
11. ರಾಕ್ಷಸರ ವೈರಿ ಈ ವಿಷ್ಣು (4)
13. ನೆನಪಿಟ್ಟು ಮತ ಹಾಕಿದವರ ವಂಶವಿದು (4)
14. ಹೆಜ್ಜೆ ಇಟ್ಟರೆ ಘಲ್ಲೆನ್ನುವ ಕಿರುಗಂಟೆ (2)
16. ಸಹನೆಯುಳ್ಳ ಶ್ರಮಜೀವಿಯಾದ ಸಾಕುಪ್ರಾಣಿ (2)

5942 ಉತ್ತರ

ಎಡದಿಂದ ಬಲಕ್ಕೆ:
2. ಸಮೂಹ
5. ಮೋಟುವಾದ
6. ದಿನಮಣಿ 7. ಸಡಿಲ
8. ಪರದೆ 10. ತಪನೀಯ
12. ನಾಮಾಂಕಿತ
14. ಗಣೇಶ 15. ಕಿಲ್ಲೆದಾರ
16. ಸಹಕಾರ

ಮೇಲಿನಿಂದ ಕೆಳಕ್ಕೆ :
1. ಆಮೋದ 2. ಸದಮಲ
3. ಹದಿಬದೆ 4. ಕಾಣಿಸು
7. ಸಮೀಪ 9. ಪಟಾಕಿ
10. ತಪರಾಕಿ 11. ಯಶಸ್ಕರ
12. ನಾಗವಾಸ
13. ತರ್ಗದೇರ

ಕಿರುಸುದ್ದಿ

ಏ.12ರಂದು ಚೆಸ್ ಪಂದ್ಯಾವಳಿ

ಗದಗ: ತಾಲೂಕು ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಸದ್ಗುರು ಚೆಸ್ ಮತ್ತು ಮ್ಯೂಸಿಕ್ ಅಕಾಡೆಮಿ ಹಾಗೂ ಚೆಸ್ ಅಕಾಡೆಮಿ ಸಹಯೋಗದಲ್ಲಿ ಏ.12 ರಂದು ಚೆಸ್ ಪಂದ್ಯಾವಳಿ ಏರ್ಪಡಿಸಲಾಗಿದೆ. ನಗರದ ಕಳಸಾಪೂರ ರಸ್ತೆಯಲ್ಲಿರುವ ಒಳಾಂಗಣ ಕ್ರೀಡಾಂಗಣದಲ್ಲಿ ಒಂದು ದಿನದ ಪಂದ್ಯಾವಳಿಯಲ್ಲಿ ಎಲ್ಲ ವಯೋಮಿತಿಯವರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ವಿಜೇತರಿಗೆ ಆತ್ಯಾಕರ್ಷಕ ಟ್ರೋಫಿ ಮತು ನಗದು ಬಹುಮಾನ ನೀಡಲಾಗುವುದು. ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಭಾಗವಹಿಸುವವರು ಏ.10 ರೊಳಗಾಗಿ ಹೆಸರು ನೋಂದಾಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.8431737265, 9535027184 ಸಂಪರ್ಕಿಸಲು ಕೋರಲಾಗಿದೆ ಎಂದು ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ದತ್ತಾತ್ರೇಯ ಜೋಶಿ ತಿಳಿಸಿದ್ದಾರೆ.

ವೀರಭದ್ರೇಶ್ವರ ಮಹಾರಥೋತ್ಸವ ಸಂಪನ್ನ



ನರಗುಂದ: ತಾಲೂಕಿನ ಶಿರೋಳ ಗ್ರಾಮದ ಹಿರೇಮಠದ ರೇವಣಸಿದ್ದೇಶ್ವರ ಸ್ವಾಮಿಗಳಿಂದ ಸ್ಥಾಪಿತವಾದ ವೀರಭದ್ರೇಶ್ವರ ಮಹಾರಥೋತ್ಸವವು ಗುರುವಾರ ಸಂಭ್ರಮದಿಂದ ನಡೆಯಿತು. ಗುರುವಾರ ಪ್ರಾತಃ ಕಾಲ ವೀರಭದ್ರೇಶ್ವರ ಮೂರ್ತಿಗೆ ರುದ್ರಾಭಿಷೇಕ, ಮಹಾಪ್ರಸಾದ, ಸಂಜೆ 5.30 ಘಂಟೆಗೆ ವೀರಭದ್ರೇಶ್ವರ ದೇವರ ಮಹಾರಥೋತ್ಸವ ಶ್ರೀ ಬೀರಲಿಗೇಶ್ವರ ಯುವಕ ಮಂಡಳದ ಡೊಳ್ಳಿನ ಮೇಳ, ಕರಡಿ ಮೇಳ, ವೀರಮರವಂತರ ಜೊತೆಗೆ ಪಲ್ಲಕ್ಕಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.ಈ ವೇಳೆ ಶಿರೋಳದ ತೋಂಟದಾರ್ಯ ಮಠ ಹಾಗೂ ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ, ವೇ.ಮೂರ್ತಿ ವಿರಯ್ಯ ಶಾಸ್ತ್ರೀಗಳು ಹಿರೇಮಠ, ಶಿರೋಳ ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.

ಅಧ್ಯಕ್ಷರಾಗಿ ವಿಜಯಕುಮಾರ ಕುಂಬಾರ ನೇಮಕ



ಲಕ್ಷ್ಮೇಶ್ವರ: ಪಟ್ಟಣದ ಯುವ ಉತ್ಸಾಹಿ ಬಿಜೆಪಿ ಕಾರ್ಯಕರ್ತ ವಿಜಯಕುಮಾರ, ಮಹಾದೇವಪ್ಪ ಕುಂಬಾರ ನಗರ ಘಟಕ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಪಕ್ಷದ ನಿಷ್ಠೆ ಶಿಸ್ತು ಪಕ್ಷದ ಸಂಘಟನೆಯಲ್ಲಿನ ಚತುರತೆ ನೋಡಿ ನೇಮಕಾತಿ ಆದೇಶ ಪತ್ರವನ್ನು ಶಿರಹಟ್ಟಿ ಮಂಡಲದ ಬಿಜೆಪಿ ಅಧ್ಯಕ್ಷ ಸುನೀಲ ಗಂ ಮಹಾಂತಶೆಟ್ಟರ ನೀಡಿದ್ದು ಮುಂಬರುವ ಸ್ಥಳೀಯ ಚುನಾವಣೆಯಲ್ಲಿ ಪಕ್ಷದ ಸಂಘಟನೆಯಲ್ಲಿ ಬಾಗಿಯಾಗಿ ಪಕ್ಷದ ಬೆಳವಣಿಗೆ ಬಾಗಿಯಾಗಲು ಸಲಹೆ ನೀಡಿದ್ದಾರೆ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರ.ಕಾರ್ಯದರ್ಶಿಯಾಗಿ ಪ್ರವೀಣ ನೇಮಕ



ಲಕ್ಷ್ಮೇಶ್ವರ: ಪಟ್ಟಣದ ಯುವ ಉತ್ಸಾಹಿ ಬಿಜೆಪಿ ಕಾರ್ಯಕರ್ತ ಪ್ರವೀಣ ಕಾಶಿನಾಥ ಬೋಮಲೆ ಬಿಜೆಪಿ ನಗರ ಘಟಕ ಪ್ರಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ. ಪಕ್ಷದ ನಿಷ್ಠೆ ಶಿಸ್ತು ಪಕ್ಷದ ಸಂಘಟನೆಯಲ್ಲಿನ ಚತುರತೆ ನೋಡಿ ನೇಮಕಾತಿ ಆದೇಶ ಪತ್ರವನ್ನು ಶಿರಹಟ್ಟಿ ಮಂಡಲದ ಬಿಜೆಪಿ ಅಧ್ಯಕ್ಷ ಸುನೀಲ ಗಂ ಮಹಾಂತಶೆಟ್ಟರ ನೀಡಿದ್ದು, ಮುಂಬರುವ ಸ್ಥಳೀಯ ಚುನಾವಣೆಯಲ್ಲಿ ಪಕ್ಷದ ಸಂಘಟನೆಯಲ್ಲಿ ಭಾಗಿಯಾಗಿ ಪಕ್ಷದ ಬೆಳವಣಿಗೆ ಬಾಗಿಯಾಗಲು ಸಲಹೆ ನೀಡಿದ್ದಾರೆ. ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದ್ದಾರೆ.

ಸಂಗಪ್ಪ ಕಲ್ಲನಾಯ್ಕರ ನಿಧನ



ನರಗುಂದ: ಪಟ್ಟಣದ ಅರ್ಬಾಣ ಸವದತ್ತಿ ರಸ್ತೆಯಲ್ಲಿನ ನಿವಾಸಿ ಸಂಗಪ್ಪ ನಿಂಗಪ್ಪ ಕಲ್ಲನಾಯ್ಕರ(58) ನಿಧನರಾದರು. ಮೃತರು ಪತ್ನಿ, ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.



ನರಗುಂದ: ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ಧರ್ಮಾಧಿಕಾರಿ ವಿರೇಂದ್ರ ಹೆಗಡೆ ಅವರ ಧರ್ಮಪತ್ನಿ ಮಾತೋಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬದ ನಿಮಿತ್ಯ ಪಟ್ಟಣದ ಶ್ರೀ ಚನ್ನಬಸವೇಶ್ವರ ನಗರದಲ್ಲಿನ ನಿರ್ಗತಿಕ ವಾತ್ಸಲ್ಯ ಫಲಾನುಭವಿ ಅಮೀನ ಅಗಸರ ಮಹಿಳೆಗೆ ಮಾಶಾಸನ ನೀಡಲಾಯಿತು.

ವಾತ್ಸಲ್ಯ ಫಲಾನುಭವಿಗಳಿಗೆ ಮಾಸಾಶನ ವಿತರಣೆ

ನರಗುಂದ: ಸಮಾಜದಲ್ಲಿ ಆಶ್ರಯವಿಲ್ಲದವರು, ನಿರ್ಗತಿಕರು ಹಾಗೂ ಅನಾರೋಗ್ಯದಿಂದ ಬಳಲುತ್ತಿರುವ ತಾಲೂಕಿನ 93 ಜನ ವಾತ್ಸಲ್ಯ ಫಲಾನುಭವಿಗಳ ಆರೋಗ್ಯ ವಿಚಾರಿಸಿ, ಹಣ್ಣು ಹಂಪಲ ಕೊಟ್ಟು ಶುಭಕೋರಲಾಯಿತು ಎಂದು ಯೋಜನಾಧಿಕಾರಿ ಮಾಲತಿ ದಿನೇಶ ಹೇಳಿದರು. ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ಧರ್ಮಾಧಿಕಾರಿ ವಿರೇಂದ್ರ ಹೆಗಡೆ ಅವರ ಧರ್ಮಪತ್ನಿ ಮಾತೋಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬದ ನಿಮಿತ್ಯ ಪಟ್ಟಣದ ಶ್ರೀ ಚನ್ನಬಸವೇಶ್ವರ ನಗರದಲ್ಲಿನ ನಿರ್ಗತಿಕ ವಾತ್ಸಲ್ಯ ಫಲಾನುಭವಿ ಅಮೀನ ಅಗಸರ ಮಹಿಳೆಗೆ ಮಾಶಾಸನ ನೀಡಿ ಮಾತನಾಡಿದರು.

ರಾಜ್ಯಾದ್ಯಂತ ಹತ್ತು ಸಾವಿರ ನಿರ್ಗತಿಕ ಫಲಾನುಭವಿಗಳಿಗೆ ಪ್ರತಿ ತಿಂಗಳು 1 ಸಾವಿರ ರೂ.ಗಳ ಮಾಶಾಸನ ನೀಡಲಾಗುತ್ತದೆ. ಈದಿನ ಮಾತೋಶ್ರೀ ಹೇಮಾವತಿ ಅಮ್ಮನವರ ಜನ್ಮದಿನ ಇದ್ದ ಕಾರಣ ಮಾಶಾಸನ ಪಡೆಯುತ್ತಿರುವ 93 ಜನರ ಪೈಕಿ 40 ಫಲಾನುಭವಿಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಆರೋಗ್ಯ ಯೋಗಕ್ಷೇಮ ವಿಚಾರಿಸಲಾಗಿದೆ ಎಂದರು.

ಪ್ರಾದೇಶಿಕ ಯೋಜನಾಧಿಕಾರಿ ಚಂದ್ರಶೇಖರ ಮಾತನಾಡಿ, ಆಶ್ರಯವಿಲ್ಲದ ವ್ಯಕ್ತಿಗಳ ಆರೋಗ್ಯ ದೃಷ್ಟಿಯಿಂದ ಪೌಷ್ಟಿಕ ಆಹಾರದ ಕಿಟ್‌ಗಳನ್ನು ನೀಡಲಾಗಿದೆ. ವಾತ್ಸಲ್ಯ ಕಿಟ್, ಪಾತ್ರೆ, ಬಟ್ಟೆ ಸೇರಿದಂತೆ ಇತರೇ ವಸ್ತುಗಳನ್ನು ನೀಡಲಾಗಿದೆ ಎಂದರು.ಈ ಸಂದರ್ಭದಲ್ಲಿ ಪ್ರಾದೇಶಿಕ ಯೋಜನಾಧಿಕಾರಿ ಚಂದ್ರಶೇಖರ, ಮೇಲ್ವಿಚಾರಕ ರಾಜೇಸಾಬ ತಹಶೀಲ್ದಾರ, ಸೇವಾ ಪ್ರತಿನಿಧಿ ಸುಮಿತ್ರಾ ಮಣ್ಣೂರ ಇತರರಿದ್ದರು.



ಮುಂಡರಗಿ: ಜೆ.ಟಿ. ಕೋಟೆ ಪ್ರೌಢಶಾಲಾ ಮೈದಾನದಲ್ಲಿರುವ ಗಿಡಗಳ ಟೊಂಗೆಗಳಿಗೆ ಹಾಗೂ ಶಾಲಾ ಕಟ್ಟಡದ ಮೇಲ್ಭಾಗದಲ್ಲಿ ಬೇಸಿಗೆಯ ಸುಡು ಬಿಸಿಲಿನಲ್ಲಿ ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿರುವ ಪಕ್ಷಿಗಳಿಗಾಗಿ ಕುಡಿಯಲು ನೀರಿನ ವ್ಯವಸ್ಥೆಯನ್ನು ಶಾಲಾ ವಿದ್ಯಾರ್ಥಿಗಳು, ಸಿಬ್ಬಂದಿ ಪ್ರತಿದಿನ ಮಾಡುತ್ತೀರುವ ದೃಶ್ಯ. ಮುಖ್ಯೋಪಾಧ್ಯಾಯ ಮಂಜುನಾಥ ತೆಗ್ಗಿನಮನಿ, ಶಿಕ್ಷಕರಾದ ಎಂ.ಟಿ. ಮಾಳಪುರ್, ಆರ್.ವಿ. ಅರ್ಕಸಾಲಿ, ಶಾಲಾ ಸಿಬ್ಬಂದಿ, ವೀರೇಶ್ ಕುರಿ, ವಿದ್ಯಾರ್ಥಿಗಳು ಇದ್ದರು.

ಜನಗಣತಿ ಸ್ವಯಂ ನೋಂದಣಿ ಕಾರ್ಯಾಗಾರ | ಡಿಸಿ ಶ್ರೀಧರ್ ಸಲಹೆ
ಉತ್ತಮ ಯೋಜನೆಯಿಂದ ಅನುಷ್ಠಾನ ಸರಳ

ಗದಗ: ದೇಶದ ಜನಸಂಖ್ಯೆ, ಸಾಮಾಜಿಕ ಸ್ಥಿತಿಗತಿಗಳ ಮಾಹಿತಿ ಪ್ರತಿ 10 ವರ್ಷಕ್ಕೊಮ್ಮೆ ಸರ್ಕಾರವು ಸಂಗ್ರಹಿಸುವ ಪ್ರಕ್ರಿಯೆಯೇ ಜನಗಣತಿ ಪ್ರಕ್ರಿಯೆಯಾಗಿದೆ. ಇದು ದೇಶದಲ್ಲಿ ಅಭಿವೃದ್ಧಿ ಯೋಜನೆ ರೂಪಿಸಲು ಸಹಾಯಕವಾಗುತ್ತದೆ. ಯೋಜನೆ ಸರಿಯಾಗಿ ರೂಪಿಸಿದಾಗ ಅಭಿವೃದ್ಧಿ ಕಾರ್ಯಗಳ ಅನುಷ್ಠಾನವು ಸರಳವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಭಾರತೀಯ ಜನಗಣತಿ ಸ್ವಯಂ ನೋಂದಣಿ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, 2021ರ ಜನಗಣತಿ ಕೋವಿಡ್ ಕಾರಣದಿಂದ ವಿಳಂಬವಾಗಿದ್ದು ಭಾರತ ಜನಗಣತಿ 2027 ಪ್ರಾರಂಭವಾಗಿದ್ದು ಸಾರ್ವಜನಿಕರು ಅಧಿಕೃತ ಪೋರ್ಟಲ್ https://se.census.gov.in ಪೋರ್ಟಲ್‌ನಲ್ಲಿ ಲಾಗಿನ್ ಆಗಿ ತಮ್ಮ ಮನೆಯ ವಿವರ, ವಾಹನ, ಉದ್ಯೋಗ ವಿವರ ಏ.15 ರವರಗೆ ಭರ್ತಿ ಮಾಡಿದಾಗ ನಿಮಗೆ ಸ್ವಯಂಗಣತಿ ಗುರುತಿನ ಸಂಖ್ಯೆ (ಐಡಿ) ಲಭ್ಯವಾಗುತ್ತದೆ. ಗಣತಿದಾರರು ತಮ್ಮ ಮನೆಗೆ ಬಂದಾಗ ಈ ಐಡಿ ಸಂಖ್ಯೆ ಒದಗಿಸಿದಾಗ ಗಣತಿ ಪ್ರಕ್ರಿಯೆ ತ್ವರಿತವಾಗಿಸಲು ಸಹಾಯಕವಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಮಾತನಾಡಿ, ಈ ಬಾರಿಯ ಜನಗಣತಿಯಲ್ಲಿ ಸಾರ್ವಜನಿಕರು ಖುದ್ದಾಗಿ ಪೋರ್ಟಲ್ ಮೂಲಕ ಮಾಹಿತಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಏ.15 ರವರೆಗೆ ಸಾರ್ವಜನಿಕರು ಈ ಸೌಲಭ್ಯ ಬಳಸಿಕೊಳ್ಳಬಹುದು. ಏ. 16 ರಿಂದ ಮೇ 15 ರ ಒಂದು ತಿಂಗಳ ಅವಧಿಯಲ್ಲಿ ನಿಯೋಜಿಸಿದ ಗಣತಿದಾರರು ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ ನಡೆಸುವರು ಎಂದರು.



ಜನಗಣತಿ ಕಾರ್ಯವು ಮೊದಲ ಹಂತದಲ್ಲಿ ಮನೆ ಗಣತಿ ಕೈಗೊಳ್ಳಲಾಗುತ್ತಿದ್ದು 150 ರಿಂದ 200 ಕುಟುಂಬಗಳು ಅಥವಾ ಅಂದಾಜು 700–800 ಜನಸಂಖ್ಯೆಗೆ ಅನುಗುಣವಾಗಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಒಂದು ಗಣತಿ ಬ್ಲಾಕ್ ರಚಿಸಲಾಗಿದೆ. ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿ ಒಟ್ಟು 1905 ಗಣತಿ ಬ್ಲಾಕ್‌ಗಳು ರಚನೆಯಾಗಿವೆ. ಗದಗ 658, ನರಗುಂದ–175, ಶಿರಹಟ್ಟಿ–160, ಮುಂಡರಗಿ–242, ಗಜೇಂದ್ರಗಡ–228, ಲಕ್ಷ್ಮೇಶ್ವರ– 196, ರೋಣ–246 ಸೇರಿದಂತೆ 1905 ಗಣತಿ ಬ್ಲಾಕ್‌ಗಳು ರಚನೆಯಾಗಿವೆ. ಈ ಜನಗಣತಿಯಲ್ಲಿ ಪ್ರತ್ಯೇಕವಾಗಿ 90 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿದೆ ಎಂದರು.

ಗಣತಿ ಕಾರ್ಯಕ್ಕೆ ಶಿಕ್ಷಣ ಇಲಾಖೆಯ ಶಿಕ್ಷಕರು (ಸರ್ಕಾರಿ ಮತ್ತು ಅನುದಾನಿತ), ಅಂಗನವಾಡಿ ಮೇಲ್ವಿಚಾರಕರು, ಆಶಾ ಕಾರ್ಯಕರ್ತರು, ನಿಲಯ ಮೇಲ್ವಿಚಾರಕರ, ಇತರೇ ಇಲಾಖೆಯ ಪ್ರಥಮ, ದ್ವಿತೀಯ ದರ್ಜೆಯ ಸಹಾಯಕರು, ಸಿಬ್ಬಂದಿಗಳನ್ನು ಗಣತಿದಾರರನ್ನಾಗಿ,ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು, ಶಿಕ್ಷಣ ಇಲಾಖೆಯ ಪ್ರೌಢಶಾಲಾ ಸಹ ಶಿಕ್ಷಕರು, ಮುಖ್ಯೋಪಾಧ್ಯಾಯರು, ಅಧಿಕಾರಿಗಳನ್ನು ಕನಿಷ್ಟ 6 ಜನ ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನಾಗಿ ನಿಯೋಜಿಸಲಾಗಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ 298 ಮೇಲ್ವಿಚಾರಕರು, 1480 ಗಣತಿದಾರರು, 1205 ಎಚ್‌ಎಲ್‌ಬಿಗಳು ಕಾರ್ಯನಿರ್ವಹಿಸಲಿದ್ದಾರೆ. ಪಟ್ಟಣ ಪ್ರದೇಶದಲ್ಲಿ 134 ಮೇಲ್ವಿಚಾರಕರು, 744 ಗಣತಿದಾರರು , 701 ಎಚ್ ಎಲ್ ಬಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದು ವಿವರಿಸಿದರು.

ಬಿ.ಜಿ.ಗಿರಿತಿಮ್ಮಣ್ಣವರ ಮಾತನಾಡಿದರು. ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಮ್ಮ ಮೊಬೈಲ್ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದರು. ಕುಲಸಚಿವ ಪ್ರೊ.ಡಾ.ಸುರೇಶ ನಾಡಗೌಡ್ರ, ಉಪವಿಭಾಗಾಧಿಕಾರಿ ಗಂಗಪ್ಪಎಂ, ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಬಸವರಾಜ ಪಾಟೀಲ, ಆರ್.ಎಸ್.ಬುರುಡಿ, ಎಂ.ವಿ.ಚಳಗೇರಿ, ರಂಜಿತ್ ಚಾಲಾ ಇದ್ದರು.

ಮಕ್ಕಳಿಗೆ ನೈತಿಕ ಶಿಕ್ಷಣ, ಬದುಕಿನ ವಾಸ್ತವತೆ ಅರಿವು ಅಗತ್ಯ: ಶ್ರೀಗಳು

ಗದಗ: ನಾವಿಂದು ಮಕ್ಕಳಿಗೆ ಅಕ್ಷರ ಶಿಕ್ಷಣ ಕೊಟ್ಟರೆ ಸಾಲದು ಅದರೊಟ್ಟಿಗೆ ನೈತಿಕ ಶಿಕ್ಷಣ, ವಾಸ್ತವಿಕ ಬದುಕಿನ ಚಿತ್ರಣ ಕೊಡಬೇಕಿದೆ ಎಂದು ರಾಮಲಿಂಗೇಶ್ವರ ದಾಸೋಹಮಠದ ಬಸವರಾಜ ಸ್ವಾಮೀಜಿ ಹೇಳಿದರು.

ಇಲ್ಲಿನ ಕಳಸಾಪೂರ ರಸ್ತೆಯ ವಿಶ್ವೇಶ್ವರಯ್ಯ ನಗರದ ವಿಘ್ನೇಶ್ವರ ಸೇವಾ ಸಮಿತಿಯು ಏರ್ಪಡಿಸಿದ್ದ ಆಂಜನೇಯ ಸ್ವಾಮಿ ಜಯಂತ್ಯುತ್ಸವ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ,

ಮೊಬೈಲ್, ಕಂಪ್ಯೂಟರ್, ಇಂಟರ್‌ನೆಟ್‌ದಲ್ಲಿ ಮುಳುಗಿ ಹೋಗಿರುವ ನಮ್ಮ ಮಕ್ಕಳಿಗೆ ನಮ್ಮ ಸುತ್ತಮುತ್ತ ಏನು ನಡೆದಿದೆ. ಮಾನವೀಯ ಸಂಬಂಧಗಳೇನು ? ಮುಕ್ತ ಮಾರುಕಟ್ಟೆಯ ವ್ಯವಹಾರ ಜ್ಞಾನ, ಮನೆಯಲ್ಲಿ ತಂದೆ ತಾಯಿಗೆ ಸಹಾಯ ಮಾಡುವದು, ಕೃಷಿ ಪರಿಕರಗಳೇನು ಎಂಬುವುದನ್ನು ಪಾಲಕ ಪೋಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಎಲ್ಲದಕ್ಕೂ ಗೂಗಲ್, ವಿಕಿಪಿಡಿಯಾದಲ್ಲಿ ಹುಡುಕಿ ಬದುಕು ನಡೆಸುವದಲ್ಲ ನೈಜತೆ ಹಾಗೂ ಸ್ವಅನುಭವ ಬೇಕು ಎಂದರು.

ಹೈಟೆಕ್‌ದಿಂದಾಗಿ ಕುಟುಂಬದಲ್ಲಿ, ಸಂಬಂಧಿಕರಲ್ಲಿ ಮನುಷ್ಯ ಸಂಬಂಧಗಳು ಹೇಗೆಂಬುದನ್ನು ತಿಳಿಸಬೇಕು. ಜೊತೆಗೆ ನೈತಿಕ, ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ನಮ್ಮ ಮಕ್ಕಳನ್ನು ತೊಡಗಿಸಿ ಅವರಿಗೆ ಜ್ಞಾನ ನೀಡಬೇಕು. ಇಂದಿಲ್ಲಿ ಹನುಮ ಜಯಂತಿ ನೆಪದಲ್ಲಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ಸೂಕ್ತವಾಗಿದೆ. ಭಕ್ತಿ, ಜ್ಞಾನವಾಗಿ ಪರಿವರ್ತನೆಗೊಳ್ಳಲಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹೊಮ್ಮಿಸಲು ಇಂತಹ ವೇದಿಕೆಗಳು ಬೇಕು. ಅಂಕಲ್–ಆಂಟಿ ಹೊರತು ಪಡಿಸಿ ಉಳಿದವರ ಸಂಬಂಧಗಳನ್ನು ಪರಿಚಯಿಸುವ ಕಾರ್ಯ ಆಗಬೇಕು ಎಂದರು.

ಗದಗ–ಬೆಟಗೇರಿ ನಗರಸಭೆಯ ಪೌರಾಯುಕ್ತ ರಾಜಾರಾಮ ಪವಾರ, ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಮಾತನಾಡಿದರು.

ನಿವೃತ್ತ ಶಿಕ್ಷಕ ಬಿ.ಎಸ್.ಬೆಂತೂರ, ಪ್ರಕಾಶ ಬೆಂತೂರ, ಜೋಗದಂಡಕರ, ಶೈಲಾ, ಶ್ರೀನಿವಾಸರಡ್ಡಿ ಬೆಂತೂರ, ಆರ್.ವ್ಹಿ.ಬೆಲಹುಣಸಿ, ಸಂದೇಶ ಪಾಟೀಲ, ಭಾಗ್ಯಾ ತೊಂಡಿಹಾಳ, ಸೋಮಪ್ಪ ಲಮಾಣಿ, ಪ್ರೊ.ಸಿ.ಲಿಂಗಾರೆಡ್ಡಿ, ಎಂ.ಎಚ್.ಹುಲ್ಲೂರ, ಎಸ್.ಕೆ.ಖಿಂಡೆಪ್ಪಗೌಡ್ರ ಇದ್ದರು.



ಏ.15ರಂದು ಅಂಬೇಡ್ಕರ್ ಮೂರ್ತಿ ಪ್ರತಿಷ್ಠಾಪನೆ

ಮುಂಡರಗಿ: ಡಾ. ಬಿ.ಆರ್. ಅಂಬೇಡ್ಕರ್ ಅಭಿಮಾನಿ ಬಳಗದಿಂದ ಮುಂಡರಗಿ ನಗರದ ಪುರಸಭೆ ಆವರಣದಲ್ಲಿ ಏ.15 ರಂದು ಸುಮಾರು 10 ಅಡಿ ಎತ್ತರದ ಡಾ. ಬಿ.ಆರ್. ಅಂಬೇಡ್ಕರ್ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯುವುದು. ಏ.5ರಂದು ಡಾ. ಬಾಬು ಜಗಜೀವನ ರಾಮ್ ರವರ ಜಯಂತಿ ಹಾಗೂ ಏ.14 ರಂದು ಡಾ. ಬಿ.ಆರ್. ಅಂಬೇಡ್ಕರ್ ರವರ ಜಯಂತಿಯನ್ನು ಸರ್ಕಾರದ ಆದೇಶದಂತೆ ತಾಲೂಕು ಆಡಳಿತ ಸಭಾ ಭವನದಲ್ಲಿ ಸರಳವಾಗಿ ಸಾಂಕೇತಿಕವಾಗಿ ಆಚರಣೆ ಮಾಡಲಾಗುವದು ಎಂದು ತಹಶೀಲ್ದಾರ ಪಿ.ಎಸ್. ಎರ್ರಿಸ್ವಾಮಿ ಹೇಳಿದರು.

ಡಾ. ಬಾಬು ಜಗಜೀವನ ರಾಮ್ ರವರ ಜಯಂತಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ರವರ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಮೂರ್ತಿ ಉದ್ಘಾಟನಾ ಕಾರ್ಯಕ್ರಮಕ್ಕೆ ಸಚಿವರು, ಸಂಸದರು, ಶಾಸಕರು ಹಾಗೂ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡವರು ಜವಾಬ್ದಾರಿ ವಹಿಸಿ ಕಾರ್ಯಕ್ರಮದ ಆಯೋಜನೆ ರೂಪಿಸಬೇಕು. ಯಾವುದೇ ಲೋಪ ದೋಷವಾಗದಂತೆ ಕಾರ್ಯಕ್ರಮ ನಡೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕು ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಸೋಮಣ್ಣ ಹೈತಾಪೂರ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿ ಸ್ಥಾಪನೆಯನ್ನು ಎಲ್ಲರೂ ಪಕ್ಷ, ಜಾತಿ, ಮತ, ಪಂಥಗಳನ್ನು ಮರತೆ ಎಲ್ಲ ಜಾತಿ ಜನಾಂಗದವರು ಒಂದಾಗಿ ಅಭೂತಪೂರ್ವ ಕಾರ್ಯಕ್ರಮ ಮಾಡಬೇಕಾಗಿದೆ ಅದಕ್ಕೆ ಎಲ್ಲರ ಸಹಕಾರ ಅವಶ್ಯವಾಗಿದೆ ಎಂದರು.

ಸಭೆಯಲ್ಲಿ ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಗದಗ ಜಿಲ್ಲಾ ಉಪಾಧ್ಯಕ್ಷ ಹೇಮಂತಗೌಡ ಪಾಟೀಲ, ಯುವ ಮುಖಂಡರಾದ ಆನಂದ ಗೌಡ ಪಾಟೀಲ, ರಾಮಣ್ಣ ಕೋಳಿ, ದ್ಯಾಮಣ್ಣ ವಾಲಿಕಾರ, ಡಿ.ಎಸ್.ಎಸ್. ಗದಗ ಜಿಲ್ಲಾ ಸಂಚಾಲಕರಾದ ದುರುಗಪ್ಪ ಹರಿಜನ, ಎಚ್.ಡಿ. ಪೂಜಾರ, ಡಿ.ಜಿ. ಪೂಜಾರ, ಲಕ್ಷ್ಮಣ್ಣ ತಗಡಿನಮನಿ, ನಿಂಗರಾಜ ಹಾಲಿನವರ, ಕುಮಾರ ವಾಲಿಕಾರ, ಬಸವರಾಜ ನವಲಗುಂದ, ಅಶ್ವಿನಿ ಬೀಡನಾಳ, ತಾ.ಪಂ. ಕಾರ್ಯನಿರ್ವಾಹಕ ಅಧಧಿಕಾರಿ ವಿಶ್ವನಾಥ ಹೊಸಮನಿ, ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಸಂಘ, ಸಂಸ್ಥೆಯ ಮುಖಂಡರು, ಸಿಬ್ಬಂದಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ಅಧಿಕಾರಿ ಉದಯ ಕುಮಾರ ಎಲಿವಾಳ ಸ್ವಾಗತಿಸಿದರು.



ಬಾಲ್ಯದ ಸರ್ವತೋಮುಖ ಬೆಳವಣಿಗೆಗೆ ಅಂಗನವಾಡಿ ಸಹಕಾರಿ

ಲಕ್ಷ್ಮೇಶ್ವರ: ಬಾಲ್ಯದಲ್ಲಿ ಮಕ್ಕಳಿಗೆ ದೊರೆಯುವ ಶಿಕ್ಷಣ ಮತ್ತು ಸಂಸ್ಕೃತಿಯ ಮೌಲ್ಯಗಳು ಜೀವನಪೂರ್ತಿ ಉಳಿಯುತ್ತವೆ. ಆದ್ದರಿಂದ ಬಾಲ್ಯದಲ್ಲಿ ಮಕ್ಕಳಿಗೆ ಸಂಸ್ಕಾರ ಮತ್ತು ಸಂಪ್ರದಾಯ ಕಲಿಸುವ ಕಾರ್ಯವಾಗಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಗುರುವಾರ ಪಟ್ಟಣದ 15 ವಾರ್ಡಿನಲ್ಲಿನ ತಾಯಿ ಪಾರ್ವತಿ ಮಕ್ಕಳ ಬಳಗದ ಹತ್ತಿರದ ದ್ಯಾಮವ್ವ ದೇವಿ ದೇವಸ್ಥಾನ ಪಕ್ಕದಲ್ಲಿ 194ನೇ ಅಂಗನವಾಡಿ ಕೇಂದ್ರ ಸಂಖ್ಯೆ ಕಟ್ಟಡದ ಭೂಮಿಪೂಜೆ ಕಾರ್ಯಕ್ರಮ ನೇರವೇರಿಸಿ ಮಾತನಾಡಿ, ನಗರ



ಯೋಜನೆ ಅಡಿಯಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ನೂತನ ಅಂಗನವಾಡಿ ಕಟ್ಟಡ ಸುಸಜ್ಜಿತವಾಗಿ ನಿರ್ಮಾಣ ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದರು.

ಬರುವ ದಿನಮಾನಗಳಲ್ಲಿ ಬಾಡಿಗೆ ಕಟ್ಟಡದಲ್ಲಿ ಇರುವ ಅಂಗನವಾಡಿ ಕೇಂದ್ರಗಳನ್ನು ಸ್ವಂತ ಕಟ್ಟಡ ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತೇನೆ ಎಂದರು.

ಪುರಸಭೆ ಮಾಜಿ ಸದಸ್ಯ ರಾಜೀವ್ ಕುಂಬಿ, ವಾರ್ಡನಲ್ಲಿ ಹಲವಾರು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಅಂಗನವಾಡಿ ಕೇಂದ್ರವಿತ್ತು. ಈ ಬಗ್ಗೆ ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಗಮನ ತಂದು ಜಾಗ ಸಿಕ್ಕಿದ್ದು ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಲಿ ಎಂದರು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಶಂಕ್ರಪ್ಪ ಗುರಿಕಾರ, ಸಂಜೀವ ದೇಸಾಯಿ, ಗಂಗಾಧರ ಮೆಣಸಿನಕಾಯಿ, ಬಸವರಾಜ ಚಕ್ರಸಾಲಿ, ಸಿಡಿಪಿಒ ಮೃತ್ಯುಂಜಯ ಗುಡ್ಡದಾನ್ವೇರಿ, ಅಂಗನವಾಡಿ ಮೇಲ್ವಿಚಾರಕಿ ನಂದಾ ನವಲೆ, ಪ್ರವೀಣ ಬೋಮಲೆ, ಭೀಮಣ್ಣ ಯಂಗಾಡಿ, ವಿಜಯ ಕುಂಬಾರ, ಗಿರೀಶ ಚೌರಡ್ಡಿ, ವಿಶಾಲ ಬಟಗುರ್ಕಿ, ಅಂಗನವಾಡಿ ಕಾರ್ಯಕರ್ತೆಯರಾದ ನಾಗಲಕ್ಷ್ಮಿ ಕುಲಕರ್ಣಿ, ರೂಪಾ ಕಟ್ಟಿಮನಿ, ಡಿ.ವಿ.ಕೊಟ್ಟೂರ, ಎಂ.ಎನ್. ಚತ್ರದ, ಆರ್.ಎಸ್.ಚಂಗಾಪೂರ ಸಹಾಯಕಿಯರಾದ, ನೀಲವ್ವ ಪೂಜಾರ, ಸಂಗೀತ ಸರ್ವದೆ ಇದ್ದರು.

ಮಹನೀಯರ ಜಯಂತಿ ಅರ್ಥಪೂರ್ಣ ಆಚರಿಸಿ: ಕೆ. ರಾಘವೇಂದ್ರ

ಶಿರಹಟ್ಟಿ: ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂದೇಶಗಳನ್ನು ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ಈ ಇಬ್ಬರೂ ಮಹನೀಯರ ಜಯಂತಿಯನ್ನು ಎಲ್ಲ ಇಲಾಖೆಗಳ ಮತ್ತು ಸಮಾಜದ ಹಾಗೂ ಸಂಘ ಸಂಸ್ಥೆಗಳ ಸಹಕಾರದಿಂದ ಅರ್ಥಪೂರ್ಣವಾಗಿ ಆಚರಣೆ ಮಾಡಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ತಹಶೀಲ್ದಾರ ಕೆ. ರಾಘವೇಂದ್ರ ರಾವು ಹೇಳಿದರು.

ತಹಶೀಲ್ದಾರ ಕಾರ್ಯಾಲಯದಲ್ಲಿ ಇಬ್ಬರು ನಾಯಕರ ಜನ್ಮದಿನಾಚರಣೆ ಆಚರಣೆಯ ಪೂರ್ವಭಾವಿ ಸಿದ್ಧತೆ ಸಭೆಯಲ್ಲಿ ಮಾತನಾಡಿ, ಏ.5ರಂದು ಡಾ. ಬಾಬು ಜಗಜೀವನರಾಂ ಜಯಂತಿ ಆಚರಿಸ



ಲಾಗುವುದು. ಏ.14ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಸಮುದಾಯ ದವರ ಸಹಕಾರದಿಂದ ಸಂಭ್ರಮದಿಂದ ಆಚರಣೆ ಮಾಡಲಾಗುವುದು ಎಂದರು. ತಾಲೂಕಿನ ಎಲ್ಲ ಶಾಲೆ, ಕಾಲೇಜ, ಅಂಗನವಾಡಿ ಕೇಂದ್ರಗಳು ಸೇರಿದಂತೆ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಮಹನೀಯರ ಜಯಂತಿಯನ್ನು ಕಡ್ಡಾಯವಾಗಿ ಆಚರಿಸಬೇಕು. ಎಲ್ಲ ಇಲಾಖೆ ಅಧಿಕಾರಿಗಳು ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಹಾಜರಿರಬೇಕು ಎಂದರು. ಮುಖಂಡರಾದ, ಜಾನು ಲಮಾಣಿ, ಮೋಹನ್ ಗುತ್ತೆಮ್ಮನವರ, ನಾಗರಾಜ ಲಕ್ಕುಂಡಿ, ಮುತ್ತು ಭಾವಿಮನಿ ಮಾತನಾಡಿದರು.

ಮುಖಂಡರಾದ ರವಿ ಗುಡಿಮನಿ, ಬಸಣ್ಣ ನಾಯ್ಕರ, ಶಿವನಗೌಡ ಪಾಟೀಲ, ಪ್ರಕಾಶ ಬಡೆಣ್ಣವರ, ಪಿಎಸ್‌ಐ ಈರಪ್ಪ ರಿತ್ತಿ, ತಾಪಂ ಇಒ ರಾಮಪ್ಪ ದೊಡ್ಡಮನಿ, ಬಿಇಒ ಎಚ್. ನಾಣಕೀ ನಾಯಕ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೋಪಾಲ ಲಮಾಣಿ, ಶಿವಪ್ಪ ಹದ್ಲಿ, ಎಂ.ಎಸ್. ಸಂಕನೂರ, ಮೃತ್ಯುಂಜಯ ಗುಡ್ಡದಾನವೇರಿ, ರಾಮಪ್ಪ ಪೂಜಾರ, ಸುಭಾಸ ದ್ಯೆಗೊಂಡ, ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಮಲ್ಲೇಶ ತಳವಾರ ಸೇರಿ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

93.14 ಸಾವಿರ ರೂ.ಗಳ ಉಳಿತಾಯ ಬಜೆಟ್ ಮಂಡನೆ

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆಯ 2026–27ನೇ ಸಾಲಿನ ಬಜೆಟನ್ನು ಆಡಳಿತಾಧಿಕಾರಿಗಳ ಪರವಾಗಿ ಮುಖ್ಯಾಧಿಕಾರಿ ಮಹಾಂತೇಶ ಬೀಳಗಿ 93ಲಕ್ಷ 14ಸಾವಿರ ಉಳಿತಾಯ ಬಜೆಟ್ ಮಂಡಿಸಿದರು.

ಪುರಸಭೆಯ ಆದಾಯವನ್ನು ಪುರಸಭೆ ನಿಧಿ, ಮನೆ, ಮಳಿಗೆ, ಬಾಡಿಗೆ, ನೀರಿನ ಕರ ಇತರೆ ಫೀಗಳ ಮೂಲದಿಂದ 3ಕೋಟಿ 93ಲಕ್ಷ 76ರೂ.ಗಳ ಅಂದಾಜಿಸಲಾಗಿದೆ. ಅನುದಾನದ ಮೂಲ ಎಸ್‌ಎಫ್‌ಸಿ ಮುಕ್ತ ನಿಧಿ 16ನೇ ಹಣಕಾಸು ಮತ್ತು ಇತರೆ ಅನುದಾನದ ಮೂಲದಿಂದ 10ಕೋಟಿ 55ಲಕ್ಷ 30ಸಾವಿರ ರೂ.ಗಳನ್ನು ನಿರೀಕ್ಷಸಲಾಗಿದೆ. ಇತರೆ ಅಸಾಮಾನ್ಯ ಖಾತೆಯಿಂದ 1ಕೋಟಿ 61ಲಕ್ಷ 1ಸಾವಿರ ನಿರೀಕ್ಷಲಾಗಿದ್ದು, ಒಟ್ಟು ಆದಾಯ 16ಕೋಟಿ 10ಲಕ್ಷ 7ಸಾವಿರ ಮತ್ತು ಆರಂಭಿಕ ಶುಲ್ಕ 10ಕೋಟಿ 14ಲಕ್ಷ 44ಸಾವಿರ ಒಟ್ಟು ಬಜೆಟ್‌ನ ಗಾತ್ರ 26 ಕೋಟಿ 24ಲಕ್ಷ 51ಸಾವಿರ ಇರುತ್ತದೆ ಎಂದರು.

ಇದೇ ಸಾಲಿಗೆ ಆಡಳಿತ ಮತ್ತು ಕಚೇರಿ ವೆಚ್ಚ, ನೀರು ಸರಬರಾಜು, ಬೀದಿ ದೀಪ, ಸಾರ್ವಜನಿಕ ಆರೋಗ್ಯ ಸ್ವಚ್ಚತೆ ಇವುಗಳಿಗೆ 4ಕೋಟಿ 21ಲಕ್ಷ 47ಸಾವಿರ ಮೀಸಲಿಡಲಾಗಿದೆ. ಅನುದಾನದಿಂದ ಬಂದಂತಹ ಮೊತ್ತವನ್ನು ಪುರಸಭೆ ನೌಕರ ವೇತನ, ನೀರು ಸರಬರಾಜು, ಬೀದಿ ದೀಪ, ವಿದ್ಯುತ್ ಬಿಲ್, ರಸ್ತೆ ಮತ್ತು ಚರಂಡಿ ನಿರ್ಮಾಣ ಇತ್ಯಾದಿಗಳಿಗೆ



17ಕೋಟಿ 85ಲಕ್ಷ 22 ಸಾವಿರ ಮೀಸಲಿಡಲಾಗಿದೆ. ಕೆರೆ ಅಭಿವೃದ್ಧಿಗರ 15 ಲಕ್ಷ, ಮಳಿಗೆ ನಿರ್ಮಾಣ 1ಕೋಟಿ ಮೀಸಲಿಡಲಾಗಿದೆ. ಸರಕಾರಕ್ಕೆ ಪಾವತಿಸಬೇಕಾದ ತೆರಿಗೆ ಇತ್ಯಾದಿಗಳಿಗೆ 1ಕೋಟಿ 69ಲಕ್ಷ 38ಸಾವಿರ ಮೀಸಲೀಡಲಾಗಿದೆ. ಹೀಗೆ ಒಟ್ಟು ಬಜೆಟ್ ಮೊತ್ತ 25ಕೋಟಿ 24ಲಕ್ಷ 51ಸಾವಿರ ರೂ ಗಳನ್ನು ನಿಗದಿಪಡಿಸಲಾಗಿದ್ದು ಒಟ್ಟು 93ಲಕ್ಷ 14ಸಾವಿರ ರೂಗಳ ಉಳಿತಾಯ ಬಜೆಟ್ ಎಂದರು.

ಮುಂಬರುವ ದಿನಗಳಲ್ಲಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವುದು. ನಗರ ಸ್ವಚ್ಚತೆಗೆ ಆದ್ಯತೆ 36 ಕೋಟಿ ರೂ.ಗಳ ಕುಡಿಯುವ ನೀರಿನ ಯೋಜನೆಗೆ ತ್ವರಿತವಾಗಿ ಅನುಷ್ಠಾನಗೊಳಿಸಲು ಕ್ರಮಗೊಳಿಸಲಾಗುವುದು. ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ತಾಲೂಕ ಕೇಂದ್ರ ಸ್ಥಳವಾಗಿರುವ ಲಕ್ಷ್ಮೇಶ್ವರದ ಅಭಿವೃದ್ಧಿಗಾಗಿ ಮತ್ತು ಮೂಲಭೂತ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ಕಂದಾಯ ಅಧಿಕಾರಿ ಸುರೇಶ ಪೂಜಾರ, ಕಂದಾಯ ನಿರೀಕ್ಷಕ ವೆಂಕಟೇಶ ರಾಮಗೇರಿ, ಹಣಕಾಸು ವಿಭಾಗದ ನೇತ್ರಾ ಹೊಸಮನಿ, ಮಹೇಶ ಹೊಸಮನಿ, ಹನುಮಂತಪ್ಪ ನಂದೆಣ್ಣವರ ಇದ್ದರು.

ಏ.10ರಂದು ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನ ಲೋಕಾರ್ಪಣೆ
ಏ.9ರಂದು ಬೃಹತ್ ಉದ್ಯೋಗ ಮೇಳ: ಜಿ.ಎಸ್.ಪಾಟೀಲ

ರೋಣ: ಪಟ್ಟಣದಲ್ಲಿ ಏ.9 ಮತ್ತು 10 ರಂದು ಬೃಹತ್ ಉದ್ಯೋಗ ಮೇಳ ಹಮ್ಮಿಕೊಂಡಿದ್ದು, ಮತಕ್ಷೇತ್ರದ ನಿರುದ್ಯೋಗ ಯುವಕ ಹಾಗೂ ಯುವತಿಯರು ಉದ್ಯೋಗ ಮೇಳದಲ್ಲಿ ಭಾಗಿಯಾಗುವ ಮೂಲಕ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ರಾಜ್ಯ ಖನಿಜ ನಿಮಗದ ಅಧ್ಯಕ್ಷ, ಶಾಸಕ ಜಿ.ಎಸ್.ಪಾಟೀಲ ಹೇಳಿದರು.



ಅವರು ಶುಕ್ರವಾರ ರಾಜೀವಗಾಂಧಿ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಶಾಸಕ ಜಿ.ಎಸ್.ಪಾಟೀಲ 78 ನೇ ಹುಟ್ಟು ಹಬ್ಬದ ನಿಮಿತ್ಯ ಅವರ ಅಭಿಮಾನಿ ಬಳಗದವರು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಏ.9 ರಂದು ಸ್ವಸಾಹಾಯ ಸಂಘಗಳ ಮೂಲಕ ಸ್ವಂತ ಉದ್ಯೋಗದಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಮಾರ್ಗದರ್ಶನ ನೀಡುವ ಕಾರ್ಯಕ್ರಮದ ಜೊತೆಗೆ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ವಸ್ತುಗಳ ಖರೀದಿ ಮಾಡುವ ಕಂಪನಿಗಳು ಸಹ ಮೇಳದಲ್ಲಿ ಭಾಗಿಯಾಗಲಿದ್ದು, ತಾಲೂಕಿನಲ್ಲಿರುವ 2100 ಸ್ವಸಹಾಯ ಗುಂಪುಗಳ ಸುಮಾರು 5 ಸಾವಿರ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ ಎಂದರು.

ಏ.10 ರಂದು ಬೃಹತ್ ಉದ್ಯೋಗ ಕ್ರಾಂತಿ ಮೇಳವನ್ನು ಏರ್ಪಡಿಸಲಾಗಿದ್ದು, ಅಂದು ಪ್ರತಿಷ್ಠಿತ ಎಂಎನ್‌ಸಿ 100 ಕ್ಕೂ ಹೆಚ್ಚು ಕಂಪನಿಗಳು ಆಗಮಿಸಲಿದ್ದು, 10ನೇ ತರಗತಿ ಮೇಲ್ಪಟ್ಟ ಶಿಕ್ಷಣವನ್ನು ಪಡೆದಿರುವ ನಿರುದ್ಯೋಗ ಯುವಕ ಯುವತಿಯರು ಮೇಳದಲ್ಲಿ ಭಾಗಿಯಾಗಲಿದ್ದಾರೆ. ಮುಖ್ಯವಾಗಿ ಪ್ರತಿಷ್ಠಿತ ಕಂಪನಿಗಳಿಗೆ ನೇಮಕಗೊಂಡ ಯುವಕ, ಯುವತಿಯರಿಗೆ ಸ್ಥಳದಲ್ಲಿಯೇ ನೇಮಕಾತಿ ಆದೇಶವನ್ನು ನೀಡಲಾಗುವುದು. ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಬದುಕನ್ನು ಸುಂದರಗೊಳಿಸಿಕೊಳ್ಳಬೇಕು ಎಂದರು.

ಅದೇ ದಿನ ಪಟ್ಟಣದ ಬಾಸಾಲಾಪೂರ ರಸ್ತೆಯ ಪುರಸಭೆಯ 6 ಎಕರೆ ಜಮೀನಿನಲ್ಲಿ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಹಿತ ದೃಷ್ಟಿಯಿಂದ 38 ಕೋಟಿ ರೂಗಳ ವೆಚ್ಚದಲ್ಲಿ ವಸತಿ ನಿಲಯದ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಿದ್ದು, ಅಂದು ಜಿಗಳೂರ ಕೆರೆಯ ತಟದಲ್ಲಿ ನಿರ್ಮಿಸಲಾದ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನವನ್ನು ಮತ್ತು 2 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ಈಜುಕೊಳವನ್ನು ಸಾರ್ವಜನಿಕರಿಗಾಗಿ ಸಚಿವ ಸಂತೋಷ ಲಾಡ್, ಡಾ. ಹೆಚ್.ಕೆ.ಪಾಟೀಲ ಲೋಕಾರ್ಪಣೆಗೊಳಿಸ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಸೌಂದರ್ಯ ಪ್ರವಾಸಿ ತಾಣಗಳ ಮೆರಗನ್ನು ಹೆಚ್ಚಿಸಬೇಕು ಎಂದರು.

ಐ.ಎಸ್.ಪಾಟೀಲ, ಅಕ್ಷಯ ಪಾಟೀಲ, ಶಶಿಕಲಾ ಪಾಟೀಲ, ವಿ.ಬಿ.ಸೋಮನಕಟ್ಟಿಮಠ, ಅಪ್ಪು ಗಿರಡ್ಡಿ, ಆನಂದ ಚಂಗಳಿ, ಸಂಗು ನವಲಗುಂದ, ನಾಗರಾಜ ಪಲ್ಲೇದ, ಸೋಮು ನಾಗರಾಜ, ಮಲೀಕ ಯಲಿಗಾರ, ಅಸ್ಲಂ ಕೊಪ್ಪಳ, ಡಾ.ಐ.ಬಿ.ಕೊಟ್ಟೂರಶೆಟ್ಟರ ಸೇರಿದಂತೆ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

ಕಿರುಸುದ್ದಿ

ದ್ರಾಕ್ಷಿ ಬೆಳೆ ಹಾನಿ ಕೂಡಲೇ ಸಮೀಕ್ಷೆ ನಡೆಸಿ: ಎಂಬಿಪಾ

ವಿಜಯಪುರ: ಜಿಲ್ಲೆಯಲ್ಲಿ ಗುರುವಾರ ಸುರಿದ ಅಕಾಲಿಕ ಮಳೆಯಿಂದಾಗಿ ಉಂಟಾಗಿರುವ ದ್ರಾಕ್ಷಿ ಬೆಳೆ ಹಾನಿಯ ಕುರಿತು ಕೂಡಲೇ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮಾರ್ಚ್ ತಿಂಗಳಲ್ಲಿ ಆಲಿಕಲ್ಲು ಮತ್ತು ಬಿರುಗಾಳಿ ಸಹಿತ ಮಳೆ ಸುರಿದ ಪರಿಣಾಮ ದ್ರಾಕ್ಷಿ ಸೇರಿದಂತೆ ನಾನಾ ಬೆಳೆಗಳು ಹಾನಿಯಾಗಿದ್ದವು. ಈ ಕುರಿತು ಸಮಗ್ರ ಸಮೀಕ್ಷೆ ನಡೆಸುವಂತೆ ಮಾರ್ಚ್ 21ರಂದು ಜಿಲ್ಲಾಧಿಕಾರಿ, ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ ಸಮೀಕ್ಷೆ ನಡೆಸುಚಂತೆ ಸೂಚನೆ ನೀಡಲಾಗಿತ್ತು. ಈಗ ಮತ್ತೆ ಅಕಾಲಿಕ ಮಳೆಯಾಗಿ ಕೆಲವು ಕಡೆ ದ್ರಾಕ್ಷಿ ಮತ್ತು ಒಣದ್ರಾಕ್ಷಿ ಶೆಡ್‌ಗಳು ಹಾನಿಯಾಗಿವೆ. ಈ ಹಿನ್ನೆಲೆಯಲ್ಲಿ ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಬೆಳೆಹಾನಿ ಕುರಿತು ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯಲ್ಲಿ ಬೆಳೆಹಾನಿಯಾದ ಯಾವುದೇ ರೈತರ ಹೆಸರು ಬಿಟ್ಟು ಹೋಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೃಷಿ ಮತ್ತು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಸಮೀಕ್ಷೆ ನಡೆಸಿ ಶೀಘ್ರದಲ್ಲಿ ವರದಿ ಸಲ್ಲಿಸುವಂತೆ ಸಚಿವರು ಜಿಲ್ಲಾಧಿಕಾರಿ ಡಾ.ಆನಂದ ಕೆ.ಅವರಿಗೆ ಸೂಚನೆ ನೀಡಿದ್ದಾರೆ. ಇದೇ ವೇಳೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲ ದೊಡ್ಡಿಮನಿ ಮತ್ತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರೊಂದಿಗೂ ಮಾತನಾಡಿರುವ ಸಚಿವರು, ಬೆಳೆ ಹಾನಿ ಕುರಿತು ಸಮಗ್ರ ಮತ್ತು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಸಚಿವರ ಕಚೇರಿಯ ಮಾಧ್ಯಮ ಮಾಹಿತಿ ನೀಡಲಾಗಿದೆ.



ನಿಚ್ಚಣಕಿ ಗ್ರಾಮದಲ್ಲಿ ಜಿಂಕೆ ಪ್ರತ್ಯಕ್ಷ

ಚನ್ನಮ್ಮನ ಕಿತ್ತೂರು: ಕಾಡಿನಿಂದ ತಪ್ಪಿಸಿಕೊಂಡು ನೀರನ್ನು ಅರಸಿಕೊಂಡು ಬಂದ ಜಿಂಕೆ ಪ್ರತ್ಯಕ್ಷವಾಗಿದ್ದು, ಸಾರ್ವಜನಿಕರ ಸಹಕಾರದಿಂದ ಅರಣ್ಯ ಇಲಾಖೆಯವರು ಕಾಡಿಗೆ ಬಿಟ್ಟ ಪ್ರಸಂಗ ಶುಕ್ರವಾರ ನಡೆಯಿತು. ತಾಲೂಕಿನ ನಿಚ್ಚಣಕಿ ಗ್ರಾಮದಲ್ಲಿ ಶುಕ್ರವಾರ ಗ್ರಾಮಕ್ಕೆ ಆಗಮಿಸಿದ ಜಿಂಕೆಯು ಸಾರ್ವಜನಿಕರಿಗೆ, ನಾಯಿಗಳಿಗೆ ಹೆದರಿ ಗಾಬರಿಯಾಗಿ ಗ್ರಾಮದ ಓಣಿಯಲ್ಲಿ ಓಡಾಡುತ್ತಿತ್ತು ಅದನ್ನು ಕಂಡು ಗ್ರಾಮಸ್ಥರು ಸುರಕ್ಷಿತವಾಗಿ ಹಿಡಿದು ನಂತರ ಅರಣ್ಯ ಇಲಾಖೆಯವರಿಗೆ ಒಪ್ಪಿಸಿದರು.

ಲವ್ ಜಿಹಾದ್ ಕೇಂದ್ರಗಳಾದ ಜಿಮ್‌ಗಳು: ಆರೋಪ

ಮಹಿಳೆಯರಿಗೆ ನಗರದಲ್ಲಿನ ಜಿಮ್‌ಗಳು ಎಷ್ಟು ಸುರಕ್ಷಿತ?

▸ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಸದೃಢ ದೇಹದ ನಿರ್ಮಾಣ, ಆರೋಗ್ಯ ರಕ್ಷಣೆ ಹಾಗೂ ಉತ್ತಮ ಫಿಟ್ನೆಸ್ ಕಾಯ್ದುಕೊಳ್ಳಲಿರುವ ಜಿಮ್‌ಗಳು ಲವ್ ಜಿಹಾದ್ ಕೇಂದ್ರಗಳಾಗಿವೆ ಎಂಬ ಆರೋಪಗಳು ಹು-ಧಾ ಅವಳಿನಗರದಲ್ಲಿ ಪದೆ ಪದೇ ಕೇಳಿ ಬರುತ್ತಿವೆ.

ಇತ್ತೀಚೆಗೆ ಧಾರವಾಡ ಹಾಗೂ ಶುಕ್ರವಾರ ಹುಬ್ಬಳ್ಳಿಯಲ್ಲಿ ಇಂತಹ ಘಟನೆ ಬೆಳಕಿಗೆ ಬಂದಿದೆ.

ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಬೇಸರ

ಮಹಿಳೆಯರಿಗೆ ಜಿಮ್‌ಗಳು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡುವಂತಾಗಿದೆ. ಇತ್ತ ಯಾರೋ ಮಾಡಿದ ತಪ್ಪಿಗೆ ಉಳಿದ ಜಿಮ್‌ಗಳ ಹೆಸರು ಹಾಳಾಗುತ್ತಿದೆ ಎಂದು ಧಾರವಾಡ ಡಿಸ್ಟ್ರಿಕ್ಟ್ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಬೇಸರ ವ್ಯಕ್ತಪಡಿಸಿದೆ.

ಹುಬ್ಬಳ್ಳಿ-ಧಾರವಾಡ ಅವಳಿನಗರದಲ್ಲಿ ಅಸೋಸಿಯೇಷನ್ ವ್ಯಾಪ್ತಿಯಲ್ಲಿ 50ಕ್ಕೂ ಹೆಚ್ಚು ಜಿಮ್‌ಗಳು ನೋಂದಣಿಯಾಗಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ನಾಯಿ ಕೊಡೆಯಂತೆ ಹುಟ್ಟಿರುವ ಮಲ್ಟಿಲೇವಲ್ ಎಂಬ ಹೆಸರಿನಲ್ಲಿ ಆರಂಭವಾದ ಹಲವಾರು ಜಿಮ್‌ಗಳು ಈ ಅಸೋಸಿಯೇಷನ್‌ನಿಂದ ದೂರ ಉಳಿದಿವೆ. ಆದ್ದರಿಂದ ಜಿಲ್ಲೆಯಲ್ಲಿ ಎಷ್ಟು ಜಿಮ್‌ಗಳಿವೆ ಎಂಬ ಮಾಹಿತಿ ಯಾರಿಗೂ ಲಭ್ಯವಿಲ್ಲ.

ಜಿಮ್‌ಗಳು ಸಾರ್ವಜನಿಕವಾಗಿದ್ದು, ಇಲ್ಲಿಗೆ ಬರುವವರ ಸುರಕ್ಷತೆ ಬಹಳ ಅವಶ್ಯಕ. ಆದರೆ, ಜಿಮ್‌ಗಳಲ್ಲಿ ಸುರಕ್ಷತಾ ಕ್ರಮಗಳ ಏನು ಕೈಗೊಳ್ಳಲಾಗಿದೆ? ಅನೈತಿಕಚಟುವಟಿಕೆಗಳು ಏನಾದರೂ ನಡೆಯುತ್ತಿವೆಯಾ? ಎಂದು ಗಮನ ಹರಿಸಬೇಕಾದ ಪೊಲೀಸ್ ಇಲಾಖೆ ಕಣ್ಣು ಮುಚ್ಚಿ ಕುಳಿತಿದೆ. ಇಲ್ಲಿ ನಾಗರಿಕ ಪ್ರಜ್ಞೆಯೂ ಮುಖ್ಯವಾಗಿದ್ದು, ಅಂಥಹ ಘಟನೆಗಳು ಗಮನಕ್ಕೆ ಬಂದರೆ ಪೊಲೀಸರಿಗೆ ಮಾಹಿತಿ ನೀಡುವುದು ಅವಶ್ಯಕವಾಗಿದೆ.

ಜಿಮ್‌ಗಳ ಮೇಲೆ ನಂಬಿಕೆ ಇಟ್ಟುಕೊಂಡು ಸಾರ್ವಜನಿಕರು ಆರೋಗ್ಯದ ಹಿತದೃಷ್ಟಿಯಿಂದ ಬರುತ್ತಾರೆ. ಅವರಿಗೆ ಸರಿಯಾಗಿ ಹೇಳಿಕೊಡಬೇಕು. ಅನುಚಿತವಾಗಿ ಅವರೊಂದಿಗೆ ವರ್ತಿಸುವುದು ಸರಿಯಲ್ಲ. ಜಿಮ್‌ವೊಂದರ ಘಟನೆ ಕುರಿತು ಮಾಧ್ಯಮದಲ್ಲಿ ನೋಡಿದ್ದೇನೆ. ಇದರಿಂದ ಉಳಿದ ಜಿಮ್‌ಗಳ ಹೆಸರು ಹಾಳಾಗಲಿದೆ ಎಂದು ಧಾರವಾಡ ಡಿಸ್ಟ್ರಿಕ್ಟ್ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಖಜಾಂಚಿ ಕೃಷ್ಣಾ ಚಿಕ್ಕತುಂಬಳ ಬೇಸರ ವ್ಯಕ್ತಪಡಿಸಿದರು.

ಜಿಮ್‌ಗಳಲ್ಲಿ ಅನುಚಿತವಾಗಿ ವರ್ತಿಸುವ ಸದಸ್ಯರಿಗೆ ಅವಕಾಶ ನೀಡುವುದಿಲ್ಲ. ಜಿಮ್‌ಗಳು ಸಾರ್ವಜನಿಕ ಸ್ಥಳವಾಗಿದ್ದರಿಂದ ಸುರಕ್ಷತಾ ಕ್ರಮಗಳನ್ನು ಅವಶ್ಯಕವಾಗಿ ಕೈಗೊಳ್ಳಬೇಕು. ಎಲ್ಲ ಜಿಮ್‌ಗಳ ಮಾಲೀಕರು ಇದನ್ನು ಪಾಲನೆ ಮಾಡಬೇಕು ಎಂದು ಹೇಳಿದರು.



ಜಿಮ್‌ಗಳ ನಿಯಮ ಪಾಲಿಸಿ

ಅಸೋಸಿಯೇಷನ್ ವ್ಯಾಪ್ತಿಯಲ್ಲಿರುವ ಜಿಮ್‌ಗಳಿಗೆ ಸುರಕ್ಷತಾ ಕ್ರಮವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಮಹಿಳೆಯರಿಗೆ ಪ್ರತ್ಯೇಕ ವ್ಯಾಯಾಮ ಮಾಡಲು ಸಮಯ ನಿಗದಿ, ಬೇರೆ ರಾಜ್ಯದಿಂದ ಬರುವ ಜಿಮ್ ಸದಸ್ಯರ ಐಡಿ ಕಾರ್ಡ್, ಕುಟುಂಬಸ್ಥರ ಸಂಪೂರ್ಣ ಮಾಹಿತಿ ಪಡೆದು ಜಿಮ್‌ಗೆ ನೋಂದಣಿ ಮಾಡಿಸಿಕೊಳ್ಳಲು ಸೂಚಿಸಲಾಗಿದೆ ಎಂದು ಧಾರವಾಡ ಡಿಸ್ಟ್ರಿಕ್ಟ್ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಖಜಾಂಚಿ ಕೃಷ್ಣಾ ಚಿಕ್ಕತುಂಬಳ ತಿಳಿಸಿದರು.

ಜಿಮ್‌ಗಳಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದು, ಕಾನೂನು ಸುವ್ಯವಸ್ಥೆ ಧಕ್ಕೆಯಾಗುತ್ತಿದೆ. ಈ ಹಿನ್ನೆಲೆ ಜಿಮ್‌ಗಳ ಮಾಲೀಕರೊಂದಿಗೆ ಸಭೆ ನಡೆಸಿ ಸುರಕ್ಷತಾ ಕ್ರಮಗಳ ಕೈಗೊಳ್ಳುವ ಬಗ್ಗೆ ಸೂಚಿಸಲಾಗುವುದು.
■ ಶೃತಿ ಎನ್., ಡಿಸಿಪಿ ಕಾನೂನು ಹಾಗೂ ಸುವ್ಯವಸ್ಥೆ

ಹು-ಧಾ ಅವಳಿನಗರದಲ್ಲಿ ಅನಧಿಕೃತ ಜಿಮ್ ಹಾಗೂ ಪಾರ್ಲರ್‌ಗಳು ತಲೆ ಎತ್ತಿದ್ದು, ಅವುಗಳ ಮೇಲೆ ಪೊಲೀಸ್ ಇಲಾಖೆ ನಿಗಾ ಇಟ್ಟು ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಬೇಕು.
■ ನಾಗೇಶ ಕಲಬುರಗಿ, ಎಸ್‌ಎಸ್‌ಕೆ ಸಮಾಜ ಮುಖಂಡ

ದಿಗಂತ ವಿಶೇಷ

ರಾಜ್ಯದ ಜನರಿಗೆ ಸಿಎಂ ವಂಚನೆ: ವಿ.ಸೋಮಣ್ಣ

ಬಾಗಲಕೋಟೆ: ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರು ತಮ್ಮ ಅಧಿಕಾರವನ್ನು ಸ್ವಂತಕ್ಕೋಸ್ಕರ, ಸ್ವಾರ್ಥಕ್ಕೋಸ್ಕರ ಮತ್ತು ರಾಜ್ಯದ ಜನರಿಗೆ ವಂಚನೆ ಮಾಡುವ ಕೆಲಸ ಮಾಡಿ, ಈ ರಾಜ್ಯವನ್ನು ಕತ್ತಲೆ ಕೋಣೆಯಲ್ಲಿಡುವ ಕೆಲಸ ಮಾಡಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಬೆಂಗಳೂರು ನಗರದ ಅಭಿವೃದ್ಧಿಯಲ್ಲಿ ನಮ್ಮದೇ ಆದ ಪಾಲುದಾರಿಕೆಯನ್ನು ಕೊಟ್ಟಿದ್ದೇವೆ ಎಂದು ತಿಳಿಸಿದರು.

ಯಾವುದೇ ಶಾಸಕರೂ ತನ್ನ ಕಾರ್ಯ ಕ್ಷೇತ್ರಕ್ಕೆ ಹೋಗಿ ನಾನು ಒಳ್ಳೆಯ ಕೆಲಸ ಮಾಡಿದ್ದೇನೆ. ನನ್ನಿಂದ ಇಷ್ಟು ಕೆಲಸ ಆಗಿದೆ ಎಂದು ಹೇಳುವ ನೈತಿಕತೆಯನ್ನು ಕೇವಲ ವಿಪಕ್ಷದವರಷ್ಟೇ ಅಲ್ಲ ಆಡಳಿತ ಪಕ್ಷದವರೂ ಕಳಕೊಂಡಿದ್ದಾರೆ ಎಂದು ನುಡಿದರು.

ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಿತಿ ಮೀರಿದೆ.



ಅವ್ಯವಸ್ಥೆಯ ಆಗರವಾಗಿದೆ. ತಮ್ಮವರೇ ನಿಂದಿಸಿದರೂ ಎಚ್ಚೆತ್ತುಕೊಳ್ಳದ ನಿರ್ಲಿಪ್ತ ಸರ್ಕಾರ ಸಿದ್ದರಾಮಯ್ಯನವರದು ಎಂದು ಟೀಕಿಸಿದ ಅವರು, ಮೂಲಭೂತ ಸೌಕರ್ಯದತ್ತ ಎಳ್ಳೂ ಗಮನ ಕೊಡದೇ ಇಡೀ ಸಚಿವ ಸಂಪುಟ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ ಎಂದು ದೂರಿದರು.

ಒಂದು ಸಮಾಜವನ್ನು ಇನ್ನೊಂದು ಸಮಾಜದ ಮೇಲೆ ಎತ್ತಿ ಕಟ್ಟುವ ಕ್ರಾಂತಿಕಾರಿ ಕಾರ್ಯ, ದೊಡ್ಡಸ್ಥಿಕೆಯನ್ನು ಈ ಸರ್ಕಾರ ಮಾಡಿ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಿದೆ ಎಂದು ಟೀಕಿಸಿದರು.

ಬಳಕೆಸರ್ಟಿಫಿಕೇಟ್ ನೀಡಿ ಹಣಪಡೆಯಬಹುದೆಂದು ಜಲಜೀವನ್ ಮಿಷನ್‌ನಡಿ 28 ಸಾವಿರ ಕೋಟಿಯನ್ನು ಠೇವಣಿ ಇಟ್ಟಿದ್ದೇವೆ. ಕೇವಲ 11 ಸಾವಿರ ಕೋಟಿಯನ್ನು ಇವರು ಪಡೆದಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಅನವಶ್ಯಕವಾಗಿ ಟೀಕೆ ಮಾಡುವುದರಲ್ಲಿ ಇವರು ನಿಸ್ಸೀಮರು. ಜಿ ರಾಮ್ ಜಿ ವಿಚಾರಕ್ಕೆ ಬಂದರೆ 41 ಲಕ್ಷ ಬೋಗಸ್ ಕಾರ್ಡ್ ಇಟ್ಟುಕೊಂಡ ಜನ ನೀವು. ಜೆಸಿಬಿ ಕೆಲಸ ಮಾಡಿ ಯಾವುದೋ ಹೆಸರಿನಲ್ಲಿ ಹಣ ಪಡೆಯಲಾಗುತ್ತಿತ್ತು. ಪ್ರಧಾನಿಯವರು ದೇಶದ ಸರ್ವಾಂಗೀಣ ಅಭಿವೃದ್ಧಿ ಮತ್ತು ಹಳ್ಳಿಗಾಡಿನ ಜನರ ಜೀವನ ಮಟ್ಟ ಸುಧಾರಣೆಗಾಗಿ 88 ಸಾವಿರ ಕೋಟಿ ಬದಲಾಗಿ 97 ಸಾವಿರ ಕೋಟಿಯನ್ನು ಅದಕ್ಕಾಗಿ ಮೀಸಲಿಟ್ಟಿದ್ದಾರೆ. ಜಿ ರಾಮ್ ಜಿ ಎಂದು ಮಾಡಿ, ವಿಕಸಿತ ಭಾರತದ ಪರಿಕಲ್ಪನೆಯನ್ನು ಮುಂದಿಟ್ಟಿದ್ದಾರೆ ಎಂದು ಆಕ್ಷೇಪಿಸಿದರು. ಇದೊಂದು ಕೆಟ್ಟ- ನಿರ್ಲಿಪ್ತ ಸರ್ಕಾರ. ರಾಜ್ಯದ ಅನೇಕ ಯೋಜನೆಗಳು ನನೆಗುದಿಗೆ ಬಿದ್ದಿವೆ ಎಂದು ಅವರು ಆರೋಪಿಸಿದರು.

ಬಸ್ ದರ ಹೆಚ್ಚಳ ಮಾಡಲ್ಲ: ಸಚಿವ ರಾಮಲಿಂಗಾರೆಡ್ಡಿ

ಬಾಗಲಕೋಟೆ: ಸಾರಿಗೆ ಇಲಾಖೆಯಲ್ಲಿ ಡೀಸೆಲ್‌ಗೆ ಕೊರತೆ ಇಲ್ಲ, ನಾವು ಬಸ್ ದರ ಹೆಚ್ಚಳ ಮಾಡಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಧಿಕಾರದಲ್ಲಿದ್ದಾಗ ಒಂದೇ ಒಂದು ಬಸ್ ಕೂಡಾ ಖರೀದಿ ಮಾಡಿಲ್ಲ, ನಾವು ಅಧಿಕಾರಕ್ಕೆ ಬಂದ ಮೇಲೆ 7 ಸಾವಿರದಷ್ಟು ಬಸ್‌ಗಳನ್ನು ಖರೀದಿಸಿದ್ದೇವೆ. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ಗ್ಯಾರಂಟಿಯಿಂದ ತೊಂದರೆಯಾಗಿದ್ದು, ನಿಜ. ಹೆಚ್ಚಿನ ಬಸ್ ಓಡಿಸಿ ಸರಿಪಡಿಸಲಾಗುವುದು ಎಂದು ತಿಳಿಸಿದರು.

ಬಿಜೆಪಿಗರು ಸಾರಿಗೆ ಇಲಾಖೆ ಬಗ್ಗೆ ಸುಳ್ಳು ಹೇಳುತ್ತಿದ್ದಾರೆ. ಅವರಿಗೆ ಸುಳ್ಳು ಹೇಳುವುದು ಬಿಟ್ಟು ಬೇರೇನೂ ಬರೋಲ್ಲ. ಹೀಗಾಗಿಯೇ ಈ ಉಪಚುನಾವಣೆಯಲ್ಲಿ ಸುಳ್ಳು ಹೇಳಿಕೊಂಡು ತಿರುತ್ತಿದ್ದು, ಅವರಿಗೆ ಜನರು ತಕ್ಕ ಪಾಠ ಕಲಿಸಿದ್ದಾರೆ ಎಂದು ಸಚಿವರು ಹೇಳಿದರು.

ಬಿಜೆಪಿ ಅಧಿಕಾರದಲ್ಲಿದ್ದಾಗ ಬಜೆಟ್ ಗಾತ್ರಕ್ಕಿಂತ ಅಧಿಕ ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಿ ಆರ್ಥಿಕ ಸಮಸ್ಯೆ ಉಂಟು ಮಾಡಿದ್ದಾರೆ. ಅವರು ಅಧಿಕಾರದಿಂದ ಕೆಳಗಿಳಿಯುವಾಗ 80 ಸಾವಿರ ಕೋಟಿ ರೂ. ಬಾಕಿ ಇಟ್ಟು ಹೋಗಿದ್ದರು. ನೀರಾವರಿ ಕೆಲಸಗಳನ್ನು ಮಾಡಿಲ್ಲ ಎಂದ ಅವರು, ನಾನು ನುಡಿದಂತೆ ನಡೆದಿದ್ದೇವೆ. ಗ್ಯಾರಂಟಿ ಯೋಜನೆ ಜನರಿಗೆ ಅನುಕೂಲವಾಗಿವೆ.

ಸಿಎಂ ಸಿದ್ದರಾಮಯ್ಯ ಸಾಲ ರಾಮಯ್ಯ ಅಂತ ಪ್ರಚಾರ ಮಾಡುವುದು ಸರಿಯಲ್ಲ. ದೇಶದ ಮೇಲೆ ನಾಲ್ಕು ಲಕ್ಷ ಕೋಟಿ ರೂ. ಸಾಲ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಟ್ರಂಪ್ ಹೇಳಿದಾಗೇ ಕುಣಿಯುತ್ತಾರೆ. ವಿಶ್ವಗುರು ಅಲ್ಲ, ವಿಶ್ವ ವಿಖ್ಯಾತ ಸಾಲಗಾರ ಅಂತ ಟೀಕಿಸಿದರು.

ಮಾಜಿ ಸಚಿವ ಎಸ್.ಆರ್.ಪಾಟೀಲ, ಶಾಸಕ ಜೆ.ಟಿ.ಪಾಟೀಲ, ಅಜಯಕುಮಾರ ಸರನಾಯಕ, ಸೌಮ್ಯ ರೆಡ್ಡಿ ಸೇರಿದಂತೆ ಅನೇಕರಿದ್ದರು.

ಟಿಕೆಟ್ ವಿಚಾರದಲ್ಲಿ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಅನ್ಯಾಯ ಮಾಡಿಲ್ಲ: ಶಾಸಕ ಆಸೀಫ್ ಸೇಠ್

ಬೆಳಗಾವಿ: ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದೆ ಅನ್ಯಾಯ ಮಾಡಿಲ್ಲ, ಟಿಕೆಟ್ ಕೊಡುವುದು ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ್ ಹೇಳಿದರು.



ಶುಕ್ರವಾರ ನಗರದಲ್ಲಿರುವ ಸ್ವಗ್ರಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟ-ದಾವಣಗೆರೆ ಉಪಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯ ವಿಚಾರಕ್ಕೆ ಪ್ರಾರಂಭವಾದ ಗೊಂದಲಕ್ಕೆ ತೆರೆ ಎಳೆದರು. ನಮ್ಮ ಸರ್ಕಾರ ಟಿಕೆಟ್ ವಿಚಾರದಲ್ಲಿ ಯಾರಿಗೂ ಅನ್ಯಾಯ ಮಾಡಿಲ್ಲ, ಹೈಕಮಾಂಡ್ ನಿರ್ಧಾರವೇ ಅಂತಿಮವಾಗಿದ್ದು, ಮುಂಬರುವ 2028ರ ಚುನಾವಣೆಯಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚಿನ ಆದ್ಯತೆ ನೀಡುವ ಭರವಸೆ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ ಎಂದು ಸಮರ್ಥಿಸಿಕೊಂಡರು.

ಅಲ್ಪಸಂಖ್ಯಾತರು ಹೆಚ್ಚಿರುವ ಕಡೆ ಟಿಕೆಟ್ ಕೇಳುವುದು ಸಹಜ, ಆದರೆ, ಶಾಸಕರು ನಿಧನರಾದಾಗ ಅವರ ಕುಟುಂಬದವರಿಗೆ ಟಿಕೆಟ್ ನೀಡುವುದು ಪಕ್ಷದ ವಾಡಿಕೆಯಾಗಿದೆ. ಈ ನಿರ್ಧಾರದಿಂದ ಸಚಿವ ಜಮೀರ್ ಅಹ್ಮದ್ ಸೇರಿದಂತೆ ಯಾರಲ್ಲೂ ಅಸಮಾಧಾನವಿಲ್ಲ, ಮುಖ್ಯಮಂತ್ರಿಗಳು 2028ರಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡುವ ಸ್ಪಷ್ಟ ಭರವಸೆ ನೀಡಿದ್ದು, ಕಾಂಗ್ರೆಸ್ ಎಂದಿಗೂ ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿಲ್ಲ ಎಂದು ಹೇಳಿದರು.

ಇದಲ್ಲದೇ ಮಧ್ಯಪ್ರಾಚ್ಯದಲ್ಲಿ ಯುದ್ಧದ ಪರಿಣಾಮವಾಗಿ ಭಾರತ ದೇಶಕ್ಕೂ ಬಿಸಿ ತಟ್ಟಿದೆ. ಎಲ್ಪಿಜಿ ಸಿಲಿಂಡರ್ ಕೊರತೆಯಿಂದ ನಗರ ಸೇರಿದಂತಡ ಜಿಲ್ಲಾದ್ಯಂತ ಜನತೆ ಸಾಕಷ್ಟು ತೊಂದರೆಯಾಗುತ್ತಿದೆ. ಇದು ಸ್ವಲ್ಪ ದಿನಗಳ ಮಟ್ಟಿಗೆ ಅಷ್ಟೇ ಆಮೇಲೆ ಎಲ್ಲವೂ ಸ್ಥಿರವಾಗಲಿದೆ. ಕಮರ್ಷಿಯಲ್ ಸಿಲಿಂಡರ್ ಪೂರೈಕೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದೆಯೇ ಹೊರತು ಯಾವುದೇ ಕೊರತೆಯಿಲ್ಲ ಎಂದರು.

2028ಕ್ಕೆ ಬಸನಗೌಡಾ ಪಾಟೀಲ ಯತ್ನಾಳ್ ನಾನೇ ಬಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು,

ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಜಾತಿ ರಾಜಕಾರಣ ಬಿಟ್ಟು ಎಲ್ಲರನ್ನು ಸಮಾನವಾಗಿ ಕಾಣಬೇಕು. ಜಾತಿ ರಾಜಕಾರಣ ದೇಶವನ್ನು ಹಾಳು ಮಾಡುತ್ತಿದೆ. ಶಾಸಕ ಯತ್ನಾಳ್ ಅವರು ಎಲ್ಲರನ್ನು ಒಗ್ಗಟ್ಟಾಗಿ ಕರೆದುಕೊಂಡು ಹೋದರೆ ದೇಶದ ದೊಡ್ಡ ನಾಯಕರಾಗುತ್ತಾರೆ ಎಂದು ಅಭಿಪ್ರಾಯಪಟ್ಟರು. ಅಲ್ಲದೆ, ಬೆಳಗಾವಿ ನಗರದ ಶಾಸಕರಿಗೆ ಸಚಿವ ಸ್ಥಾನ ನೀಡುವ ಕುರಿತು ಮಾತನಾಡಿದ ಅವರು, ಸಚಿವ ಸ್ಥಾನ ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಬೆಂಬಲ ಸೂಚಿಸಿದರು.

ಪೊಲೀಸ್ ಅಧಿಕಾರಿಗಳ ಹೆಸರು ಉಲ್ಲೇಖಿಸಿ ಜಾಲತಾಣದಲ್ಲಿ ವಿಡಿಯೋ ಪ್ರಸಾರ

ಬೀದರ್: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ನಿರಂತರ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ, ಯೂಟ್ಯೂಬರ್ ಒಬ್ಬರು ಫೇಸ್‌ಬುಕ್ ಲೈವ್‌ನಲ್ಲೇ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಗುರುವಾರ ನಡೆದಿದೆ.

'ಮೀಡಿಯಾ ಇನ್ ಟ್ರುತ್' ಎಂಬ ಯೂಟ್ಯೂಬ್ ಚಾನಲ್ ನಡೆಸುತ್ತಿದ್ದ ಸಲ್ಮಾನ್ ಖಾನ್ ಆತ್ಮಹತ್ಯೆಗೆ ಯತ್ನಿಸಿದ ಯೂಟ್ಯೂಬರ್.

ಕೆಲ ದಿನಗಳಿಂದ ಎಸ್ಪಿ ಸೇರಿದಂತೆ ಕೆಲ ಪೊಲೀಸರಿಂದ ನಿರಂತರ ಕಿರುಕುಳ ನೀಡಲಾಗುತ್ತಿದೆ. ನಾನು ಎಲ್ಲ ರೀತಿಯ ವಿಡಿಯೋಗಳನ್ನು ನನ್ನ ಯೂಟ್ಯೂಬ್ ಚಾನಲ್‌ನಲ್ಲಿ ಅಪ್ಲೋಡ್ ಮಾಡುತ್ತೇನೆ. ಅವನ್ನೆಲ್ಲ ಎಸ್ಪಿ ಅವರಿಗೆ ಸಹ ಹಂಚಿಕೊಳ್ಳುತ್ತೇನೆ. ಆದರೆ, ಎಸ್ಪಿ ಕಚೇರಿಯಲ್ಲಿ ಶಾಂತಿ ಸಭೆ ಇದೆ ಎಂದು ಕರೆಸಿ, ಎಲ್ಲರ ಎದುರು ಹಲ್ಲೆಗೆ ಯತ್ನಿಸಿ, ಸಂಪೂರ್ಣವಾಗಿ ನನ್ನ ಮಾನ-ಮರ್ಯಾದೆಯನ್ನು ಹಾಳು ಮಾಡಿದ್ದಾರೆ ಎಂದು ಸಲ್ಮಾನ್ ಖಾನ್ ಫೇಸ್‌ಬುಕ್ ಲೈವ್‌ನಲ್ಲಿ ಗಂಭೀರ ಆರೋಪ ಮಾಡಿದ್ದಾರೆ.

ಕಲ್ಲೋಳಿಯ ಬಸವೇಶ್ವರ ಸಂಘಕ್ಕೆ ರೂ.4.82 ಕೋಟಿ ಲಾಭ

ಮೂಡಲಗಿ: ತಾಲೂಕಿನ ಕಲ್ಲೋಳಿಯ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘವು 2025-26ನೇ ಹಣಕಾಸಿನ ವರ್ಷದ ಕೊನೆಯಲ್ಲಿ ರೂ.4.82 ಕೋಟಿ ಲಾಭ ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಸಂಘದ ಅಧ್ಯಕ್ಷ ಬಾಳಪ್ಪ ಬಸಪ್ಪ ಬೆಳಕೂಡ ತಿಳಿಸಿದರು.



ಸಂಘದ ಕಾರ್ಯಾಲಯದಲ್ಲಿ ಶುಕ್ರವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಸೌಹಾರ್ದ ಸಹಕಾರಿ ಕಾನೂನು ಅಡಿಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿ, ಶಾಖೆಗಳ ರಹಿತವಾಗಿ ಲಾಭಾಂಶದಲ್ಲಿ ದಾಖಲೆ ಹೊಂದಿರುವ ಸಂಘ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಸದ್ಯ ಸಂಘವು ರೂ.78.83 ಲಕ್ಷ ಶೇರು ಬಂಡವಾಳ, ರೂ.27 ಕೋಟಿ ನಿಧಿಗಳು, ರೂ.99.17 ಕೋಟಿ ಠೇವುಗಳು, ರೂ.24.62 ಕೋಟಿ ಗುಂತಾವಣಿಗಳನ್ನು ಹೊಂದಿದೆ. ವಿವಿಧ ಕ್ಷೇತ್ರಗಳಿಗೆ ರೂ.101.05 ಕೋಟಿ ಸಾಲ ನೀಡಿದೆ, ರೂ.127 ಕೋಟಿ ದುಡಿಯುವ ಬಂಡವಾಳ ಮತ್ತು ರೂ.332 ಕೋಟಿ ಒಟ್ಟು ವ್ಯವಹಾರ ಮಾಡಿದೆ ಎಂದರು.

ಸಂಘವು 35 ವಸಂತಗಳನ್ನು ಪೂರೈಸಿದ್ದು ಪ್ರತಿ ವರ್ಷವೂ ಶೇ.100ರಷ್ಟು ಸಾಲ ವಸೂಲಾತಿ ದಾಖಲೆ ಹೊಂದಿದೆ ಹಾಗೂ ಲೆಕ್ಕಪರಿಶೋಧನೆಯಲ್ಲಿ 'ಅ' ಶ್ರೇಣಿಯ ಶ್ರೇಯಸ್ಸು ಹೊಂದಿದೆ. ಕಳೆದ 26 ವರ್ಷಗಳಿಂದ ಪ್ರತಿ ವರ್ಷವೂ ಶೇ.25ರಷ್ಟು ಲಾಭಾಂಶ ವಿತರಿಸಿ, ಮರಣ ಹೊಂದಿದ ಸದಸ್ಯರ ಕುಟುಂಬಕ್ಕೆ ರೂ.10,000 ಹಣ ಮರಣೋತ್ತರ ನಿಧಿ ನೀಡಲಾಗುತ್ತಿದೆ. ಸದಸ್ಯರ ಮಕ್ಕಳು ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ತಲಾ ಮೂವರು ವಿದ್ಯಾರ್ಥಿಗಳಿಗೆ ರೂ.1.20 ಲಕ್ಷ ಪ್ರೋತ್ಸಾಹ ಧನ ಹಂಚಲಾಗುತ್ತಿದೆ ಎಂದರು.

ಸಂಘವು ಗ್ರಾಹಕರಿಗೆ ಆರ್‌ಟಿಜಿಎಸ್, ಎನ್‌ಇಎಫ್‌ಟಿ, ಐಎಂಪಿಎಸ್, ಇ-ಸ್ಟ್ಯಾಂಪ್, ಸೇಫ್ ಲಾಕರ್, ಮಿನಿ ಎಟಿಎಂ ಸೌಲಭ್ಯ ಕಲ್ಪಿಸಿದೆ, ತ್ವರಿತ ಸೇವೆಗೆ ಗಣಕೀಕರಣ, ಎಸಿ ವ್ಯವಸ್ಥೆ ಹೊಂದಿದೆ ಎಂದರು.

ಸಂಘದ ಉಪಾಧ್ಯಕ್ಷ ಶಿವರುದ್ರ ಬಿ.ಪಾಟೀಲ, ನಿರ್ದೇಶಕರಾದ ಬಸಗೌಡ ಪಾಟೀಲ, ಬಸವಣ್ಣೆಪ್ಪ ಗೋರೋಶಿ, ಮಲ್ಲಪ್ಪ ಖಾನಾಪೂರ, ರಾಮಪ್ಪ ಗದಾಡಿ, ಹಣಮಂತ ಪರಕನಟ್ಟಿ, ಸುಭಾಷ ಖಾನಾಪೂರ, ಬಸಪ್ಪ ಹೆಬ್ಬಾಳ, ಪ್ರಕಾಶ ಕಲಾಲ, ಮಹಮ್ಮದಶಫಿ ಮೋಕಾಶಿ, ಕಲ್ಲೋಳೆಪ್ಪ ತೆಗಳಗಡೆ, ಭೀಮಪ್ಪ ಕಡಾಡಿ, ಬಾಳಣ್ಣ ಕಂಕಣವಾಡಿ, ಪ್ರಧಾನ ವ್ಯವಸ್ಥಾಪಕ ಹಣಮಂತ ಖಾನಗೌಡ್ರ, ಈರಯ್ಯ ಕರಗಾಂವಿಮಠ, ರಮೇಶ ಕಪಟಕೊಪ್ಪ, ರಾಮಣ್ಣ ಹೆಬ್ಬಾಳ, ವಿನೋದ ಕುರಬೇಟ ಇದ್ದರು.

ಬೀರೇಶ್ವರ ಸೊಸೈಟಿಗೆ ₹51.04 ಕೋಟಿ ನಿವ್ವಳ ಲಾಭ

ಚಿಕ್ಕೋಡಿ: ಜೊಲ್ಲೆ ಗ್ರೂಪ್ ಅಂಗಸಂಸ್ಥೆಯಾದ ಶ್ರೀ ಬೀರೇಶ್ವರ ಕೋ ಅಪ್ ಕ್ರೆಡಿಟ್ ಸೊಸೈಟಿ (ಬಹುರಾಜ್ಯ) 2025-26ರ ಆರ್ಥಿಕ ವರ್ಷದಲ್ಲಿ 51.04 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಜೊಲ್ಲೆ ಗ್ರೂಪ್ ಸಂಸ್ಥಾಪಕರು ಹಾಗೂ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ತಿಳಿಸಿದರು.



ತಾಲೂಕಿನ ಯಕ್ಸಂಬಾ ಪಟ್ಟಣದ ಬೀರೇಶ್ವರ ಕೋ ಅಪ್ ಕ್ರೆಡಿಟ್ ಸೊಸೈಟಿಯ ಮುಖ್ಯ ಶಾಖೆಯಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 2026ರ ಆರ್ಥಿಕ ವರ್ಷದ ಅಂತ್ಯಕ್ಕೆ ಸೊಸೈಟಿಯು 5183 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯದಲ್ಲಿ ಒಟ್ಟು 233 ಶಾಖೆಗಳನ್ನು ಹೊಂದಿದೆ. ದಕ್ಷಿಣ ಭಾರತದಲ್ಲೇ ಪ್ರಮುಖ ಸಹಕಾರಿ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದರು.

ಪ್ರಸ್ತುತ ಸಂಸ್ಥೆಯಲ್ಲಿ 4.45 ಲಕ್ಷ ಸದಸ್ಯರಿದ್ದು, 37.21 ಕೋಟಿ ರೂ.ಷೇರು ಬಂಡವಾಳ, 244.25 ಕೋಟಿ ರೂ. ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು, 3838.84 ಕೋಟಿ ರೂ. ಸಾಲ ಮತ್ತು ಮುಂಗಡಗಳು, 1487.90 ಕೋಟಿ ರೂ. ಬ್ಯಾಂಕ್ ಬ್ಯಾಲೆನ್ಸ್ ಮತ್ತು ಹೂಡಿಕೆ, 5839.26 ಕೋಟಿ ರೂ. ವರ್ಕಿಂಗ್ ಕ್ಯಾಪಿಟಲ್ ಹೊಂದಿದೆ. ಈ ಮೂಲಕ ಸಂಸ್ಥೆಯು ಗ್ರಾಹಕರ ವಿಶ್ವಾಸ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕತೆಯಿಂದ ಉತ್ತಮ ಸಾಧನೆ ಮಾಡುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಹೇಬ ಜೊಲ್ಲೆ, ಉಪಾಧ್ಯಕ್ಷ ಆನಂದ ಪಾಟೀಲ, ನಿರ್ದೇಶಕರಾದ ಸಿದ್ರಾಮ ಗಡದೆ, ಯಾಸಿನ ತಾಂಬೋಳಿ, ಶ್ರೀನಿವಾಸ ಕರಾಳೆ, ನಿಂಗಪ್ಪ ಖೋಕಲೆ, ಕಾಶಿನಾಥ ಕಮತೆ, ಅಪ್ಪಾಸಾಹೇಬ ಚೌಗಲಾ, ದತ್ತಾತ್ರೇಯ ಪಾಟೀಲ, ಸದಾನಂದ ಹಳಿಂಗಳಿ, ಚೇತನ ದೇಶಪಾಂಡೆ, ವಿಭಾವರಿ ಖಾಂಡಕೆ, ಪ್ರಭಾರ ಪ್ರದಾನ ವ್ಯವಸ್ಥಾಪಕ ಬಹದ್ದೂರ್ ಗುರವ, ಉಪಪ್ರಧಾನ ಮಹಾದೇವ ಮಂಗಾವತೆ, ರಮೇಶ ಕುಂಬಾರ, ಸುರೇಶ ಮಾನೆ, ಶಿವಪುತ್ರ ಡಬ್ಬ ಇತರರು ಇದ್ದರು.

ಕಾರಜೋಳ ಬಹಿರಂಗ ಚರ್ಚೆ ಹಾಸ್ಯಾಸ್ಪದ: ಎಂಬಿಪಾ

ಬಾಗಲಕೋಟ: ಯುಕೆಪಿ ಯೋಜನೆ ಕುರಿತು ಏ.8ರಂದು ಬಹಿರಂಗವಾಗಿ ಚರ್ಚೆಗೆ ಬರುವಂತೆ ಮಾಜಿ ಸಚಿವ ಗೋವಿಂದ ಕಾರಜೋಳ ಅವರ ಹಾಕಿರುವ ಸವಾಲು ಹಾಸ್ಯಾಸ್ಪದವಾಗಿದೆ ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಬಾಗಲಕೋಟೆ ವಿಧಾನಸಭೆ ಉಪಚುನಾವಣೆ ನಿಮಿತ್ತ ಭಗವತಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು, ವಿಧಾನಸಭೆ ಉಪಚುನಾವಣೆ ಪ್ರಚಾರ ಪ್ರಕ್ರಿಯೆ ಏ.7ರಂದು ಸಂಜೆ ಮುಗಿಯುತ್ತದೆ. ಹೀಗಾಗಿ ಏ.8ರಂದು ಸಭೆ ನಡೆಸಲು ಅವಕಾಶವೇ ಇಲ್ಲ ಎಂಬ ಸಾಮಾನ್ಯ ಜ್ಞಾನ ಕಾರಜೋಳ ಅವರಿಗೆ ಇಲ್ಲವೇ? ಕೇವಲ ಪ್ರಚಾರಕ್ಕಾಗಿ, ಉಡಾಫೆಗಾಗಿ ಇಂತಹ ಹೇಳಿಕೆಗಳನ್ನು ನೀಡಿರುವ ಇವರು ಯುಕೆಪಿಗಾಗಿ ಏನು ಮಾಡಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಏನೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರೂ ಕಾಂಗ್ರೆಸ್ ಅವಧಿಯಲ್ಲಿ ಮಾತ್ರ. ಬಿಜೆಪಿ ಅವರಿಗೆ ಮಾತನಾಡಲು ಯಾವ ವಿಷಯವೂ ಇಲ್ಲ. ಕಂಡ ಕಂಡಲ್ಲಿ ಜಾತಿ, ಮತ, ದ್ವೇಷದ ಮೂಲಕ ಬೆಂಕಿ ಹಚ್ಚುವ ಇವರು, ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಪ್ರಚಾರಕ್ಕಾಗಿ ಭಾಷಣ ಮಾಡುವ ಇವರು ಎಲ್ಲ ರಂಗಗಳಲ್ಲಿ ವಿಫಲರಾಗಿದ್ದಾರೆ.



ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ತಿಳಿಸಿದ್ದರು. ಮೋದಿ ಅವರು ಅಧಿಕಾರಕ್ಕೆ ಬಂದು 12ವರ್ಷ ಆಯಿತು. 24 ಕೋಟಿ ಉದ್ಯೋಗ ಸೃಷ್ಟಿ ಆಗಬೇಕಿತ್ತು. ಎಷ್ಟು ಉದ್ಯೋಗ ಸೃಷ್ಟಿ ಮಾಡಿದ್ದಾರೆ? ತಿಳಿದುಕೊಳ್ಳಿ. ರೈತರ ಸಾಲ ಮನ್ನಾ ಮಾಡದೇ, ಅಂಬಾನಿ, ಅದಾನಿ ಸಾಲ ಮನ್ನಾ ಮಾಡಿದ್ದಾರೆ. ಬಿಜೆಪಿ ಈ ಧೋರಣೆಯನ್ನುಕಂಡ ಯುವಕರಿಗೆ ಈ ಭರವಸೆಗಳು ಭ್ರಮನಿರಸವಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಗಿರೀಶ ನಾಡಗೌಡ ಕೆರಕಲಮಟ್ಟಿ ಮಾತನಾಡಿ, ಮೇಟಿ ಅವರು ಸರ್ವ ಜನಾಂಗದ ನಾಯಕರು. ಎಲ್ಲರೂ ಅವರ ಮನೆಗೆ ನೇರವಾಗಿ ಹೋಗಬಹುದು. ಸಾಮಾನ್ಯರು ಯಾರು ವೀರಣ್ಣ ಚರಂತಿಮಠರ ಮನೆಗೆ ಕಾಲಿಡಲು ಆಗುವುದಿಲ್ಲ. ಜನ ಇದನ್ನು ಅರ್ಥ ಮಾಡಿಕೊಂಡಿದ್ದಾರೆ ಎಂದರು.

ಭಗವತಿ ಗ್ರಾಮದ ನಂತರ ಕಿರಸೂರ, ಮುಗಳೊಳ್ಳಿ , ಬೆಣ್ಣೂರ ಗ್ರಾಮಗಳಲ್ಲಿ ಸಚಿವ ಎಂ.ಬಿ.ಪಾಟೀಲ ಬಿಜೆಪಿ ವಿರುದ್ಧ ಬಿರುಸಿನ ವಾಗ್ದಾಳಿ ನಡೆಸಿ, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ತಿಕೋಟಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಗುರು ದಾಶ್ಯಾಳ ಸೇರಿದಂತೆ ಹಲವು ಕಾಂಗ್ರೆಸ್ ಪದಾಧಿಕಾರಿಗಳು ಮನೆ ಮನೆಗೆ ಗ್ಯಾರಂಟಿ ಯೋಜನೆಗಳ ಕುರಿತು ಪ್ರಚಾರ ನಡೆಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮಾತೃಭೂಮಿಯಿಂದ ಧನ ಸಹಾಯ

ಯಲ್ಲಾಪುರ: ಯಲ್ಲಾಪುರದ ಪ್ರತಿಭಾನ್ವಿತ ವಿದ್ಯಾರ್ಥಿ ಮಿತೇಶ ವಿ.ಭಟ್ ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದು, ಅವನ ವೈದ್ಯಕೀಯ ವೆಚ್ಚಕ್ಕಾಗಿ ಮಾತೃಭೂಮಿ ಸೇವಾ ಪ್ರತಿಷ್ಠಾನ 25 ಸಾವಿರ ರೂ. ಧನಸಹಾಯ ನೀಡಿದೆ.24 ವರ್ಷದ ಮಿತೇಶ ಭಟ್ ಇಂಜಿನಿಯರಿಂಗ್ (ಉ-ಇ)) ವಿದ್ಯಾರ್ಥಿಯಾಗಿದ್ದು Anti – HMGCR Immune Mediated Necrotizing Myositis ಎಂಬ ಅಪರೂಪದ ರೋಗದಿಂದ ಬಳಲುತ್ತಿದ್ದಾನೆ. ಪತಿಯನ್ನು ಕಳೆದುಕೊಂಡಿರುವ ಪ್ರಭಾವತಿ ಏಕಾಂಗಿಯಾಗಿ ತನ್ನ ಬದುಕಿನ ಏಕೈಕ ಆಸರೆಯಾದ ಮಗನಿಗೆ ವಿದ್ಯಾಭ್ಯಾಸ ಕೊಡಿಸಿದ್ದು ಇದೀಗ ಆತನನ್ನು ಉಳಿಸಿಕೊಳ್ಳಲು ಹರಸಾಹಸಪಡುತ್ತಿದ್ದಾರೆ.

ಬೆಂಗಳೂರಿನ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಿತೇಶ ಸಾವು-ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದಾರೆ. ತಾಯಿ ಪ್ರಭಾವತಿಯ ಖಾತೆಗೆ 25 ಸಾವಿರ ರೂ. ವರ್ಗಾಯಿಸಿದ್ದಾಗಿ ತಿಳಿಸಿರುವ ಮಾತೃಭೂಮಿ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಶ್ರೀರಂಗ ಕಟ್ಟಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕುಟುಂಬಕ್ಕೆ ಸಹಾಯ ಮಾಡಬೇಕೆಂದು ವಿನಂತಿಸಿದ್ದಾರೆ.

ಬ್ಯಾಂಕ್ ಖಾತೆ ವಿವರ : ಪ್ರಭಾವತಿ ವಿಶ್ವೇಶ್ವರ ಭಟ್
No. 34167218279
IFSC code : SBINOOO1315
Bank &Branch : SBI Yellapur.Contact No : 9482648361

ಇಂದು ಅಡಿಕೆ ಭವನ ಲೋಕಾರ್ಪಣೆ

ಸಿದ್ದಾಪುರ: ಸ್ಥಳೀಯ ಅಡಿಕೆ ವರ್ತಕರ ಸಂಘದಿಂದ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಲಾದ ನೂತನ ಅಡಿಕೆ ಭವನ ಲೋಕಾರ್ಪಣೆ ಸಮಾರಂಭವು ಏ.4ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಈ ಕುರಿತು ನಡೆಯಲಿರುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ವಹಿಸಲಿದ್ದಾರೆ. ಉದ್ಘಾಟನೆಯನ್ನು ಶಾಸಕ ಭೀಮಣ್ಣ ನಾಯ್ಕ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ, ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಕರ್ನಾಟಕ ಅರೆಕಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಜಿ.ಎಂ.ಪ್ರಸನ್ನಕುಮಾರ, ತಹಶೀಲ್ದಾರ್ ಮಧುಸೂಧನ ಕುಲಕರ್ಣಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳಿಗೆಹಾಗೂ ಹಿರಿಯ ಅಡಿಕೆ ವ್ಯಾಪಾರಿಗಳಿಗೆ ಗೌರವಾರ್ಪಣೆ ನಡೆಯಲಿದೆ. ಸಂಜೆ 7 ರಿಂದ ವಿದೂಷಿ ವಸುಧಾ ಶರ್ಮಾ ಹಾಗೂ ಸಹಕಲಾವಿದರಿಂದ ಸಂಗೀತ ಸಂಜೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಅಡಿಕೆ ವರ್ತಕರ ಸಂಘದ ಅಧ್ಯಕ್ಷ ಆರ್.ಎಸ್.ಹೆಗಡೆ ಹರಗಿ ಹಾಗೂ ಸರ್ವ ಸದಸ್ಯರು ಕೋರಿದ್ದಾರೆ.

ಇಂದಿನಿಂದ ಸಂಸ್ಕೃತ ಸ್ತೋತ್ರ ಕಲಿಕೆ ಶಿಬಿರ

ಗೋಕರ್ಣ: ಇಲ್ಲಿನ ಸೇವಾ ಭಾರತೀ ಸಂಸ್ಥೆ ಹಾಗೂ ಮೇಧಾದಕ್ಷಿಣಾಮೂರ್ತಿ ಸಂಸ್ಕೃತ ಕಾಲೇಜಿನ ಸಹಯೋಗದಲ್ಲಿ ಮಕ್ಕಳಿಗೆ ಸಂಸ್ಕೃತ ಸ್ತೋತ್ರ ಕಲಿಕೆ ಹಾಗೂ ಮನೆಪಾಠ ಸಹಾಯ ಶಿಬಿರ ಏ.4ರಿಂದ ಪ್ರಾರಂಭವಾಗಲಿದೆ. ಮಕ್ಕಳಲ್ಲಿ ಶಿಸ್ತು, ಸಂಸ್ಕಾರ ಮತ್ತು ಭಕ್ತಿ ಭಾವ ಬೆಳೆಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಶಿಬಿರದಲ್ಲಿ 16 ವರ್ಷದ ಒಳಗಿನ ಮಕ್ಕಳು ಪಾಲ್ಗೊಳ್ಳಬಹುದಾಗಿದ್ದು, ಸಂಸ್ಕೃತ ಕಾಲೇಜಿನಲ್ಲಿ ಪ್ರತಿ ದಿನ ಮಧ್ಯಾಹ್ನ 3.30ರಿಂದ 4.30ರವರೆಗೆ ನಡೆಯಲಿದೆ. ಶಿಬಿರಕ್ಕೆ ಸೇರುವವರು ಮಂಜುನಾಥ ಭಟ್ -9483824050, ಗಣೇಶ್ವರ ದೀಕ್ಷಿತ-9420208121,ಗಣಪತಿ ಬಟ್ಟು 9901801625,ರಾಜೀವಬೈಲಕೇರಿ-9448797381,ಸಾವಿತ್ರಿ ಬೈಲಕೇರಿ-9481110274 ಇವರನ್ನು ಸಂಪರ್ಕಿಸಲುಪ್ರಕಟಣೆಯಲ್ಲಿ ಕೋರಲಾಗಿದೆ.

ಅಪಾರ ಮೌಲ್ಯದ ಚಿನ್ನಾಭರಣ ಕಳುವು

ಅಂಕೋಲಾ: ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಮನೆಯ ಬಾಗಿಲ ಬೀಗ ಮುರಿದು ಒಳನುಗ್ಗಿದ ಕಳ್ಳರು ಬಂಗಾರದ ಸರ, ನಗದು ಹಣ, ಮತ್ತಿತರ ವಸ್ತುಗಳನ್ನು ಕಳ್ಳತನ ಮಾಡಿರುವ ಘಟನೆ ಪಟ್ಟಣದ ಅಜ್ಜಿಕಟ್ಟಾದಲ್ಲಿ ಹಾಡು ಹಗಲಲ್ಲೇ ನಡೆದಿದೆ.

ಅಜ್ಜಿಕಟ್ಟಾದಲ್ಲಿ ವಾಸವಾಗಿರುವ ಹೋಟೆಲ್ ಉದ್ಯೋಗಿ ಸ್ನೇಹಾ ಎನ್ನುವವರ ಮನೆಗೆ ಏ. 1ರಂದು ಬೆಳಗ್ಗೆ 9.15 ರಿಂದ ಮಧ್ಯಾಹ್ನ 1.45 ಗಂಟೆ ನಡುವಿನ ಅವಧಿಯಲ್ಲಿ ನುಗ್ಗಿದ ಕಳ್ಳರು ಮನೆಯ ಬಾಗಿಲಿಗೆ ಹಾಕಿದ ಬೀಗ ಒಡೆದು ಗೋದ್ರೆಜ್ ಕಪಾಟಿನ ಬಾಗಿಲು ತೆರೆದು ಅದರಲ್ಲಿದ್ದ ಸುಮಾರು 80 ಸಾವಿರ ರೂಪಾಯಿ ಮೌಲ್ಯದ 10 ಗ್ರಾಂ ಬಂಗಾರದ ಚೈನ್, ಲೆನೊವೊ ಕಂಪನಿಯ 10 ಸಾವಿರ ರೂಪಾಯಿ ಮೌಲ್ಯದ ಲ್ಯಾಪ್‌ಟಾಪ್ ಮತ್ತು 5500 ರೂಪಾಯಿ ನಗದು ಹಣ ಸೇರಿದಂತೆ ಒಟ್ಟು 95500 ರೂಪಾಯಿ ಮೌಲ್ಯದ ಸ್ವತ್ತುಗಳನ್ನು ಕಳ್ಳತನ ಮಾಡಿದ್ದು ಈ ಕುರಿತಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.



ಯಲ್ಲಾಪುರ: ತಾಲೂಕಿನ ಅರಬೈಲ್ ಗ್ರಾಮದ ಮಾರುತಿ ದೇವಾಲಯಕ್ಕೆ ಶಾಸಕ ಶಿವರಾಮ ಹೆಬ್ಬಾರ್ ಭೇಟಿ ನೀಡಿ ದೇವರ ದರ್ಶನ ಪಡೆದರು. ಹನುಮಾನ ಜಯಂತಿ ಅಂಗವಾಗಿ ನಡೆದ ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು, ಭಕ್ತರೊಂದಿಗೆ ಪಲ್ಲಕ್ಕಿಯನ್ನು ಹೊತ್ತು ಸಾಗಿದರು.

ರಕ್ತದಾನ ಮನುಕುಲದ ಪರಮೋಚ್ಚ ಸೇವೆ

ಸಿದ್ದಾಪುರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್ ಕ್ರಾಸ್, ರೋವರ್ಸ್ ಮತ್ತು ರೇಂಜರ್ಸ್ ಘಟಕಗಳು ಹಾಗೂ ತಾಲೂಕು ಸರ್ಕಾರಿ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವು ಯಶಸ್ವಿಯಾಗಿ ಜರುಗಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲರಾದ ಡಾ. ಸತೀಶ ಎನ್. ನಾಯ್ಕ ಅವರು ರಕ್ತದಾನವುಕೇವಲ ಒಂದುದೈಹಿಕಕ್ರಿಯೆಯಲ್ಲ, ಅದುಮನುಕುಲದಪರವಾದಪರಮೋಚ್ಚ ಸೇವೆ ಮತ್ತು ನೈತಿಕ ಜವಾಬ್ದಾರಿಯಾಗಿದೆ ಎಂದರು. ಮುಖ್ಯ ಅತಿಥಿಗಳಾದ ವೈದ್ಯಕೀಯ ತಂಡದ ಮುಖ್ಯಸ್ಥರಾದ ಡಾ.ಜ್ಯೋತಿ ಹೆಗಡೆ ಅವರು ರಕ್ತದಾನ ಮಾಡುವುದರಿಂದ ದಾನಿಗಳ ದೇಹದಲ್ಲಿ ಹೊಸ ರಕ್ತಕಣಗಳು ಉತ್ಪತ್ತಿಯಾಗಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ ಎಂಬ ವೈಜ್ಞಾನಿಕ ಸತ್ಯಗಳನ್ನು ವಿವರಿಸುವ ಮೂಲಕ ವಿದ್ಯಾರ್ಥಿಗಳಲ್ಲಿದ್ದ ಭೀತಿಯನ್ನು ದೂರಮಾಡಿ ಆತ್ಮವಿಶ್ವಾಸ ತುಂಬಿದರು. ಸಂಯೋಜಕರಾದ ಡಾ. ಜಿ.ಕೆ.ಚೇತನಕುಮಾರ ಮತ್ತು ಡಾ. ರಶ್ಮಿ ಎನ್.ಕರ್ಕಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಯುವಜನತೆ ಇಂತಹ ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ದೇಶದ ಸದೃಢ ಆರೋಗ್ಯ ವ್ಯವಸ್ಥೆಗೆ ಬೆನ್ನೆಲುಬಾಗಬೇಕು ಎಂದು ಪ್ರೇರೇಪಿಸಿದರು. ಪ್ರದೀಪ ನೇತೃತ್ವದ ತಾಂತ್ರಿಕ ತಂಡದ ಅಚ್ಚುಕಟ್ಟಾದ ಸಹಕಾರದೊಂದಿಗೆ ನಡೆದ ಈ ಶಿಬಿರದಲ್ಲಿ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ರಕ್ತದಾನ ಮಾಡಲು ನೋಂದಣಿ ಮಾಡಿಕೊಂಡು ರಕ್ತದಾನ ಮಾಡಿದರು.



ಕಾರವಾರ: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್.ವೈದ್ಯ ರವರ ಮನೆಗೆ ಭಟ್ಕಳ ತಹಶೀಲ್ದಾರ್ ನಾಗೇಂದ್ರ ಕೊಳಶೆಟ್ಟಿ ಮತ್ತು ಸಿಬ್ಬಂದಿ ಶುಕ್ರವಾರ ಭೇಟಿ ನೀಡಿ ಸ್ವಯಂ ಮನೆ ಗಣತಿ ಮಾಡಿದರು.

ನಿರಂತರ ಹವಾಮಾನ ಬದಲಾವಣೆ: ಸಂಕಷ್ಟದಲ್ಲಿ ಅಡಿಕೆ ಬೆಳೆಗಾರರು

ಸುಧೀರ ನಾಯರ್

ದಿಗಂತ ವಿಶೇಷ

ಬನವಾಸಿ: ಮಲೆನಾಡಿನ ಭಾಗದಲ್ಲಿ ಕಂಡುಬರುತ್ತಿರುವ ದಿಢೀರ್ ಹವಾಮಾನ ಬದಲಾವಣೆಯು ಅಡಿಕೆ ಬೆಳೆಗಾರರನ್ನು ತೀವ್ರ ಸಂಕಷ್ಟಕ್ಕೆ ದೂಡಿದೆ. ಅಕಾಲಿಕ ಮಳೆ ಮತ್ತು ಮರುಕ್ಷಣವೇ ಕಾಣಿಸಿಕೊಳ್ಳುತ್ತಿರುವ ತೀವ್ರ ಬಿಸಿಲಿನ ಅಸಮತೋಲನದಿಂದಾಗಿ ಅಡಿಕೆ ಮರಗಳ ಜೀವನಾಡಿಯಾದ 'ಹಿಂಗಾರ'ವು ಕೊಳೆಯಲಾರಂಭಿಸಿದ್ದು, ಇದು ಮಾರಕ 'ಎಲೆಚುಕ್ಕಿ' ರೋಗ ಉಲ್ಬಣಗೊಳ್ಳಲು ದಾರಿ ಮಾಡಿಕೊಡುತ್ತಿದೆ.

ಅಡಿಕೆ ಕೃಷಿಯಲ್ಲಿ ಮುಂದಿನ ಫಸಲನ್ನು ನಿರ್ಧರಿಸುವ ಹಿಂಗಾರುಗಳು ಅರಳುವ ಮೊದಲೇ ಹವಾಮಾನದ ಹೊಡೆತಕ್ಕೆ ಸಿಲುಕುತ್ತಿವೆ. ಮೈಸುಡುವ ಬಿಸಿಲಿನ ನಡುವೆ ಬೀಳುವ ಅಲ್ಪ ಪ್ರಮಾಣದ ಮಳೆಯು ತೋಟಗಳನ್ನು ತಂಪು ಮಾಡುವ ಬದಲು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತಿದೆ. ಮಳೆ ಬಂದಾಗ ಹಿಂಗಾರದ ಪಕಳೆಗಳ ನಡುವೆ ಸಂಗ್ರಹವಾಗುವ ನೀರು, ಮರುದಿನದ ತೀವ್ರ ಬಿಸಿಲಿಗೆ ಕಾಯ್ದು ಮೃದುವಾದ ಅಂಗಾಂಶಗಳನ್ನು ಸುಟ್ಟು ಹಾಕುತ್ತಿದೆ. ಇದರಿಂದ ಪರಾಗಸ್ಪರ್ಶ ಪ್ರಕ್ರಿಯೆ ಸ್ಥಗಿತಗೊಂಡು ಹಿಂಗಾರಗಳು ಅರಳುವ ಮುನ್ನವೇ ನಾಶವಾಗುತ್ತಿವೆ.

ಕಳೆದ ವರ್ಷ ಅಕಾಲಿಕ ಮಳೆಯಿಂದಾಗಿ ಕೇವಲ ಶೇ. 30ರಷ್ಟು ಮಾತ್ರ ಫಸಲು ಪಡೆದಿದ್ದ ಬೆಳೆಗಾರರು ಈ ಬಾರಿಯೂ ಅದೇ ಆತಂಕದಲ್ಲಿದ್ದಾರೆ.



- ಪರಾಗಸ್ಪರ್ಶ ಪ್ರಕ್ರಿಯೆಯಿಂದ ಹಿಂಗಾರು ಅರಳುವ ಮುನ್ನವೇ ನಾಶ
- ಸರ್ಕಾರ ಹಾಗೂ ಸಂಶೋಧನಾ ಕೇಂದ್ರಗಳು ಈ ಸಮಸ್ಯೆಗೆ ಶಾಶ್ವತ ಪರಿಹಾರ ಸೂಚಿಸಿ

ಒಟ್ಟಾರೆಯಾಗಿ, ಬದಲಾಗುತ್ತಿರುವ ಪ್ರಕೃತಿಯ ನಡುವೆ ಅಡಿಕೆ ಕೃಷಿಯನ್ನು ಉಳಿಸಿಕೊಳ್ಳಲು ಮಲೆನಾಡಿನ ರೈತರು ಹರಸಾಹಸ ಪಡುತ್ತಿದ್ದು, ಸರ್ಕಾರ ಹಾಗೂ ಸಂಶೋಧನಾ ಕೇಂದ್ರಗಳು ಈ ಸಮಸ್ಯೆಗೆ ಶಾಶ್ವತ ಪರಿಹಾರ ಸೂಚಿಸಬೇಕಿದೆ ಎಂಬುದು ಬೆಳೆಗಾರರ ಒತ್ತಾಯವಾಗಿದೆ.

> **ದುರ್ಬಲಗೊಂಡ ಹಿಂಗಾರಕ್ಕೆ ಶಿಲೀಂಧ್ರಗಳು ಅತಿ ಬೇಗನೆ ಅಂಟಿಕೊಳ್ಳುತ್ತವೆ. ಈ ಶಿಲೀಂಧ್ರಗಳ ಬೀಜಾಣುಗಳು ಗಾಳಿ ಮತ್ತು ಮಳೆಯ ಹನಿಗಳ ಮೂಲಕ ಎಲೆಗಳಿಗೆ ಹರಡಿ ಎಲೆಚುಕ್ಕಿ ರೋಗದ ತೀವ್ರತೆಯನ್ನು ಹೆಚ್ಚಿಸುತ್ತಿವೆ. ಹೀಗಾಗಿ ರೈತರು ಕೇವಲ ಮಳೆಗಾಲದಲ್ಲಿ ಮಾತ್ರವಲ್ಲದೆ, ಹವಾಮಾನಕ್ಕೆ ತಕ್ಕಂತೆ ಕಾಲಕಾಲಕ್ಕೆ ಶಿಲೀಂಧ್ರನಾಶಕ ಸಿಂಪಡಿಸುವುದು ಅನಿವಾರ್ಯವಾಗಿದೆ.**
>
> ■ **ಗಣೇಶ ಹೆಗಡೆ, ತೋಟಗಾರಿಕಾ ಇಲಾಖೆಯ ಅಧಿಕಾರಿ**

> **ಹವಾಮಾನ ವೈಪರೀತ್ಯದಿಂದಾಗಿ ಕೃಷಿ ಪದ್ಧತಿಯೇ ಬದಲಾಗಿದೆ. ಹಿಂದೆ ಕೇವಲ ಮಳೆಗಾಲದಲ್ಲಿ ಬೋರ್ಡೋ ದ್ರಾವಣ ಬಳಸುತ್ತಿದ್ದ ನಾವು, ಈಗ ವರ್ಷವಿಡೀ ವಿವಿಧ ರೋಗನಿರೋಧಕಗಳನ್ನು ಬಳಸಬೇಕಾದ ಅಸಹಾಯಕ ಸ್ಥಿತಿಯಲ್ಲಿದ್ದೇವೆ. ಕಾರ್ಮಿಕರ ಕೊರತೆ ಮತ್ತು ಪದೇ ಪದೇ ಔಷಧ ಸಿಂಪಡಿಸುವ ವೆಚ್ಚ ಭರಿಸುವುದು ರೈತರಿಗೆ ದೊಡ್ಡ ಹೊರೆಯಾಗಿದೆ.**
>
> ■ **ರವೀಶ್ ಹೆಗಡೆ ಬೆಂಗಳೆ, ಅಡಿಕೆ ಬೆಳೆಗಾರ**

ಕೇಣಿ ಬಂದರು ಯೋಜನೆ ವಿರೋಧದ ಹೆಸರಿನಲ್ಲಿ ಅವ್ಯವಹಾರ: ಆರೋಪ

ಅಂಕೋಲಾ: ತಾಲೂಕಿನ ಕೇಣಿ ವಾಣಿಜ್ಯ ಬಂದರು ನಿರ್ಮಾಣ ಯೋಜನೆ ವಿರೋಧಿ ಹೋರಾಟದ ಹೆಸರಿನಲ್ಲಿ ವಿವಿಧ ಮೂಲಗಳಿಂದ ಲಕ್ಷಾಂತರ ರೂ.ಹಣ ಸಂಗ್ರಹಿಸಲಾಗಿದ್ದು ಆ ಕುರಿತಂತೆ ಲೆಕ್ಕ ಕೇಳಿದರೆ ಹೋರಾಟ ಸಮಿತಿಯ ಪ್ರಮುಖ ಎಂದು ಹೇಳಿಕೊಳ್ಳುವ ವ್ಯಕ್ತಿಯೋರ್ವ ಹಾರಿಕೆಯ ಉತ್ತರ ನೀಡುತ್ತಿದ್ದಾನೆ ಎಂದು ಹೋರಾಟ ಸಮಿತಿಯ ಸದಸ್ಯ ರಾಜು ಹರಿಕಂತ್ರ, ಕಣಗೀಲ್ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಬಂದರು ನಿರ್ಮಾಣದ ವಿರುದ್ಧ ಮೀನುಗಾರರು ಸೇರಿದಂತೆ ಸುತ್ತ ಮುತ್ತಲಿನ ಹಳ್ಳಿಗಳ ಎಲ್ಲಾ ಸಮಾಜದ ಜನರು ಹಲವು ರೀತಿಯ ಹೋರಾಟ ಮತ್ತು ಪ್ರತಿಭಟನೆಗಳನ್ನು ನಡೆಸಿದ್ದು ಹೋರಾಟ ಸಮಿತಿಯ ಸದಸ್ಯನಾಗಿರುವ ತಾವು ದಾನಿಗಳಿಂದ ಸಂಗ್ರಹವಾದ ಧನಸಹಾಯ, ಖರ್ಚು ವೆಚ್ಚದ ಕುರಿತಂತೆ ವಿಚಾರಿಸಿದರೆ ಸಮಿತಿಯ ಪ್ರಮುಖ ಎಂದು ಹೇಳಿಕೊಳ್ಳುವ ವ್ಯಕ್ತಿ ನೀನು ನಮ್ಮ ಊರಿನವನಲ್ಲ ಖರ್ಚು ವೆಚ್ಚ ಕೇಳುವ ಹಕ್ಕು ನಿನಗಿಲ್ಲ ಎಂದು ಅಸಮಂಜಸ ಉತ್ತರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಹೋರಾಟ ಸಮಿತಿಯ ಸಭೆಗಳನ್ನುತನಗಿಷ್ಟ ಬಂದಂತೆ ಕರೆದು ಸಭೆಗೆ ಬರದವರ ವಿರುದ್ಧ ಅಪಪ್ರಚಾರ ನಡೆಸುವ ಸ್ವಯಂಘೋಷಿತ ಹೋರಾಟಗಾರ ತಾನು ಯಾವುದೇ



ಹಣಕಾಸಿನ ವ್ಯವಹಾರ ಹೊಂದಿಲ್ಲ ಎಂದು ಹೇಳುತ್ತಿದ್ದರೂ 2 ಸಾವಿರ ರೂಪಾಯಿಯಂತೆ 376 ಮನೆಗಳಿಂದ 7.46ಲಕ್ಷಹಣಸಂಗ್ರಹಮಾಡಲಾಗಿದ್ದು ಈ ಹಣ ಕೇಣಿಯ ಐದಾರು ಜನ ಪ್ರಮುಖ ಹೋರಾಟಗಾರರ ತಾಬಾದಲ್ಲಿ ಇದೆ ಇದಲ್ಲದೇ ಜಿಲ್ಲೆಯ ವಿವಿಧ ಉದ್ಯಮಿಗಳಿಂದ, ಸಂಘ ಸಂಸ್ಥೆ ಮೀನುಗಾರರ ಯೂನಿಯನ್‌ಗಳಿಂದ 10 ಲಕ್ಷಕ್ಕೂ ಹೆಚ್ಚಿನ ಹಣ ಸಂಗ್ರಹ ಮಾಡಿರುವ ಮಾಹಿತಿ ಸಿಕ್ಕಿದೆ ಇದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಷ್ಟು ಇದೆ ಎಂದು ತಿಳಿಯುತ್ತಿಲ್ಲ, ಪ್ರತಿಭಟನೆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಬರಲು ವಿಳಂಬವಾದ ಕಾರಣ ಪೆಟ್ರೋಲ್ ಹಾಕಿಸಲು ಸಂಗ್ರಹ ಮಾಡಿರುವ ಹಣ ಯಾರ ಜೇಬು ಸೇರಿದೆ ಎನ್ನುವ ಕುರಿತಂತೆ ಮಾಹಿತಿ ಇಲ್ಲ ಎಂದು ರಾಜು ಹರಿಕಂತ್ರ ಆರೋಪಿಸಿದರು.ಪ್ರವಾಸದ ಸಂದರ್ಭದಲ್ಲಿ ನಡೆಸಿರುವ ಅಧ್ಯಯನ, ತರಬೇತಿ ಕುರಿತಂತೆ ಇತರರಿಗೆ ಯಾವುದೇ ಮಾಹಿತಿ ಏಕೆ ನೀಡಲಾಗಿಲ್ಲ.ಅಗತ್ಯ ಬಿದ್ದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ದಾಖಲೆಗಳನುಬಿಡುಗಡೆ ಮಾಡುವುದಾಗಿ ತಿಳಿಸಿದರು.

ಸಂಭ್ರಮದ ವೀರಾಂಜನೇಯ ರಥೋತ್ಸವ

ಹೊನ್ನಾವರ: ಕ್ಷೇತ್ರ ಗೇರುಸೊಪ್ಪದ ಬಂಗಾರಮಕ್ಕಿಯಲ್ಲಿ ಹನುಮ ಜಯಂತಿ ಅಂಗವಾಗಿ ವೀರಾಂಜನೇಯ ದೇವರ ಮಹಾಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಾಂಪ್ರದಾಯಿಕ ಪೂಜಾ ವಿಧಾನಗಳಿಂದ ದೇವಸ್ಥಾನದ ಆವರಣದಲ್ಲಿ ಪೂಜೆ, ಪುನಸ್ಕಾರ ಕಾರ್ಯಕ್ರಮ ನಡೆಯಿತು. ದೇವರ ಉತ್ಸವ ಮೂರ್ತಿಯನ್ನು ರಥದಲ್ಲಿ ಇರಿಸಿ ಪೂಜಿಸಲಾಯಿತು. ಕ್ಷೇತ್ರದ ಧರ್ಮದರ್ಶಿಗಳಾದ ಪೂಜ್ಯ ಶ್ರೀ ಮಾರುತಿ ಗುರೂಜಿ ಸಾನಿಧ್ಯದಲ್ಲಿ ಉತ್ಸವ ನಡೆಯಿತು.

ಕ್ಷೇತ್ರದಧರ್ಮದರ್ಶಿಗಳಾದಪೂಜ್ಯ ಮಾರುತಿ ಗುರೂಜಿಯವರು ಮಾಧ್ಯಮದೊಂದಿಗೆ ಮಾತನಾಡಿ, ಭಕ್ತಾಧಿಗಳ ಸಹಕಾರದಿಂದ ಮಲೆನಾಡು ಉತ್ಸವ, ಜಾತ್ರಾಮಹೋತ್ಸವ ಯಶಸ್ವಿಯಾಗಿ ನಡೆದಿದೆ. ಬಹುದಿನದ ಅಪೇಕ್ಷೆಯಾದ ಸೈನ್ಸ್ ಮತ್ತು ರಿಸರ್ಚ್ ಸೆಂಟರ್ ಮಾಡಬೇಕೆನ್ನುವ ಸಂಕಲ್ಪ ಇತ್ತು. ಇಸ್ರೋದ ಮಾಜಿ ಅಧ್ಯಕ್ಷ ಎಸ್.ಕಿರಣಕುಮಾರ ಮಲೆನಾಡು ಉತ್ಸವ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ವೇಳೆ ಭರವಸೆ ನೀಡಿದ್ದಾರೆ. ಈ ಮಹತ್ಕಾರ್ಯಕ್ಕೆ ಮಲೆನಾಡು ಉತ್ಸವ ಸಾಕ್ಷಿಯಾಗಿದೆ ಎಂದರು.

ಶರಾವತಿ ಪಂಪ್ಡ್‌ಸ್ಟೋರೇಜ್ ಯೋಜನೆ ಎಲ್ಲಿಯವರೆಗೆ ಸಂಪೂರ್ಣವಾಗಿ ಬಂದ್ ಆಗುವುದಿಲ್ಲವೋ, ಅಲ್ಲಿಯವರೆಗೆ ಯೋಜನೆಯ ವಿರುದ್ಧದ ಹೋರಾಟ ನಿರಂತರವಾಗಲಿದೆ.

ಪರಿಸರತಜ್ಞರಾದರಾಜೇಂದ್ರಸಿಂಗ್ ಸೇರಿದಂತೆ ಕ್ಷೇತ್ರಕ್ಕೆ ಆಗಮಿಸಿದ ಅನೇಕ ವಿಜ್ಞಾನಿಗಳು, ತಜ್ಞರು, ಸಾಮಾಜಿಕ ಕಳಕಳಿಯುಳ್ಳವರು ಹೋರಾಟಕ್ಕೆ ಬೆಂಬಲಿಸುವುದಾಗಿ ಭರವಸೆ ನೀಡಿದ್ದಾರೆ.



ಕಾನೂನಿನಲ್ಲಿ ಒಂದು ಹಂತದ ತಡೆಬಂದು ಯಶಸ್ಸು ಸಿಕ್ಕಿದೆ. ಆದರೆ ಇದು ತಾತ್ಕಾಲಿಕವಾಗಿದೆ. ಯೋಜನೆ ಸಂಪೂರ್ಣ ನಿಲ್ಲಲು ನಮ್ಮ ಧ್ವನಿ ಕೇಂದ್ರ,ರಾಜ್ಯ ಸರ್ಕಾರಕ್ಕೆ ಮನವರಿಕೆ ಮಾಡುತ್ತಿದ್ದೇವೆ.ಆಡಳಿತಾರೂಢ ಪ್ರತಿನಿಧಿಗಳು ಈ ಧ್ವನಿಗೆ ಸ್ಪಂದಿಸಿ ಶಾಶ್ವತವಾಗಿ ಈ ಯೋಜನೆ ನಿಲ್ಲಿಸಲು ಪ್ರಯತ್ನಿಸಬೇಕು ಎಂದರು.

ಭಕ್ತರು ದೇವರಿಗೆ ಹಣ್ಣು-ಕಾಯಿ ಸೇವೆ, ಅಭಿಷೇಕ, ಅರ್ಚನೆ ಇನ್ನಿತರ ಸೇವೆಗಳನ್ನು ಸಲ್ಲಿಸಿದರು. ರಥ ಕಾಣಿಕೆ ಸಮರ್ಪಿಸಿ ಭಕ್ತಿ ಭಾವದಿಂದ ಬೇಡಿಕೊಂಡರು.ನಂತರ ವಿವಿಧ ಭಾಗಗಳಿಂದ ಆಗಿಸಿದ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ನಡೆಯಿತು.

ರಥಕ್ಕೆ ಬಾಳೆಹಣ್ಣು ಎಸೆದು ರಥಾರೂಡನಾದ ವಿಶ್ವ ವೀರಾಂಜನೇಯನ ಕಣ್ತುಂಬಿಕೊಂಡು ಪುನೀತರಾದರು. ಜಾತ್ರಾ ಮಹೋತ್ಸವ ನಿಮಿತ್ತ ವಿವಿಧ ಸಿಹಿಖಾದ್ಯ ಅಂಗಡಿಗಳು,ಆಟಿಕೆ ಅಂಗಡಿಗಳು, ಅಮ್ಯೂಸ್ಮೆಂಟ್ ಪಾರ್ಕಗಳಿದ್ದವು. ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.



ಗೋಕರ್ಣ: ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ಹನುಮ ಜಯಂತಿಯನ್ನ ಸಂಭ್ರಮದಿಂದ ಆಚರಿಸಲಾಯಿತು. ಇಲ್ಲಿನ ಕೋಟಿ ತೀರ್ಥಕಟ್ಟೆಯಲ್ಲಿರುವ ಹನುಮಂತೇಶ್ವರ ಮಂದಿರದಲ್ಲಿ ವಿವಿಧ ದೈವಿಕ ಕಾರ್ಯಕ್ರಮ ಜರುಗಿತು. ವಿದೇಶಿ ಪ್ರವಾಸಿಗರು ಮಂದಿರಕ್ಕೆ ಆಗಮಿಸಿ ದೇವರ ದರ್ಶನ ಪಡೆದುಕೊಂಡರು.



ಕುಮಟಾ: ಭಾರತೀಯ ಸೇನೆಯಲ್ಲಿ ಸುದೀರ್ಘ 24 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಹುಟ್ಟೂರಿಗೆ ಆಗಮಿಸಿದ ಭಾರತೀಯ ಯೋಧ ಹವಾಲ್ದಾರ್ ವಿನಾಯಕ ಹೊಸಬಯ್ಯ ಪಟಗಾರ ಅವರಿಗೆ ಮಾಸ್ತಿಕಟ್ಟೆಯ ಮಹಾಸತಿ ದೇವಸ್ಥಾನದಲ್ಲಿ ಭವ್ಯ ಸ್ವಾಗತ ನೀಡಿ ಗೌರವಿಸಲಾಯಿತು. ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿ, ಹಾರಹೂವಿನೊಂದಿಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ನಾಳೆಯಿಂದ ದುರ್ಗಾಪರಮೇಶ್ವರಿ ಅಮ್ಮನವರ ಬ್ರಹ್ಮಕಲಶೋತ್ಸವ

ಭಟ್ಕಳ: ಭಕ್ತರ ಪಾಲಿನ ನಂಬಿಕೆ ಮತ್ತು ಶಕ್ತಿಕ್ಷೇತ್ರವಾದ ಮುಂಡಳ್ಳಿಯ ದುರ್ಗಾಪರಮೇಶ್ವರಿ ಅಮ್ಮನವರ ಅಷ್ಟಬಂಧ ಹಾಗೂ ಬ್ರಹ್ಮಕಲಶೋತ್ಸವ ಏ. 5ರಿಂದ 9ರ ವರೆಗೆ ನಡೆಯಲಿದೆ.

ಬ್ರಹ್ಮಕಲಶೋತ್ಸವದ ಪ್ರಯುಕ್ತ ದೇವಸ್ಥಾನದಲ್ಲಿ ಏ. 5ರಿಂದ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮ ಆರಂಭವಾಗಲಿದೆ. ಸಂಜೆ 7ರಿಂದ 8 ಗಂಟೆ ವರೆಗೆ ಶಾಲಾ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ, ರಾತ್ರಿ 8ರಿಂದ ಸಣಬಾವಿಯ ರಾಮಾಂಜನೇಯ ಭಜನೆ ಮಂಡಳದವರಿಂದ ಕುಣಿತ ಭಜನೆ, ರಾತ್ರಿ 9 ಗಂಟೆಗೆ ಉಮೇಶ ಮುಂಡಳ್ಳಿ ಅವರಿಂದ ಭಾವ ಗಾನ ಸುಗಮ ಸಂಗೀತ ನಡೆಯಲಿದೆ. ಏ. 6ರಂದು ಬೆಳಗ್ಗೆ 10.15ಕ್ಕೆ ದುರ್ಗಾಪರಮೇಶ್ವರಿ ದೇವಿಯ ಮಹೋತ್ಸವ ಸಹಸ್ರ ಬ್ರಹ್ಮಕಲಶಾಭಿಷೇಕ, ಶತಚಂಡಿಯಾಗ ನಡೆಯಲಿದೆ. 11.30ರಿಂದ 12.30ರ ವರೆಗೆ ಮಂಗಳೂರಿನ ಗುರುಪುರದ ವಜ್ರದೇಹಿ ಮಠದ ಶ್ರೀಗಳಾದ ರಾಜಶೇಖರಾನಂದ ಸ್ವಾಮೀಜಿಯವರು ದಿವ್ಯ ಉಪಸ್ಥಿತಿಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ.



ಮಹಾಪೂಜೆಯನಂತರಅನ್ನಸಂತರ್ಪಣೆ, ಸಂಜೆ ನಿರೀಕ್ಷಾ ಪೂಜೆ, ಅಷ್ಟಾವಧಾನ ಸೇವೆ, ಮಠದಹಿತ್ಲು ನಾಗಚೌಡೇಶ್ವರಿ ಮಹಿಳಾ ಭಜನಾ ಮಂಡಳಿಯವರಿಂದ ಕುಣಿತ ಭಜನೆ, ರಾತ್ರಿ ಸಂಪೂರ್ಣ ದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಏ.7ರಂದು ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ, ಭಜನೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಸಂಜೆ ಮಂಡಲ ರಚನೆ, ಸಹಸ್ರ ಬ್ರಹ್ಮ ಕಲಶ ಸ್ಥಾಪನೆ, ಶಾಲಾ ಮಕ್ಕಳಿಂದ ವಿವಿಧ ಕಾರ್ಯಕ್ರಮ, ರಾತ್ರಿ 9 ಗಂಟೆಯಿಂದ ಬಂಟ್ವಾಳದ ಪದಯಾನ ತಂಡದವರಿಂದ ನೃತ್ಯಾರ್ಪಣಂ ಭರತ ನಾಟ್ಯ ಕಾರ್ಯಕ್ರಮ ನಡೆಯಲಿದೆ. ಏ.8ರಂದು ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ, ಭಜನಾ ಕಾರ್ಯಕ್ರಮ, ಪಲ್ಲಕ್ಕಿ ಉತ್ಸವದ ಮೆರವಣಿಗೆ ನಡೆಯಲಿದೆ. ಏ. 9ರಂದು ಶತಚಂಡಿ ಹೋಮ, ಪೂರ್ಣಾಹುತಿ, ಮಹಾಪೂಜೆ, ಭಜನೆಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆಯ ನಂತರ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಸಮಾರೋಪ ನಡೆಯಲಿದೆ. ರಾತ್ರಿ ಬೆಳಕೆ ಮಹಾಸತಿ ಭಜನೆ ಮಂಡಳಿಯಿಂದ ಕುಣಿತಭಜನಾ ಕಾರ್ಯಕ್ರಮ, ರಾತ್ರಿ 9 ಗಂಟೆಯಿಂದ ಪುತ್ತೂರು ಜಗದೀಶ ಆಚಾರ್ಯ ಇವರ ತಂಡದಿಂದ ಸಂಗೀತ ಗಾನ ಕಾರ್ಯಕ್ರಮ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವಂತೆ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಎಸ್ ಬಿ ಬೊಮ್ಮಾಯಿ ಹಾಗೂ ಪದಾಧಿಕಾರಿಗಳು, ಸದಸ್ಯರು ಕೋರಿದ್ದಾರೆ.

ವಾತ್ಸಲ್ಯ ಯೋಜನೆಯಡಿ ಹಣ್ಣು ಹಂಪಲು ವಿತರಣೆ



ಅಂಕೋಲಾ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿಟ್ರಸ್ಟ್ ಅಂಕೋಲಾ ವತಿಯಿಂದ ಮಾತೃಶ್ರೀ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಮಾಶಾಸನ ಸೌಲಭ್ಯ ಪಡೆಯುವ ಫಲಾನುಭವಿಗಳಿಗೆ ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು.

ತೀರ ಅಸಹಾಯಕತೆಯ ಜೀವನ ನಡೆಸುವ ಪ್ರತಿಯೊಬ್ಬರ ಬಗ್ಗೆ ಕಾರುಣ್ಯ ಹಾಗೂ ವಾತ್ಸಲ್ಯವನ್ನು ಹೊಂದಿರುವ ಮಾತೃಶ್ರೀ ಅಮ್ಮನವರು ತಮ್ಮ ವಾತ್ಸಲ್ಯ ಕಾರ್ಯಕ್ರಮದ ಮೂಲಕ ಅವರಿಗೆ ಬೆಳಕಾಗಿದ್ದಾರೆ. ಅಂತಹ ವ್ಯಕ್ತಿಗಳಿಗೆ ವಾತ್ಸಲ್ಯಮಯಿ ಅಮ್ಮನವರ ಹುಟ್ಟು ಹಬ್ಬದ ಪ್ರಯುಕ್ತ ಹಣ್ಣುಹಂಪಲು ನೀಡುವುದು ಅತ್ಯಂತ ಅರ್ಥಪೂರ್ಣ ಆಚರಣೆಯಾಗಿದೆ ಎಂದು ತಾಲೂಕು ಯೋಜನಾಧಿಕಾರಿ ಮಮತಾ ನಾಯ್ಕ ತಿಳಿಸಿದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಪ್ರತೀಮಾ ನಾಯ್ಕ ಹಾಗೂ ವಲಯದ ಮೇಲ್ವಿಚಾರಕರು ಉಪಸ್ಥಿತರಿದ್ದರು.

ಅಪಘಾತ: ಬೈಕ್ ಸವಾರನಿಗೆ ಗಾಯ

ಅಂಕೋಲಾ: ಬೈಕ್‌ಗೆ ಮಹೀಂದ್ರಾ ಜೀತೊ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರ ಗಂಭೀರವಾಗಿ ಗಾಯಗೊಂಡ ಘಟನೆ ತಾಲೂಕಿನ ಹುಲಿದೇವರವಾಡ ಬೈಪಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಭವಿಸಿದೆ.

ತಾಲೂಕಿನ ಹೊನ್ನಿಕೇರಿ ನಿವಾಸಿ ಅಭಿಷೇಕ ವೇಲಾಯುಧ ನಾಯರ್(28) ಗಾಯಗೊಂಡ ವ್ಯಕ್ತಿಯಾಗಿದ್ದು, ಈತ ತನ್ನ ಕೆ.ಎ30 ಡಬ್ಲ್ಯೂ 0830 ನೋಂದಣಿ ಸಂಖ್ಯೆಯ ಬೈಕ್ ನಲ್ಲಿ ಅಂಕೋಲಾ ಕಡೆಯಿಂದ ಕಾರವಾರ ಕಡೆ ಹೋಗುತ್ತಿದ್ದ ಸಂದರ್ಭದಲ್ಲಿ ಕಾರವಾರ ಕಡೆಯಿಂದ ಅಂಕೋಲಾ ಕಡೆ ಬರುತ್ತಿದ್ದ ಕೆ.ಎ30 ಎ7105 ನೋಂದಣಿ ಸಂಖ್ಯೆಯ ಮಹೀಂದ್ರಾ ಜೀತೋ ವಾಹನವನ್ನು ಚಾಲಕ ಅತಿ ವೇಗ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸಿ ವಿರುದ್ಧ ದಿಕ್ಕಿಗೆ ಬಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದ್ದು ಬೈಕ್ ಸವಾರನ ಬಲ ಕೈ ಬುಜದ ಕೆಳಗೆ ಮುರಿದಿದ್ದು ಮೈ, ಕೈಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಗಾಯಾಳುವಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಮಹೀಂದ್ರಾ ಜೀತೊ ವಾಹನ ಚಾಲಕಹುಬ್ಬಳ್ಳಿಯಕೇಶವಾಪುರ ನಿವಾಸಿ ಹಾಲಿ ಕೋಟೆವಾಡದಲ್ಲಿ ವಾಸವಾಗಿರುವ ರವಿ ಸುಂಕಪ್ಪ ಕಾವಂಜಾನೆ ಎಂಬಾತನ ವಿರುದ್ಧ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಕ್ಕಳಿಗೆ ಶಿಕ್ಷಣ, ಸಂಸ್ಕಾರ ಅಗತ್ಯ: ಗೋಪಾಲಕೃಷ್ಣ ಭಟ್ಟ

ಯಲ್ಲಾಪುರ: ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ ಎನ್ನುವ ಪರಂಪರೆಯಲ್ಲಿ ಬೆಳೆದವರು. ನಮ್ಮ ಮಕ್ಕಳಿಗೆ ಆಧುನಿಕ ಶಿಕ್ಷಣದ ಜೊತೆ ಇಂತಹ ಸಂಸ್ಕಾರದ ಅಗತ್ಯವಿದೆ. ಈ ಶಿಬಿರದಲ್ಲಿ ಯೋಗದಿಂದ ಪ್ರಾರಂಭಗೊಂಡು ಜೀವನಕ್ಕೆ ಬೇಕಾದ ಎಲ್ಲ ಸಂಸ್ಕಾರಯುತ ಚಿಂತನೆಗಳನ್ನು ಹತ್ತು ದಿನಗಳ ಕಾಲ ನೀಡುತ್ತಿರುವುದು ಶ್ಲಾಘನೀಯ ಎಂದು ಜ್ಯೋತಿರ್ವಿದ್ವಾನ್ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಹೇಳಿದರು.

ಅವರು ಶುಕ್ರವಾರ ವಿಶ್ವದರ್ಶನ ಶಿಕ್ಷಣ ಸಮೂಹದ ಆವಾರಣದಲ್ಲಿ ಭಾರತೀಯ ಜೀವನ ಶಿಕ್ಷಣ ಶಿಬಿರ ಉದ್ಘಾಟಿಸಿ ಮಾತನಾಡಿ, ಯೋಗ ಇದ್ದವನಿಗೆ ರೋಗ ಬಾರದು. ಪರಮಾತ್ಮನ ಅನುಗ್ರಹವೂ ಲಭಿಸುತ್ತದೆ. ಇಂದ್ರಿಯ ಸರಿಯಾಗಿ ಕೆಲಸ ಮಾಡುವುದಕ್ಕೆ ನಿತ್ಯ ಯೋಗದ ಅಗತ್ಯತೆಯಿದೆ. ಅಂದಾಗ ಮಾತ್ರ ಜೀವನದಲ್ಲಿ ಎಂತಹ ಸಾಧನೆಯನ್ನೂ ಮಾಡಬಹುದು. ನಮ್ಮ ಸಂಸ್ಕೃತಿಯಲ್ಲಿ ಗುರುವಿಗೂ ಅಷ್ಟೇ ಪ್ರಧಾನತೆ ನೀಡಲಾಗಿದೆ. ಗುರು ನಮ್ಮಲ್ಲಿರುವ ಕ್ಲೇಷವನ್ನು ನಾಶ ಮಾಡುತ್ತಾನೆ. ಆ ದೃಷ್ಟಿಯಿಂದ ವಿಶ್ವದರ್ಶನ ಸಂಸ್ಥೆ ಇಂತಹ ಉತ್ತಮ ಕಾರ್ಯಗಳನ್ನು ಮಾಡುತ್ತಿದೆ. ಅದನ್ನು ನಾವೆಲ್ಲ ಬೆಂಬಲಿಸಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಮಾತನಾಡಿ, ಸಮಾಜದಲ್ಲಿ ಶ್ರೇಷ್ಠ ಸಾಧಕರಿಗೆ, ಹಿರಿಯರಿಗೆ, ಸಜ್ಜನರಿಗೆ, ಜ್ಞಾನಿಗಳಿಗೆ ಎಲ್ಲೆಡೆ ಗೌರವ ಲಭಿಸುತ್ತದೆ. ಅದನ್ನು ನಾವು ಪಡೆಯಬೇಕಾದರೆ ಜನ್ಮ ನೀಡಿದ ತಂದೆ-ತಾಯಿಗಳ ಮಾತನ್ನು ತಪ್ಪದೇ ಪಾಲಿಸಬೇಕು. ಗುರುಹಿರಿಯರ ಮಾತನ್ನೂ ಗೌರವಿಸಬೇಕು. ಆಗ ಒಳ್ಳೆಯ ವ್ಯಕ್ತಿಯಾಗಿ ರೂಪುಗೊಳ್ಳುತ್ತೇವೆ. ಜೀವನದ ದೊಡ್ಡ ಸಾಧನೆಗೆ ಶಿಸ್ತು, ಶ್ರಮ ಅತ್ಯಂತ ಮಹತ್ವವಾದದ್ದು. ಶಾಲೆಗಳಲ್ಲಿ ಸೀಮಿತವಾದ ಪಠ್ಯಕ್ರಮಕ್ಕೆ ಪೂರಕವಾದ ಪಾಠ ಪ್ರವಚನ ನಡೆಸಲಾಗುತ್ತದೆ. ಹಾಗಾಗಿಯೇ ನಮ್ಮ ಸಂಸ್ಥೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕೆಂಬ ಸದಿಚ್ಛೆಯಿಂದ ಕಳೆದ ವರ್ಷದಿಂದ ಈ ಶಿಬಿರ ಆಯೋಜಿಸಿದ್ದೇವೆ ಎಂದರು.

ಶಿಬಿರದ ಸಂಚಾಲಕ ಶಂಕರ ಭಟ್ಟ ತಾರೀಮಕ್ಕಿ, ವಿಶ್ವದರ್ಶನದ ನಿರ್ದೇಶಕ ಸಿಎ ವಿಘ್ನೇಶ್ವರ ಗಾಂವ್ಕರ, ಸಿಬಿಎಸ್‌ಸಿ ಪ್ರಾಚಾರ್ಯರಾದ ಮಹಾದೇವಿ ಭಟ್ಟ, ಶಿಬಿರದ ಪ್ರಮುಖರಾದ ರಾಮಕೃಷ್ಣ ಕವಡಿಕೆರೆ, ಸಮರ್ಥ ಗಾಂವ್ಕರ ಮತ್ತಿತರರು ಉಪಸ್ಥಿತರಿದ್ದರು.

ಪಿಯು ಕಾಲೇಜು ಪ್ರಾ. ಡಾ.ಡಿ.ಕೆ.ಗಾಂವ್ಕರ ಸ್ವಾಗತಿಸಿದರು. ಶಿಕ್ಷಕ ಶಿವಪ್ರಸಾದ ಭಟ್ಟ ನಿರ್ವಹಿಸಿ, ವಂದಿಸಿದರು.

ಕಿರುಸುದ್ದಿ

ಪ್ರಾಮಾಣಿಕತೆ ಮೆರೆದ ಸಾರಿಗೆ ಬಸ್ ನಿರ್ವಾಹಕಿ



ರಾಣೇಬೆನ್ನೂರ: ಬಸ್ ನಲ್ಲಿ ಮೊಬೈಲ್‌ನ್ನು ಕಳೆದುಕೊಂಡ ಮಹಿಳೆಗೆ ನಿರ್ವಾಹಕಿ ಮೊಬೈಲ್‌ನ್ನು ಸುರಕ್ಷಿತವಾಗಿ ತಲುಪಿಸುವುದರ ಮೂಲಕ ಪ್ರಾಮಾಣಿಕತೆ ಮೆರೆದ ಘಟನೆ ತಾಲೂಕಿನ ಗುಡಿಹೊನ್ನತ್ತಿ ಗ್ರಾಮದಲ್ಲಿ ಶುಕ್ರವಾರದಂದು ನಡೆದಿದೆ. ಬೆ.8.15 ಕ್ಕೆ ರಾಣೇಬೆನ್ನೂರಿನಿಂದ ಚಂದಾಪುರಕ್ಕೆ ಹೊರಡುವ ಬಸ್ ನ ಮಾರ್ಗ ಮಧ್ಯದ ಗ್ರಾಮವಾದ ಮೈದೂರಿನಿಂದ ಹೊನ್ನತ್ತಿಗೆ ತೆರಳಲು ಕೆಂಚವ್ವ ಹರಿಜನ ಎಂಬ ಮಹಿಳೆ ಬಸ್ ಹತ್ತಿ ನಂತರ ಹೊನ್ನತ್ತಿಗೆ ಇಳಿದಿದ್ದಾಳೆ. ಇಳಿಯುವಾಗ ಮೊಬೈಲ್ ಬಸ್ ನಲ್ಲಿಯೇ ಕೆಡವಿಕೊಂಡು ಹೊನ್ನತ್ತಿಯ ದೇವಸ್ಥಾನಕ್ಕೆ ಹೋಗಿದ್ದಾಳೆ. ವನಜಾಕ್ಷಿ ಬಿ.ಜೆ ಎಂಬ ರಾಣೇಬೆನ್ನೂರ ಡಿಪೋಕ್ಕೆ ಸೇರಿದ ಕೆಎಸ್ ಆರ್‌ಟಿಸಿ ಬಸ್ ನಿರ್ವಾಹಕಿಗೆ ಮೊಬೈಲ್ ಸಿಕ್ಕಿದೆ. ನಂತರ ಚಂದಾಪುರದಿಂದ ರಾಣೇಬೆನ್ನೂರಿಗೆ ವಾಪಾಸಾಗುವ ಸಂದರ್ಭದಲ್ಲಿ ಕೆಂಚಮ್ಮ ತಮ್ಮೂರಾದ ಮೈದೂರು ಗ್ರಾಮಕ್ಕೆ ತೆರಳಲು ಹೊನ್ನತ್ತಿಯಿಂದ ಪುನಃ ಅದೇ ಬಸ್‌ನ್ನು ಹತ್ತಿದ್ದಾಳೆ. ನಂತರ ಅವರ ಮೊಬೈಲ್ ಯಾರದು ಎಂದು ಗಮನಿಸಿ ನಿರ್ವಾಹಕಿ ಮೊಬೈಲ್ ಹಿಂದಿರುಗಿಸಿದಾರೆ. ಅವರ ಪ್ರಾಮಾಣಿಕತೆಗೆ ಬಸ್‌ನಲ್ಲಿದ್ದ ಪ್ರಯಾಣಿಕರು ಈ ಸನ್ನಿವೇಶವನ್ನು ಮೊಬೈಲ್‌ನಲ್ಲಿ ಸೆರೆಹಿಡಿಯುವುದರ ಮೂಲಕ ಅವರ ಪ್ರಾಮಾಣಿಕತೆಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಂಭ್ರಮದ ಪಾರ್ವತಿ ಪರಮೇಶ್ವರ ರಥೋತ್ಸವ



ಹಾವೇರಿ: ತಾಲೂಕಿನ ಸುಕ್ಷೇತ್ರ ಕನವಳ್ಳಿ ಗ್ರಾಮದಲ್ಲಿ ಶ್ರೀ ಪಾರ್ವತಿ ಪರಮೇಶ್ವರರ ಮಹಾ ರಥೋತ್ಸವವು ದವನದ ಹುಣ್ಣಿಮೆ ಮರು ದಿನವಾದ ಶುಕ್ರವಾರ ನಸುಕಿನಜಾವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಪ್ರತಿ ವರ್ಷದ ಪದ್ಧತಿಯಂತೆ ನಸುಕಿನ 5.30ರ ಸುಮಾರಿಗೆ ಶ್ರೀ ಪಾರ್ವತಿ ಪರಮೇಶ್ವರ ದೇವರ ಮಹಾ ರಥೋತ್ಸವವು ಡೊಳ್ಳು ವಾದ್ಯ, ಸಮ್ಮಾಳ ಕಲಾ ತಂಡ, ಝಾಂಜ್ ಮೇಳ, ಭಜನೆ ಮೆರವಣಿಗೆಯೊಂದಿಗೆ ಅದ್ದೂರಿಯಾಗಿ ನಡೆಯಿತು. ದೇವಸ್ಥಾನದ ಆವರಣದಿಂದ ಸ್ವಲ್ಪ ದೂರದಲ್ಲಿರುವ ಬಸವೇಶ್ವರ ದೇವಸ್ಥಾನದವರೆಗೆ ಚಲಿಸಿ ಮೂಲ ಸ್ಥಳಕ್ಕೆ ವಾಪಸ್ಸಾಯಿತು. ನೆರೆದಿದ್ದ ಭಕ್ತ ಸಮೂಹ 'ಹರ, ಹರ ಮಹಾದೇವ' ಎಂಬ ಜಯಘೋಷಣೆ ಮೊಳಗಿಸಿದರು. ಮಹಾರಥೋತ್ಸವದ ಕಳಸಕ್ಕೆ ಭಕ್ತರು ಬಾಳೆ ಹಣ್ಣು, ಉತ್ತತ್ತಿ, ಬೆಲ್ಲವನ್ನು ಎಸೆದು ಭಕ್ತಿ ಭಾವವನ್ನು ಸಮರ್ಪಣೆ ಮಾಡಿದರು. ಬಳಿಕ ದೇವಸ್ಥಾನದ ಆವರಣದಲ್ಲಿ ಸಮಾಳ ಕಲಾ ತಂಡದ ಪುರವಂತರಿಂದ ಪಾರ್ವತಿ ಪರಮೇಶ್ವರರ ಕುರಿತು ಒಡಪುಗಳನ್ನು ಪ್ರಸ್ತುತ ಪಡಿಸಲಾಯಿತು. ರಥೋತ್ಸವ ಮುಗಿದ ಬಳಿಕ ಇಷ್ಟಾರ್ಥ ಸಿದ್ದಿಗಾಗಿ ಬೇಡಿಕೊಂಡ ಭಕ್ತರು ದೀಡ್ ನಮಸ್ಕಾರ ಹಾಕುವ ಮೂಲಕ, ಜವುಳ ತೆಗೆಯಿಸುವ ಮೂಲಕ ಹರಕೆಯನ್ನು ತೀರಿಸಿದರು. ಬೆಳಗ್ಗೆಯಿಂದ ಸಂಜೆಯವರೆಗೂ ದೇವಸ್ಥಾನಕ್ಕೆ ಆಗಮಿಸುವ ಭಕ್ತರು ಹಣ್ಣು, ಕಾಯಿ ನೈವೇದ್ಯ ಸಮರ್ಪಿಸಿದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಓಕುಳಿ ಕಾರ್ಯಕ್ರಮ ನಡೆಯಿತು. ದಿನವಿಡಿ ಭಕ್ತರಿಗೆ ಅನ್ನ ಸಂತರ್ಪಣೆ ಜರುಗಿತು. ಜಾತ್ರಾ ಮಹೋತ್ಸವ ಸಮಿತಿ ಪದಾಧಿಕಾರಿಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಾದ ಹನುಮನಹಳ್ಳಿ, ಶಿಬಾರ, ಭರಡಿ, ಕೂರಗುಂದ, ಬಸಾಪೂರ, ಬೂದಗಟ್ಟಿ, ಕಾಟೇನಹಳ್ಳಿ, ಕಲ್ಲೆದೇವರ ಗ್ರಾಮಗಳ ಗ್ರಾಮಸ್ಥರು ಪಾಲ್ಗೊಂಡಿದ್ದರು.

ವ್ಯಕ್ತಿ ನಾಪತ್ತೆ

ಹಾವೇರಿ: ವಾಕ್ ಮಾಡುತ್ತೇನೆಂದು ಮನೆಯಿಂದ ಹೊರ ಹೋದವರು ವಾಪಾಸ್ ಬಾರದೆ ಕಾಣೆಯಾಗಿರುವ ಘಟನೆ ಇಲ್ಲಿಯ ನಾಗೇಂದ್ರನಮಟ್ಟಿಯಲ್ಲಿ ನಡೆದಿದೆ. ನಾಗೇಂದ್ರನಮಟ್ಟಿಯ ಅಂದಾನೆಪ್ಪ ಸಂಗಪ್ಪ ಕಡೇಕೊಪ್ಪ (72) ಕಾಣೆಯಾದವರು. ಇವರು ಮನೆಯ ಎದುರು ವಾಕ್ ಮಾಡುತ್ತೇನೆಂದು ಹೇಳಿ ಹೋಗಿದ್ದು, ವಾಪಾಸ್ ಬಾರದೆ ಕಾಣೆಯಾಗಿದ್ದಾರೆ ಎಂದು ಆತನ ಮಗ ಮಂಜುನಾಥ ಕಡೆಕೊಪ್ಪ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿಗ್ಗಾವಿ: ತಾಲೂಕಿನ ಗಂಗೆಭಾವಿ ಕೆಎಸ್‌ಆರ್‌ಪಿ 10ನೇ ಪಡೆ ಆವರಣದಲ್ಲಿ ಪೊಲೀಸ್ ಧ್ವಜ ದಿನಾಚರಣೆಯಲ್ಲಿ, ನಿವೃತ್ತ ಅಧಿಕಾರಿಗಳಾದ ಜಿ.ಎಂ.ಮಡಿವಾಳರ, ಎ.ಡಿ.ನಾಯಕರ, ಬಿ.ಎಂ. ಗಿಡ್ಡಣ್ಣವರ, ಎನ್.ಎಚ್.ದಾವಣಗೆರೆ, ಜಿ.ಎಫ್.ಹಡಗಲಿ ಅವರನ್ನು ಸನ್ಮಾನಿಸಲಾಯಿತು.

ಪೊಲೀಸರ ಸೇವೆ ಶ್ಲಾಘನೀಯ: ಮೆಳ್ಳಾಗಟ್ಟಿ

ಶಿಗ್ಗಾವಿ: ಸಾರ್ವಜನಿಕರ ಹಿತರಕ್ಷಣೆಗಾಗಿ ತಮ್ಮ ಬದುಕನ್ನು ಮೀಸಲಾಗಿಡುವ ಪೋಲೀಸರು ಸೈನಿಕರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ, ಅಂತಹ ಪೊಲೀಸ್‌ರ ಸೇವೆ ಶ್ಲಾಘನೀಯವಾಗಿದೆ ಎಂದು ಗಂಗೆಭಾವಿ ಕೆಎಸ್‌ಆರ್‌ಪಿ 10ನೇ ಪಡೆಯ ಕಮಾಂಡಂಟ್ ಎನ್.ಬಿ.ಮೆಳ್ಳಾಗಟ್ಟಿ ಹೇಳಿದರು. ತಾಲೂಕಿನ ಗಂಗೆಭಾವಿ ಕೆಎಸ್‌ಆರ್‌ಪಿ 10ನೇ ಪಡೆ ಆವರಣದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಬದ್ಧವಾಗಿದ್ದು, ಯಾವುದೇ ಕಾರ್ಯದಲ್ಲಿ ಹಿಂಜರಿಯದೇ ಕರ್ತವ್ಯ ನಿಷ್ಠೆಯಲ್ಲಿ ನಿರತರಾಗಿದ್ದಾರೆ. ನಾಡಿನ ಸುಭದ್ರತೆಗೆ ತಮ್ಮದೆಯಾದ ಸೇವೆ ನೀಡುತ್ತಿದ್ದಾರೆ ಎಂದರು. ನಿವೃತ್ತ ಸಹಾಯಕ ಕಮಾಂಡಂಟ್ ಬಿ.ಕೆ.ಹಂಚಿನಾಳ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಕೆಎಸ್‌ಆರ್‌ಪಿ ಪಡೆ ಪೊಲೀಸ ಸೇವೆ ಕಠಿಣ, ಕಷ್ಟಕರವಾಗಿದ್ದು, ಅದರಲ್ಲಿಯೆ ತಮ್ಮ ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಪಡೆಯ ಪೊಲೀಸ್ ಸಿಬ್ಬಂದಿ ಒಂದೇ ಕುಟುಂಬದ ಸದಸ್ಯರಂತೆ ಕಾಣುತ್ತಾರೆ ಅವರ ಸೇವೆ ಶ್ಲಾಘನೀಯವಾಗಿದೆ ಎಂದರು. ನಿವೃತ್ತ ಅಧಿಕಾರಿಗಳಾದ ಜಿ.ಎಂ.ಮಡಿವಾಳರ, ಎ.ಡಿ.ನಾಯಕರ, ಬಿ.ಎಂ.ಗಿಡ್ಡಣ್ಣವರ, ಎನ್.ಎಚ್.ದಾವಣಗೆರೆ, ಜಿ.ಎಫ್.ಹಡಗಲಿ ಅವರನ್ನು ಸನ್ಮಾನಿಸಲಾಯಿತು. ಪಿ.ಎಸ್.ಐಗಳಾದ ಸುರೇಶ ಡಂಬೇರ, ಶ್ರೀಧರ ವಾಘ್ಮೋರೆ, ಕೃಷ್ಣಾ ಪೂಜಾರ ಅವರ ನೇತೃತ್ವದ ಪೊಲೀಸ್ ತುಕಡಿಗಳಿಂದ ಆಕರ್ಷಕ ಪಥ ಸಂಚಲನೆ ಜರುಗಿತು. ಸಹಾಯಕ ಕಮಾಂಡಂಟರಾದ ಮಂಜುನಾಥ ಕೊಟಿಹಾಳ, ಸುಲೇಮಾನ ಹಂಚಿನಮನಿ, ಪಿಎಸ್.ಐಗಳಾದ ಮಂಜುನಾಥ, ಆರ್.ಬಿ.ಮದಿಹಳ್ಳಿ, ಎಸ್.ಆರ್ .ಪಾಟೀಲ, ಕೃಷ್ಣಕುಮಾರ ಸೇರಿದಂತೆ ಕೆ.ಎಸ್.ಆರ್.ಪಿ 10ನೇ ಪಡೆ ಅಧಿಕಾರಿ ಸಿಬ್ಬಂದಿ ಇದ್ದರು.



ಹಾನಗಲ್ಲ: ತಾಲೂಕಿನ ಬೈಚವಳ್ಳಿ ಗ್ರಾಮದ ಮಹಾಂತೇಶ ಶಂಕ್ರಪ್ಪ ತಾವರಗೇರಿ ಭಾರತೀಯ ಸೇನೆಯಲ್ಲಿ 20 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ ಗ್ರಾಮಕ್ಕೆ ಆಗಮಿಸಿದ ಹಿನ್ನೆಲೆ ಗ್ರಾಮಸ್ಥರು ತೆರೆದ ವಾಹನದಲ್ಲಿ ಗೆಳೆಯರ ಬಳಗ ಹಾಗೂ ತಾಲೂಕು ಮಾಜಿ ಸೈನಿಕ ಸಂಘದ ಯೋಧರು ಭವ್ಯ ಮೆರವಣಿಗೆ ಮಾಡಿ ಸ್ವಾಗತಿಸಿದರು. ಗ್ರಾಮಸ್ಥರು ಮಹಾಂತೇಶ್ ಕುಟುಂಬಸ್ಥರನ್ನು ಗೌರವ ಪೂರ್ವಕವಾಗಿ ಸನ್ಮಾನಿಸಿ ಗೌರವಿಸಿದರು. ಈ ವೇಳೆ ಮಾಜಿ ಸೈನಿಕರಾದ ಕುಮಾರ, ಎಳವಟ್ಟಿ, ಸಂತೋಷ ಹಸನಬಾದ್, ರಾಜು ದ್ಯಾನಪ್ಪನವರ, ಪ್ರಶಾಂತ ಕಟವಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಏ.6ಕ್ಕೆ ಹಾವೇರಿ ವಿವಿ ಘಟಿಕೋತ್ಸವ

ಹಾವೇರಿ: ಇಲ್ಲಿಯ ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಏ.6ರಂದು ನಡೆಯಲಿದ್ದು, ಘಟಿಕೋತ್ಸವ ಸಮಾರಂಭದಲ್ಲಿ ರ‍್ಯಾಂಕ್ ಪಡೆದ 8 ವಿದ್ಯಾರ್ಥಿಗಳಿಗೆ ಸುವರ್ಣ ಪದಕ ಹಾಗೂ 10 ನಗದು ಪುರಸ್ಕಾರ ಗಳನ್ನು ಗೌರವಾನ್ವಿತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಪತಿಗಳಾದ ಥಾವರ್‌ಚಂದ್ ಗೆಹ್ಲೋಟ್ ಪ್ರದಾನ ಮಾಡಲಿದ್ದಾರೆ ಎಂದು ಹಾವೇರಿ ವಿವಿ ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿಯ ಕೆಎಲ್‌ಇ ಸಂಸ್ಥೆಯ ಜಿ.ಎಚ್ ಕಾಲೇಜು ಸಭಾಂಗಣದಲ್ಲಿ ಏ.6 ರಂದು ಬೆಳಗ್ಗೆ 11ಕ್ಕೆ ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವಸಮಾರಂಭನಡೆಯಲಿದೆ.ಸಮಾರಂಭದ ಅಧ್ಯಕ್ಷತೆಯನ್ನು ಗೌರವಾನ್ವಿತ ರಾಜ್ಯಪಾಲರು, ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್ ಅವರು ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವರು ಹಾಗೂ ವಿವಿ ಸಮಕುಲಾಧಿಪತಿ ಡಾ.ಎಂ.ಸಿ. ಸುಧಾಕರ ಉಪಸ್ಥಿತರಿರಲಿದ್ದಾರೆ. ಘಟಿಕೋತ್ಸವದ ಭಾಷಣವನ್ನು ಕರ್ನಾಟಕದ ಕಾನೂನು ಆಯೋಗದ ಅಧ್ಯಕ್ಷ ಹಾಗೂ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಡಾ.ಅಶೋಕ ಹಿಂಚಿಗೇರಿ ಮಾಡಲಿದ್ದಾರೆ ಎಂದರು.

ಸಮಾರಂಭಕ್ಕೆ ವಿಧಾನಸಭೆ ಉಪಸಭಾಧ್ಯಕ್ಷರಾದ ರುದ್ರಪ್ಪ ಲಮಾಣಿ ಸೇರಿದಂತೆ ಬಾಗಲಕೋಟೆ, ಚಾಮರಾಜನಗರ ವಿವಿ ಕುಲಪತಿಗಳು, ಜಿಲ್ಲಾ ಪ್ರಧಾನ ನ್ಯಾಯಾಧೀಶರು, ಜನಪ್ರತಿನಿಧಿಗಳಿಗೆ ಆಹ್ವಾನ ನೀಡಲಾಗಿದೆ. ಅಲ್ಲದೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು. ಹಾವೇರಿ ವಿವಿ ವ್ಯಾಪ್ತಿಯಲ್ಲಿ 1063 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಪದವಿ ಪಡೆದುಕೊಂಡಿದ್ದಾರೆ.



ಶಿಷ್ಟಾಚಾರ ಪಾಲನೆ ಕಡ್ಡಾಯ

ಘಟಿಕೋತ್ಸವ ಸಂದರ್ಭದಲ್ಲಿ ಶಿಷ್ಟಾಚಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ರಾಜ್ಯಪಾಲರ ಸ್ವಾಗತಿಸುವುದು, ಘಟಿಕೋತ್ಸವದ ವಸ್ತ್ರಧಾರಣೆ, ಮೆರವಣಿಗೆ, ವಂದೇ ಮಾತರಂ ಗೀತೆ, ರಾಷ್ಟ್ರಗೀತೆ, ನಾಡಗೀತೆ, ಉದ್ಘಾಟನೆ, ಅತಿಥಿ ಪರಿಚಯ, ಗೌರವ ಡಾಕ್ಟರೇಟ್ ಪ್ರದಾನ, ಸ್ವರ್ಣ ಪದಕ ಪ್ರಧಾನ, ಭಾಷಣ ಎಲ್ಲವೂ ಶಿಷ್ಟಾಚಾರದಂತೆ ನಡೆಯುತ್ತವೆ. ಸಮಾರಂಭದಲ್ಲಿ ಪಾಲ್ಗೊಳ್ಳುವ ಎಲ್ಲರೂ ಗೌರವ ನೀಡಬೇಕು ಮತ್ತು ಯಶಸ್ಸಿಗೆ ಸಹಕಾರ ನೀಡಬೇಕು ಎಂದರು.

400 ವಿದ್ಯಾರ್ಥಿಗಳು ಭಾಗವಹಿಸುವುದಾಗಿ ಖಚಿತಪಡಿಸಿದ್ದಾರೆಂದು ತಿಳಿಸಿದರು. ರಾಜ್ಯಪಾಲರು ಪಾಲ್ಗೊಳ್ಳುವ ಹಿನ್ನೆಲೆ ಕಾರ್ಯಕ್ರಮದ ಶಿಸ್ತು ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಎಸ್.ಜಿ. ಬಾಗಲಕೋಟೆ, ಸಿಡಿಸಿ ನಿರ್ದೇಶಕ ರಾಘವೇಂದ್ರ ಫತ್ತೇಪುರ, ರವೀಂದ್ರ ಬಣಕಾರ, ಚಿದಾನಂದ ಕಮ್ಮಾರ ಇದ್ದರು.

ಸಿಂಡಿಕೇಟ್ ಸಭೆಯಲ್ಲಿ ಚರ್ಚೆ: ವಿಶ್ವವಿದ್ಯಾಲಯದಿಂದ ಮೂರು ಜನ ಸಾಧಕರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತದೆ. ಈಗಾಗಲೇ 7 ಸಾಧಕರಿಂದ ಪ್ರಸ್ತಾವನೆ ಬಂದಿವೆ, ಈ ಕುರಿತು ಶೀಘ್ರವೇ ವಿವಿ ಕ್ಯಾಂಪಸ್‌ನಲ್ಲಿ ಸಿಂಡಿಕೇಟ್ ಸಭೆ ನಡೆಸಿ, ಗೌರವ ಡಾಕ್ಟರೇಟ್ ಘೋಷಣೆ ಮಾಡಲಾಗುವುದು ಎಂದರು.

> ಹಾವೇರಿ ವಿವಿ ಪ್ರಥಮ ಘಟಿಕೋತ್ಸವ ಮತ್ತು 3ನೇ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆ ಗೌರವಾನ್ವಿತ ರಾಜ್ಯಪಾಲರು ಘಟಿಕೋತ್ಸವ ಮುಕ್ತಾಯದ ನಂತರ ಹಾವೇರಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ವಿವಿ ಆವರಣದಲ್ಲಿ ಸಸಿ ನೆಡಲಿದ್ದಾರೆ. ಜತೆಗೆ ಸರಸ್ವತಿ ವಿಗ್ರಹ ಅನಾವರಣ ಮತ್ತು ವಿಚಾರ ಸಂಕೀರ್ಣ ಸಭಾಂಗಣದ ಮಾರ್ಪಾಡಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.
>
> ■ ಪ್ರೊ.ಸುರೇಶ ಜಂಗಮಶೆಟ್ಟಿ, ಹಾವೇರಿ ವಿವಿ, ಕುಲಪತಿ

ಬಂಗಾರ ಪದಕ ವಿಜೇತರು: 2025–26ನೇ ಸಾಲಿನಲ್ಲಿ ಹಾವೇರಿ ವಿವಿಯ ವಿವಿಧ ಅಧ್ಯಯನ ವಿಭಾಗಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಾದ ಓವರ್ ಆಲ್ ಟಾಪರ್ ಎಂ.ಎ. ಸಮಾಜಶಾಸ್ತ್ರ ವಿಭಾಗದ ನೇತ್ರಾ ಹರಿಜನಗೆ ಸುವರ್ಣ ಪದಕ ನೀಡಲಾಗುವುದು. ಅದೇರೀತಿ ಎಂ.ಎ. ಅರ್ಥಶಾಸ್ತ್ರ ವಿಭಾಗದಲ್ಲಿ ಉಸ್ಮಾನಸಾಬ್ ಮುಲ್ಲಾ, ಎಂ.ಎ. ಇಂಗ್ಲೀಷ್‌ನಲ್ಲಿ ಕಾವ್ಯಾ ಪ್ರಸಾದಿಮಠ, ಕನ್ನಡ ವಿಭಾಗದಲ್ಲಿ ಪ್ರಿಯಾಂಕಾ ಈಳಿಗೇರ, .ವಾಣಿಜ್ಯಶಾಸ್ತ್ರದಲ್ಲಿ ಐಶ್ವರ್ಯ ಮುದಿಗೌಡ್ರ, ಸಮಾಜಕಾರ್ಯ ವಿಭಾಗದಲ್ಲಿ ಧನಲಕ್ಷ್ಮೀ ಪಾಟೀಲ, ಬಿ.ಎ. ಶಿಕ್ಷಣಶಾಸ್ತ್ರದಲ್ಲಿ ನಾಗಲಕ್ಷ್ಮೀ ಬೇವಿನಮರದಗೆ ಸುವರ್ಣ ಪದಕಗಳನ್ನು ನೀಡಲಾಗುವುದು.

ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ: ಬಿಂದಾಲ್

ಬ್ಯಾಡಗಿ: ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಚತೆಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿಇಒ ರುಚಿ ಬಿಂದಾಲ್ ಹೇಳಿದರು.

ತಾಲೂಕಿನ ಮಾಸಣಗಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ಸಮೀಪದಲ್ಲಿರುವ ಕುಡಿಯುವ ನೀರಿನ ಹೊಂಡದಲ್ಲಿ ಸ್ವಚ್ಚತೆಯಡೆಗೆ ದಿಟ್ಟ ಹೆಜ್ಜೆ ಅಭಿಯಾನದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ಬದುಕಿನಲ್ಲಿ ಸ್ವಚ್ಚತೆ ಬಹು ಮುಖ್ಯವಾಗಿದೆ ನಮ್ಮ ಮನೆ ಮಾತ್ರವಲ್ಲದೆ ಸುತ್ತಮುತ್ತದಲ್ಲಿನ ಪರಿಸರದಲ್ಲಿಯೂ ನಾವು ಸ್ವಚ್ಚತೆಯನ್ನು ಕಾಪಾಡಬೇಕು ಇದರಿಂದ ಉತ್ತಮ ಆರೋಗ್ಯದ ಜೊತೆಗೆ ನಮ್ಮ ಪರಿಸರವೂ ಸುಂದರವಾಗಿರುತ್ತದೆ ಎಂದರು.

ಪ್ರತಿ ಗ್ರಾಮದಲ್ಲಿಯೂ ನಾಗರಿಕರು ತಮ್ಮ ಸುತ್ತಮುತ್ತಲಿನ ಅಷ್ಟೇ ಅಲ್ಲದೆ ಗ್ರಾಮದಲ್ಲಿ ಎಲ್ಲೆಂದರಲ್ಲಿ ಕಸ ಹಾಕದೆ ಕಸದ ವಾಹನದಲ್ಲಿಯೇ ಕಸವನ್ನು ಹಾಕಿ ಸ್ವಚ್ಚತೆ ಕಾಪಾಡಬೇಕು ಎಂದು ಎಚ್ಚರಿಕೆ ನೀಡಿದರು ಪ್ರತಿಯೊಂದು ಗ್ರಾಮಗಳಲ್ಲಿ ಕುಡಿಯುವ ನೀರಿನ ಹೊಂಡ ಗಳು ಕೆರೆಗಳು ನೀರಿನ ಜೀವನಾಡಿಗಳನ್ನು ಸ್ವಚ್ಚತೆಯಿಂದ ಕಾಪಾಡಿ ಕೊಳ್ಳಬೇಕು ನೀರು ಸಕಲ ಜೀವರಾಶಿಗಳಿಗೂ ಅತ್ಯಮೂಲ್ಯ ಎಂದರು.

ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ್ ಕೆ.ಎಂ.ಮಾತನಾಡಿ, ಪ್ರತಿಯೊಂದು ಗ್ರಾಮಗಳಲ್ಲಿ ಸ್ವಚ್ಚತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಈ ನಿಟ್ಟಿನಲ್ಲಿ ಒಂದು ಗಂಟೆಗಳ ಕಾಲ ಪ್ರತಿ ವಾರ ಶ್ರಮದಾನ ಮಾಡಿ ಜನಸಾಮಾನ್ಯರಲ್ಲಿ ಸ್ವಚ್ಚತೆಯ ಕುರಿತು ಅರಿವು ಮೂಡಿಸಲಾಗುವುದು ಎಂದು ಹೇಳಿದರು

ಈ ಸ್ವಚ್ಚತಾ ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕರಾದ ಅಗಸರ (ಗ್ರಾಉ), ಸಹಾಯಕ ನಿರ್ದೇಶಕರಾದ ನಾಗರಾಜ್ ಹಡಗಲಿ (ಪಂ ರಾಜ್), ಕೃಷಿ ಅಧಿಕಾರಿ ನಾಗರಾಜ್ ಬನ್ನಿಹಟ್ಟಿ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಬಸವರಾಜ್ ಬಣಕಾರ, ಸ್ವಚ್ಚ ಭಾರತ್ ಮಿಷನ್ ಯೋಜನೆಯ ಜಿಲ್ಲಾ ಸಂಯೋಜಕರಾದ ಗೋವಿಂದರಾಜ್ ಹಾಗೂ ಸುನಿತಾ, ನರೇಗಾ ಯೋಜನೆಯ ತಾಂತ್ರಿಕ ಸಂಯೋಜಕರಾದ ಸಂತೋಷ್ ನಾಯ್ಕ್ ಹಾಗೂ ಟಿಐಇಸಿ ಅಕ್ಷಯ್ ದೇಶಪಾಂಡೆ ಬಿಎಫ್‌ಟಿ, ಎನ್‌ಆರ್‌ಎಲ್‌ಎಮ ಸಿಬ್ಬಂದಿ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ಹಾಗೂ ಮಹಿಳಾ ಸ್ವ ಸಹಾಯ ಸಂಘದ ಪ್ರತಿನಿಧಿಗಳು ಗ್ರಾಪಂ ಸಿಬ್ಬಂದಿ ಇದ್ದರು.



ಸಂಭ್ರಮದ ಮಾರುತಿ ದೇವರ ರಥೋತ್ಸವ

ರಾಣೇಬೆನ್ನೂರ: ತಾಲೂಕಿನ ಕೆರಿಮಲ್ಲಾಪುರ ಗ್ರಾಮದ ಮಾರುತಿ ದೇವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ವತಿಯಿಂದ ಹನುಮ ಜಯಂತಿಯ ದಿನದಂದು ಮಾರುತಿ ದೇವರ ರಥೋತ್ಸವವು ಗ್ರಾಮಸ್ಥರ ಮಧ್ಯೆ ಸಡಗರ, ಸಂಭ್ರಮದೊಂದಿಗೆ ಅದ್ದೂರಿಯಾಗಿ ನೆರವೇರಿತು.

ದೇವಸ್ಥಾನದ ಪದಾಧಿಕಾರಿಗಳಿಂದ ಸನ್ಮಾನ ಗೊಂಡು ರಥೋತ್ಸವಕ್ಕೆ ಚಾಲನೆ ನೀಡಿದ ಸಮಾಜ ಸೇವಕ ಉಮೇಶ ಕರಿಗಾರ ಅವರು ಮಾತನಾಡಿ, ಸಮಾಜ ಸೇವೆ ಮಾಡುವುದರಿಂದ ಮಾನಸಿಕ ನೆಮ್ಮದಿ, ಆತ್ಮ ಸಂತೃಪ್ತಿಯ ಜೊತೆಗೆ ಸಂತಸವೂ ದೊರೆಯುತ್ತದೆ ಎಂದರು.

ದೈನಂದಿನ ಬದುಕಿನಲ್ಲಿ ಹಣ ಮಾಡುವುದೇ ಮುಖ್ಯ ಧ್ಯೇಯವಾಗಬಾರದು, ನಮ್ಮ ದುಡಿಮೆಯ ಅಲ್ಪ ಹಣವನ್ನಾದರೂ ಸಮಾಜ ಸೇವೆಗೆ ಮೀಸಲಿಟ್ಟರೆ, ಆ ಭಗವಂತನು ಸಹ ಮೆಚ್ಚುತ್ತಾನೆ. ಇದರಿಂದ ಸಮಾಜದ ಪ್ರಗತಿಗೆ ಸಹಕಾರಿಯಾಗುವುದು ಎಂದರು.

ನಾನು ಸಹ ಸಮಾಜ ಸೇವೆಗೆ ಹೆಚ್ಚಿನ ಆದ್ಯತೆ ನೀಡುವೆ. ದಿನದಲಿತರ ಬಡವರ, ಸಾಮಾನ್ಯರ ಏಳಿಗೆಗೆ ಸದಾ ಶ್ರಮಿಸುವೆ. ಗ್ರಾಮದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಮಾರುತಿ ದೇವಸ್ಥಾನಕ್ಕೆ ತಮ್ಮ ಕೈಲಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಸಹಾಯವನ್ನು ಶೀಘ್ರವೇ ಮಾಡುವುದಾಗಿ ಉಮೇಶರು ಭರವಸೆ ನೀಡಿದರು.

ವಿವಿಧ ವಾದ್ಯ ಮೇಳಗಳೊಂದಿಗೆ ಆರಂಭವಾದರಥೋತ್ಸವವುಗ್ರಾಮದಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ರಥೋತ್ಸವ ಚಲಿಸುವ ಮಾರ್ಗದ ರಸ್ತೆ ಯುದ್ದಕ್ಕೂ ಮಹಿಳೆಯರು ನೀರು ಸಿಂಪಡಿಸಿ ರಂಗೋಲಿ ಬಿಡಿಸಿ ಹೂವು ಹಾಕಿ ಸ್ವಾಗತಿಸುತ್ತಿದ್ದುದು ಸಾಮಾನ್ಯವಾಗಿತ್ತು. ಜೊತೆಗೆ ಕುಂಭ ಹೊತ್ತ ಮಹಿಳೆಯರು ರಥೋತ್ಸವಕ್ಕೆ ಸಾಥ್ ನೀಡಿದರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನಗೌಡ ಪಾಟೀಲ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಆರ್ ಎಸ್ ಪಾಟೀಲ, ನ್ಯಾಯವಾದಿ ಎನ್. ವಿ. ಚಪ್ಪರದ, ನಿಂಗಪ್ಪ ಮೂಲಿಕೇರಿ, ಸಾಹಿತಿ ಪ್ರಕಾಶ ಸೊಪ್ಪಿನ, ಫಕ್ಕೀರಪ್ಪ ಮಂತ್ರಿ, ನಿಂಗಪ್ಪ ಬಾಡನವರ, ಪತ್ರಕರ್ತ ಎಂ. ಚಿರಂಜೀವಿ, ವೀರೇಶ ನರಸೀಪುರ, ಪಂಚಪ್ಪ ಅಡ್ಡಂಗಡಿ, ಕೋಟೇಶ ವರ್ದಿ, ನಿಂಗರಾಜ ಮಡಿವಾಳರ, ಮುರುಘೇಶ, ಬೆಣ್ಣಿ ಸೇರಿದಂತೆ ದೇವಸ್ಥಾನ ಸಮಿತಿಯ ಪದಾಽಕಾರಿಗಳು, ಗ್ರಾಮಸ್ಥರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಮಾನೆ ಚಾಲನೆ

ಹಾನಗಲ್ಲ: ಆಶ್ರಯ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಸಾಮಾನ್ಯ ವರ್ಗಕ್ಕೆ 2 ಲಕ್ಷ ರೂ., ಎಸ್‌ಸಿ, ಎಸ್‌ಟಿ ಫಲಾನುಭವಿಗಳಿಗೆ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹರವಿ ಗ್ರಾಮದಲ್ಲಿ 71 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ, ಗಟಾರ ನಿರ್ಮಾಣ, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಆಶ್ರಯ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ಸಹಾಯಧನ ಹೆಚ್ಚಿಸುವಂತೆ ವಿಧಾನಸಭೆ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗಿತ್ತು. ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆ ಹೆಚ್ಚಳಗೊಂಡ ಹಿನ್ನೆಲೆಯಲ್ಲಿ ಫಲಾನುಭವಿಗಳಿಗೆ ಸಹಾಯಧನ ಸಾಲುತ್ತಿರಲಿಲ್ಲ, ಇದೀಗ ಸಹಾಯಧನ ಹೆಚ್ಚಿಸಿರುವುದರಿಂದ ಬಡ ವರ್ಗಕ್ಕೆ ಅನುಕೂಲವಾಗಿದೆ ಎಂದು ತಿಳಿಸಿದ ಶಾಸಕ ಮಾನೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲೆಲ್ಲ ಬಡವರು, ಜನಸಾಮಾನ್ಯರಿಗೆ ಅನುಕೂಲವಾಗುವಂಥ ಯೋಜನೆಗಳನ್ನು ರೂಪಿಸಿದೆ. ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಕಾಂಗ್ರೆಸ್ ಅಧಿಕಾರ ನಡೆಸಿದಾಗಲೆಲ್ಲ ಎಲ್ಲ ವರ್ಗ, ಸಮುದಾಯಗಳಿಗೂ ಅನುಕೂಲವಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಬಸವರಾಜಪ್ಪ ಭದ್ರಣ್ಣನವರ, ಗನಿಪಟೇಲ್ ಪಾಟೀಲ, ನಾಗರಾಜ್ ಯರೇಶಿಮಿ, ಶಂಭುಲಿಂಗಪ್ಪ ಭದ್ರಣ್ಣನವರ, ಶಿವಾನಂದ ಭದ್ರಣ್ಣನವರ, ಚನ್ನಪ್ಪ ಬಾಣದ, ರವಿ ಭದ್ರಣ್ಣನವರ, ಪುಟ್ಟಪ್ಪ ಹರಿಜನ, ಶೇಕಪ್ಪ ಹರಿಜನ, ಇಸ್ಮೈಲ್‌ಸಾಬ ಹರಪನಹಳ್ಳಿ, ಸಂಗಪ್ಪ ತಳವಾರ, ಶಾಂತವ್ವ ಹರಿಜನ, ಪುಟ್ಟವ್ವ ತಳವಾರ, ನಾನಾ ಬಳಿಗಾರ, ಮಹೇಶ ಭದ್ರಣ್ಣನವರ, ಆದರ್ಶ ಶೆಟ್ಟಿ, ರವಿ ದೇಶಪಾಂಡೆ, ಪುಟ್ಟಪ್ಪ ನರೇಗಲ್, ಅಶೋಕ ಹಲಸೂರ, ಬಸವನಗೌಡ ಪಾಟೀಲ ಸೇರಿದಂತೆ ಮತ್ತಿತರರಿದ್ದರು.



ಹೇಮಾವತಿ ಅಮ್ಮನವರ ಜನ್ಮದಿನ: ಹಣ್ಣು ಹಂಪಲು ವಿತರಣೆ

ರಾಣೇಬೆನ್ನೂರ: ವೀರೇಂದ್ರ ಹೆಗ್ಗಡೆ ಅವರ ಧರ್ಮಪತ್ನಿ ಹೇಮಾವತಿ ಅಮ್ಮನವರ ಜನ್ಮದಿನದ ಪ್ರಯುಕ್ತ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಾಣ ಮಾಡಿರುವ ಹಾಗೂ ಅಸಹಾಯಕ ಸದಸ್ಯರುಗಳಿಗೆ ತಾಲೂಕಿನ ಹೊಳೆ ಆನ್ವೇರಿ ಗ್ರಾಮದಲ್ಲಿ ಹಣ್ಣು ಹಂಪಲ ವಿತರಿಸಲಾಯಿತು.

ತಾಲೂಕ ಯೋಜನಾಧಿಕಾರಿ ಮಂಜುನಾಥಗೌಡ ಎಂ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ವಿಭಿನ್ನ ಹಾಗೂ ವಿಶೇಷ ಯೋಜನೆಗಳನ್ನು ರೂಪಿಸಿ ಎಲ್ಲ ವರ್ಗದವರಿಗೂ ಅದರಲ್ಲೂ ನಿರ್ಗತಿಕರಿಗೂ ವಿಶೇಷ ಕಾಳಜಿವಹಿಸುತ್ತಾ ಅವರ ನೆಮ್ಮದಿಯ ಜೀವನಕ್ಕೆ ಯೋಜನೆಯು ಬೆನ್ನೆಲುಬಾಗಿ ನಿಂತಿದೆ ಎಂದರು.

ದೂರದೃಷ್ಟಿಯನ್ನಿಟ್ಟುಕೊಂಡು ಪೂಜ್ಯ ವೀರೇಂದ್ರ ಹೆಗ್ಗಡೆಯವರು ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ ಅವರ ಜೊತೆ ಅವರ ಧರ್ಮಪತ್ನಿ ಹೇಮಾವತಿ ಅಮ್ಮನವರ ಸಹಕಾರವು ತುಂಬಾ ಮುಖ್ಯವಾಗಿದೆ ಹೀಗಾಗಿ ಅಮ್ಮನವರ ಜನ್ಮದಿನದ ಪ್ರಯುಕ್ತ ತಾಲೂಕಿನ 48ಕ್ಕೂ ಅಧಿಕ ಸದಸ್ಯರ ಮನೆಮನೆಗಳಿಗೆ ತೆರಳಿ ಹಣ್ಣು ಹಂಪಲ ವಿತರಿಸಲಾಯಿತು.

ಜ್ಞಾನ ವಿಕಾಸ ಯೋಜನಾಧಿಕಾರಿ ಶೋಭಾಹಟ್ ಸೇರಿದಂತೆತಾಲೂಕಿನ ಆಯಾ ವಲಯಗಳಲ್ಲಿ ಜ್ಞಾನ ವಿಕಾಸ ಯೋಜನಾಧಿಕಾರಿಗಳುಮೇಲ್ವಿಚಾರಕರು, ಸೇವಾಪ್ರತಿನಿಧಿಗಳು ಸೇರಿದಂತೆ ಗ್ರಾಮದ ಗಣ್ಯರು ಹಾಗೂ ಸಂಘದ ಸದಸ್ಯರು ಇತರಿದ್ದರು.



ಸಂಭ್ರಮದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

ಶಿಗ್ಗಾವಿ: ಪಟ್ಟಣದ ದೇಸಾಯಿ ಗಲ್ಲಿ, ವೀರಗಲ್ಲಿ ಓಣಿಯಲ್ಲಿ ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವ ಅಂಗವಾಗಿ ವೀರಭದ್ರಶ್ವರ ದೇವರ ರಥೋತ್ಸವದ ಮೆರವಣಿಗೆ ಸಂಭ್ರಮದಿಂದ ಜರುಗಿತು.

ಗಂಜೀಗಟ್ಟಿ ಚರಮೂರ್ತೇಶ್ವರಮಠದ ಶಿವಲಿಂಗೇಶ್ವರ ಶ್ರೀಗಳು, ವಿರಕ್ತಮಠದ ಸಂಗನಬಸವ ಶ್ರೀಗಳು, ಗೊಟಗೋಡಿಕೊಪ್ಪದ ಮುಕ್ತಿಮಠದ ಶಿವಸಿದ್ದ ಸೋಮೇಶ್ವರ ಶ್ರೀಗಳು, ಹಿರೇಮುನವಳ್ಳಿ ಸಿದ್ಧ ಶಿವಯೋಗಿ ಶಾಂಡಿಲೇಶ್ವರಮಠದ ಶಂಭುಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ರಥೋತ್ಸವ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಯಲ್ಲಿ ಝಾಂಜಮೇಳ, ಡೊಳ್ಳು ಕುಣಿತ, ಭಜನೆ, ಪುರವಂತಿಕೆ ಸೇರಿದಂತೆ ವಿವಿಧ ವಾದ್ಯವೈಭವದೊಂದಿಗೆ ಸಂಚರಿಸಿತು.

ಮಹಿಳೆಯರು ಮಕ್ಕಳು ಸೇರಿದಂತೆ ಭಕ್ತ ಸಮೂಹ ರಥೋತ್ಸವಕ್ಕೆ ಹಣ್ಣುಕಾಯಿ, ಉತ್ತುತ್ತಿ ತೂರಿ ಸಂಭ್ರಮಸಿದರು. ಕೆಲವು ಭಕ್ತರು ತಮ್ಮ ಹರಿಕೆಗಳನ್ನು ಶ್ರದ್ಧಾಭಕ್ತಿಯಿಂದ ಸಲ್ಲಿಸಿದರು.

ದೇವಸ್ಥಾನದಲ್ಲಿ ಕಳಸಾರೋಹನ, ಗ್ರಾಮ ದೇವತೆಗಳಿಗೆ ಉಡಿ ತುಂಬುವದು, ವೀರಭದ್ರೇಶ್ವರ ದೇವರಿಗೆ ರುದ್ರಾಭಿಷೇಕ, ಅಷ್ಟೋತ್ತರ, ಭಿಲ್ವಾರ್ಚನೆ, ಅಲಂಕಾರ ಪೂಜೆ, ಮಹಾ ಮಂಗಳಾರತಿ, ಪುರವಂತಿಗೆ, ಗುಗ್ಗಳ ಮಹೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.


ಪುರಸಭೆ ಸದಸ್ಯ ರಮೇಶ ವನಹಳ್ಳಿ, ಸಂಸದ ಎಂ.ಸಿ.ಕುನ್ನೂರ, ಮುಖಂಡರಾದ ಭರಮಜ್ಜ ನವಲಗುಂದ, ಸತೀಶ ಯಲಿಗಾರ, ವೀರಣ್ಣ ಬಡ್ಡಿ, ನಂದೀಶ ಯಲಿಗಾರ, ಮಾಲತೇಶ ಯಲಿಗಾರ, ಶಿವಪ್ಪ ಗಂಜೀಗಟ್ಟಿ, ಶಶಿಧರ ಯಲಿಗಾರ, ಶಿವಾನಂದ ಮ್ಯಾಗೇರಿ, ಈರಣ್ಣ ಅಂಕಲಕೊಟ್ಟಿ, ಈರಣ್ಣ ನವಲಗುಂದ, ಮಲ್ಲಯ್ಯ ಹಿರೇಮಠ, ಅಣ್ಣಪ್ಪ ನವಲಗುಂದ, ಮಾಲತೇಶ ಹಾವಣಗಿ, ನಿಂಗಪ್ಪ ದುಂಡಸಿ, ಸೋಮಣ್ಣ ನವಲಗುಂದ, ಚಂದ್ರಶೇಖರ ನವಲಗುಂದ, ಪ್ರಶಾಂತ ನವಲಗುಂದ, ಸಣ್ಣವೀರಪ್ಪ ಅರಳೇಶ್ವರ, ಸುರೇಶಗೌಡ ಪಾಟೀಲ, ಈರಣ್ಣ ಬಡ್ಡಿ, ಬಸವರಾಜ ನವಲಗುಂದ, ಮಂಜುನಾಥ ಕೋಡಿ, ತಮ್ಮಣ್ಣ ಬನ್ನಿಕೊಪ್ಪ, ನವೀನ್ ಹಾವಣಗಿ, ಯಲ್ಲಪ್ಪ ಹರಿಗೊಂಡ, ಮುತ್ತು ಗಂಜಿಗಟ್ಟಿ, ಅಶೋಕ ಹಾವಣಗಿ, ಸೇರಿದಂತೆ ದೇವಸ್ಥಾನ ಸೇವಾ ಸಮಿತಿ ಎಲ್ಲ ಸದಸ್ಯರು, ಸುತ್ತಲಿನ ಗ್ರಾಮಗಳ ಭಕ್ತರು ಇದ್ದರು.



ದರೋಡೆ ಪ್ರಕರಣ: 9 ಆರೋಪಿಗಳ ಬಂಧನ

ಹಾವೇರಿ: ಬ್ಯಾಡಗಿ ತಾಲೂಕು ಮೋಟೆಬೆನ್ನೂರು ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಇತ್ತೀಚೆಗೆ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ 9 ಆರೋಪಿಗಳನ್ನು ಬಂಧಿಸಿ, 40 ಲಕ್ಷ ರೂ., ನಗದು, ಒಂದು ಸ್ವಿಫ್ಟ್ ಹಾಗೂ ಒಂದು ಮಹಿಂದ್ರಾ ಥಾರ್ ಸೇರಿದಂತೆ ಎರಡು ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್ಪಿ ಯಶೋಧಾ ವಂಟ ಗೋಡಿ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಧಾರವಾಡದ ಅನ್ವರ್ ಮುಕ್ತುಮಸಾಬ್ (30), ಹಿರೇಕುಂಬಿಯ ಹಜರತ್ತಲಿ ಮುಕ್ತುಮಸಾಬ ಲಗಳಿ (30), ಇದೇ ಊರಿನ ಅಮೀರಖಾನ್ ಅಬ್ದುಲ್ಖಾನ್ ಪಠಾಣ (32), ಕಿತ್ತೂರಿನ ಇಬ್ರಾಹಿಂ ರಿಯಾಜ್ ಅಹಮ್ಮದ್ ಬೀಡಿ (28), ಹುಬ್ಬಳ್ಳಿಯ ಆಸ್ಫಕ್ ಬಾಬುಲಾಲ ಚನ್ನಾಪುರ (33), ಸದ್ದಾಂ ಮಹಮ್ಮದ್ ರಫೀಕ್ ಹಕೀಮ (33), ರಫೀಕ ಗುಡುಸಾಬ ಎಲಿಗಾರ (33), ಆಸ್ಫಕ್ ಮಹಬೂಬಸಾಬ ಮಕಾಂದಾರ (33), ಜಿಷಾನ್ ಮಹಬೂಬಸಾಬ ಕಂಚಗಾರ (32) ಎಂಬುವವರನ್ನು ಬಂಧಿಸಲಾಗಿದ್ದು,

> ರಾಷ್ಟ್ರೀಯ ಹೆದ್ದಾರಿಯಲ್ಲಿ ಭದ್ರತೆ ಹೆಚ್ಚಿಸಲಾಗುವುದು. 112 ವಾಹನಗಳು ಐದು, ಹೈವೇ ಗಸ್ತು ದಳದ 2 ವಾಹನಗಳು ಹಾಗೂ ಹೈವೇ ಚೆಕ್ ವಾಹನ ಸೇರಿದಂತೆ 8 ವಾಹನಗಳನ್ನು ಗಸ್ತಿನ ಸಲುವಾಗಿ ಬಳಸಲಾಗುವುದು. ಓರ್ವ ಪಿಎಸ್ಐ ಮತ್ತು ಸಿಬ್ಬಂದಿಯನ್ನು ಸಹ ಪ್ರತ್ಯೇಕವಾಗಿ ಹೆದ್ದಾರಿಯ ಭದ್ರತೆಗೆ ನಿಯೋಜಿಸಲಾಗುವುದು.
>
> 
>
> ■ ಯಶೋಧಾ ವಂಟಗೋಡಿ, ಎಸ್ಪಿ, ಹಾವೇರಿ.

ಲಾರಿಯ ಸಹ ಚಾಲಕನೇ ಪ್ರಕರಣದ ಪ್ರಮುಖ ರೂವಾರಿ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದರು.

ಏನಿದು ಪ್ರಕರಣ.?: ಮಾ.27ರ ತಡ ರಾತ್ರಿ ಕೃತ್ಯ ನಡೆದಿದೆ. ಲಾರಿಯನ್ನು ಚಾಲಕ ಶರಣಪ್ಪ ಎಂಬುವವರು ಚಲಾಯಿಸುತ್ತಿದ್ದು ಲಾರಿಯ ಮಾಲಿಕ ರಿಯಾಜ್ ಅಹಮ್ಮದ ಹಣಸಿ ಹಾಗೂ ಸಹ ಚಾಲಕ ಅನ್ವರ್ ಮುಕ್ತುಮಸಾಬ ಜತೆಗಿದ್ದರು. ರಾತ್ರಿ 11.45ರ ವೇಳೆ ಮೋಟೆಬೆನ್ನೂರು ಬಳಿ ಕಾರಿನಲ್ಲಿ ಬಂದು ಅಡ್ಡಗಟ್ಟಿದ ಆರೋಪಿಗಳು ಚಾಲಕ ಶರಣಪ್ಪ ಮತ್ತು ಇತರರನ್ನು ಬೆದರಿಸಿ ಲಾರಿಯ ಟೂಲ್ ಬಾಕ್ಸನಲ್ಲಿದ್ದ ಹಣದ ಬ್ಯಾಗ್ ತೆಗೆದುಕೊಂಡಿದ್ದಾರೆ. ಇದೇ ವೇಳೆ ಲಾರಿಯಲ್ಲಿದ್ದವರ ಮೊಬೈಗಳನ್ನು ಸಹ ಕಿತ್ತುಕೊಂಡಿದ್ದಾರೆ. ಬಳಿಕ ಲಾರಿ ಮಾಲೀಕ ರಿಯಾಜ್ ಅಹಮ್ಮದ್ ಅವರು ಬ್ಯಾಡಗಿ ಠಾಣೆಗೆ ದೂರು ನೀಡಿದ್ದರು.

ಮೊಬೈಲ್ ಕರೆಯಿಂದ ಪ್ರಕರಣ ಬಯಲು.: ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ ಪೊಲೀಸರಿಗೆ ಲಾರಿಯ ಸಹ ಚಾಲಕ ಅನ್ವರ್ ಇತರ ಆರೋಪಿಗಳೊಂದಿಗೆ ಮೊಬೈಲ್ ಸಂಪರ್ಕದಲ್ಲಿದ್ದಿದ್ದು ಗೊತ್ತಾಗಿದೆ. ಅನ್ವರ್ ಅವರನ್ನು ವಿಚಾರಣೆ ನಡೆಸಿದಾಗ ಆತ, ಲಾರಿಯಲ್ಲಿ ಹಣ ಇರುವುದು ಮತ್ತು ಲಾರಿ ಎಲ್ಲಿ ಹೋಗುತ್ತಿದೆ ಎಂಬ ಎಲ್ಲ ಮಾಹಿತಿಗಳನ್ನು ತನ್ನ ಸಹಚರರಿಗೆ ಕೊಟ್ಟಿರುವುದಾಗಿ ಬಾಯಿಬಿಟ್ಟಿದ್ದಾನೆ. ಇದರ ಆಧಾರದಲ್ಲಿಯೇ ಆರೋಪಿಗಳು ಲಾರಿ ತಡೆದು ದರೋಢೆ ನಡೆಸಿದ್ದಾಗಿ ತಿಳಿಸಿದ್ದಾನೆ ಎಂದು ಎಸ್ಪಿ ಯಶೋಧಾ ವಂಟಗೋಡಿ ಹೇಳಿದರು.

ಕಿರುಸುದ್ದಿ

ಲಾವಣ್ಯ ಗುಂಜಾಳಗೆ ಪಿಎಚ್ ಡಿ ಪ್ರದಾನ



ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅನ್ವಯಿಕ ವಿಜ್ಞಾನ (ಭೌತಶಾಸ್ತ್ರ) ವಿಭಾಗಕ್ಕೆ ಲಾವಣ್ಯ ಗುಂಜಾಳ ಅವರು ಸಲ್ಲಿಸಿದ ಸಿಂಥಸಿಸ್ ಆ್ಯಂಡ್ ಕ್ಯಾರೆಕ್ಟರೈಸೇಶನ್ ಆಫ್ ಕಾಂಜುಗೇಟೆಡ್ ಪಾಲಿಮರ್ಸ್ ಆ್ಯಂಡ್ ದೇರ್ ಅಪ್ಲಿಕೇಶನ್ಸ್ ಫಾರ್ ಸೆನ್ಸಾರ್ಸ್ ಎಂಬ ಮಹಾಪ್ರಬಂಧಕ್ಕೆ ವಿಶ್ವವಿದ್ಯಾಲಯವು ಪಿಎಚ್ಡಿ ಪದವಿ ನೀಡಿದೆ. ಇವರು ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಭೌತಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಬಳ್ಳಾರಿಯ ಆರ್.ವೈ.ಎಂ. ತಾಂತ್ರಿಕ ಮಹಾವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾದ ಪ್ರೊ. ನಾಗಭೂಷಣ ಎನ್. ಎಮ್. ಹಾಗೂ ಬಳ್ಳಾರಿಯ ಕಿಷ್ಕಿಂಧ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು, ಸಂಶೋಧನೆ ಮತ್ತು ಆವಿಷ್ಕಾರದ ಡೀನ್ ಹಾಗೂ ಪ್ರಾಧ್ಯಾಪಕರಾದ ಪ್ರೊ. ಮಂಜುನಾಥ ಎಸ್ ಅವರು ಮಾರ್ಗದರ್ಶನ ಮಾಡಿದರು.

ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ



ಯರಗಟ್ಟಿ: ತಾಲೂಕು ಮಟ್ಟದಲ್ಲಿ ಡಾ. ಬಾಬು ಜಗಜೀವನ ರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಪೂರ್ವಭಾವಿ ಸಭೆಯನ್ನು ಪಟ್ಟಣದ ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಏ.5 ರಂದು ಬೆಳಗ್ಗೆ 11 ಗಂಟೆಗೆ ಬಾಬು ಜಗಜೀವನರಾಮ ಭವನದಲ್ಲಿ ಬಾಬು ಜಗಜೀವನರಾಮ ಜಯಂತಿ ಹಮ್ಮಿಕೊಳ್ಳಲಾಗಿದೆ, 14ರಂದು ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲು ತೀರ್ಮಾನಿಸಲಾಯಿತು. ಈ ವೇಳೆ ಪ. ಪಂ. ಮುಖ್ಯಾಽಕಾರಿ ಮಹೇಶ ಭಜಂತ್ರಿ, ಪಿಎಸ್ಐ ಎಲ್ ಬಿ ಮಾಳಿ, ದಲಿತ ಸಮಾಜದ ಹಿರಿಯರಾದ ಭಾಸ್ಕರ ಹಿರೇಮೆತ್ರಿ, ಸಂತೋ? ಚನ್ನಮೆತ್ರಿ, ವಿಲ್ಸನ್ ಸೊಪ್ಪಡ್ಲ, ಲಕ್ಕಪ್ಪ ಹುಣಶೀಕಟ್ಟಿ, ಲಕ್ಕಪ್ಪ ಜಗದಾರ, ಸುರೇಶ ಭಜಂತ್ರಿ, ಲಂಕೇಶ ಮೇತ್ರಿ, ಸುರೇಶ ತಮ್ಮಣ್ಣವರ, ಸುರೇಶ ಉದ್ದಪ್ಪನವರ, ವಿಠ್ಠಲ ನಾಯ್ಕರ, ಹನಮಂತ ನರೇರ, ಅರ್ಜುನ ಮುಡೆನ್ನವರ, ಮಲ್ಲಿಕಾರ್ಜುನ ಮಾಳಗಿ, ಬಸವರಾಜ ಚನ್ನಮೇತ್ರಿ, ಶಶಿ ಚನ್ನಮೇತ್ರಿ, ಪುಂಡಲೀಕ ಗಿರೆವಗೋಳ, ರಾಜು ಹುಣಶಿಕಟ್ಟಿ, ಸುದೀಪ ಮಾಳಗಿ, ಹಣಮಂತ ತಳವಾರ, ಮಹಾಂತು ಕಾಮೋಶಿ, ಪ್ರಜ್ವಲ ಹಿರೇಮೆತ್ರಿ ಸೇರಿದಂತೆ ತಾಲೂಕಿನ ವಿವಿಧ ಪ್ರಗತಿಪರ, ಕನ್ನಡಪರ, ದಲಿತಪರ ಸಂಘಟನೆಗಳ ಮುಖಂಡರು ಭಾಗವಹಿಸಿ ಭಾಗವಹಿಸಿದ್ದರು.

ಮುಖ್ಯಮಂತ್ರಿಗಳ ವಿಶೇಷ ಸೇವಾ ಪದಕ ಪ್ರದಾನ



ಖಾನಾಪುರ: ಸ್ಥಳೀಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದ ಕಳ್ಳತನ, ಅಕ್ರಮ ಮರಳುಗಾರಿಕೆ, ಗಾಂಜಾ ಮಾರಾಟ ಸೇರಿದಂತೆ ಸಮಾಜದ್ರೋಹಿ ಚಟುವಟಿಕೆಗಳಲ್ಲಿ ತೊಡಗಿದ್ದ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಶೇಷ ಪ್ರಯತ್ನ ಕೈಗೊಂಡ ಖಾನಾಪುರ ಠಾಣೆಯ ಮುಖ್ಯ ಪೇದೆ ಜಗದೀಶ ಕಾದ್ರೊಳ್ಳಿ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಸೇವಾ ಪದಕ ಲಭಿಸಿದೆ. ಗುರುವಾರ ಬೆಂಗಳೂರಿನಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಜಗದೀಶ ಅವರಿಗೆ ಪದಕ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಗೃಹಸಚಿವ ಪರಮೇಶ್ವರ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಽಕಾರಿಗಳು ಇದ್ದರು.



ಚನ್ನಮ್ಮನ ಕಿತ್ತೂರ: ಸಮೀಪದ ಮೂಕಬಸವ ನಗರದಲ್ಲಿ ಗುರುವಾರ ಹನುಮ ಜಯಂತಿಯನ್ನು ಭಕ್ತಿ ಸಡಗರದಿಂದ ಆಚರಿಸಲಾಯಿತು. ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಕಾರ್ಯಕ್ರಮದಲ್ಲಿ ಮಂಜು ಅಂಕಲಗಿ, ಯಲ್ಲಪ್ಪ ಕಾರ್ಕದ, ಭಿಷ್ಠಪ್ಪ ಸಾತಪ್ಪನವರ, ನಿಂಗಪ್ಪ ಕಾರ್ಕದ, ಈರಪ್ಪ ಮಂಡರ, ಯಂಕಪ್ಪ ತಿಗಡೊಳ್ಳಿ ಹಾಗೂ ಇತರರು ಇದ್ದರು.

ಮೌಲ್ಯಮಾಪನ: ನೀಷೆಧಾಜ್ಞೆ ಜಾರಿ

ಬೆಳಗಾವಿ: ಮಾರ್ಚ್, ಏಪ್ರಿಲ್-2026ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. 2025-26ನೇ ಸಾಲಿನ ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವು ಬೆಳಗಾವಿ ನಗರದ 8 ಕೇಂದ್ರಗಳಲ್ಲಿ ನಡೆಯಲಿರುವ ಕಾರಣ ಏ.4ರಂದು ಗೌಪ್ಯ ಸಾಮಗ್ರಿಗಳು ಪೂರೈಕೆಯಾಗುತ್ತಿರುವುದರಿಂದ ಏ.5ರಿಂದ ಮೌಲ್ಯಮಾಪನ ಪ್ರಕ್ರಿಯೆಗಳು ಏಕಕಾಲದಲ್ಲಿ ಪ್ರಾರಂಭವಾಗುತ್ತಿದ್ದು, ಸದರಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಮುಕ್ತಾಯವಾಗುವವರೆಗೆ ಮೌಲ್ಯಮಾಪನ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಆದೇಶ ಹೊರಡಿಸಲಾಗಿದೆ.

ಪರೀಕ್ಷಾ ಕೇಂದ್ರದ ಹೆಸರು: ಸೇಂಟ್ ಮೇರಿಸ್ ಆಂಗ್ಲ ಮಾಧ್ಯಮ, ಪ್ರೌಢ ಶಾಲೆ, ಬೆಳಗಾವಿ, ಸೇಂಟ್ ಪೌಲ್ ಆಂಗ್ಲ ಮಾಧ್ಯಮ, ಪ್ರೌಢ ಶಾಲೆ, ಬೆಳಗಾವಿ, ಉಷಾತಾಯಿ ಗೋಗಟೆ ಆಂಗ್ಲ ಮಾಧ್ಯಮ, ಪ್ರೌಢ ಶಾಲೆ, ಪಾಟೀಲ ಗಲ್ಲಿ, ಬೆಳಗಾವಿ, ಸೇಂಟ್ ಝೇವಿಯರ್ಸ್, ಆಂಗ್ಲ ಮಾಧ್ಯಮ, ಪ್ರೌಢ ಶಾಲೆ, ಕ್ಯಾಂಪ್, ಬೆಳಗಾವಿ, ಶ್ರೀ ಸಿದ್ದರಾಮೇಶ್ವರ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಶಿವಬಸವ ನಗರ ಬೆಳಗಾವಿ, ಕನ್ನಡ ಮಾಧ್ಯಮಿಕ ಶಾಲೆ ಪ್ರೌಢ ಶಾಲೆ, ಮಹಾಂತೇಶ ನಗರ, ಬೆಳಗಾವಿ. ಮಹಿಳಾ ವಿದ್ಯಾಲಯ ಮರಾಠಿ ಪ್ರೌಢ ಶಾಲೆ, ಕಾಲೇಜು ರಸ್ತೆ, ಬೆಳಗಾವಿ. ಸೇಂಟ್ ಆಂಥೋನಿ ಪ್ರೌಢ ಶಾಲೆ ಫಿಶ್ ಮಾರ್ಕೆಟ್ ಎದುರು ಕ್ಯಾಂಪ್, ಬೆಳಗಾವಿ.



ಬೆಳಗಾವಿ: ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾಜನ ವರದಿಯೇ ಅಂತಿಮ ಹಾಗೂ ಬೆಳಗಾವಿ ಕರ್ನಾಟಕ ಅವಿಭಾಜ್ಯ ಅಂಗ ಎಂಬ ನಿರ್ಣಯವನ್ನು ಅಂಗೀಕರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಕಿತ್ತೂರು ಕರ್ನಾಟಕ ಯುವ ಸೇನೆಯ ಕಾರ್ಯಕರ್ತರು ಮಂಗಳವಾರ ಮಹಾನಗರ ಪಾಲಿಕೆ ಕಛೇರಿ ಎದುರು ಪ್ರತಿಭಟಿಸಿ, ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಶಿವಶರಣೆ ಅಕ್ಕಮಹಾದೇವಿ ಜಯಂತಿ ಆಚರಣೆ

ಕವಯಿತ್ರಿ ಅಕ್ಕಮಹಾದೇವಿ ಸ್ಮರಿಸಿ

ಯರಗಟ್ಟಿ: ಪಟ್ಟಣ ಮಹಾಂತ ದುರದುಡೀಶ್ವರ ಶ್ರೀಮಠದಲ್ಲಿ ಶಿವಶರಣೆ ಅಕ್ಕಮಹಾದೇವಿ ಜಯಂತಿಯನ್ನು ಅಕ್ಕನ ಬಳಗದಿಂದ ಆಚರಿಸಲಾಯಿತು.

ಡಾ.ಮೈತ್ರೇಯಿಣಿ ಗದಿಗೆಪ್ಪಗೌಡರ ಮಾತನಾಡಿ, ಅಕ್ಕ ಮಹಾದೇವಿ ಅನ್ಯಾಯದ ವಿರುದ್ಧ ಎದ್ದು ನಿಂತಿದ್ದರಿಂದ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ವಚನಕಾರರಲ್ಲಿ ಬಸವಣ್ಣನವರಂತೆ ಮಹಿಳಾ ವಚನಕಾರ್ತಿಯಾಗಿ ಅಕ್ಕಮಹಾದೇವಿ, ತಮ್ಮ ವಚನಗಳಲ್ಲಿ ಬದುಕಿನ ಮೌಲ್ಯಗಳನ್ನು ಸಾರಿದ್ದಾರೆ. ಆಡಂಬರದ ಜೀವನಕ್ಕೆ ಆಸೆ ಬೀಳದೆ ಸಮಾಜ ಮುಖಿಯಾಗಿ ಬದುಕು ನಡೆಸಿ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯ ಮಾಡಿದ್ದಾರೆ ಎಂದು ಡಾ. ಮೈತ್ರೇಯಿಣಿ ಹೇಳಿದರು.

ತಮ್ಮ ಮಕ್ಕಳಿಗೆ 'ವಚನ'ಗಳನ್ನು ಕಲಿಸುವಂತೆ ಅವರು ತಾಯಂದಿರಿಗೆ ಮನವಿ ಮಾಡಿದರು. ಮಕ್ಕಳು ಈಗ ಅರ್ಥಮಾಡಿಕೊಳ್ಳದಿದ್ದರೂ, ಭವಿಷ್ಯದಲ್ಲಿ ವಚನಗಳು ಅವರಿಗೆ ಸಹಾಯ ಮಾಡುತ್ತೇವೆ. ಬೆಳಗಾವಿಯಿಂದ ಪೊಲೀಸ್ ಇಲಾಖೆಯಲ್ಲಿ ಅಕ್ಕ ಪಡೆ ಎಂಬ ಒಂದು ತಂಡವನ್ನು ಮಾಡಿದ್ದಾರೆ ಎಂದು ಹೇಳಿದರು.

ಈ ವೇಳೆ ಕಟಕೋಳ ವಿರಕ್ತಮಠ ಸಚ್ಚಿದಾನಂದ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದು, ಎಮ್. ಬಿ. ವಾಲಿ, ಮಹಾಂತೇಶ ಜಕಾತಿ, ಡಾ. ಶ್ವೇತಾ ಪಟ್ಟಣಶೆಟ್ಟಿ, ಭಾಗ್ಯಜ್ಯೋತಿ ಬಿದರಗಡ್ಡಿ ಶಿವಾನಂದ ಪಟ್ಟಣಶೆಟ್ಟಿ, ರಾಜೇಂದ್ರ ವಾಲಿ, ವಿರೂಪಾಕ್ಷ ಜಕಾತಿ, ಅಶೋಕ ಗಾಣಿಗಿ, ಬಿ. ಆಯ್. ಚಿನಗುಡಿ, ಎಮ್. ಎಸ್. ಚೆಟ್ಟಿ, ಕುಮಾರ ಹಿರೇಮಠ, ಎಸ್. ಬಿ. ವಾಲಿ, ಉಮಾದೇವಿ ಪೂರ್ವಿಮಠ, ಪ್ರಭಾ ವಾಲಿ, ಜಯಶ್ರೀ ಅನಂತಪೂರ, ಅಶ್ವಿನಿ ಪಟ್ಟಣಶೆಟ್ಟಿ, ದೀಪಾ ಜಕಾತಿ, ಶಿವಲೀಲಾ ದುಗ್ಗಾಣಿ, ಜಯಶ್ರೀ ಕತ್ತಿಶೆಟ್ಟಿ, ಸುರೇಖಾ ಅಂಗಡಿ, ಮಹೇಶ್ವರಿ ರಾಮದುರ್ಗ, ಶಾರದಾ ವಾಲಿ, ಪೂರ್ಣಿಮಾ ಕತ್ತಿಶೆಟ್ಟಿ, ಅಶ್ವಿನಿ ಕತ್ತಿಶೆಟ್ಟಿ, ಉಮಾ ವಾಲಿ ಸೇರಿದಂತೆ ವೀರಶೈವ ಲಿಂಗಾಯತ ಸಮಾಜದ ಗುರು ಹಿರಿಯರು ಹಾಗೂ ಅಕ್ಕನ ಬಳಗದ ಸದಸ್ಯರು ಇದ್ದರು.



ಮೌಲ್ಯ ಪ್ರಚಾರ ಪಡಿಸಿದ ಮಹಾತ್ಮೆ

ಅಕ್ಕ ಮಹಾದೇವಿ ವಚನಗಳ ಮೂಲಕ ಬದುಕಿನ ಮೌಲ್ಯ ಪ್ರತಿಪಾದಿಸಿದರು. ಅವರ ವಚನಗಳ ವಿಚಾರಧಾರೆ ಪ್ರಚಾರವಾಗಬೇಕು. ಉತ್ತಮಸಮಾಜ ನಿರ್ಮಾಣಕ್ಕೆ ಅಡಿಪಾಯವಾಗಬೇಕಿದೆ. 12ನೇ ಶತಮಾನದ ವಚನಕಾರರಲ್ಲಿ ಅಕ್ಕ ಪ್ರಮುಖರು. ಅಽಕಾರ, ಸಂಪತ್ತು, ವೈಭವ, ಆಡಂಬರ, ಭೋಗ ಜೀವನವನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಎಲ್ಲಾ ಬಂಧನಗಳಿಂದ ಬಿಡುಗಡೆ ಪಡೆದು ಸಾಮಾನ್ಯರಲ್ಲಿ ಸಾಮಾನ್ಯಳಂತೆ ಜನ ಜೀವನದಲ್ಲಿ ಬೆರೆತು ಬದುಕಿದರು ಎಂದು ಬಿಜೆಪಿ ಮುಖಂಡ ಮಡಿವಾಳಪ್ಪ ಬಿದರಗಡ್ಡಿ ಸ್ಮರಿಸಿದರು.


ಸೇತುವೆ ಕಾಮಗಾರಿಗೆ ಚಾಲನೆ

ಗೋಕಾಕ: ಜತ್ತ-ಜಾಂಬೋಟಿ ರಾಜ್ಯ ಹೆದ್ದಾರಿಯ ಮುಖ್ಯ ರಸ್ತೆಯಲ್ಲಿ ಕೊಳವಿ ಗ್ರಾಮದ ಬಳಿ ಲೋಕೋಪಯೋಗಿ ಇಲಾಖೆ ವತಿಯಿಂದ ಅಂದಾಜು 960 ಲಕ್ಷ.ರೂ ಮೊತ್ತದ ನೂತನ ಸೇತುವೆ ಕಾಮಗಾರಿಗೆ ಶಾಸಕ ರಮೇಶ ಜಾರಕಿಹೊಳಿ ಗುರುವಾರ ಚಾಲನೆ ನೀಡಿದರು.

ಶಾಸಕ ರಮೇಶ ಜಾರಕಿಹೊಳಿ ಅವರು ತಾಲೂಕಿನ ಮಾಲದಿನ್ನಿ, ಬೆಣಚಿನಮರಡಿ, ಕೊಳವಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಆಯೋಜಿಸಿದ್ದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಇದೇ ಸಂದರ್ಭದಲ್ಲಿ ಶಾಸಕರನ್ನು ಹನುಮ ಜಯಂತಿ ಕಾರ್ಯಕ್ರಮ ಆಯೋಜಕರು, ಗ್ರಾಮಸ್ಥರು, ಸತ್ಕರಿಸಿದರು.

ಈ ಸಂದರ್ಭದಲ್ಲಿ ಭೀಮನಗೌಡ ಪೊಲೀಸಗೌಡರ,ಟಿ.ಆರ್ ಕಾಗಲ,ಮಡ್ಡೆಪ್ಪ ತೋಳಿನವರ, ಪುಂಡಲೀಕ ವಣ್ಣೂರ, ಬಸಪ್ಪ ಹಮ್ಮಿಣಿ, ಸಿದ್ದಗೌಡ ಪಾಟೀಲ, ಕರೆಪ್ಪ ಬಡಿಗವಾಡ, ಸಿದ್ದಪ್ಪ ದೇಸಾಯಿ, ಶಿವು ಪಾಟೀಲ ಸೇರಿದಂತೆ ಕೊಳವಿ, ಬೆಣಚಿನಮರಡಿ, ಖನಗಾಂವ, ನಭಾಪುರ ಗ್ರಾಮದ ಗುರುಹಿರಿಯರು, ಮುಖಂಡರು ಉಪಸ್ಥಿತರಿದ್ದರು.



ಶ್ರೀ ಗ್ರಾಮದೇವತೆ ಜಾತ್ರೆ ಅದ್ದೂರಿ ಆಚರಣೆ

ನೇಸರಗಿ: ಸಮೀಪದ ಮದನಬಾವಿ ಗ್ರಾಮದಲ್ಲಿ ಶ್ರೀ ಗ್ರಾಮದೇವತೆಯ ಜಾತ್ರಾ ಮಹೋತ್ಸವವು ಗುರುವಾರದಂದು ಬೆಳಿಗ್ಗೆ ಪೂಜೆ, ಹೋಮ, ಹವನ, ಉಡಿ ತುಂಬುವ ಕಾರ್ಯಕ್ರಮ, ಹೊನ್ನಾಟ ಕಾರ್ಯಕ್ರಮ ನಡೆಯಿತು. ಉದೋ, ಉದೋ ತಾಯಿ, ದ್ಯಾಮವ್ವ, ದುರ್ಗವ್ವ ತಾಯಿ ಜೈ ಎನ್ನುವ ವೇದ ಘೋಷಣೆಯೊಂದಿಗೆ ಜಾತ್ರೆ ಪ್ರಾರಂಭವಾಗಿ ಗೌಡರ ಓಣಿಯ ಶ್ರೀ ಈಶ್ವರ ದೇವಸ್ಥಾನದ ಮುಂದೆ ಗ್ರಾಮದೇವಿ ವಾಸ್ತವ್ಯ ಮಾಡಿದಳು.



ಹನುಮಾನ ತೊಟ್ಟಿಲೋತ್ಸವ



ಕಕಮರಿ: ಸ್ಥಳೀಯ ಹನುಮಾನ ಮಂದಿರದಲ್ಲಿ ಬಾಲ ಹನುಮನ ನಾಮಕರಣ ಹಾಗೂ ತೊಟ್ಟಿಲೋತ್ಸವ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು.

ಅರ್ಚಕಪಾಂಡುರಂಗಪೂಜಾರಿ ಅವರಿಂದ ಬೆಳಗ್ಗೆ ಹನುಮನಿಗೆ ಮಹಾರುಧ್ರಾಭಿಷೇಕ ನೆರವೇರಿತು. ನಾಮಕರಣ ಸಂದರ್ಭದಲ್ಲಿ ಅಮ್ಮಕ್ಕ ಹಾಲಳ್ಳಿ, ಅಮಜವ್ವ ದಾಶ್ಯಾಳ, ಮಾದೇವಿ ಪೂಜಾರಿ, ಮುರಗೆವ್ವ ಗಡಾಲೋಟಿ, ಶೋಭಾ ಜನಗೌಡ, ಕಾಲಮ್ಮಾ ಬಡಿಗೇರ, ಮಾದೇವಿ ಪುಠಾಣಿ, ಬಂದವ್ವ ಸಿಂದೂರ, ಇತರರಿದ್ದರು. ಬೆಳಿಗ್ಗೆ 9 ಗಂಟೆಗೆ ಹನುಮಾನ ಸೇವಾ ಕಮೀಟಿಯಿಂದ ಅನ್ನಪ್ರಸಾದ ನಡೆಯಿತು. ಸಂಜೆ ಹನುಮಾನ ಭಾವಚಿತ್ರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ಜರುಗಿತು.

ಸಂಭ್ರಮದ ಹನುಮಾನ ಜಯಂತಿ ಆಚರಣೆ



ಯಮಕನಮರಡಿ: ಸಮೀಪದ ಇಂದ್ರಾ ನಗರದಲ್ಲಿ ಹನುಮಾನ್ ಜಯಂತಿಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು ಗ್ರಾಮದ ಯುವಕಮಿತ್ರರು ಹಾಗೂ ಹಿರಿಯರು ಸೇರಿ ಶ್ರೀ ಹನುಮಾನ ದೇವರಿಗೆ ರುದ್ರಾಭಿಷೇಕ ಮಹಾಪ್ರಸಾದ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಿ ಇಡೀ ಗ್ರಾಮದ ಜನರಿಗೆ ಸಾಯಂಕಾಲ ಪ್ರಸಾದ್ ವ್ಯವಸ್ಥೆ ಮಾಡಲಾಗಿತ್ತು. ಎಲ್ಲ ಯುವಕ ಮಿತ್ರರು ಭಕ್ತಿ ಪೂರ್ವಕವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಹನುಮಾನ್ ದೇವರ ಕೃಪೆಗೆ ಪಾತ್ರರಾದರು.

ಏ.14 ರಂದು ಅಂಬೇಡ್ಕರ್ ಕ್ರಿಕೆಟ್ ಟೂರ್ನಮೆಂಟ್ ಟ್ರೋಫಿ

ಬೆಳಗಾವಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಅಂಗವಾಗಿ ಬೆಳಗಾವಿಯ ಸರ್ದಾರ್ಸ್ ಮೈದಾನದಲ್ಲಿ ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ ಕ್ರಿಕೆಟ್ ಟೂರ್ನಮೆಂಟ್ನ ಟ್ರೋಫಿಯನ್ನು ಏಪ್ರೀಲ್ 14 ರಂದು ಹಮ್ಮಿಕೊಳ್ಳಲಾಗಿದೆ ಎಂದು ಬೆಳಗಾವಿ ಉತ್ತರ ಮತಕ್ಷೇತ್ರದ ಶಾಸಕ ಆಸೀಫ್ ಸೇಠ್ ಹೇಳಿದರು.

ಶುಕ್ರವಾರ ಬೆಳಗಾವಿ ನಗರದಲ್ಲಿರುವ ಸ್ವ ಗ್ರಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಏಪ್ರಿಲ್ 14ರಂದು ವಿಶ್ವರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತ್ಯುತ್ಸವ ಅಂಗವಾಗಿ ಬಾಬಾಸಾಹೇಬ್ ಅಂಬೇಡ್ಕರ್ ಕ್ರಿಕೆಟ್ ಟೂರ್ನಾಮೆಂಟ್ ಪಧ್ಯಾವಳಿ ಆಯೋಜಿಸಲಾಗಿದೆ ಎಂದು ಹೇಳಿದರು. ಶಾಲೆಗಳ ಪರೀಕ್ಷೆಗಳು ಪೂರ್ಣಗೊಂಡಿದ್ದು, ಶಾಲೆಗಳಿಗೆ ನೀಡಲಾಗಿದೆ. ಏಪ್ರೀಲ್ 14 ರಂದು ಸಂಜೆ 5 ಗಂಟೆಗೆ ಸದಾರ್ಸ್ ಮೈದಾನದಲ್ಲಿ ಟ್ರೋಫಿ ಅನಾವರಣ ಕಾರ್ಯಕ್ರಮ ನಡೆಯಲಿದೆ. ಇದೇ ಏಪ್ರಿಲ್ 27-28-29 ರಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುವುದರ ಬಗ್ಗೆ ತಿಳಿಸಿದರು.

ರಾಜ್ಯ ಕಾರಣದಲ್ಲಿ ಧರ್ಮ ಜಾತಿಗಳನ್ನು ಬಿಟ್ಟು ನಾವುಗಳು ರಾಜ್ಯಕೀಯ ಮಾಡುತ್ತೇವೆ, ಯಾವುದೇ ರಾಜಕೀಯ ಕಾರ್ಯಕ್ರಮವಾಗಿರದೇ, ಎಲ್ಲ ಜನಪ್ರತಿನಿಧಿಗಳು ಎಲ್ಲ ಸಮಾಜದವರು ಪಕ್ಷಾತೀತವಾಗಿ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು. ಈ ವೇಳೆ ದಲಿತ ಮುಖಂಡ ಮಲ್ಲೇಶ್ ಚೌಗಲೆ, ಸಿದ್ಧಪ್ಪ ಕಾಂಬಳೆ, ಗಜಾನನ ಧರನಾಯಿಕ ಸೇರಿದಂತೆ ಹಲವು ದಲಿತ ಮುಖಂಡರು ಇದ್ದರು.



ಮುರುಘೇಂದ್ರ ಶ್ರೀಗಳ ಜಾತ್ರಾ ಮಹೋತ್ಸವ

ಅಥಣಿ: ಸ್ಥಳೀಯ ಗಚ್ಚಿನಮಠದ ಜಂಗಮ ಜ್ಯೋತಿ ಶ್ರೀ ಮುರುಘೇಂದ್ರ ಶಿವಯೋಗಿಗಳ 105 ನೇ ಜಾತ್ರಾ ಮಹೋತ್ಸವ ನಿಮಿತ್ತ ಶಿವಯೋಗಿಗಳ ಜನ್ಮ ಸ್ಥಳವಾದ ತಾಲೂಕಿನ ನದಿ ಇಂಗಳಗಾಂವ ಗ್ರಾಮದಿಂದ ಅಲ್ಲಿನ ಭಕ್ತರು ತಂದ ಶಿವಯೋಗಿಗಳ ಪಲ್ಲಕ್ಕಿಯನ್ನು ಹಲ್ಯಾಳ (ಶಿವಯೋಗಿ) ವೃತ್ತದಲ್ಲಿರುವ ನಾಗಪ್ಪ ದೇವಸ್ಥಾನದ ಮುಂದೆ ಭಕ್ತರಿಂದ ಭವ್ಯವಾಗಿ ಸ್ವಾಗತಿಸಿಕೊಂಡು ನಂತರ ಪಲ್ಲಕ್ಕಿಗೆ ಮಹಾ ಮಂಗಳಾರತಿ ಪೂಜೆ ಸಲ್ಲಿಸಿ,ವಿವಿಧ ವಾದ್ಯ ಮೇಳದೊಂದಿಗೆ ಭವ್ಯ ಮೆರವಣಿಗೆಯೊಂದಿಗೆ ಗಚ್ಚಿನ ಮಠಕ್ಕೆ ಕರೆತರಲಾಯಿತು.

ಈ ವೇಳೆ ಮಲ್ಲು ಹುದ್ದಾರ, ರಾಜು ಗುಡೋಡಗಿ,ದೀಲಿಪ ಲೋನಾರೆ, ಶಂಕರ ಅಲಬಾಳ,ಬಸವರಾಜ ಪಾಟೀಲ, ಆಯುಷ ಶಿವಾನಂದ ಪೂಜಾರಿ, ಜಯಾ ಶೇಡಶ್ಯಾಳೆ, ಸಿದ್ದು ಮಾಳಿ ಪಟ್ಟಣದ ಹಾಗೂ ನದಿ ಇಂಗಳಗಾಂವದ ಭಕ್ತರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ವಿಮಾ ಸಂಸ್ಥೆಯಿಂದ ತಿರಸ್ಕೃತ ಪ್ರಸ್ತಾವನೆಯ ರೈತರ ಯಾದಿ ಪ್ರಕಟ

ಖಾನಾಪುರ: 2024-25 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆ ಪ್ರಸ್ತಾವನೆಗಳ ಪೈಕಿ ಕೆಲ ಪ್ರಸ್ತಾವನೆಗಳು ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದ ಕಾರಣ ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡಿವೆ. ಈ ಪ್ರಸ್ತಾವನೆಗಳನ್ನು ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದ 378 ರೈತರ ಯಾದಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಖಾನಾಪುರ ಹಾಗೂ ಬೀಡಿ, ಖಾನಾಪೂರ, ಗುಂಜಿ ಹಾಗೂ ಜಾಂಬೋಟಿ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರದರ್ಶಿಸಲಾಗಿದೆ. ರೈತ ಭಾಂದವರು ತಿರಸ್ಕೃತ ಯಾದಿಯಲ್ಲಿ ತಮ್ಮ ಹೆಸರು ಇದ್ದಲ್ಲಿ 2024-25ರ ಪಹಣಿ ಪತ್ರಿಕೆ, ಬೆಂಬಲ ಬೆಲೆ ಪ್ರಯೋಜನ ಪಡೆದಿದ್ದಲ್ಲಿ ರಶೀದಿ, ಬೆಳೆಯ ಉತ್ಪನ್ನವನ್ನು ಎ.ಪಿ.ಎಮ್.ಸಿ ಮಾರುಕಟ್ಟೆಗೆ ಮಾರಾಟ ಮಾಡಿದ್ದಲ್ಲಿ ಸಂಬಂಽಸಿದ ದಾಖಲಾತಿಗಳನ್ನು ಕೂಡಲೇ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕೆಂದು ಕೃಷಿ ಇಲಾಖೆಯ ಪ್ರಕರಣೆ ತಿಳಿಸಿದೆ.

ಶ್ರೀ ವೀರಭದ್ರೇಶ್ವರ ರಥೋತ್ಸವ



ಚನ್ನಮ್ಮನ ಕಿತ್ತೂರ: ಸಮೀಪದ ಚಿಕ್ಕಹಟ್ಟಿಹೊಳಿ ಗ್ರಾಮದ ಶ್ರೀ ವೀರಭದ್ರೇಶ್ವರ ರಥೋತ್ಸವ ಶುಕ್ರವಾರ ಭಕ್ತಿ ಸಡಗರದ ಮೂಲಕ ವಿಜೃಂಭಣೆಯಿಂದ ನೆರವೇರಿತು.

ರಥದಲ್ಲಿ ಶ್ರೀ ವೀರಭಧ್ರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಹೂವು, ಮಾಲೆಗಳಿಂದ, ಬೃಹತ್ ರುದ್ರಾಕ್ಷಿ ಮಾಲೆಯಿಂದ ವಿವಿಧ ಅಲಂಕಾರಿಕ ವಸ್ತುಗಳಿಂದ ರಥವನ್ನು ಸಿಂಗರಿಸಲಾಗಿತ್ತು ಸೇರಿದ ಅಪಾರ ಭಕ್ತರು ಜಯಘೋಷಗಳ ಮದ್ಯೆ ರಥವನ್ನು ಭಕ್ತಿ ಭಾವದಿಂದ ಎಳೆದು ಆಶೀರ್ವಾದ ಪಡೆದುಕೊಂಡರು ರಥೋತ್ಸವಕ್ಕೆ ಇಟಗಿ, ಹಿರೇಬಾಗೇವಾಡಿ, ದಾಸ್ತಿಕೊಪ್ಪ, ಚಿಕ್ಕಮುನವಳ್ಳಿ, ಬೈಲೂರು, ಬೈಲಹೊಂಗಲ, ಬೆಳಗಾವಿ ಸೇರಿದಂತೆ ಸುತ್ತಲಿನ ಅನೇಕ ಗ್ರಾಮಗಳ ಅಪಾರ ಸಂಖ್ಯೆಯ ಭಕ್ತರು ಸೇರಿದ್ದರು.

ಸಂಭ್ರಮದ ಹನುಮಾನ ಜಯಂತಿ ಆಚರಣೆ

ಕುಡಚಿ: ಪಟ್ಟಣದ ವಿವಿಧೆಡೆ ಸಡಗರ ಸಂಭ್ರಮದಿಂದ ಹನುಮಾನ್ ಜಯಂತಿ ಆಚರಿಸಲಾಯಿತು.

ಸಾರ್ವಜನಿಕ ಹನುಮಾನ ಮಂದಿರ ಹಾಗೂ ಜಮಖಂಡಿ ರಸ್ತೆ, ಅಂಬೇಡ್ಕರ್ ನಗರ ಹಾಗೂ ವಿವಿಧ 9 ಹನುಮಾನ್ ಮಂದಿರಗಳಲ್ಲಿ ಹೂವು ತರಳು ತೋರಣಗಳಿಂದ ಅಲಂಕರಿಸಿ ಬಾಲ ಹನುಮನನ್ನು ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡಿ ಆಚರಣೆ ಮಾಡಿದರು. ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ಭಕ್ತರು ದಿನಪೂರ್ತಿ ಹನುಮಂತನ ದರ್ಶನ ಪಡೆದು, ಸಕಲ ಜೀವಿಗಳ ಕಲ್ಯಾಣಕ್ಕಾಗಿ ವಿಶೇಷ ಪೂಜೆಗಳನ್ನು ಸಲ್ಲಿಸಿ, ವಿವಿಧ ಅರ್ಪಣೆಗಳನ್ನು ಮಾಡುವ ಮೂಲಕ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಂಡರು. ಹೋಮ-ಹವನ ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಜಮಖಂಡಿ ರಸ್ತೆಗಿರುವ ಹನುಮಾನ್ ಮಂದಿರದಲ್ಲಿ ಮಧ್ಯಾಹ್ನ ಸಹಸ್ರಾರು ಭಕ್ತರಿಗೆ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಸಂಜೆ 6ಗಂಟೆಗೆ ಎಲ್ಲ ಹನುಮಾನ್ ಮಂದಿರಗಳು ಹಾಗೂ ವಿಶ್ವ ಹಿಂದೂ ಪರಿಷತ್ ಬಜರಂಗದಳ ಕಾರ್ಯಕರ್ತರು ಸಮಸ್ತ ಹನುಮ ಭಕ್ತರಿಂದ ಹನುಮಾನ್ ಮೂರ್ತಿ ಪಲ್ಲಕ್ಕಿ, ಹನುಮಾನ್ ಹಾಗೂ ಶ್ರೀರಾಮನ ಭವ್ಯ ಭೃಹತ್ ಪ್ರತಿಮೆಗಳನ್ನು ಜಮಖಂಡಿ ರಸ್ತೆಗಿರುವ ಹನುಮಾನ್ ಮಂದಿರದಿಂದ ಪೂಜೆ ಸಲ್ಲಿಸುವ ಮೂಲಕ ಸಾಂಸ್ಕೃತಿಕ ಸಂಭಳ ವಾದ್ಯ ಹಾಗೂ ಹಲಗೆ ಲೇಜೀಮ ವಾದ್ಯಗಳೊಂದಿಗೆ ಪವನಪುತ್ರ ಹನುಮಾನಕಿ, ಜೈ ಶ್ರೀರಾಮ್ ಘೋಷಣೆ ಕೂಗುತ್ತ ಕೇಸರಿ ಧ್ವಜಗಳನ್ನು ರಾರಾಜಿಸುತ್ತ, ಪಟಾಕಿಗಳನ್ನು ಸಿಡಿಸುತ್ತ ಮೆರವಣಿಗೆಯು ರೇಲ್ವೆ ಮೇಲ್ಸೆತುವೆ, ಕರ್ನಾಟಕ ವೃತ್ತ ಮಾಸಾಬಿ ವೃತ್ತ, ಡಿಸಿಸಿ ಬ್ಯಾಂಕ್ ರೈಲು ನಿಲ್ದಾಣ ಬೆಲ್ಲದ ಕಾರ್ನರ್ ಮೂಲಕ ಸಾರ್ವಜನಿಕ ಹನುಮಾನ ಮಂದಿರಕ್ಕೆ ತಲುಪಿತು.

ಈ ಸಂದರ್ಭದಲ್ಲಿ ಸಾರ್ವಜನಿಕ ಹನುಮಾನ ಮಂದಿರ ಅರ್ಚಕರಾದ ದಯಾನಂದ ಮಠಪತಿ, ಲಕ್ಷಟ್ಟಿ ತೇಲಿ, ಸಿದ್ಧಾನಿ ಸಣ್ಣಕ್ಕಿ,ಜಯಕುಮಾರ ಸನದಿ, ಶ್ರೀಮಾನ್ ನಾಯಿಕ, ಸದಾಶಿವ ಗಿಣಿಮೂಗೆ, ಪ್ರದೀಪ್ ಭಾವಿ, ಶೇಖರ್ ದಳವಾಯಿ, ಶಿವಾನಂದ ಲಖ್ಖಿನಗಾವ, ಯಲ್ಲಪ್ಪ ವಡ್ಡರ, ಡಾ.ಸಚಿನ ಮನಗುತ್ತಿ, ಅಮಿತ ನಾಯಿಕ, ಪ್ರೇಮ ಗುಪ್ತೆ, ಜಗ್ಗು ಮಂಗಸೂಳಿ, ಶೀತಲ ಲೋಹಾರ,ಕಾರ್ತಿಕ ರಾಜಮಾನೆ, ಚೇತನ್ ಸುತಾರ, ವರ್ಧಮಾನ ಶೆಟ್ಟಿ, ಸಚೀನ ತೇಲಿ, ಆನಂದ ಸಣ್ಣಕ್ಕಿ, ಕರೆಪ್ಪ ಬ್ಯಾಕುಡೆ, ಪ್ರಕಾಶ್ ದಾವಣೆ, ನಾಗೇಶ ಕೌಲಗುಡ್ಡ, ಕೃಷ್ಣಾ ರೆಡ್ಡಿ ಸರ್ವ ಹನುಮಾನ್ ಭಕ್ತರು ಭಾಗಿಯಾಗಿದ್ದರು. ಮೆರಣಿಗೆಗೆ ಪಿಎಸಐ ಪ್ರೀತಮ್ ನಾಯಿಕ ನೇತೃತ್ವದಲ್ಲಿ ಎಎಸಐ ಇಂಚಲ, ಬಾನಪ್ಪಾ ಖೋತ, ಪೈಗಂಬರ್ ಗಡ್ಡೇಕರ,ಎಂ.ಬಿ.ಪಾಟೀಲ ಸೂಕ್ತ ಬಂದುಬಸ್ತಿ ಒದಗಿಸಿದ್ದರು.



ಸಂಭ್ರಮದ ಯಲ್ಲಮ್ಮದೇವಿ ಜಾತ್ರೆ

ಯಮಕನಮರಡಿ: ಸ್ಥಳೀಯ ಶ್ರೀ ರೇಣುಕಾದೇವಿ ಯಲ್ಲಮ್ಮ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ದವನದ ಹುಣ್ಣಿಮೆ ಅಂಗವಾಗಿ ಶ್ರೀದೇವಿಗೆ ಅಕ್ಷತಾರೋಪಣ ಉಡಿ ತುಂಬುವುದು. ಅಭಿಷೇಕ ಮಹಾಪ್ರಸಾದ ಆಯೋಜಿಸಲಾಗಿತ್ತು. ಜೋಡಿ ಎತ್ತಿನ ಕುದುರೆ ಶರತ್ತು ಎಲ್ಲರ ಗಮನ ಸೆಳೆಯಿತು.

ವಿಜೇತರಿಗೆ ಬಹುಮಾನ ಹಾಗೂ ದಾನಿಗಳಿಗೆ ಸನ್ಮಾನ ಕಾರ್ಯಕ್ರಮ ಜರುಗಿತು. ಸ್ಥಳೀಯ ಶೂನ್ಯ ಸಂಪಾದನ ಹುಣಸಿಕೊಳ್ಳ ಮಠದ ಉತ್ತರಾಧಿಕಾರಿಗಳಾದ ಸಿದ್ದಬಸವ ದೇವರು ಸನ್ಮಾನ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಕಿರಣ್ ಸಿಂಗ್, ರಾಜ ಭೂತ, ವೀರಣ್ಣ ಬಿಸಿರೊಟ್ಟಿ, ಸದಾನಂದ ಗುಡಿ, ಸುನಿಲ್ ಸಬನಿಸ ಮಂಗಾವತಿ ಮುಂತಾದವರು ಉಪಸ್ಥಿತರಿದ್ದರು.



ಕಿರುಸುದ್ದಿ

ಏ.6ರಂದು ಜಯಂತಿ

•**ಬೆಳಗಾವಿ:** ಶಿವಬಸವನಗರ ಕಾರಂಜಿಮಠದ ಶಿವಾನುಭವ ಮಂಟಪದಲ್ಲಿ ಏ.6ರದು ಸಂಜೆ 6 ಗಂಟೆಗೆ 298ನೇ ಶಿವಾನುಭವ ಹಾಗೂ ವೀರವಿರಾಗಿಣಿ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾನ್ನಿಧ್ಯವನ್ನು ಗುರುಸಿದ್ಧ ಸ್ವಾಮೀಜಿ ವಹಿಸಲಿದ್ದು, ಅಖಿಲ ಭಾರತ ವೀರಶೈವ ಮಹಾಸಭೆ ಜಿಲ್ಲಾ ಘಟಕದ ಅಧ್ಯಕ್ಷರಾದ ರತ್ನಪ್ರಭಾ ಬೆಲ್ಲದ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶರಣೆ ಪ್ರೇಮಕ್ಕ ಅಂಗಡಿ ಅವರು ಆಗಮಿಸಿ ಸಾರ್ಥಕ ಬದುಕಿಗೆ ಮಹಾದೇವಿಯಕ್ಕನ ಸಂದೇಶ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುವರು. ಶ್ರೀ ಕಾರಂಜಿಮಠದ ಕುಮಾರೇಶ್ವರ ಸಂಗೀತ ಪಾಠಶಾಲೆಯ ಮಕ್ಕಳಿಂದ ಪ್ರಾರ್ಥನೆ ಜರುಗುವುದು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಂದನೆ: ಶಾಸಕರ ವಿರುದ ದೂರು ನೀಡಲು ನಿರ್ಧಾರ

•**ಖಾನಾಪುರ:** ಇತ್ತೀಚೆಗೆ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ತಮಗೆ ಶಾಸಕ ವಿಠ್ಠಲ ಹಲಗೇಕರ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವಮಾನಿಸಿದ್ದಾರೆ ಎಂದು ತಾಲೂಕಿನ ಶಿರೋಲಿ ಪಿಕೆಪಿಎಸ್ ಅಧ್ಯಕ್ಷ ಕೃಷ್ಣಾ ಗುರವ ಆರೋಪಿಸಿದ್ದಾರೆ.

ಡೊಂಗರಗಾಂವ ಗ್ರಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಹಲಗೇಕರ ಅವರೊಂದಿಗೆ ವೇದಿಕೆ ಹಂಚಿಕೊಂಡ ತಾವು ಅವರಿಗೆ ಶಿರೋಲಿ ಸೇರಿದಂತೆ ಅರಣ್ಯ ಭಾಗದ ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ಪಡಬೇಕು ಎಂದು ಆಗ್ರಹಿಸಿದ್ದು, ತಮ್ಮ ಭಾಷಣ ಮುಗಿದ ಬಳಿಕ ಭಾಷಣ ಆರಂಭಿಸಿದ ಹಲಗೇಕರ ಅವರು ವೇದಿಕೆಯಲ್ಲೇ ತಮ್ಮನ್ನು ಅವಾಚ್ಯವಾಗಿ ನಿಂದಿಸಿ ಅವಮಾನಿಸಿದ್ದಾರೆ. ಈ ವಿಷಯುವನ್ನು ನ್ಯಾಯಾಲಯದ ಗಮನಕ್ಕೆ ತರುವ ಮೂಲಕ ತಮಗಾಗಿರುವ ಅನ್ಯಾಯದ ವಿರುದ್ಧ ಹೋರಾಟ ನಡೆಸಲಾಗುತ್ತದೆ ಎಂದು ಕೃಷ್ಣಾ ಗುರವ ತಿಳಿಸಿದ್ದಾರೆ.

'ಡೊಂಗರಗಾಂವ ಕಾರ್ಯಕ್ರಮದಲ್ಲಿ ಕೃಷ್ಣಾ ಗುರವ ಅವರು ಪದೇ ಪದೇ ತಮ್ಮನ್ನು ಅವಮಾನಿಸಿದ್ದು, ಅಸಂಬದ್ಧ ಭಾಷೆಯನ್ನು ಬಳಸಿದ್ದಕ್ಕೆ ಪ್ರತಿಯಾಗಿ ನಾನೂ ಸಹ ಅವರಿಗೆ ನಿಂದಿಸಿ ಮುಂದಿನ ದಿನಗಳಲ್ಲಿ ನನ್ನ ತಂಟೆಗೆ ಬರದಂತೆ ಎಚ್ಚರಿಸಿದ್ದೇನೆ. ಆದರೆ ಎಲ್ಲರ ಮುಂದೆ ಅವಮಾನಿಸಿದ ವ್ಯಕ್ತಿಯ ಕ್ರಮವನ್ನು ಖಂಡಿಸುತ್ತೇನೆ ಎಂದು ಶಾಸಕ ವಿಠ್ಠಲ ಹಲಗೇಕರ ತಿಳಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆ

•**ಬೆಳಗಾವಿ:** ಭಾರತ ರತ್ನ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿಯ ನಿಮಿತ್ತ 2026ನೇ ವರ್ಷದಲ್ಲಿ ಭವ್ಯೋತ್ಸವವನ್ನು ಆಚರಿಸುವ ನಿರ್ಧಾರವನ್ನು ಬೆಳಗಾವಿಯಲ್ಲಿ ಕೈಗೊಳ್ಳಲಾಗಿದೆ. ಈ ಸಂಬಂಧ ನಡೆದ ಸಭೆಯಲ್ಲಿ ಹೊಸ ಪದಾಧಿಕಾರಿಗಳನ್ನು ಏಕಮತದಿಂದ ಆಯ್ಕೆ ಮಾಡಲಾಗಿದೆ.ನಗರದ ಅಂಬೇಡ್ಕರ್ ಉದ್ಯಾನದಲ್ಲಿ ವಿವಿಧ ಸಾಮಾಜಿಕ ಸಂಘಟನೆಗಳ ಪದಾಧಿಕಾರಿಗಳು, ಜಯಂತ್ಯುತ್ಸವ ಸಮಿತಿ ಸದಸ್ಯರು ಮತ್ತು ದಲಿತ ಸಮುದಾಯದ ಮುಖಂಡರ ಸಮ್ಮುಖದಲ್ಲಿ ಈ ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಹೊಸ ಪದಾಧಿಕಾರಿಗಳನ್ನು ಏಕಮತದಿಂದ ಆಯ್ಕೆ ಮಾಡಲಾಗಿದೆ. ಮಲ್ಲೇಶ ಚೌಗುಲೆ ಅವರನ್ನು ಅಧ್ಯಕ್ಷರಾಗಿ, ರಾಜು ಕಲ್ಲೇಕಣ್ಣವರ, ಸಂತೋಷ ಕಾಂಬಳೆ ಮತ್ತು ಮನೋಜ್ ಹಿತಲಮಣಿ ಅವರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಆಕಾಶ ಹಲ್ಗೇಕರ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಆನಂದ ಕೊಳ್ಕರ್ ಅವರನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಮೂವರು ಆರೋಪಿಗಳ ಬಂಧನ

•**ಬೆಳಗಾವಿ:** ಸಾರ್ವಜನಿಕ ಸ್ಥಳಗಳಲ್ಲಿ ಮಟಕಾ ಜೂಜಾಟ ನಡೆಸುತ್ತಿದ್ದ ಅಡ್ಡೆಗಳ ಮೇಲೆ ಮಾರ್ಕೆಟ್ ಹಾಗೂ ಕಾಕತಿ ಠಾಣೆಯ ಪೊಲೀಸರು ದಾಳಿ ನಡೆಸಿದ್ದು, ಪ್ರಮುಖ ಆರೋಪಿಗಳನ್ನು ಹಣದ ಸಮೇತ ಬಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.ಬೆಳಗಾವಿಯ ದೇಶಪಾಂಡೆ ಗಲ್ಲಿಯಲ್ಲಿ ಸಾರ್ವಜನಿಕರಿಂದ ಮಟಕಾ ಹಣ ಸಂಗ್ರಹಿಸುತ್ತಿದ್ದ ಮಂಜುನಾಥ ಯಲ್ಲಪ್ಪ ತಿಗಡಿಯನ್ನು ಕಾಕತಿ ಪಿಎಸ್‌ಐ ಹುಸೇನಸಾಬ ಕೆರೂರ ಮತ್ತು ತಂಡ ಬಂಧಿಸಿ, ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ. ಇನ್ನೊಂದೆಡೆ ಮಣ್ಣೂರಿನ ಡೈಯಟ್ ಕಾಲೇಜ್ ಬಳಿ ಮಟಾ ಆಡಿಸುತ್ತಿದ್ದ ಭಜರಂಗ ಅಶೋಕ ಕದಮ ಹಾಗೂ ಅಜಿತ ಮಾರುತಿ ಡೋಣಕರಿ ಎಂಬುವವರನ್ನು ಕಾಕತಿ ಪಿಎಸ್‌ಐ ಮೃತ್ಯುಂಜಯ ಮಠದ ಅವರ ತಂಡ ದಾಳಿ ಮಾಡಿ ಸೆರೆಹಿಡಿದಿದೆ. ಬಂಧಿತರಿಂದ ನಗದು ಹಾಗೂ ಮಟಕಾ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದ್ದು, ಕೆ.ಪಿ. ಕಾಯ್ದೆಯಡಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಕರ್ತವ್ಯದಕ್ಷತೆ ಮೆರೆದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಗರ ಪೊಲೀಸ್ ಆಯುಕ್ತರು ಮತ್ತು ಡಿಸಿಪಿಯವರು ಶ್ಲಾಘಿಸಿದ್ದಾರೆ.



ಯಮಕನಮರಡಿ: ಯ.ವಿ ಸಂಘದ ಪದವಿ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿ ಮಾರ್ಗದರ್ಶನ ಘಟಕ ವಿ ಮತ್ತು ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರ, ಕರಗುಪ್ಪಿಯಲ್ಲಾಪುರ ಇವುಗಳ ಸಂಯುಕ್ತ ಆಶ್ರಯದಲ್ಲಿ ಯುವಕ-ಯುವತಿಯರಿಗಾಗಿ ವಿವಾಹ ಪೂರ್ವ ತಿಳುವಳಿಕೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು.

ಸಮಾಜದಲ್ಲಿ ಶಿಕ್ಷಕರ ಪಾತ್ರ ದೊಡ್ಡದು: ನಾಯ್ಕ

•**ಬೆಳಗಾವಿ:** ನಿವೃತ್ತ ಶಿಕ್ಷಕರನ್ನು ಆತ್ಮೀಯವಾಗಿ ಬೀಳ್ಕೊಡುತ್ತಿರುವುದು ಉತ್ತಮ ಕಾರ್ಯ. ಮಕ್ಕಳಿಗೆ ಪಾಠ ಹೇಳಿ, ಮಕ್ಕಳ ಬದುಕಿಗೆ ಬೇಕಾದ ಶಾಲೆ ಶಿಕ್ಷಕರನ್ನು ಎಂದಿಗೂ ಮರೆಯಬಾರದು. ಜೀವನದ ಕೊನೆ ಕ್ಷಣದವರೆಗೂ ಅವರಿಗೆ ಋಣಿಗಳಾಗಬೇಕು ಎಂದು ಶಿಕ್ಷಕಿ ಆಶಾ ನಾಯ್ಕ ಹೇಳಿದರು. ಸರ್ಕಾರಿ ಶಾಲಾ ಶಿಕ್ಷಕರ ಬಳಗದ ವತಿಯಿಂದ ನಗರದ ಬಿಕೆ ಕಂಗ್ರಾಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ ಎಸ್.ಎಸ್. ವನ್ನುರ ಅವರನ್ನು ಸನ್ಮಾನಿಸಿ, ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು. ಇಂದಿನ ಶಿಕ್ಷಣ ಪದ್ಧತಿ ಸಾಕಷ್ಟು ಬದಲಾಗಿದೆ. ಎಲ್ಲಾ ಒತ್ತಡಗಳ ನಡುವೆ ಹಲವಾರು ಸವಾಲುಗಳನ್ನು ಎದುರಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ವಿಷಯ ಎಂದರು.ಶಾಹು ನಗರದ ಸರಕಾರಿ ಪ್ರೌಢಶಾಲೆ ಶಿಕ್ಷಕ ವೃಂದ, ಮರಾಠಿ ಶಾಲೆ ಗುರುವೃಂದ ಮತ್ತು ಅಡುಗೆ ಸಿಬ್ಬಂದಿ ಶೋಭಾ ತಳವಾರರಿಂದ ನಿವೃತ್ತ ಶಿಕ್ಷಕ ಎಸ್.ಎಸ್. ವನ್ನುರ ಸನ್ಮಾನ ಮಾಡಲಾಯಿತು.4ನೇ ವರ್ಗದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಎಸ್.ಡಿ.ಎಂ. ಸಿಅಧ್ಯಕ್ಷ ರುದ್ರಪ್ಪ ಬಳಕುಂದಿ ಅಧ್ಯಕ್ಷತೆ ವಹಿಸಿದ್ದರು. ನಗರ ಅಧ್ಯಕ್ಷ ಅರುಣ ಪಾಟೀಲ, ನಮಿತಾ ಕಾಂಬಳೆ, ಬಿ. ವೈ. ಹಿತಾರಗೌಡರ್, ಕರ್ನಾಟಕ ರಾಜ್ಯ ಬರಹಗಾರರ ಸಂಘದ ಗ್ರಾಮೀಣ ಅಧ್ಯಕ್ಷೆ ಎಸ್. ಎನ್. ಉಪ್ಪಿನ, ಸಾವಿತ್ರಿ ಬಾಯಿ ಫುಲೆ ಸಂಘದ ಪದಾಧಿಕಾರಿಗಳಾದ ಶಾಬಾಷ್ ಖಾನ್, ಮರಾಠಿ ಶಾಲೆಯ ಬಾಂದುರ್ಗೆ, ಭಾರತಿ ಸೊಪ್ಪಿಮಠ, ಎಸ್.ಎಂ. ಅಂಗಡಿ, ಎಸ್‌ಡಿಎಂಸಿ ಸದಸ್ಯರು ಟಕ್ಕೇಕರ್ ಬಾಳಿಗಟ್ಟಿ ಹಳೆಯ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಬೆಳಗಾವಿ: ಸರ್ಕಾರಿ ಶಾಲಾ ಶಿಕ್ಷಕರ ಬಳಗದ ವತಿಯಿಂದ ನಗರದ ಬಿಕೆ ಕಂಗ್ರಾಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ ಎಸ್.ಎಸ್. ವನ್ನುರ ಅವರನ್ನು ಸನ್ಮಾನಿಸಲಾಯಿತು.ಎಸ್.ಡಿ.ಎಂ. ಸಿಅಧ್ಯಕ್ಷ ರುದ್ರಪ್ಪ ಬಳಕುಂದಿ ಅಧ್ಯಕ್ಷತೆ ವಹಿಸಿದ್ದರು.

ಎಲ್ಲರೂ ನಿಸ್ವಾರ್ಥ ಸೇವೆ ಸಲ್ಲಿಸಿ

•**ರಾಯಬಾಗ:** ಸದ್ಭಕ್ತರು ತನು, ಮನ, ಧನಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸಿದರೆ ಮಠಗಳು ಬೆಳೆಯಲು ಸಾಧ್ಯ ಎಂದು ಬೆಲ್ಲದ ಬಾಗೇವಾಡಿ ಮಹಾಂತೇಶ್ವರ ವಿರಕ್ತಮಠದ ಶಿವಾನಂದ ಸ್ವಾಮೀಜಿ ಹೇಳಿದರು.

ತಾಲೂಕಿನ ಭೆಂಡವಾಡ ಗ್ರಾಮದ (ಗುಡ್ಡದ) ರೇವಣಸಿದ್ದೇಶ್ವರ ವಿರಕ್ತಮಠ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಧಾರ್ಮಿಕ ಶಿವಾನುಭವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಇಲ್ಲಿನ ರೇವಣಸಿದ್ದೇಶ್ವರ ವಿರಕ್ತಮಠ ಪುಣ್ಯಕ್ಷೇತ್ರ ಅಭಿವೃದ್ಧಿಗಾಗಿ ಗುರುಸಿದ್ಧ ಶ್ರೀಗಳ ಕೊಡುಗೆ ಅಪಾರವಾಗಿದೆ ಎಂದರು.

ಕಂಕಣವಾಡಿ ಮಾರುತಿ ಶರಣರು ಮಾತನಾಡಿ, ಪರಮಾತ್ಮ ಶುದ್ಧ ಕಾಯಕ, ಭಕ್ತಿ ಒಲಿಯುತ್ತಾನೆ. ಗುರುವಿನ ಮಾರ್ಗದರ್ಶನದಲ್ಲಿನಡೆದರೆ ಮಾನವನ ಜನ್ಮ ಸಾರ್ಥಕವಾಗುವುದು ಎಂದರು.



ಭೆಂಡವಾಡ ರೇವಣಸಿದ್ದೇಶ್ವರ ವಿರಕ್ತಮಠದ ಗುರುಸಿದ್ಧ ಸ್ವಾಮಿಜೀಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಘಟಪ್ರಭಾ ಹೊಸಮಠದ ವಿರೂಪಾಕ್ಷ ಸ್ವಾಮೀಜಿ, ವಕೀಲ ವಿ.ಎಸ್.ಪೂಜೇರಿ, ಸಂಗಪ್ಪ ಬೆನ್ನಾಳೆ, ರೇವಣು ಶಿವಾಪೂರೆ, ರೇವಣು ದುಪದಾಳೆ, ಅಳಗೊಂಡ ತಟ್ಟಿಮನಿ, ಸಾಗರ ಪೂಜೇರಿ, ಮಹಾದೇವ ಲಕ್ಷ್ಮೇಶ್ವರ, ಸಂಜಯ ಹಂಜೆ, ರವಿ ಪೂಜಾರಿ, ಹನುಮಂತ ಪಿಡಾಯಿ ಸೇರಿ ಸೇರಿ ಭೆಂಡವಾಡ, ಕಟಕಭಾವಿ, ಮಂಟೂರ, ಮಾವಿನಹೊಂಡ, ದೇವಾಪೂರಹಟ್ಟಿ ಗ್ರಾಮಗಳ ಭಕ್ತಾದಿಗಳು ಇದ್ದರು.

ಏ.25ರಿಂದ ಶ್ರೀ ಕರೆಸಿದ್ಧೇಶ್ವರ ಜಾತ್ರೆ

•**ಹಾರೂಗೇರಿ:** ಪಟ್ಟಣದ ಆರಾಧ್ಯ ದೈವ, ಪ್ರಾಚೀನ ಕಾಲದ ಸಿದ್ಧ ಪರಂಪರೆಯ ಶ್ರೀ ಕರೆಸಿದ್ಧೇಶ್ವರ ದೇವರ ಜಾತ್ರಾ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಲಾಯಿತು. ಏ. 25ರಿಂದ 27ವರೆಗೆ ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ.

ಏ.25ರಂದು ಸಂಜೆ 6ಗಂಟೆಗೆ ಶ್ರೀ ಕರೇಸಿದ್ದೇಶ್ವರ ದೇವರ ಮಹಾಪೂಜೆ ಮತ್ತು ಅಭಿಷೇಕ ನೆರವೇರುವುದು.

ಬೆಳಿಗ್ಗೆ 10 ಗಂಟೆಗೆ ಕರಿಕಟ್ಟುವುದು. ಸಂಜೆ 4 ಗಂಟೆಗೆ ವಿವಿಧ ಊರುಗಳಿಂದ ಬಂದ ಪಾಲಗಗಳನ್ನು ಬರಮಾಡಿಕೊಳ್ಳುವುದು. ನಂತರ 5 ಗಂಟೆಗೆ ಒಳಗಿನ ಗುಡಿಯ ಪಲ್ಲಕ್ಕಿಯನ್ನು ಹೊರಗಿನ ಗುಡಿಗೆ ಸ್ವಾಗತಿಸಿಕೊಳ್ಳುವುದು, ದಶಮಿ ಏ.26ರಂದು ಸಂಜೆ 4 ಗಂಟೆಗೆ ವಿವಿಧ ವಾದ್ಯಮೇಳ, ಕುಂಭಮೇಳ, ಕೊತ್ವಾಲಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಶ್ರೀ ಕರೇಸಿದ್ದೇಶ್ವರ ದೇವರ ಪಲ್ಲಕ್ಕಿ ಉತ್ಸವ ಹಾಗೂ ಕರೆಪ್ಪ ಶಿವರಾಯಿ ಪೂಜೇರಿ ಇವರಿಂದ ಅಲಗಹಾಯುವುದು, ಮತ್ತು ಜಾತ್ರಾಮಹೋತ್ಸವಕ್ಕೆ ವಿಶೇಷ ದಾನ ಸಲ್ಲಿಸಿದ ಭಕ್ತಾದಿಗಳಿಗೆ ಸನ್ಮಾನ ಕಾರ್ಯಕ್ರಮ ಇರುತ್ತದೆ. ಏಕಾದಶಿ ಏ.27ರಂದು ಬೆಳಿಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ಡೊಳ್ಳಿನವಾಲಗ ಬಾರಿಸುವುದು. 11 ಗಂಟೆಯಿಂದ 03 ಗಂಟೆಯವರೆಗೆ ಡೊಳ್ಳಿನ ಕೈ ಪಟ್ಟು ನುಡಿಸುವುದು ಹಾಗೂ ದಟ್ಟಿ ಕುಣಿಯುವುದು, ಮಧ್ಯಾಹ್ನ 3 ಗಂಟೆಗೆ ಕರಿ ಹರಿಯುವುದು ಈ ರೀತಿಯಾಗಿ ವಿವಿಧ ಸಾಂಸ್ಕೃತಿಕ,ಆಧ್ಯಾತ್ಮಿಕ ಕಾರ್ಯಕ್ರಮಗಳು ಸಾಂಗವಾಗಿ ಪೂರ್ಣಗೊಳ್ಳಲಿದ್ದು, ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಧರ್ಮಿಷ್ಟ ಶ್ರೀ ಕರೇಸಿದ್ದೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ ಸಿಲಾಗಿದೆ. ಜಾತ್ರಾ ಮಹೋತ್ಸವದಲ್ಲಿ 3 ದಿನಗಳ ಪರ್ಯಂತರ ಅನ್ನದಾಸೋಹ ಇರುತ್ತದೆ ಎಂದು ಪತ್ರಿಕಾ ಗೋಷ್ಠಿಯಲ್ಲಿ ಕಮಿಟಿ ಪದಾಧಿಕಾರಿಗಳು ತಿಳಿಸಿದರು.ಈ ಸಂದರ್ಭದಲ್ಲಿ ಮಾರುತಿ ಪೂಜೇರಿ,ಗೂಳಪ್ಪ ಸಿದ್ದಪ್ಪ ಪೂಜೇರಿ, ಕರೆಪ್ಪ ಶಿ.ಪೂಜೇರಿ, ಕರೆಪ್ಪ ಪ್ರಭು ಪೂಜೇರಿ,ಸಿದ್ರಾಮ ಶೇಗುಣಸಿ,ಬೀರಪ್ಪ ರಾಮಪ್ಪ ಪೂಜೇರಿ,ಸಿದ್ದಪ್ಪ ವಿ ಪೂಜೇರಿ,ಪ್ರಕಾಶ ಕುರಿ,ಬಸವರಾಜ ಪೂಜೇರಿ,ಮಾಳಪ್ಪ ಪೂಜೇರಿ,ಕರೆಪ್ಪ ಯಂಕಪ್ಪ ಪೂಜೇರಿ, ಸಿದ್ಧಾರೂಢ ಗೂಳಪ್ಪ ಪೂಜೇರಿ,ಬೀರಪ್ಪ ತಿಪ್ಪಣ್ಣ ಪೂಜೇರಿ,ಸಂತೋಷ ಕ.ಪೂಜೇರಿ,ಕುಮಾರ ಕ.ಪೂಜೇರಿ,ಮಲ್ಲಪ್ಪ ನರಟ್ಟಿ, ಸತ್ಯಪ್ಪ ಗೂ.ಪೂಜೇರಿ ಮುಂತಾದವರು ಉಪಸ್ಥಿತರಿದ್ದರು.



ರಾಕಸಕೊಪ್ಪ ಜಲಾಶಯದಲ್ಲಿನ ನೀರಿನ ಮಟ್ಟ ಕುಸಿತ: ಆತಂಕ

•**ಬೆಳಗಾವಿ:** ನಗರದ ಜನತೆಯ ದಾಹ ನೀಗಿಸುವ ಪ್ರಮುಖ ನೀರಿನ ಮೂಲವಾದ ರಾಕಸಕೊಪ್ಪ ಜಲಾಶಯದಲ್ಲಿ ಎಪ್ರಿಲ್ ಆರಂಭದಲ್ಲೇ ನೀರಿನ ಮಟ್ಟ ಗಣನೀಯವಾಗಿ ಕಡಿಮೆ ಯಾಗಿರುವಿದರಿಂದ ಬೆಳಗಾವಿ ನಗರದ ಜನತೆಯಲ್ಲಿ ಕುಡಿಯುವ ಬರ ಬರಲಿದೆ ಎಂದು ತ ಆತಂಕಕ್ಕೆ ಒಳಗಾಗಿದ್ದಾರೆ.

ತೀವ್ರಗೊಳ್ಳುತ್ತಿರುವ ಬೇಸಿಗೆಯ ಬಿಸಿಲಿನಿಂದಾಗಿ ಜಲಾಶಯ ಬತ್ತುತ್ತಿದ್ದು, ಮುಂಬರುವ ದಿನಗಳಲ್ಲಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಭೀತಿ ಜನರಲ್ಲಿ ಕಾಡುತ್ತಿದೆ.

ಎಪ್ರಿಲ್ ತಿಂಗಳ ಆರಂಭದಲ್ಲಿಯೇ ಬೆಳಗಾವಿ ನಗರದ ಜೀವನಾಡಿ ರಾಕಸಕೊಪ್ಪ ಜಲಾಶಯದ ನೀರಿನ ಮಟ್ಟ ಆತಂಕಕಾರಿ ಮಟ್ಟಕ್ಕೆ ಇಳಿಕೆಯಾಗಿದೆ. ಬೇಸಿಗೆಯ ತೀವ್ರತೆಯಿಂದಾಗಿ ಜಲಾಶಯದ ಒಳಹರಿವು ಸ್ಥಗಿತಗೊಂಡಿದ್ದು, ಪ್ರಸ್ತುತ ಇರುವ ಅಲ್ಪ ಪ್ರಮಾಣದ ನೀರು ನಗರದ ಜನರಲ್ಲಿ ಆತಂಕ ಮೂಡಿಸಿದೆ. ಜಲಾಶಯವು ಬತ್ತಿ ಹೋಗುತ್ತಿರುವ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಹಾಗೂ ನೀರು ಸರಬರಾಜು ಮಂಡಳಿಗೆ ಈಗಿನಿಂದಲೇ ಸಮರ್ಪಕ ನೀರು ನಿರ್ವಹಣೆ ಮಾಡುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ.

ನಗರಕ್ಕೆ ಕುಡಿಯುವ ನೀರು ಪೂರೈಸುವ ಈ ಪ್ರಮುಖ ಮೂಲ ಬರಿದಾಗುತ್ತಿರುವುದು ಜನರಲ್ಲಿ ಆತಂಕ ಒಂದು ವೇಳೆ ಮಳೆ ವಿಳಂಬವಾದರೆ ಬೆಳಗಾವಿ ನಗರವು ತೀವ್ರ ಜಲಕ್ಷಾಮ ಎದುರಿಸುವ ಸಾಧ್ಯತೆ ಎದುರಾಗಿದೆ.

ಜನಗಣತಿಯೊಂದು ದೇಶ ಸೇವೆ: ಜಿನೇಂದ್ರ

•**ಮುಗಳಖೋಡ:** ಜನಗಣತಿ ಎಂಬುವುದು ಸಮಾಜದ ನೀಲ ನಕ್ಷೆ ಇದ್ದಂತೆ, ಇದು ಒಂದು ದೇಶ ಸೇವೆಯಾಗಿದೆ. ಇದರಲ್ಲಿ ಎರಡು ವಿಧಗಳು ಒಂದು ಸ್ವಯಂ ಗಣತಿ, ಇನ್ನೊಂದು ಸಾಮಾನ್ಯ ಗಣತಿ ಎಂಬ ಮಾಹಿತಿ ನೀಡಿ ಏಪ್ರಿಲ್ 16 ರಿಂದ ಮೇ 15ರವರೆಗೆ ಮನೆ ಪಟ್ಟಿ ಮಾಡಲು ಅವಶ್ಯವಾಗಿರುವ 34 ಪ್ರಶ್ನಾವಳಿಗಳ ಕುರಿತು ಗಣತಿ ದಾರರಿಗೆ ವಿವರಣಾತ್ಮಕವಾಗಿ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಿನೇಂದ್ರ ನೀಲಜಗಿ ತರಬೇತಿ ನೀಡಿದರು.

ಅವರು ಪಟ್ಟಣದ ಶ್ರೀ ಚವಿವ ಸಂಘದ ಡಾ. ಸಿ ಬಿ ಕುಲಿಗೋಡ ಪದವಿ ಮಹಾವಿದ್ಯಾಲಯದಲ್ಲಿ ಮುಗಳಖೋಡ ಪುರಸಭೆ, ಕಂಕಣವಾಡಿ ಪಟ್ಟಣ ಪಂಚಾಯಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಗಣತಿದಾರರಿಗೆ ಜನಗಣತಿ ತರಬೇತಿ ಕಾರ್ಯಕ್ರಮದ ಎರಡನೇ ದಿನದ ತರಬೇತಿದಾರರಾಗಿ ಆಗಮಿಸಿ ಮಾತನಾಡಿದರು.

ಭೂಪಾಲ ಮಾನೆ, ಪ್ರಾಥಮಿಕ ಶಾಲಾ ಚಿಕ್ಕೋಡಿ ಜಿಲ್ಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಪೂಜಾರಿ,

ಮುಗಳಖೋಡ ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಪವಾಡಿಶೆಟ್ಟಿ ಎಲ್ಲರನ್ನು ಸ್ವಾಗತಿಸಿ ಜನಗಣತಿ ಉದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಈಸಂದರ್ಭದಲ್ಲಿಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಿನೇಂದ್ರ ನೀಲಜಗಿ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಗಣಪತಿ ಬಡಿಗೇರ್, ಪ್ರಾಥಮಿಕ ಶಾಲೆಯ ಚಿಕ್ಕೋಡಿ ಜಿಲ್ಲಾ ಕಾರ್ಯದರ್ಶಿ ಸಿ.ಆರ್. ಪೂಜಾರಿ, ತರಬೇತುದಾರರಾದ ಭೋಪಾಲ್ ಮಾನೆ, ಮುಗಳಖೋಡ ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಪವಾಡಿಶೆಟ್ಟಿ, ಕಂಕಣವಾಡಿ ಪಟ್ಟಣಪಂಚಾಯತ ಮುಖ್ಯಾಧಿಕಾರಿ ಶಿವಾನಂದ ಭೋಸಲೆ, ಪುರಸಭೆ ಸಿಬ್ಬಂದಿ ಮಹೇಶ ಚೌಗಲಾ, ಕೆಂಚಪ್ಪ ಹಳಿಂಗಳಿ, ಮುತ್ತು ಯರಡತ್ತಿ, ಎಂ.ಎ.ಬಂಡಿ, ಕಂಕಣವಾಡಿ ಮುಗಳಖೋಡ ಪ್ರಾಪ್ತಿಯಲ್ಲಿ ಬರುವ ಗಣತಿದಾರರು ಮತ್ತು ಮೇಲ್ವಿಚಾರಕರು ಹಾಗೂ ಪೌರಕಾರ್ಮಿಕರಾದ ಅನಿಲಕುಮಾರ ನಡುವಿನಕೇರಿ, ಮಾರುತಿ ಮಾದರ, ಲಲಿತಾ ಕಾಂಬಳೆ, ಸೇರಿದಂತೆ ಇತರರು ಇದ್ದರು.



ಜಾತ್ರೆಗಳು ಸಾಮರಸ್ಯದ ಸಂಕೇತ, ಸೌಹಾರ್ದ ಬದುಕಿಗೆ ಪ್ರೇರಣೆ

•**ತೆಲಸಂಗ:** ಜಾತ್ರೆ ಎನ್ನುವುದು ಕೇವಲ ಆಚರಣೆಯಲ್ಲ, ಅದು ದುಡಿದು ದಣಿದ ಮನಸ್ಸುಗಳನ್ನು ಹಗುರಗೊಳಿಸುವ ಸಂಭ್ರಮದ ಹಬ್ಬ ಎಂದು ಕಾಂಗ್ರೆಸ್ ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಲಕ್ಷ್ಮೀದೇವಿ (ತಳವಾರ ಪಟ್ಟಿ) ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ದಿನವಿಡೀ ಕಾಯಕದಲ್ಲಿ ಮಗ್ನರಾಗಿರುವ ಜನರಿಗೆ ನೆಮ್ಮದಿ ಮತ್ತು ಮನರಂಜನೆ ನೀಡುವಲ್ಲಿ ಇಂತಹ ಗ್ರಾಮೀಣ ಜಾತ್ರೆಗಳು ಪ್ರಮುಖ ಪಾತ್ರ ವಹಿಸುತ್ತವೆ. ನಮ್ಮ ದೇಶದ ಭವ್ಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವಲ್ಲಿ ಜಾತ್ರೆಗಳ ಕೊಡುಗೆ ಅಪಾರ. ಭೇದ-ಭಾವ ಮರೆತು ನಾವೆಲ್ಲರೂ ಒಂದೇ ಕುಟುಂಬದಂತೆ ಬಾಳಲು ಇವು ಪ್ರೇರಣೆ ನೀಡುತ್ತವೆ. ಪರಸ್ಪರ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ವೃದ್ಧಿಸುವ ಈ ವೇದಿಕೆಗಳು ಸಮಾಜದ ಶಾಂತಿ-ನೆಮ್ಮದಿಯ ಕೊಂಡಿಗಳಾಗಿವೆ. ಮನಸ್ಸಿನ ಭಾರಗಳನ್ನು ಕಳೆದುಕೊಂಡು, ಹೊಸ ಉತ್ಸಾಹದೊಂದಿಗೆ ಸಾಧನೆಯತ್ತ ಮುನ್ನುಗ್ಗಲು ನಮ್ಮ ನಂಬಿಕೆಗಳ ಆರಾಧನೆ ಅತ್ಯವಶ್ಯಕವಾಗಿದೆ ಎಂದರು.



ಗ್ರಾಮದ ಹಿರಿಯರಾದ ಡಾ.ಬಿ.ಎಸ್.ಕಾಮನ್, ಶ್ರೀಶೈಲ ಶೆಲ್ಲೆಪ್ಪಗೋಳ, ಆನಂದ ಥೈಕಾರ, ಎಲ್ಲಪ್ಪ ತಳವಾರ, ದಯಾನಂದ ದೇಸಂಗಿ, ಸಂಗಮೇಶ ಉಂಡೋಡಿ, ಸುನೀಲ ಉಂಡೋಡಿ, ಪ್ರಕಾಶ್ ಮೋರೆ, ಅಶೋಕ್ ಕಟವಾಣಿ, ಬಸವರಾಜ ಕಟವಾಣಿ, ಭೀಮಣ್ಣ ದೇಸಂಗಿ ಸೇರಿದಂತೆ ಅನೇಕ ಗಣ್ಯರು ಹಾಗೂ ನೂರಾರು ಭಕ್ತಾದಿಗಳು ಉಪಸ್ಥಿತರಿದ್ದರು.

ಗ್ರಾಮದ ಮೊದಲ ಮಹಿಳಾ ಪಿಎಸ್‌ಐಗೆ ಅದ್ಧೂರಿ ಸ್ವಾಗತ

•**ಮುಗಳಖೋಡ:** ಸಮೀಪದ ಹಂದಿಗುಂದ ಗ್ರಾಮದ ರೈತನ ಮಗಳು ಕುಮಾರಿ ಭಾಗ್ಯಶ್ರೀ ಸಿದ್ದಪ್ಪ ಚೌಗಲಾ ರಾಜ್ಯ ಪೊಲೀಸ್ ಇಲಾಖೆಯ ಮಹಿಳಾ ಪಿಎಸ್‌ಐ ಆಗಿ ಆಯ್ಕೆಯಾಗಿ ಹಲವು ತಿಂಗಳುಗಳ ಕಾಲ ಇಲಾಖೆಯ ನಿಯಮದಂತೆ ತರಬೇತಿ ಪಡೆದು ಮೊಟ್ಟ ಮೊದಲ ಬಾರಿಗೆ ಗ್ರಾಮಕ್ಕೆ ವಾಪಸಾದ ಹಿನ್ನೆಲೆಯಲ್ಲಿ ಸಂಭ್ರಮದಿಂದ ಮಹಿಳೆಯರು ಆರತಿ ಮಾಡುವುದರ ಮುಖೇನ ಬರಮಾಡಿಕೊಂಡರು. ಊರಿನ ಹನುಮಾನ ದೇವರ ದೇವಸ್ಥಾನದಲ್ಲಿ ಮನೆಯವರು ಮತ್ತು ಅಕ್ಕಪಕ್ಕದ ನಿವಾಸಿಗಳು ಊರಿನ ಮೊದಲ ಲೇಡಿ ಪಿಎಸ್‌ಐ ಭಾಗ್ಯಶ್ರೀ ಅವರಿಗೆ ಭರ್ಜರಿಯಾಗಿ ಸ್ವಾಗತ ಮಾಡಿದರು.

ಮೈಸೂರು ಪೇಟಾ ತೊಡಿಸಿ, ಶಾಲು ಹೊದಿಸಿ, ಹಾರ ಹಾಕಿ, ಸಿಹಿ ತಿನ್ನಿಸಿ ಅಭಿನಂದನಾಪೂರ್ವಕವಾಗಿ ಬರ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಲ್ಲಪ್ಪ ಚೌಗಲಾ, ಶಾಂತವ್ವ ಚೌಗಲಾ, ಸಾವಿತ್ರಿ ಚೌಗಲಾ, ಧರೆಪ್ಪ ಚೌಗಲಾ, ಶ್ರೀದೇವಿ ಚೌಗಲಾ, ಮಹಾನಂದಾ ಚೌಗಲಾ, ಗಂಗವ್ವ ಚಿಲ್ಲಾಳಶೆಟ್ಟಿ, ಗೀತಾ ಬಂದಿ, ಭಾರತಿ ಪರಮಶೆಟ್ಟಿ, ರೇಣುಕಾ ಸಿದ್ನಾಳ, ನಂದಾ ಗಸ್ತಿ, ಸಂಕಲ್ಪ ಸಿದ್ನಾಳ ಇದ್ದರು.



ಮಣ್ಣಿನ ಮಡಿಕೆಗೆ ಆಧುನಿಕತೆಯ ಸ್ಪರ್ಶ !

▸**ಸಂತೋಷ ಕುಮಾರ ಕಾಮತ್**

ದಿಗಂತ ವಿಶೇಷ

•**ಮಾಂಜರಿ:** ಆಧುನಿಕತೆ ಭರಾಟೆಯಲ್ಲಿ ಹಿಂದಿನ ಕಾಲದ ಅನೇಕ ವಸ್ತುಗಳು ಮೂಲೆ ಗುಂಪಾಗುತ್ತಿರುವ ಇಂದಿನ ದಿನಗಳಲ್ಲಿ ಮಣ್ಣಿನ ಮಡಿಕೆ ಆಧುನಿಕತೆಗೆ ತಕ್ಕಂತೆ ಬದಲಾಗಿ ಮಾರುಕಟ್ಟೆಯ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಬೇಡಿಕೆಯಲ್ಲಿದೆ.

ಪ್ರಸಕ್ತ ವರ್ಷದಲ್ಲಿ ಇನ್ನೂ ಮಳೆಯಾಗದೆ, ಬಿಸಿಲ ಧಗೆ, ಸೆಖೆ ಹೆಚ್ಚುತ್ತಿದ್ದು ಬಹುತೇಕರು ಬಡವರ ಫ್ರಿಡ್ಜ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮಣ್ಣಿನ ಮಡಿಕೆಗೆ ಮೊರೆ ಹೋಗುತ್ತಿದ್ದು, ಬೀದಿ ಬದಿಗಳಲ್ಲಿ ಯಥೇಚ್ಚವಾಗಿ ಮಾರಾಟವಾಗುತ್ತಿದೆ. ಆಧುನಿಕತೆಗೆ ತಕ್ಕಂತೆ ಕುಂಬಾರ ಸಹ ತನ್ನ ಮಣ್ಣಿನ ವಸ್ತುಗಳ ರೂಪ ಬದಲಾಯಿಸಿ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಅಣಿಗೊಳಿಸಿದ್ದು, ಬೇಸಿಗೆ ದಾಹ ತೀರಿಸುವಲ್ಲಿ ಮುಖ್ಯ ಪಾತ್ರ ವಹಿಸಿವೆ. ಜನರು ಮಡಿಕೆ ನೀರು ಆರೋಗ್ಯಕ್ಕೆ ಪೂರಕ ಎಂದು ಅರಿತು ಮಣ್ಣಿನ ಮಡಿಕೆ ಉಪಯೋಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಣ್ಣಿನ ಮಡಿಕೆಗಳು ಇತ್ತೀಚೆಗೆ ಬೇಡಿಕೆ ಕಳೆದುಕೊಂಡರೂ ಬೇಸಿಗೆಯಲ್ಲಿ ಮಾತ್ರ ಮಡಿಕೆಗಳು ಮಾರುಕಟ್ಟೆಯಲ್ಲಿ ಅಸ್ತಿತ್ವವನ್ನ ಉಳಿಸಿಕೊಂಡಿವೆ. ಅಲ್ಲದೆ, ಅಡುಗೆ ಪರಿಕರಗಳಿಗೂ ಮತ್ತೆ ಮಣ್ಣಿನ ಮಡಿಕೆಗಳನ್ನು ಬಳಸುತ್ತಿರುವುದು ಗಮನಾರ್ಹ. ಆದರೂ ಮಡಿಕೆ ತಯಾರಿಸುವವರ ಬದುಕುಗಳು

ಮಾತ್ರ ಹಸನಾಗಲಿಲ್ಲ ಎಂಬ ಕೊರಗು ಕಾಡುತ್ತಿದೆ. ಗ್ರಾಮೀಣ ಭಾಗದ ಬಹುತೇಕ ಮನೆಗಳಲ್ಲಿ ಮನೆ ಹಿರಿಯರು ಆಗಲೂ, ಈಗಲೂ ಫ್ರಿಡ್ಜ್ ನೀರು ಬಳಸುವುದು ಕಡಿಮೆ. ಪ್ರತಿ ಬೇಸಿಗೆಯಲ್ಲೂ ಹೊಸ ಮಡಿಕೆ ತಂದು ನೀರಿಟ್ಟು ಕೊಂಡು ಕುಡಿಯುವುದನ್ನು ಬಿಟ್ಟಿಲ್ಲ. ಕೇವಲ 2ರಿಂದ 3 ತಿಂಗಳ ಕಾಲ ಮಣ್ಣಿನ ಮಡಿಕೆಗಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡೋ ಎಂಬಂತಾಗಿದೆ. ದಿನೇದಿನೇ ಬಿಸಿಲಿನ ಧಗೆ ಹೆಚ್ಚಾಗುತ್ತಿದ್ದು, ಇದೀಗ ಬಡವರ ಫ್ರಿಡ್ಜ್



ಮಣ್ಣಿನ ಮಡಿಕೆ ಸಹಕಾರಿಯಾಗಿದೆ. ವಿದ್ಯುತ್ ಚಿಂತೆಯಿಲ್ಲ, ಆರೋಗ್ಯದ ಸಮಸ್ಯೆಯಿಲ್ಲ, ಆರೋಗ್ಯ ತಜ್ಞರುಮಡಿಕೆ ನೀರನ್ನು ಬೆಂಬಲಿಸುತ್ತಾರೆ. ಮತ್ತೆ ಹಳೆಯ ಪಳೆಯುಳಿಕೆಗಳೇ ಚಿಗುರೊಡೆಯುತ್ತಿವೆ. ಮಣ್ಣಿನ ಮಡಿಕೆಗಳನ್ನು ಹೆಚ್ಚು ಹೆಚ್ಚು ಬಳಸುತ್ತಿರುವುದರಿಮದ ಕಂಬಾರ ವೃತ್ತಿಗೆ ಮರು ಜೀವ ಬಂದಾಂತಾಗಿದೆ.

ಗ್ರಾಮೀಣ ಪ್ರದೇಶ ಮತ್ತು ಹಳ್ಳಿಗಳಿಗೆ ಸಿಮೀತವಾಗಿರದೆ ಮಣ್ಣಿನ ಮಡಿಕೆ ಉಪಯೋಗ ಆಧುನಿಕ ಮಡಿಕೆಗಳಾಗಿ ಮಾಡಿ ನಗರ ಪ್ರದೇಶದಲ್ಲೂ ತಮ್ಮ ಛಾಪು ಮೂಡಿಸಿವೆ. ಕೆಲವರುಕುಂಬಾರ ವೃತ್ತಿಯನ್ನು ಬಿಟ್ಟರೂ ಕೆಲ ಕುಟುಂಬಗಳು ಅದೇ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿವೆ. ಗುಡಿ ಕೈಗಾರಿಕೆ ಕುಂಬಾರ ವೃತ್ತಿಗೆ ಸರ್ಕಾರದ ಪ್ರೋತ್ಸಾಹ ಅವಶ್ಯವಾಗಿದೆ. ಕುಂಬಾರ ಸಮುದಾಯ ಉಳಿಯಬೇಕಾದರೆ ವೃತ್ತಿ ಅವಲಂಬಿತರಿಗೆ ಸರ್ಕಾರ ವಾರ್ಷಿಕ ಪ್ರೋತ್ಸಾಹ ಶ್ರೀತ್ಸಾಹ ಧನ ಘೋಷಿಸಬೇಕು ಎಂಬುದು ಅವರ ಮನವಿ.

ಗ್ರಾಮೀಣ ಭಾಗದಲ್ಲಿ ಮಡಿಕೆಗಳಲ್ಲೇ ರಾಗಿ ಮುದ್ದೆ ಮಾಡಲಾಗುತ್ತಿತ್ತು. ಇದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದಿತ್ತು. ಬದಲಾವಣೆಯ ಭರಾಟೆಯಲ್ಲಿ ಸ್ಟೀಲ್ ಪಾತ್ರೆಗಳು ತಾಂಡವಾಡುತ್ತಿದೆ. ಯುವ ಪೀಳಿಗೆ ಮಣ್ಣಿನ ಮಡಿಕೆಗೆ ಪ್ರಾಮುಖ್ಯತೆ ನೀಡಬೇಕು.

■ **ಹಜರತಅಲಿ ಪಾನರಿ ಶಿಕ್ಷಣ ತಜ್ಞರು**

ಕುಂಬಾರಿಕೆ ಕುಲ ಕಸುಬು ಉಳಿಯಬೇಕಾದರೆ ಸರ್ಕಾರ ಸಮುದಾಯವನ್ನು ಗುರುತಿಸಿ ಕುಂಬಾರರ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ, ಸಾಲ ಸೌಲಭ್ಯ ಪ್ರೋತ್ಸಾಹ ಧನ ಸಹಾಯ ನೀಡಬೇಕು.

■ **ಚಂದ್ರಕಾಂತ್ ಹುಕ್ಕೇರಿ , ಸಾಮಾಜಿಕ ಹೋರಾಟಗಾರರು,**

ಪರಂಪರೆಯಿಂದ ಮಣ್ಣಿನ ಮಡಿಕೆ ತಯಾರಿಸಿಯೇ ಬದುಕು ಕಟ್ಟಿಕೊಂಡಿದ್ದೇವೆ.ಆದರೆ ಕಾಲಕ್ರಮೇಣ ಮಡಿಕೆಗಳ ಬೇಡಿಕೆ ಕಡಿಮೆಯಾಗಿ ಬದುಕು ದುಸ್ತರವಾಗಿದೆ. ಬದಕಲು ಪರ್ಯಾಯ ಮಾರ್ಗಗಳು ಕಂಡುಕೊಳ್ಳಲಾಗಿದೆ. ದೂರದ ಅರಸೀಕೆರೆ, ತುರುವೆಕರೆಗಳಿಂದ ಮಡಿಕೆ, ಕುಡಿಕೆ ಕೊಂಡು ತಂದು ಮಾರುತ್ತೇವೆ.

■ **ಗಂಗಾಧರ್ ಕುಂಬಾರ್ ಮಡಿಕೆ ಮಾರಾಟಗಾರರು**

ಗ್ರಾಮೀಣ ಪ್ರದೇಶದಲ್ಲಿ ಮನುಜ ಹುಟ್ಟಿನಿಂದಸಾವಿನವರೆಗೂ ಕುಂಬಾರರ ವಸ್ತುಗಳು ಬೇಕೆ ಬೇಕಾಗಿವೆ. ಸಂಪ್ರದಾಯಗಳು ಇನ್ನು ಜೀವಂತವಾಗಿವೆ. ಗ್ರಾಮೀಣ ಭಾಗದಲ್ಲಿ ಅನೇಕ ಕುಟುಂಬಗಳು ಅಡುಗೆ ಮಾಡುವ ಪರಿಕರಗಳಾಗಿ ಮಣ್ಣಿನ ಮಡಿಕೆಗಳನ್ನು ಬಳಸುತ್ತಿದ್ದರುಕಾಲಕ್ರಮೇಣ ಬದಲಾವಣೆ ಗಾಳಿಗೆ ಸಿಲುಕಿ ಇಂದು ಅಡುಗೆ ಮನೆಯಿಂದ ಮಣ್ಣಿನ ಮಡಿಕೆಗಳು ನಾಪತ್ತೆಯಾಗಿದ್ದರೂ ಮತ್ತೆ ತಲೆಯತ್ತುತ್ತಿವೆ.

ಅಂಬೇಡ್ಕರ್ ಜಯಂತಿ ಆಚರಣೆಗೆ ಸಿದ್ಧತೆ

•**ಬೆಳಗಾವಿ:** ಏಪ್ರಿಲ್ 14ರಂದು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಹರ್ಷೋಲ್ಲಾಸದಿಂದ ಆಚರಿಸಲು ಬೆಳಗಾವಿ ಮಹಾನಗರ ಪಾಲಿಕೆ ನಿರ್ಧಾರ ಕೈಗೊಂಡಿದೆ. ನೂತನವಾಗಿ ಆಯ್ಕೆಯಾದ ಮಹಾಪೌರ-ಉಪ ಮಹಾಪೌರ ಹಾಗೂ ಶಾಸಕ ಆಸೀಫ್ ಸೇಠ್ ಅವರಿಗೆ ದಲಿತ ಮುಖಂಡರು ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ದಲಿತ ಸಂಘಟನೆಯ ಮುಖಂಡರು ಹಾಗೂ ನಗರ ಸೇವಕರಾದ ಸೋಹೇಲ್ ಸೋಂಗೊಳ್ಳಿ ಹಾಗೂ ಸಂತೋಷ ಪೆಡನೇಕರ್ ಅವರು ಮಹಾನಗರ ಪಾಲಿಕೆ ಆಯುಕ್ತರನ್ನು ಸತ್ಕರಿಸಿದರು.

ಮೆರವಣಿಗೆ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಸುಮಾರು 25,000 ಜನರಿಗೆ ಊಟದ ವ್ಯವಸ್ಥೆ, ವೇದಿಕೆ, ಪೆಂಡಾಲ್, ಲೈಟಿಂಗ್ಸ್, ಕುಡಿಯುವ ನೀರು, ಶೌಚಾಲಯ ಮತ್ತು ಆಸನಗಳು ವ್ಯವಸ್ಥೆ ಮಾಡಬೇಕೆಂದು ಉಪಯುಕ್ತ ಉದಯ್ ಕುಮಾರ್ ತಳವಾರ್ ತಿಳಿಸಿದರು. ಅಧ್ಯಕ್ಷ ಮಲ್ಲೇಶ್ ಚೌಗುಲೆ, ದಲಿತಮುಖಂಡ ಬಾಬು ಪೂಜಾರಿ ಮಾತನಾಡಿ, ಏ.12ರಿಂದಲೇ ಆರಂಭಗೊಂಡು ಎಲ್ಲ ಜಾತಿ-ಧರ್ಮದ ಜನರು ಭಾಗವಹಿಸುವ ಮೂಲಕ ಜಯಂತಿ ಆಚರಿಸೋಣ ಎಂದರು.ನಗರ ಸೇವಕರಾದ ಸಂದೀಪ್ ಜಿರಗ್ಯಾಳ, ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆ ಕುರಿತ ಪ್ರದರ್ಶನವನ್ನು ಅಂಬೇಡ್ಕರ್ ಗಾರ್ಡನ್ ಹಾಗೂ ಮಹಾನಗರ ಪಾಲಿಕೆ ನಿರ್ಮಿಸಲು ಪ್ರಸ್ತಾವಿಸಿದರು. ರವಿ ಬಸ್ತಾವಡ್ಕರ್ ಅವರು ಅಂಬೇಡ್ಕರ್ ಅವರು ಬೆಳಗಾವಿಗೆ ಬೇಟಿ ನೀಡಿದ ಸ್ಥಳಗಳನ್ನು ಗುರುತಿಸಿ ಜನತೆಗೆ ಅನುಕೂಲ ವಾಗುವಂತೆ ಮ್ಯೂಸಿಯಂ ನಿರ್ಮಿಸುವಂತೆ ಸಲಹೆ ನೀಡಿದರು. ದಲಿತ ಮುಖಂಡ ಲಕ್ಷ್ಮಣ್ ಕೋಲ್ಕರ್ ಅವರು ಹಲವು ಮಹತ್ವದ ಸಲಹೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ನಗರ ಸೇವಕರಾದ ಶ್ರೀಶೈಲ್ ಕಾಂಬ್ಳೆ ಅವರು ಮೆರವಣಿಗೆಯಲ್ಲಿ ಭಾಗವಹಿಸಿದ ಟ್ಯಾಬ್ಲೋಗಳನ್ನು ಅಲಂಕರಿಸಿ, ಉತ್ತಮ ಟ್ಯಾಬ್ಲೋಗಳಿಗೆ ಮಹಾನಗರ ಪಾಲಿಕೆ ವತಿಯಿಂದ 10 ಬಹುಮಾನಗಳನ್ನು ನೀಡಬೇಕೆಂದು ಸಲಹೆ ನೀಡಿದರು. ಮಲ್ಲೇಶ್ ಚೌಗುಲೆ, ರಾಜು ಕಲ್ಲೆಕರ್, ಬಾಬು ಪೂಜಾರಿ, ಮಹೇಶ್ ಕೋಲ್ಕರ್, ಲಕ್ಷ್ಮಣ್ ಕೋಲ್ಕರ್, ಸಂತೋಷ ಹಲಗೆಕರ್, ಬಸವರಾಜ ರಾಯವಗೋಳ, ಸಿದ್ದರಾಯ ಮೇತ್ರಿ ಸೇರಿದಂತೆ ಹಲವು ದಲಿತ ಮುಖಂಡರುಗಳು ಇದ್ದರು.

ಕಿರುಸುದ್ದಿ

ಸಾರವಾಡಗೆ ಸಿಎಂ ಪದಕ



ಮುಧೋಳ: ಬೆಂಗಳೂರಿನ ಕೆಎಸ್‌ಆರ್‌ಪಿ ವಿಭಾಗದ ಡಿಜಿ ಹಾಗೂ ಐಜಿ ಪ್ರಧಾನ ಕಚೇರಿಯಲ್ಲಿ ಇರುವ ರನ್ನ ನಾಡಿನ ಹೆಮ್ಮೆಯ ಅಧಿಕಾರಿ ಆರ್ ಎಸ್‌ಐ. ನಿಸಾರ್ ಅಹ್ಮದ್ ಡಿ. ಸಾರವಾಡ್ ಅವರ ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ 2026ನೇ ಸಾಲಿನ ಮುಖ್ಯಮಂತ್ರಿ ಪದಕ ಲಭಿಸಿದೆ. ಭಾರತೀಯ ಸೇನೆಯಲ್ಲಿ 18 ವರ್ಷ ದೇಶ ಸೇವೆ ಸಲ್ಲಿಸಿ ನಿವೃತ್ತರಾದ ಬಳಿಕ 2018 ರಿಂದ ಪೊಲೀಸ್ ಇಲಾಖೆಯಲ್ಲಿ ಆರ್‌ಎಸ್‌ಐ 4ನೇ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಭೇಟಿ

ಜಮಖಂಡಿ: ತಾಲೂಕಿನ ಮಧುರಖಂಡಿ ಗ್ರಾಮದಲ್ಲಿ ದುಂಡಪ್ಪ ಕಸರೆಡ್ಡಿ ಅವರ ಹೊಲಕ್ಕೆ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತೋಟಗಾರಿಕೆ ಮಹಾವಿದ್ಯಾಲಯ, ಬಾಗಾಲಕೋಟೆ ಅಂತಿಮ ವರ್ಷದ ವಿದ್ಯಾರ್ಥಿಗಳು ಜೀವಾಮೃತ ತಯಾರಿ ವಿಧಾನ ಪ್ರದರ್ಶನದ ಮೂಲಕ ವಿವರಿಸಿ ಅದರ ಉಪಯೋಗಗಳು ಹಾಗೂ ಮಣ್ಣಿನ ಫಲವತ್ತತೆ ಹೆಚ್ಚಿಸುವಲ್ಲಿ ಅದರ ಮಹತ್ವ ತಿಳಿಸಿದರು. ವಿದ್ಯಾರ್ಥಿಗಳು ವಿಜ್ಞಾನಿಗಳೊಂದಿಗೆ ಹೊಲಗಳಿಗೆ ಭೇಟಿ ನೀಡಿ ವಿವಿಧ ಬೆಳೆಗಳ ಸ್ಥಿತಿ ಅವಲೋಕಿಸಿದರು. ಕಬ್ಬು, ಬಾಳೆ, ಶೇಂಗಾ, ಲಿಂಬೆ, ಪಪಾಯ ಬೆಳೆಗಳನ್ನು ಪರಿಶೀಲಿಸಲಾಯಿತು. ಕಬ್ಬಿನಲ್ಲಿ ವಿಪ್ ಸ್ಮಟ್ ಹಾಗೂ ರಸ್ಟ್ ಬಾಳೆಯಲ್ಲಿ ಸಿಗಟೋಕಾ ಮತ್ತು ಬಂಚಿ ಟಾಪ್ ವೈರಸ್, ಶೇಂಗಾದಲ್ಲಿ ಮೊಗ್ಗು ಒಣಗು ರೋಗ, ಎಲೆ ಚುಕ್ಕೆ ರೋಗ ಮತ್ತು ಡ್ರೈ ರೂಟ್ ರಾಟ್. ಪಪಾಯದಲ್ಲಿ ರಿಂಗ್ ಸ್ಪಾಟ್ ವೈರಸ್ ರೋಗಗಳು ಕಂಡುಬಂದವು. ಸಸ್ಯರೋಗ ವಿಜ್ಞಾನಿ ಡಾ.ನೂರುಲ್ಲಾ ಹಾವೇರಿ, ಡಾ.ರೇಖಾ ಚಿತ್ತಾಪುರ ಇದ್ದರು.

ರಾಕ್ ಫೆಸ್ಟಿವಲ್ ಯಶಸ್ವಿ



ಬಾದಾಮಿ: ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ, ಬಾದಾಮಿ ಶಿಲಾರೋಹಣ ತರಬೇತಿ ಕೇಂದ್ರದಲ್ಲಿ ಬಾದಾಮಿ ರಾಕ್ ಫೆಸ್ಟಿವಲ್ ನಡೆದಿದ್ದು, ದೇಶದ ನಾನಾ ಭಾಗಗಳಿಂದ ಇನ್ನೂರಕ್ಕೂ ಹೆಚ್ಚು ಶಿಲಾರೋಹಕರು, 20ಕ್ಕೂ ಹೆಚ್ಚು ಪೈಲಟ್‌ಗಳು, ಪ್ಯಾರಾ ಮಿಲಿಟರಿ ಪಡೆಯ ಯೋಧರು, ಹನುಮಂತಪ್ಪ ಹವಾನದ ಸಾಹಸ ಕ್ರೀಡಾ ಸಂಸ್ಥೆಯವರು ಭಾಗವಹಿಸಿ ಯಶಸ್ವಿಗೊಳಿಸಿದರು. ಬಾದಾಮಿ ರಾಕ್ ಫೆಸ್ಟಿವಲ್ ಪ್ರಥಮ ಬಾರಿಗೆ ನಡೆದಿದ್ದು, ಇದರಲ್ಲಿ ರಾಕ್ ಥಾನ್, ವರ್ಟಿಕಲ್ ರೇಸ್ ಚಾಲೆಂಜ್ ಮತ್ತು ಸ್ಲಾಕ್ ಲೈನಿಂಗ್ ಎಂದು ಮೂರು ವಿಭಾಗಗಳ ಸ್ಪರ್ಧೆ ಇತ್ತು. ಇದರಲ್ಲಿ ರಾಕ್ ಥಾನ್ ಇದು ಅತಿ ಹಿರಿಯರ ಸ್ಪರ್ಧೆಯಲ್ಲಿ ಬೆಳಗಾವಿ ಜಿಲ್ಲೆಯ ಬಾದಾಮಿ ಘಟಕದ ಸಂಸ್ಥೆಯಲ್ಲಿ ತರಬೇತಿ ಪಡೆದ ಶಿಲಾರೋಹಣ ತರಬೇತಿ ಸಂಸ್ಥೆಯ ರವಿ ವಡ್ಡರ, ಸಾಗರ ವಡ್ಡರ, ಶಿವು ಶಂಕರ ವಡ್ಡರ ಮತ್ತು ಕುಮಾರ ವಡ್ಡರ ಇವರುಗಳು ಪ್ರಶಸ್ತಿ ಪಡೆದು ಬಾದಾಮಿ ಮತ್ತು ಬಾಗಲಕೋಟೆ ಜಿಲ್ಲೆಗೆ ಹೆಸರು ಕೀರ್ತಿ ತಂದಿದ್ದಾರೆ.

ಯತ್ನಾಳ ಕಾಮಿಡಿ ಪೀಸ್: ಶಾಸಕ ಕಾಶಪ್ಪನವರ

ಬಾಗಲಕೋಟೆ: ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಾಮಿಡಿ ಪೀಸ್ , ಬಿಜೆಪಿ ಪ್ರಚಾರದಿಂದ ಉಚ್ಚಾಟನೆ ಮಾಡಿದರೂ ಪ್ರಚಾರಕ್ಕೆ ಬಂದಿದ್ದಾರೆ. ಅಟಕ್ಕ ಉಂಟು ಲೆಕ್ಕಕ್ಕಿಲ್ಲ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಕುರಿತು ಮಾತನಾಡುವ ನೈತಿಕತೆ ಯತ್ನಾಳಗೆ ಇಲ್ಲ.ಲಿಂಗಾಯತ ಸಮಾಜದವರಿದ್ದಾರಾ ಎಂಬುದರ ಕುರಿತು ಡಿಎನ್‌ಎ ಪರೀಕ್ಷೆಯನ್ನು ಯತ್ನಾಳವರಿಗೆ ಮಾಡಿಸಬೇಕಾಗಿದೆ ಎಂದು ಹೇಳಿದರು. ಪಂಚಾಮಸಾಲಿ ಸಮಾಜವನ್ನು ಇವರೇನು ದತ್ತು ಪಡೆದುಕೊಂಡಿದ್ದಾರೆ. ಇಂತಹವರಿಂದ ಸಮಾಜ ಏನು ಒಡೆದು ಹೋಗುವುದಿಲ್ಲ, ಯತ್ನಾಳವರಿಂದ ಬಾಗಲಕೋಟೆ ಮತಕ್ಷೇತ್ರದಲ್ಲಿ ಏನೂ ಬದಲಾವಣೆ ಆಗುವುದಿಲ್ಲ, ಪಂಚಮ ಸಾಲಿ ಸಮಾಜ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದೆ ಎಂದು ಹೇಳಿದರು. ಸದನದಲ್ಲಿ ಐಪಿಎಲ್ ಮ್ಯಾಚ್ ವೀಕ್ಷಿಸಲು ಟಿಕೆಟ್ ಕೇಳಿದ್ದು ನಾನು ಮೊದಲು ಅಲ್ಲ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಜೆಡಿಎಸ್ ಶಾಸಕರು ಕೇಳಿದರು ಅದಕ್ಕೆ ನಾನೂ ಕೇಳಿದ್ದೇನೆ. ನನ್ನ ವಿಡಿಯೋ ಮಾತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದು ಬಿಡಲಾಗಿದೆ. ನಾನೇನು ಉಚಿತ ಟಿಕೆಟ್ ಕೇಳಿಲ್ಲ, ಟಿಕೆಟ್ ವೆಚ್ಚವನ್ನು ನೀಡುವುದಾಗಿ ಕೇಳಿದ್ದೇವೆ ಎಂದರು. ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕೊಡಿಸುವುದಾಗಿ ಹೇಳಿದ್ದ ಯತ್ನಾಳರು, ಮುರಗೇಶ ನಿರಾಣಿಯವರು ಯಾವ ರೀತಿ ಮೀಸಲಾತಿ ಸಮಾಜಕ್ಕೆ ಕೊಡಿಸಿದ್ದಾರೆ ಎಂಬುದು ಗೊತ್ತಿದೆ. ನಾನೂ ಕೂಡ ಸರ್ಕಾರದ ಗಮನ ತಂದಿದ್ದೇವೆ. ಮೀಸಲಾತಿ ವಿಷಯ ನ್ಯಾಯಾಲದಲ್ಲಿ ಇದೆ. ಇನ್ನೂ ಹಿಂದುಳಿದ ವರ್ಗದ ಆಯೋಗ ಸಂಪೂರ್ಣ ವರದಿ ನೀಡಿದ ನಂತರ ಸರ್ಕಾರ ಮೀಸಲಾತಿ ನೀಡಲಿದೆ ಎಂದು ಹೇಳಿದರು.



ಬಾದಾಮಿ: 12ನೇ ಶತಮಾನದಲ್ಲಿ ಬಸವಣ್ಣನವರ ಒಡನಾಡಿಯಾಗಿ ಅವರಿಗೆ ತನ್ನ ತೊಡೆಯ ಚರ್ಮದಿಂದ ಪಾದರಕ್ಷೆಗಳನ್ನು ಹೊಲಿದು ಕೊಟ್ಟ ಶರಣ ಶಿವಶರಣ ಹರಳಯ್ಯನವರ 915ನೇ ಜಯಂತಿಯನ್ನು ಗುರುವಾರ ಸ್ಥಳೀಯ ಶಿವಶರಣ ಹರಳಯ್ಯ ಸಮಗಾರ ಸಮಾಜದ ಅಧ್ಯಕ್ಷ ನಾಗರಾಜ ಹ ಹೊಸಮನಿ ನೇತೃತ್ವದಲ್ಲಿ ಆಚರಿಸಲಾಯಿತು. ಸಮಾಜದ ಪ್ರಮುಖರಾದ ರವಿ ಮುಂಡೆವಾಡಿ, ರಮೇಶ ಕುಂದರಗಿ, ವಿಜಯ ದೊಡಮನಿ, ಶನನಪ್ಪ ಸಾಸಕ್ಯಾನವರ, ಅಜಯ ದೊಡಮನಿ, ರಮೇಶ ದೊಡಮನಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಶೇ.95.23ರಷ್ಟು ಮನೆಯಿಂದ ಮತದಾನ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026 ಹಿನ್ನೆಲೆ 85 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯರು ಹಾಗೂ ವಿಶೇಷಚೇತನರಿಗೆ ಏ.1, 2ರಂದು ನಡೆದ ಮನೆಯಿಂದಲೇ ಮತದಾನದ ಪ್ರಕ್ರಿಯೆಯಲ್ಲಿ ಒಟ್ಟು 95.23ರಷ್ಟು ಮತದಾನವಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಚುನಾವಣಾ ಆಯೋಗವು ಮನೆಯಿಂದಲೇ ಮತದಾನಕ್ಕೆ ಎರಡು ದಿನಗಳ ಕಾಲ ನೀಡಿತ್ತು.

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ 85 ವರ್ಷ ಮೇಲ್ಪಟ್ಟ ಹಿರಿಯರು 183 ಹಾಗೂ ವಿಶೇಷ ಚೇತನರು (ಪಿಡಬ್ಲೂಡಿ) 90 ಸೇರಿ ಒಟ್ಟು 273 ಜನ ಮನೆಯಿಂದಲೇ ಮತದಾನಕ್ಕೆ ನೋಂದಾಯಿಸಿಕೊಂಡಿದ್ದರು. ಈ ಪೈಕಿ 85 ವರ್ಷ ಮೇಲ್ಪಟ್ಟವರು 170, ವಿಶೇಷ ಚೇತನರು 90 ಸೇರಿ ಒಟ್ಟು 260 ಜನ ಮನೆಯಿಂದಲೇ ಮತದಾನ ಮಾಡುವ ಮೂಲಕ ಶೇ.93.4ರಷ್ಟು ಮತದಾನವಾಗಿದೆ ಎಂದು ತಿಳಿಸಿದ್ದಾರೆ.

ಏ.1ರಂದು ಮನೆ ಭೇಟಿ ನೀಡಿದ ಸಂದರ್ಭದಲ್ಲಿ ಮತದಾರರು ಇದರ ಕಾರಣ ಏ.2ರಂದು ಮತ್ತೊಂದು ದಿನ ಭೇಟಿ ನೀಡಿ ಮತದಾನ ಮಾಡಿಸಲಾಗಿದೆ. ಮೊದಲ ದಿನ 273 ಪೈಕಿ 257 ಜನ ಮತದಾನ ಮಾಡಿದರೆ, ಎರಡನೇ ದಿನ 3 ಜನ ಮತದಾನ ಮಾಡಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.



ಲೋಕಾಪುರ: ಪಟ್ಟಣದ ಮಾರುತೇಶ್ವರ ದೇವಸ್ಥಾನದಲ್ಲಿ ಹಿಂದೂ ಬಾಂಧವರಿಂದ ರಾಮನವಮಿ ಮತ್ತು ಹನುಮ ಜಯಂತಿ ಸಂಭ್ರಮದಿಂದ ಆಚರಿಸಲಾಯಿತು. ಮಾರುತೇಶ್ವರನಿಗೆ ವಿಶೇಷ ಎಲಿ ಪೂಜೆ, ಅಭಿಷೇಕ ನಡೆಯಿತು. ಮಲ್ಲಪ್ಪ ಅಂಗಡಿ, ರತ್ನಾಕರ್ ಬಾಸುತ್ಕರ್, ಸ್ವಾಮೀಜಿ ವಿಕ್ರಮ ನಂದಯಗೋಳ, ಡಾ.ವಿನಯ ಕುಲಕರ್ಣಿ, ಸುನಿಲ್ ವಸ್ತ್ರದ, ಮೋಹನ್ ಪತ್ತಾರ, ಭೀಮಶಿ ಅವರಾದಿ, ಸೌರಭ ಗೋರ್ಪಡೆ, ಮೋಹನ್ ಸನಶಿವಣ್ಣವರ, ಗಣೇಶ ಪತ್ತಾರ ಇತರರು ಇದ್ದರು.

ಉಪಚುನಾವಣೆ | ತರಬೇತಿ ಕೇಂದ್ರಕ್ಕೆ ಡಿಸಿ, ಸಾಮಾನ್ಯ ವೀಕ್ಷಕರ ಭೇಟಿ

ನಿಷ್ಠೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಹಿನ್ನಲೆ ನವನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ನಡೆದ ಪಿಆರ್‌ಒ, ಎಪಿಆರ್‌ಒ ಹಾಗೂ ಪಿಒಗಳ ತರಬೇತಿ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಚುನಾವಣಾ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರು ಭೇಟಿ ನೀಡಿ ವೀಕ್ಷಣೆ ಮಾಡಿದರು.

ಜಿಲ್ಲಾ ಚುನಾವಣಾಧಿಕಾರಿಗಳ ಮಾರ್ಗದರ್ಶನದಲ್ಲಿ ನಡೆದ ಈ ತರಬೇತಿಯಲ್ಲಿ ಮತಗಟ್ಟೆ ನಿರ್ವಹಣೆ, ಇವಿಎಂ ಹಾಗೂ ವಿವಿಪ್ಯಾಟ್ ಯಂತ್ರಗಳ ಬಳಕೆ, ಮತದಾರರ ಗುರುತಿನ ಚೀಟಿ ಪರಿಶೀಲನೆ, ಮಾದರಿ ನೀತಿ ಸಂಹಿತೆಯ ಅನುಸರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ವಿವರವಾಗಿ ತಿಳಿಸಲಾಯಿತು. ಮತದಾನ ದಿನದ ಕರ್ತವ್ಯಗಳು, ತುರ್ತು ಪರಿಸ್ಥಿತಿಗಳನ್ನು ಸಮರ್ಥವಾಗಿ ನಿರ್ವಹಿಸುವ ವಿಧಾನಗಳು ಹಾಗೂ ಮತದಾನ ಪ್ರಕ್ರಿಯೆಯಲ್ಲಿ ಪಾಲಿಸಬೇಕಾದ ನಿಯಮಗಳ



ಕುರಿತು ಪ್ರದರ್ಶನದೊಂದಿಗೆ ತಿಳಿಸಲಾಯಿತು.

ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಮಾತನಾಡಿ, ತರಬೇತಿ ಕೊಠಡಿಗಳಿಗೆ ತೆರಳಿ ಚುನಾವಣಾ ಕರ್ತವ್ಯಗಳನ್ನು ನಿಷ್ಠೆಯಿಂದ ಮತ್ತು ನಿಯಮಾನುಸಾರ ನಿರ್ವಹಿಸಬೇಕು. ಪ್ರಿಸೈಡಿಂಗ್ ಅಧಿಕಾರಿಗಳು ಪಿಆರ್‌ಒ ಆಪ್ ಯನ್ನು ತಪ್ಪದೇ ಡೌನ್ ಲೋಡ ಮಾಡಿಕೊಂಡು ಚುನಾವಣಾ ದಿನದಂದು ಮಾಕ್ ಪೋಲ್, ಮತದಾನ ಪ್ರಾರಂಭಿಸಿದ ಬಗ್ಗೆ ಹಾಗೂ ಪ್ರಾರಂಭದಿಂದ ಮುಕ್ತಾಯದವರೆಗೆ ಮತದಾನ ಪ್ರಕ್ರಿಯೆ ಅಂಶವನ್ನು ಆಪ್‌ನಲ್ಲಿ ಮಾಹಿತಿ ಅಪಲೋಡ್ ಮಾಡಬೇಕಾಗುತ್ತದೆ. ಆದ್ದರಿಂದ ಈ ಆಪ್ ಬಗ್ಗೆ ಸಮಪೂರ್ಣವಾಗಿ ತರಬೇತಿಯಲ್ಲಿ ಪಡೆದುಕೊಳ್ಳಲು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಸ್ವಚ್ಛ ಪಾರದರ್ಶಕ ಹಾಗೂ ಶಾಂತಿಯುತ ಮತದಾನ ನಡೆಯಲು ತರಬೇತಿ ಬಹಳ ಮುಖ್ಯವಾಗಿದೆ. ಚುನಾವಣಾ ವ್ಯವಸ್ಥೆಯಲ್ಲಿ ತಂತ್ರಜ್ಞಾನದಲ್ಲಿ ಬದಲಾವಣೆಗೊಳ್ಳುತ್ತಿರುತ್ತದೆ. ಆದ್ದರಿಂದ ಈ ಹಿಂದೆ ಇದರ ಬಗ್ಗೆ ತರಬೇತಿ ಪಡೆಯಲಾಗಿದೆ ಎಂದು ನಿರ್ಲಕ್ಷ್ಯ ವಹಿಸುವ ಹಾಗಿಲ್ಲ, ಹಿಂದಿನ ಚುನಾವಣೆ ಹಾಗೂ ಈಗಿನ ಚುನಾವಣೆಯಲ್ಲಿ ತಾಂತ್ರಿಕತೆಯಲ್ಲಿ ಬದಲಾವಣೆಯಾಗಿರುತ್ತದೆ. ಅವೆಲ್ಲವನ್ನು ತಿಳಿದುಕೊಂಡು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ತಿಳಿಸಿದರು. ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರರಾದ ವಾಸುದೇವ ಸ್ವಾಮಿ, ಡಾ.ಪ್ರದೀಪಕುಮಾರ ಸೇರಿದಂತೆ ಇತರರು ಇದ್ದರು.

2028ಕ್ಕೂ ಉಮೇಶ ಮೇಟಿಗೆ ಟಿಕೆಟ್: ಸಿಎಂ

ಬಾಗಲಕೋಟೆ: ಎರಡು ವರ್ಷದ ಅವಧಿಗೆ ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಯವರನ್ನು ಗೆಲ್ಲಿಸಬೇಕು ಮತ್ತೇ 2028ಕ್ಕೆ ಉಮೇಶ ಮೇಟಿಯವರಿಗೆ ಮತಕ್ಷೇತ್ರದಿಂದ ಟಿಕೆಟ್ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಣೆ ಮಾಡಿದರು.

ಬೇವಿನಮಟ್ಟಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಮುಖ್ಯಮಂತ್ರಿಗಳು ಎಚ್.ವೈ. ಮೇಟಿಯವರು ಮಾಡಿದ ಅಭಿವೃದ್ಧಿ ಕೆಲಸ ಮುಂದುವರೆಸಲು ಅವರ ಪುತ್ರ ಉಮೇಶ ಮೇಟಿಯವರನ್ನು ಗೆಲ್ಲಿಸಿ. ಉಮೇಶ ಕ್ಷೇತ್ರದ ಜನರ ಪ್ರತಿನಿಧಿಯಾಗಿ ಕೆಲಸ ಮಾಡಲಿದ್ದಾರೆ. ಶಾಸಕ ದಿ.ಎಚ್.ವೈ.ಮೇಟಿಯವರು ಎಲ್ಲ ಸಮುದಾಯವರ ಪರ ಕೆಲಸ ಮಾಡಿದ್ದಾರೆ. ಹೀಗಾಗಿ ಅವರ ಪುತ್ರನನ್ನು ಚುನಾವಣೆಯಲ್ಲಿ ಗೆಲ್ಲಿಸಿ ಎಂದರು.

ಸಚಿವ ಶಿವಾನಂದ ಪಾಟೀಲ ಮಾತನಾಡಿ, ಕಾಂಗ್ರೆಸ್‌ಪಕ್ಷದವರುಬರೀಹಿಂದೂತ್ವಹೆಸರಿನಲ್ಲಿ ಚುನಾವಣೆ ಮಾಡಲು ಹೊರಟಿದ್ದಾರೆ. ಕಾಂಗ್ರೆಸ್ ಪಕ್ಷ ಬಡವರ, ದಲಿತರ, ರೈತರ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್ .ಬಿ.ತಿಮ್ಮಾಪುರಮಾತನಾಡಿ, ಜಾತಿ,ಧರ್ಮಗಳ ಮಧ್ಯೆ ವಿಷಬೀಜ ಬಿತ್ತುವರರನ್ನು ಶಾಸಕರನ್ನಾಗಿ ಮಾಡಬೇಡಿ. ಎಲ್ಲರ ಪ್ರೀತಿ ಗಳಿಸುವ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಹೇಳಿದರು. ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಮಾತನಾಡಿ, ಎಲ್ಲ ಪಕ್ಷದವರಿಗೆ ಅನುಕೂಲವಾಗುವಂತಹ ಪಂಚ ಗ್ಯಾರಂಟಿಗಳನ್ನು ನೀಡಿದ್ದು ಸಿದ್ಧರಾಮಯ್ಯನವರ ಋಣ ತೀರಿಸಲು ಬಾಗಲಕೋಟೆ ಮತಕ್ಷೇತ್ರದಲ್ಲಿ ಹೆಚ್ಚು ಮತಗಳ ಅಂತರದಿಂದ ಉಮೇಶ ಮೇಟಿಯವರನ್ನು ಗೆಲ್ಲಿಸಿ ಎಂದು ಹೇಳಿದರು.

ಸಚಿವ ಸಂತೋಷ ಲಾಡ್ ಮಾತನಾಡಿ, ರಾಜ್ಯದಲ್ಲಿ ಪ್ರತಿವರ್ಷ ಐದು ಗ್ಯಾರಂಟಿಗೆ 55 ಸಾವಿರ ಕೋಟಿ ರೂ. ಖರ್ಚು ಮಾಡಿ ಬಡವರಿಗೆ ಅನುಕೂಲ ಮಾಡಿರುವ ಸರ್ಕಾರ ದೇಶದಲ್ಲಿ ಯಾವುದಾದರೂ ಇದ್ದರೆ ಅದು ಸಿದ್ಧರಾಮಯ್ಯನವರ ಸರ್ಕಾರವಾಗಿದೆ. ಕೇಂದ್ರ ಸರ್ಕಾರಕ್ಕೆ ಜನರ ಬಗ್ಗೆ ಕಾಳಜಿ ಇಲ್ಲವೆಂದರು. ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ಬಿಜೆಪಿಯವರು ವಚನಭ್ರಷ್ಟರಾಗಿದ್ದಾರೆ. ಗ್ಯಾರಂಟಿ ನಿಲ್ಲಬೇಕು ಎಂದು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ. ಆದರೆ ಸಿದ್ಧರಾಮಯ್ಯನವರು ಪ್ರತಿವರ್ಷ ಬಜೆಟ್‌ದಲ್ಲಿ ಗ್ಯಾರಂಟಿಗೆ ಹಣ ಮೀಸಲಿಡುವ ಮೂಲಕ ಬಡವರ ಪರ ಸರ್ಕಾರ ಇದೆ ಎಂದು ತೋರಿಸಿದ್ದಾರೆ ಎಂದರು.



ಶ್ರದ್ಧಾಭಕ್ತಿಯ ಹನುಮ ಜಯಂತಿ

ಕಲಾದಗಿ: ಗ್ರಾಮದಾದ್ಯಂತ ಹತ್ತಾರು ಕಡೆ ಇರುವ ಅನೇಕ ಆಂಜನೇಯ ದೇವಸ್ಥಾನಗಳಲ್ಲಿ ಹನುಮ ಜಯಂತಿ ಪ್ರಯುಕ್ತ ಗುರುವಾರ ವಿಶೇಷ ಪೂಜಾಲಂಕಾರ ನಡೆಸಲಾಯಿತು. ಗ್ರಾಮದ ಪೋಸ್ಟ್ ಆಫೀಸ, ಖೊಬ್ರಿ ಕ್ರಾಸ, ಪೋಲಿಸ್ ಸ್ಟೇಷನ, ಚಿಂತಾಮಣಿ ಮಠ, ಕಿರಗೇರಿ ಓಣಿ, ಕೆರೂರ ಓಣಿ, ಬಸವಣ್ಣ ದೇವರ ಓಣಿಯ, ಹೊಸೂರ ಚೌಕ ಹತ್ತಿರದ ಹನುಮಂತ ದೇವಸ್ಥಾನಗಳಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಆಂಜನೇಯನಿಗೆ ವಿಶೇಷ ಅಲಂಕಾರ, ವಿಳ್ಳೆದೆಲೆ ಪೂಜೆ, ಅಭಿಷೇಕ, ತೊಟ್ಟಿಲು ಪೂಜೆ, ನಾಮಕರಣ ಕಾರ್ಯಕ್ರಮ, ಹಣ್ಣು ಹಂಪಲ, ಪಚಡಿ ವ್ಯವಸ್ಥೆ ಮಾಡಲಾಗಿತ್ತು. ಆಂಜನೇಯ ದೇವಸ್ಥಾನಗಳಲ್ಲಿ ತಳಿರು ತೋರಣ, ಬಾಳೆ ಗಿಡ, ತೆಂಗಿನ ಗರಿಗಳು, ಕೇಸರಿ ಬಂಟಿಂಗ್ಸಗಳನ್ನು ಕಟ್ಟಿ, ಬಣ್ಣದ ರಂಗೋಲಿಗಳನ್ನು ಹಾಕಿ ನೂರಾರು ಭಕ್ತರು ಪಾಲ್ಗೊಂಡು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.



ಪ್ರತಿಯೊಬ್ಬರಿಗೂ ಕಾನೂನು ಅರಿವು ಅವಶ್ಯ

ಹುನಗುಂದ: ಕಾನೂನು ಮನುಷ್ಯನ ನೆರಳಿದಂತೆ. ಹುಟ್ಟಿನಿಂದ ಸಾಯುವವರೆಗೂ ನಮ್ಮನ್ನು ಸದಾ ಹಿಂಬಾಲಿಸುತ್ತದೆ. ಹಾಗಾಗಿ ಕಾನೂನು ಅರಿಯುವುದು ಅವಶ್ಯ ಎಂದು ಹಿರಿಯ ದಿವಾಣಿ ನ್ಯಾಯಾದೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಹೇಳಿದರು.

ತಾಲೂಕಿನಹಡಗಲಿ ಗ್ರಾಮದಲ್ಲಿ ರುದ್ರಮುನಿ ಶಿವಯೋಗೀಶ್ವರ ಜಾತ್ರಾ ನಿಮಿತ್ಯ ಜಿಲ್ಲಾ ಮತ್ತು ತಾಲೂಕು ಕಾನೂನು ಸೇವಾ ಪ್ರಾಧಿಕಾರ, ತಾಲೂಕಿನ ವಕೀಲರ ಸಂಘ, ರುದ್ರೇಶ್ವರ ಜಾತ್ರಾ ಕಮಿಟಿ ಹಾಗೂ ಕಠಾಣಿ ಸಮಾಜ ಸೇವಾ ಫೌಂಡೇಶನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿರಿಯ ದಿವಾಣಿ ನ್ಯಾಯಾಧೀಶ ಹನುಮಂತರಾವ್ ಕುಲಕರ್ಣಿ ಮಾತನಾಡಿ, ದೈನಂದಿನ ಬದುಕಿಗೆ ಕಾನೂನು ಅರಿತುಕೊಳ್ಳುವುದು ಬಹಳ ಮುಖ್ಯ. ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಸಮಾನ ಹಕ್ಕಿದೆ. ವರದಕ್ಷಿಣೆಗಾಗಿ ಗಂಡ, ಅತ್ತೆ, ಮಾವ ಕಿರುಕುಳವಾದಾಗ ವರದಕ್ಷಿಣೆ ಕಾನೂನು ನಿಮ್ಮನ್ನು ಸಂರಕ್ಷಣೆ ಮಾಡುತ್ತದೆ ಎಂದರು.

ಹಿರಿಯ ನ್ಯಾಯವಾದಿ ವಿ.ಆರ್.ಜನಾದ್ರಿ ಮಾತನಾಡಿ, ಪ್ರಾಚೀನ ಕಾಲದಿಂದಲ್ಲೂ ಹೆಣ್ಣು ಮಕ್ಕಳ ಮೇಲೆ ಒಂದಿಲ್ಲದ ಒಂದು ದೌರ್ಜನ್ಯಗಳು ನಡೆಯುತ್ತಿವೆ. ಇಂದು ದೈಹಿಕ, ಮೌಖಿಕ, ಲೈಂಗಿಕ, ಭಾವನಾತ್ಮಕ ಹಾಗೂ ಆರ್ಥಿಕ ದೌರ್ಜನ್ಯಗಳ ನಡೆಯುತ್ತಿದ್ದು ಅವುಗಳನ್ನು ತಡೆಯುವುದಕ್ಕಾಗಿ 2005ರಲ್ಲಿ ಹೆಣ್ಣು ಮಕ್ಕಳ ದೌರ್ಜನ್ಯ ತಡೆಕಾಯ್ದೆ ಜಾರಿಗೆ ಬಂದಿದ್ದು, ಅದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಠಾಣಿ ಸಮಾಜ ಸೇವಾ ಫೌಂಡೇಶನ್ ಅಧ್ಯಕ್ಷ ಹಾಗೂ ಮಾಜಿ ವಕೀಲ ಸಂಘದ ಅಧ್ಯಕ್ಷ ಪ್ರಕಾಶ ಕಠಾಣಿ ಮಾತನಾಡಿ, ಪ್ರತಿಯೊಬ್ಬರಲ್ಲಿ ಕಾನೂನು ತಿಳುವಳಿಕೆ ಇದ್ದರೆ ಯಾವುದೇ ವ್ಯಾಜ್ಯಗಳು ಬರುವುದಿಲ್ಲ, ಉಚಿತ ಕಾನೂನು ತಿಳುವಳಿಕೆ ನಿಮ್ಮ ಮನೆ ಬಾಗಿಲಿಗೆ ಬಂದಿದ್ದು ಅದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿ ಮಾತನಾಡಿದರು. ಪ್ರವಚನಕಾರ ಶಿವನಾಗಯ್ಯ ಹಿರೇಮಠ ಶಾಸ್ತ್ರಿ ಪ್ರಧಾನ ದಿವಾಣಿ ನ್ಯಾಯಾಧೀಶ ಬಸವರಾಜ ನೇಸರ್ಗಿ, ಅಪರ ದಿವಾಣಿ ನ್ಯಾಯಾಧೀಶ ಮಹಾಂತೇಶ ಮಠದ, ಇಳಕಲ್ಲ ವಕೀಲರ ಸಂಘದ ಅಧ್ಯಕ್ಷ ಮಹಾಂತೇಶ ಹೊಸೂರ, ವಕೀಲರ ಸಂಘದ ಅಧ್ಯಕ್ಷ ಮಾಧವ ದೇಶಪಾಂಡೆ, ಉಪಾಧ್ಯಕ್ಷ ವೀರೇಶ ಬಂಡಿ, ರಮೇಶ ಕೋಣಾಟಿ ಇದ್ದರು.



ಮಹಿಳೆಯ ಸಾಧನೆಗೆ ಅಕ್ಕಮಹಾದೇವಿ ಆದರ್ಶ: ಉಮಾಶ್ರೀ

ಗುಳೇದಗುಡ್ಡ: ಸಮಾಜದಲ್ಲಿ ಜಾತಿ, ಧರ್ಮದ ಮೇಲೆ ಪ್ರೀತಿ ಹೆಚ್ಚಾಗಿದೆ. ಕುಟುಂಬದ ಒಳಗಡೆ ಮಹಿಳೆ ಹಲವು ರೀತಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾಳೆ. ಹಣ, ಆಸ್ತಿ ವ್ಯಾಮೋಹ ಹೆಚ್ಚಾಗಿ ಮನುಷ್ಯರೇ ಮನುಷತ್ವ ಮರೆಯುತ್ತಿದ್ದಾರೆ ಎಂದು ಮಾಜಿ ಸಚಿವೆ ಉಮಾಶ್ರೀ ಹೇಳಿದರು.

ಪಟ್ಟಣದ ಗುರುಸಿದ್ದೇಶ್ವರ ಬೃಹನ್ಮಠದಲ್ಲಿ ಹಮ್ಮಿಕೊಂಡಿದ್ದ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಇರಬೇಕು. ಮಹಿಳೆಯ ಸಾಧನೆಗೆ ಅಕ್ಕಮಹಾದೇವಿ ಆದರ್ಶಳಾಗಿದ್ದಾಳೆ. ಅವಳ ವಚನಗಳು ದಾರಿದೀಪವಾಗಿವೆ ಎಂದು ಹೇಳಿದರು.

ಗಜೇಂದ್ರಗಡ ದೇವಿಮನೆ ಪುಣ್ಯಾಶ್ರಮದ ಶರಣೆ ಸಾವಿತ್ರಮ್ಮ ಹಿರೇಮಠ ಉಪನ್ಯಾಸ ನೀಡಿ ಮಾತನಾಡಿ, ಶರಣೆ ಅಕ್ಕ ಮಹಾದೇವಿ ಜೀವನ ಸರಳವಾಗಿರಲಿಲ್ಲ, ಅವಳು ಲೌಕಿಕ ಬದುಕಿನಿಂದ ದೂರವಾಗಿ ಪಾರಮಾರ್ಥಿಕ, ಆಧ್ಯಾತ್ಮಿಕ ಅರಿವನ್ನು ಬಯಸಿದ್ದಳು. ಯೋಗಾಂಗ ತ್ರಿವಿದಿ ಕೃತಿ ಬರೆದ ಅಕ್ಕಮಹಾದೇವಿ, ಬದುಕಿನ ಸಾರವನ್ನು ವಚನಗಳಲ್ಲಿ ಹೇಳಿಕೊಂಡಿದ್ದಾಳೆ ಅವಳ ಬದುಕು ನಮಗೆಲ್ಲರಿಗೂ ಆದರ್ಶ ಎಂದರು. ಗುರುಸಿದ್ಧ ಪಟ್ಟದಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಇಂದು ನಮಗೆ ಆಸ್ತಿ, ಅಂತಸ್ತುಗಳು ಮುಖ್ಯವಾಗುತ್ತಿವೆ. ಅಕ್ಕಮಹಾದೇವಿ ಆದರ್ಶ ಇಂದು ನಮಗೆಲ್ಲ ಮುಖ್ಯವಾಗಿವೆ ಎಂದರು. ಗಜೇಂದ್ರಗಡ ದೇವಿಮನೆ ಪುಣ್ಯಾಶ್ರಮದ ಶರಣಕುಮಾರ ಶ್ರೀಗಳು, ಅಮರನಾಥ ಶಾಸ್ತ್ರಿಗಳು ಮಾತನಾಡಿದರು. ಪ್ರಾಚಾರ್ಯ ಎಚ್.ಎಸ್.ಘಂಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಶಿಕ್ಷಣಾರ್ಥಿಗಳಿಗೆ ಅಕ್ಕಮಹಾದೇವಿ ಕುರಿತಾಗಿ ವಚನ ಕಂಠಪಾಠ, ವಚನ ಗಾಯನ, ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಸರಿತಾ ಚಂದನ್ನವರ, ಇಂದುಮತಿ ಬೋರಣ್ಣವರ ಹಾಗೂ ಪ್ರಥಮ, ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಸಂಭ್ರಮದ ಹನುಮ ಜಯಂತಿ ಆಚರಣೆ

ಮಹಾಲಿಂಗಪುರ: ಸ್ಥಳೀಯ ಜಿಎಲ್‌ಬಿಸಿ ಆವರಣದಲ್ಲಿರುವ ಹನುಮಂತೇಶ್ವರ ದೇವಸ್ಥಾನದ ಸುವರ್ಣಮಹೋತ್ಸವ,ಹನುಮ ಜಯಂತಿ ಆಚರಿಸಲಾಯಿತು. ಬೆಳಗ್ಗೆ ರುದ್ರಾಭಿಷೇಕ, ನಾಮಕರಣ, ಪವಮಾನ ಹೋಮ ನಡೆಯಿತು. ಅರುಣ ಗುರೂಜಿ, ವಿಶಾಲ ಗುರೂಜಿ, ಮಹಾಲಿಂಗ ಗುರವ, ಕೆಂಚಪ್ಪ ಧಾರ್ಮಿಕ ಕಾರ್ಯನೆರವೇರಿಸಿದರು.ಜೋಗುಳಹಾಡಿನಾಮಕರಣ ಮಾಡಿದ್ದು,ಹೋಮ ಹವನ ಗಮನ ಸೆಳೆದವು. 1976ರಲ್ಲಿ ನಿರ್ಮಾಣವಾದ ಈ ದೇವಾಲಯದ ನಿರ್ಮಾಣ ಕಾರ್ಯದ ಸಂಸ್ಥಾಪಕ ಅಧ್ಯಕ್ಷ ನಿವೃತ್ತ ಎಇಇ ಎಂ.ಆರ್ .ಪಾಟೀಲ, ಸಿ.ಡಿ.ಚಾಗನೂರ, ಜಿಎಲ್‌ಬಿಸಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಕೆ.ಯಡೆಪ್ಪನವರ, ಸಿಬ್ಬಂದಿಯವರಾದ ಬಿ.ಕೆ.ಪರೀಟ, ಎಂ.ಎಂ.ಡೋಣಿ, ಪಿ.ಆರ್.ಬಿರಾಜನವರ, ಎಸ್.ಎಂ.ಹುದ್ದಾರ, ಎಂ.ವೈ. ತೋಟದ, ಕೆ.ಎಸ್.ಹಿರೇಮಠ, ಎಂ.ವಿ.ಹಿಟ್ಟಿನಮಠ, ಜಿ.ಎಸ್.ಮಠಪತಿ, ಎಂ.ಎಸ್.ಮುಗಳಖೋಡ, ಚನಬಸು ಯರಗಟ್ಟಿ, ಎಂ.ಟಿ.ರೂಗಿ, ಎಸ್. ಎಚ್.ಹಿರೇಮಠ, ಅಶೋಕ ಬಾಣಕಾರ, ಚಿದಾನಂದ ಚಿಂದಿ ಇದ್ದರು.



ಅಕ್ಕಮಹಾದೇವಿ ಜೀವನ ಪ್ರೇರಣಾದಾಯಕ

ಜಮಖಂಡಿ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಸಾಂಸ್ಕೃತಿಕ ವಿಭಾಗ, ಮಹಿಳಾ ಸಬಲೀಕರಣ ಘಟಕಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಅಕ್ಕಮಹಾದೇವಿ ಜಯಂತಿ ಆಚರಿಸಲಾಯಿತು.

ಪ್ರಾಂಶುಪಾಲೆ ಡಾ.ಸುನಂದಾ ಎಸ್.ಶಿರೂರ ಮಾತನಾಡಿ, ಅಕ್ಕಮಹಾದೇವಿಯ ಭಕ್ತಿ, ವೈರಾಗ್ಯ ಹಾಗೂ ಸ್ತ್ರೀ ಸ್ವಾತಂತ್ರ್ಯದ ಪ್ರತೀಕವಾಗಿದ್ದು, ಅವರ ಜೀವನವೇ ಒಂದು ಪ್ರೇರಣಾದಾಯಕವಾಗಿದೆ. ಚನ್ನಮಲ್ಲಿಕಾರ್ಜುನನ ಮೇಲೆ ಅಪಾರ ಭಕ್ತಿ ಹೊಂದಿದ್ದರು. ಸಾಮಾಜಿಕ ಬಾಧ್ಯತೆಗಳು ಮತ್ತು ಸಂಪ್ರದಾಯಗಳಿಗೆ ವಿರುದ್ಧವಾಗಿ ಅವರು ತಮ್ಮ ಆತ್ಮಸಾಕ್ಷಾತ್ಕಾರದ ಮಾರ್ಗ ಆಯ್ಕೆ ಮಾಡಿಕೊಂಡು ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ನಡೆದು ಮಹತ್ವದ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. ಡಾ.ಅರುಣ ವೈ.ಕಾಂಬಳೆ ಮಾತನಾಡಿದರು. ಡಾ.ವಿ.ಆರ್.ದಳವಾಯಿ, ಡಾ.ಬಿ.ಎಂ.ಕೊರಬು, ಎ.ಎಸ್.ಪೂಜಾರಿ, ಆರ್.ಬಿ.ಶಿತೋಳೆ, ಎಸ್.ಕೆ.ಡೇಂಬರೆ, ಆರ್.ಎಸ್.ಜಾಧವ, ಪುಷ್ಪಾ ಹುಣಶ್ಯಾಳ, ಸುಮಾ ವೈ.ಎನ್., ಎಸ್.ಪಿ.ಸಜ್ಜನ, ಶ್ರೀಮಯಿ ಎನ್.ಸುಜಾತಾ ಬಸಪ್ಪಗೋಳ, ಡಾ.ಸಚೀನ ಕೊಕಟನೂರ, ಎಂ.ಎಂ.ಬಡಿಗೇರ, ಶಿವಾನಂದ ಕುಂಬಾರ ಇದ್ದರು.



ಚರಂತಿಮಠ ಪರ ಯತ್ನಾಳ ಪ್ರಚಾರ



ಬಾಗಲಕೋಟೆ: ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಲೇ ಇದ್ದು ಬಿಜೆಪಿ ಪ್ರಚಾರಕ್ಕೆ ಜನ ಬೆಂಬಲ ಪ್ರವಾಹದಂತೆ ಹರಿಯುತ್ತಿದೆ. ಶುಕ್ರವಾರ ಶಾಸಕ ಬಸನಗೌಡ ಯತ್ನಾಳ ಅವರು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರವಾಗಿ ಸುತಗುಂಡಾರ, ಮುಗಳೊಳ್ಳಿ, ಚಿಕ್ಕಮ್ಯಾಗೇರಿ, ಹಿರೇಮ್ಯಾಗೇರಿಗಳಲ್ಲಿ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ದುರಾಡಳಿತ, ಒಂದು ಕೋಮಿನವರಿಗೆ ಆದ್ಯತೆ ನೀಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದೂಳಿದ ಸಮುದಾಯದವರಿಗೆ ಮಾಡುತ್ತಿರುವ ಅನ್ಯಾಯಕ್ಕೆ ಬೇಸತ್ತ ಮತದಾರರು ತಕ್ಕ ಉತ್ತರ ಕೊಡಲು ಚುನಾವಣೆ ದಿನಕ್ಕಾಗಿ ಕಾಯುತ್ತಿದ್ದಾರೆ. ಹಿಂದಿನ ಬಾರಿಗೆ ಆದ ತಪ್ಪನ್ನು ಈ ಬಾರಿ ಮರುಕಳಿಸದೇ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಿ. ಹಿಂದೂಗಳ ಒಗ್ಗಟ್ಟಿನಿಂದ ದೇಶವನ್ನು ಬಲಿಷ್ಟವಾಗಿ ಕಟ್ಟಲು ಸಾಧ್ಯ ಎಂದರು. ಪ್ರತಿ ಗ್ರಾಮದಲ್ಲಿಯೂ ಉತ್ಸಾಹ, ಹುಮ್ಮಸ್ಸಿನಿಂದ ಜನ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಗೆಲುವಿನ ಭರವಸೆ ನೀಡಿದರು. ಮುಗಳೊಳ್ಳಿಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ ಅವರಿಗೆ ಹೆಗಲಮೇಲೆ ಕಂಬಳಿ ಹೊರಿಸಿ ಕುರಿಮರಿ ಉಡುಗರೆ ನೀಡಿದರು. ಮಾಜಿ ಶಾಸಕ ರಮೇಶ ಬುಸನೂರ, ಸಂಗಣ್ಣ ಕಲಾದಗಿ, ಮೋಹನ ಜಾದವ ಸೇರಿದಂತೆ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮಳೆಗೆ ಬೆಳೆ ಹಾನಿ: ಪರಿಹಾರಕ್ಕೆ ಆಗ್ರಹ

ಲೋಕಾಪುರ: ಪಟ್ಟಣ ಸಮೀಪದ ಹೆಬ್ಬಾಳ ಗ್ರಾಮದಲ್ಲಿ ಬುಧವಾರ ರಾತ್ರಿ ಗುಡುಗು ಮತ್ತು ಆನೆಕಲ್ಲು ಮಳೆಯ ಪರಿಣಾಮ ರೈತರ ಬೆಳೆಗಳಿಗೆ ಬಾರಿ ಹಾನಿಯಾಗಿದೆ. ಬೇಸಿಗೆಯ ಅವಧಿಯಲ್ಲಿ ಅನರಿಕ್ಷಿತವಾಗಿ ಸುರಿದ ಮಳೆ ಹಾಗೂ ಬಿರುಗಾಳಿಯಿಂದಾಗಿ ಗ್ರಾಮಗಳಲ್ಲಿ ಬೆಳೆಗಳು ನೆಲ ಕಚ್ಚಿದ್ದು ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪಟ್ಟಣದ ಹೆಬ್ಬಾಳ ಗ್ರಾಮದ ಸ.ನಂ 64ರಲ್ಲಿ ಎರಡು ಎಕರೆ ಜಮೀನಿನಲ್ಲಿ ನಿರ್ಮಾಣವಾದ ಪಾಲಿಹೌಸ್ ಆನೆಕಲ್ಲು ಮಳೆಯ ತೀವ್ರತೆ ಹೆಚ್ಚಾಗಿ ಕಂಡು ಬಂದಿತು. ರೈತ ಬೆಳೆದಿದ್ದ ಡೊನ್ನ ಮೆಣಸಿನಕಾಯಿ ಬೆಳೆದ ಪಾಲಿಹೌಸ ಸಂಪೂರ್ಣ ನಾಶವಾಗಿದೆ. ಕೆಲವಡೆ ಗಾಳಿಯ ವೇಗ ಹೆಚ್ಚಿದ್ದರಿಂದ ಬೆಳೆಗಳ ಮೇಲೆ ಬಿದ್ದ ಅನೇಕಲ್ಲುಗಳು ಬೆಳೆ ಹಾನಿ ಮಾಡಿದೆ ಎಂದು ತಿಳಿಸಿದ್ದಾರೆ.



ಹೆಬ್ಬಾಳ ಗ್ರಾಮದ ರೈತ ಸುಭಾಸ್ ರಾಮಪ್ಪ ಪಾಟೀಲ 2 ಎಕರೆಪಾಲಿಹೌಸ್‌ನಲ್ಲಿ ತಯಾರಿಸಿದ್ದ ಡೋನ್ನ ಮೆಣಸಿನಕಾಯಿ ಬೆಳೆ 7 ಲಕ್ಷ ರೂ. ನಷ್ಟವಾಗಿದ್ದು, ಪಾಲಿಹೌಸ್ ಸಂಪೂರ್ಣ ನಾಶವಾಗಿದೆ. 70 ಲಕ್ಷ ರೂ. ನಷ್ಟವಾಗಿದೆ. ಆನೆಕಲ್ಲು ಮಳೆಯ ನೀರಿನ ಜೋರು ಹಾಗೂ ಗಾಳಿಯ ತೀವ್ರತೆ ಹೆಚ್ಚಿದ್ದು ಬೆಳೆಗಳು ನೆಲಕರುಳಿದ್ದು, ರೈತನ ಪರಿಶ್ರಮ ನಾಶವಾಗಿದೆ. ಸರ್ಕಾರ ತಕ್ಷಣವೇ ಹಾನಿ ಪ್ರದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲನೆ ನಡೆಸಿ ಪರಿಹಾರ ನೀಡಬೇಕೆಂದು ಸ್ಥಳೀಯ ರೈತರು ಆಗ್ರಹಿಸಿದ್ದಾರೆ.

ಮಹಿಳೆಯರ ಜಂಗೀ ನಿಕಾಲಿ ಕುಸ್ತಿ

ಹುಲ್ಯಾಳ: ಸಮೀಪದ ಸಿದ್ದಾಪುರ ಗ್ರಾಮದಲ್ಲಿ, ಗ್ರಾಮದೇವತೆ ಕರೆವ್ವದೇವಿ ಜಾತ್ರೆ ನಿಮಿತ್ತ ಗುರುವಾರ ಆಯೋಜಿಸಿದ್ದ ಜಂಗಿ ನಿಕಾಲಿ ಕುಸ್ತಿಗಳಲ್ಲಿ, ಮಹಿಳಾ ಕುಸ್ತಿಪಟುಗಳ ಕುಸ್ತಿಗಳು ಅಪಾರ ಕ್ರೀಡಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು.

ದೇವಿಯ ರಥೋತ್ಸವದ ಮರುದಿನಸಂಜೆ5 ಗಂಟೆಗೆಜರುಗುವ ಈ ಜಂಗಿ ನಿಕಾಲಿ ಕುಸ್ತಿಗಳು 17ನೇ ಶತಮಾನದಿಂದ ಸಾಗಿ ಬಂದಿದ್ದು, ತಿಳಿದು ಬರುತ್ತದೆ. ಜಮಖಂಡಿಯ ಪಟವರ್ಧನ ಮಹಾರಾಜರು ದೇವಿಯ ಪರಮ ಭಕ್ತರಾಗಿದ್ದರು. ಇಲ್ಲಿಯ ಜಾತ್ರೆ ಹಾಗೂ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು ಎಂದು ಪ್ರತೀತಿ ಇದೆ. ನಂತರದಲ್ಲಿಜಾತ್ರಾಕಮಿಟಿಯವರು ಈ ಕುಸ್ತಿಗಳ ಖರ್ಚುವೆಚ್ಚ ಭರಿಸುತ್ತಾ ಬಂದಿದ್ದರು. ಇತ್ತೀಚಿನ ವರ್ಷಗಳಲ್ಲಿ ಪ್ರಭುಲಿಂಗೇಶ್ವರಸುಗರ್ಸ್ ರೂವಾರಿ ನಾಡೋಜ ಜಗದೀಶ ಗುಡಗುಂಟಿ



ಅವರು ಈ ಕ್ರೀಡೆಯ ಜವಾಬ್ದಾರಿ ಹೊತ್ತು, ಭಾಗವಹಿಸಿದ ಎಲ್ಲ ಕುಸ್ತಿ ಕ್ರೀಡಾಪಟುಗಳಿಗೆ ಬಹುಮಾನದ ಹಣ ನೀಡುತ್ತಾ ಬಂದಿದ್ದಾರೆ ಎಂದು ಗ್ರಾಮದ ಹಿರಿಯರಾದ ಗ್ರಾಮದ ಈರಯ್ಯ ಹಿರೇಮಠ ಸ್ವಾಮಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಧರ್ಮಲಿಂಗಯ್ಯ ಗುಡಗುಂಟಿ, ಶಂಕರ ನಿಂಗಸಾಣಿ, ಸಿದ್ರಾಯ ಅಳ್ಳಿಮಟ್ಟಿ, ರಾಜು ಕಲಕಂಬ, ಅಡಿವೆಪ್ಪ ಭಾವಿಕಟ್ಟಿ, ಸಂಜೀವ ತೇಲಿ, ಲಕ್ಷ್ಮಣ ತೇಲಿ, ಬಸಪ್ಪ ಕಾಗವಾಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಂಭ್ರಮದ ಸಂಗಮನಾಥನ ರಥೋತ್ಸವ

ಬೀಳಗಿ: ತಾಲೂಕಿನ ಪುಣ್ಯಕ್ಷೇತ್ರ ಚಿಕ್ಕಸಂಗಮ ಗ್ರಾಮದಲ್ಲಿ ಸಂಗಮೇಶ್ವರ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ರಥೋತ್ಸವ ಶ್ರದ್ಧಾಭಕ್ತಿಯಿಂದ ಜರುಗಿತು.

ಗಿರಿಸಾಗರದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಮುತ್ತತ್ತಿಯ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಬಿಲ್‌ಕೆರೂರದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಿ, ಸಂಜೆ ರಥೋತ್ಸವ ಆರತಿ, ಸಕಲ ವಾದ್ಯ ವೈಭವದೊಂದಿಗೆ ಜರುಗಿತು. ಪ್ರಧಾನ ಅರ್ಚಕ ಚಂದ್ರಶೇಖರಯ್ಯ ಪಾಟೀಲ, ವಿಶ್ವೇಶ್ವರಯ್ಯ ಪಾಟೀಲ, ಕುಮಾರಸ್ವಾಮಿ ಪಾಟೀಲ, ಪ್ರವೀಣಸ್ವಾಮಿ ಪಾಟೀಲ ನೇತೃತ್ವದ ಅರ್ಚಕರ ತಂಡ ಮುಂಜಾನೆ ಸಂಗಮನಾಥನಿಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಹೋಮ ಹವನ ಮಹಾಮಂಗಳಾರತಿ ನೆರವೇರಿಸಿದ ಬಳಿಕ ಕಳಸದ ಪೂಜೆ, ಮಹಾ ಪ್ರಸಾದ ನೆರವೇರಿತು. ವಿವಿಧೆಡೆಯಿಂದ ಆಗಮಿಸಿದ ಭಕ್ತರು ನೈವೇದ್ಯ, ಕಾಯಿ ಕರ್ಪೂರ ಅರ್ಪಿಸಿದರು. ಬೀಳಗಿ ತಾಲೂಕಿನಲ್ಲಿಯೇ ಚಿಕ್ಕಸಂಗಮ ಪುಣ್ಯಕ್ಷೇತ್ರವೂ ಹೌದು. ಪ್ರವಾಸಿತಾಣವೂ ಹೌದು. ಅಸಂಖ್ಯಾತ ಕುಟುಂಬಗಳ ಮನೆದೇವರಾಗಿದ್ದು, ಅಪಾರ ಭಕ್ತ ಸಮೂಹವನ್ನು ಹೊಂದಿರುವನು. ಸದ್ಭಕ್ತರ ಇಚ್ಛೆಯಂತೆ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದವರು ಮಹಾರಥವನ್ನು ನಿರ್ಮಿಸಲು ಸಹಕಾರ ನೀಡಬೇಕು. ಬರುವ ವರ್ಷ ನೂತನ ಮಹಾರಥವನ್ನು ಎಳೆಯುವ ಮೂಲಕ ಭಕ್ತರ ಕೋರಿಕೆ ನೆರವೇರಿಸಬೇಕು ಎಂದು ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಎಂದರು.



ಕಿರುಸುದ್ದಿ



ಕೊಲ್ಹಾರ: ಪಟ್ಟಣದಲ್ಲಿ ದಿಗಂಬರೇಶ್ವರ ಜಾತ್ರಾ ಮಹೋತ್ಸವದ ಶುಕ್ರವಾರ ಹಾಲೊಓಕುಳಿಯನ್ನು ದಿಗಂಬರೇಶ್ವರ ಮಠದ ಕಲ್ಲಿನಾಥದೇವರು ಹಾಗೂ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಚಾಲನೆ ನೀಡಿದರು. ಉಸ್ಮಾನ್ ಪಟೇಲ್, ಚಿನ್ನಪ್ಪ ಗಿಡ್ಡಪ್ಪಗೋಳ, ಬಸಪ್ಪ ಕೊಠಾರಿ, ಹನುಮಂತ ಬೆಳ್ಳಬ್ಬಿ, ಸಗರಪ್ಪ ಮೂರನಾಳ ಸೇರಿದಂತೆ ಇದ್ದರು.

ಪ್ರತಿಭಾ ಪುರಸ್ಕಾರ ಇಂದು

ಮುದ್ದೇಬಿಹಾಳ: ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಪಾಟೀಲ್ ಕಾಲೇಜಿನ ವೈದ್ಯಕೀಯ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ವಾರ್ಷಿಕ ಪ್ರತಿಭಾ ಪುರಸ್ಕಾರ ಹಾಗೂ ಆಕ್ಸಫರ್ಡ್ ಜೀನಿಯಸ್ ಸ್ಪರ್ಧೆ ಏ.4ರಂದು ಶನಿವಾರ ಬೆಳಗ್ಗೆ 10 ಗಂಟೆಯಿಂದ ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಸಮಾರಂಭದಲ್ಲಿ ಬಿದನೂರು, ಕಂಠಿ ಮಠದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಕುಲಸಚಿವ ಶಂಕರಗೌಡ ಸೋಮನಾಳ ಕಾರ್ಯಕ್ರಮ ಉದ್ಘಾಟಿಸುವರು. ಆಕ್ಸಫರ್ಡ್ ಸಮೂಹ ಸಂಸ್ಥೆಯ ಚೇರ್ಮನ್ ಎಂಎಸ್ ಪಾಟೀಲ್ ಅಧ್ಯಕ್ಷತೆ ವಹಿಸುವರು. ದೇವಿಕಾರ ಸುಬ್ಬರಾವ್ ಸಂಸ್ಥೆಯ ಪಲ್ಲವಿ ನಾಡಗೌಡ, ಸಮಾಜ ಸೇವಕ ಶಾಂತಗೌಡ ಪಾಟೀಲ್, ಇಲಕಲ್ ವಿಜಯ ಮಹಾಂತೇಶ ಮಹಾವಿದ್ಯಾಲಯದ ಡಾ.ಎಸ್.ವಿ.ಬಿರಾದಾರ, ಬೆಂಗಳೂರು ಎಂವಿಜೆ ವೈದ್ಯಕೀಯ ಕಾಲೇಜಿನ ಡಾ.ಬಸವರಾಜ ಅಸ್ಕಿ ವಿಶೇಷ ಅತಿಥಿಗಳಾಗಿ, ಆಡಳಿತ ಅಧಿಕಾರಿ ಅಮಿತ್‌ಗೌಡ ಪಾಟೀಲ, ದರ್ಶನ ಪಾಟೀಲ ಭಾಗವಹಿಸುವರು.

ಇಂದಿನಿಂದ ಪುಣ್ಯಸ್ಮರಣೆ

ಮುದ್ದೇಬಿಹಾಳ: ಪಟ್ಟಣದ ಹೊರ ವಲಯದಲ್ಲಿ ಹಡಲಗೇರಿ ರಸ್ತೆಗೆ ಹೊಂದಿ ಕೊಂಡಿರುವ ಪವಾಡ ಬಸವೇಶ್ವರ ಆಶ್ರಮದಲ್ಲಿ ಮೌನಯೋಗಿ ಬಸಪ್ಪ ಶರಣರ 29ನೇ ಪುಣ್ಯ ಸ್ಮರಣೋತ್ಸವ ಏ.4, 5ರಂದು ನಡೆಯಲಿದೆ. ಏ.4ರಂದು ಶನಿವಾರ ರಾತ್ರಿ ಅಖಂಡ ಭಜನೆ ನಡೆಯಲಿದೆ. ಏ.5ರಂದು ಭಾನುವಾರ ಬೆಳಗ್ಗೆ 10.30ಕ್ಕೆ ಪುಣ್ಯ ಸ್ಮರಣೋತ್ಸವದ ಪ್ರಯುಕ್ತ ಶರಣರ ಗದ್ದುಗೆಗೆ ಅಭಿಷೇಕ, ಪೂಜೆ, ಭಜನ, ಮಹಾ ನೈವೇದ್ಯ, ಮಂಗಳಾರತಿ, ಹಾಗೂ ಮಧ್ಯಾಹ್ನ 1ಕ್ಕೆ ಮಹಾಪ್ರಸಾದ ವಿತರಣೆ ಇರುತ್ತದೆ. ಪುಣ್ಯ ಸ್ಮರಣೋತ್ಸವ ಚನ್ನಮ್ಮಲ್ಲಪ್ಪ ಶರಣರ ದಿವ್ಯ ನೇತೃತ್ವದಲ್ಲಿ ವಿವಿಧ ಮಠಾಧೀಶರು, ಸಂತರ ಸಮ್ಮುಖದಲ್ಲಿ ನಡೆಯಲಿದೆ.

ಏ.30ರೊಳಗೆ ಆಸ್ತಿ ತೆರಿಗೆ ಪಾವತಿಸಿದರೆ ರಿಯಾಯತಿ

ನಾಲತವಾಡ: ಸ್ಥಳೀಯ ಪಪಂ ವ್ಯಾಪ್ತಿಯ ನಾಗರಿಕರು 2026-27ನೇ ಸಾಲಿನ ಆಸ್ತಿ ತೆರಿಗೆ ಪಾವತಿಯನ್ನು ಏ.1ರಿಂದ 30ರೊಳಗೆ ಮಾಡಿ ಒಟ್ಟು ಮೊತ್ತದಲ್ಲಿ ಶೇ.5ರಷ್ಟು ಪಡೆಯಬಹುದಾಗಿದೆ. ನಿಗದಿತ ಅವಧಿಯೊಳಗೆ ಪಾವತಿ ಮಾಡಿ, ರಿಯಾಯಿತಿ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು ಎಂದು ಪಪಂ ಮುಖ್ಯಾಧಿಕಾರಿ ಈರಣ್ಣ ಕೊಣ್ಣೂರ ತಿಳಿಸಿದ್ದಾರೆ. ಮೇ ಮತ್ತು ಜೂನ್ ತಿಂಗಳಲ್ಲಿ ಯಾವುದೇ ರೀತಿಯ ರಿಯಾಯಿತಿ ನೀಡಲಾಗುವುದಿಲ್ಲ. ಜುಲೈನಿಂದ ಒಟ್ಟು ಆಸ್ತಿ ತೆರಿಗೆಯ ಮೊತ್ತಕ್ಕೆ ಶೇ.2ರಷ್ಟು ಬಡ್ಡಿ ವಿಧಿಸಲಾಗುವುದು. ಆಸ್ತಿ ತೆರಿಗೆ ಪಾವತಿ ಮಾಡಲು ಪಪಂಕಚೇರಿಯಲ್ಲಿ ಕೌಂಟರ್ ತೆರೆಯಲಾಗಿದೆ. ಭೇಟಿ ನೀಡಿ ತೆರಿಗೆ ಪಾವತಿ ಮಾಡಬಹುದಾಗಿದೆ. ಗೂಗಲ್ ಪೇ, ಫೋನ್ ಪೇ ಮೂಲಕವೂ ತೆರಿಗೆ ಪಾವತಿ ಮಾಡಬಹುದು ಎಂದು ಅಧ್ಯಕ್ಷೆ ವಿಜಯಲಕ್ಷ್ಮೀ ಇಲಕಲ್, ಉಪಾಧ್ಯಕ್ಷ ಬಸವರಾಜ ಗಂಗನಗೌಡ್ರ(ಗಡ್ಡಿ) ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಯಶಸ್ವಿ: ಬಿಇಒ ಕಟ್ಟಿಮನಿ

ಚಡಚಣ: ತಾಲೂಕಿನ 11 ಪರೀಕ್ಷಾ ಕೇಂದ್ರಗಳಲ್ಲಿ ಗುರುವಾರ ಮುಕ್ತಾಯಗೊಂಡ ಎಸ್ಸೆಸ್ಸೆಲ್ಸಿ ಪರೀಕ್ಷೆ-01 ಅತ್ಯಂತ ಯಶಸ್ವಿಯಾಗಿ ಜರುಗಿತು ಎಂದು ಬಿಇಒ ಚಿದಾನಂದ ಕಟ್ಟಿಮನಿ ತಿಳಿಸಿದ್ದಾರೆ. ನಕಲು ಮುಕ್ತ ಹಾಗೂ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಜಿಲ್ಲಾಡಳಿತ ನೀಡಿದ ಸೂಚನೆಯ ಮೇರೆಗೆ ಮುಂಜಾಗ್ರತಾ ಕ್ರಮಗಳನ್ನು ಚಾಚು ತಪ್ಪದೆ ಪಾಲಿಸಿ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಯಶಸ್ವಿಗೊಳಿಸಲು ಸಹಕರಿಸಿದ ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ, ನೋಡೆಲ್ ಅಧಿಕಾರಿಗಳು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ, ಕೊಠಡಿ ಮೇಲ್ವಿಚಾರಕರಿಗೆ ಅಭಿನಂದನೆ ಸಲ್ಲಿಸಿದರು.



ಮುದ್ದೇಬಿಹಾಳ: ಸುದೀರ್ಘ 20 ವರ್ಷ ಸೈನ್ಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸೈನಿಕ ಭೀಮಣ್ಣ ವನಹಳ್ಳಿ ಮುದ್ದೇಬಿಹಾಳಕ್ಕೆ ಆಗಮಿಸಿದ ಸಂದರ್ಭದಲ್ಲಿ ಮೆರವಣಿಗೆ ಮೂಲಕ ಕರೆತಂದು ಸ್ವಾಗತ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಸೈನ್ಯದಲ್ಲಿ ಶತ್ರುಗಳೊಂದಿಗೆ ಹೋರಾಡಿ ವೀರ ಮರಣವನ್ನಪ್ಪಿದ ಸೈನಿಕರ ಧರ್ಮ ಪತ್ನಿಯರು ಒಂದಾಗಿ ತಮ್ಮದೊಂದು ಸಂಘಟನೆ ಮಾಡಿಕೊಂಡು ಸಭೆಯಲ್ಲಿ ಅವರಿಗೆ ಗೌರವಿಸಿದರು. ಕೋಳೂರಿನ ವೀರ ಮಾರುತೇಶ್ವರ ದೇವಸ್ಥಾನದ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಉತ್ತಮ ಆಡಳಿತಗಾರನಿಗೆ ಸಹನೆ ಮುಖ್ಯ

ವಿಜಯಪುರ: ಸಹನೆ, ಕಠಿಣ ಪರಿಶ್ರಮ, ತ್ಯಾಗ ಹಾಗೂ ಸಮರ್ಪಣಾ ಮನೋಭಾವಗಳನ್ನು ಅಳವಡಿಸಿಕೊಂಡವರು ಉತ್ತಮ ಆಡಳಿತಗಾರರಾಗಲು ಸಾಧ್ಯ ಎಂದು ಬಿಎಲ್‌ಡಿಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ.ಆರ್.ವಿ.ಕುಲಕರ್ಣಿ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಪ್ರಾಚಾರ್ಯೆ ಡಾ.ಆರ್.ಎಂ.ಮಿರ್ಧೆ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು. ನಿವೃತ್ತ ಪ್ರಾಚಾರ್ಯೆ ಡಾ.ಆರ್.ಎಂ.ಮಿರ್ಧೆ ಮಾತನಾಡಿ, ಬಿಎಲ್‌ಡಿಇ ಸಂಸ್ಥೆಯಲ್ಲಿ ಸುದೀರ್ಘ 38 ವರ್ಷಗಳ ಸಾರ್ಥಕ ವೃತ್ತಿ ಬದುಕು ಸಾಗಿಸಿದ್ದೇನೆ. ಇಂದು ವೃತ್ತಿ ಜೀವನದ ಕೊನೆಯ ದಿನ ಈ ಸಂಸ್ಥೆ ನನಗೆ ಬಹಳಷ್ಟು ಜವಾಬ್ದಾರಿಯನ್ನು ನೀಡಿತ್ತು. ಅವುಗಳನ್ನು ನಿಮ್ಮೆಲ್ಲರ ಸಹಕಾರ ಹಾಗೂ ಸಲಹೆಯ ಮೇರೆಗೆ ಯಶಸ್ವಿಯಾಗಿ ನಿರ್ವಹಣೆ ಮಾಡಿದ್ದೇನೆ. ನನ್ನ ಕುಟುಂಬ ಸದಸ್ಯರು ಸಹಿತ ನನಗೆ ಬೆನ್ನೆಲುಬಾಗಿ ಇಷ್ಟು ದೊಡ್ಡ ಸಂಸ್ಥೆಯ ಜವಾಬ್ದಾರಿಯುತ ಹುದ್ದೆಯನ್ನು ನಿರ್ವಹಿಸಲು ಸಹಕಾರ ನೀಡಿದರು ಎಂದರು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಪ್ರೊ.ಎಸ್.ಎಚ್. ಲಗಳಿ, ಆಡಳಿತಾಧಿಕಾರಿ ಪ್ರೊ.ವಿ.ಎಸ್.ಬಗಲಿ ಮಾತನಾಡಿದರು. ಬಿಎಲ್‌ಡಿಇ ಸಂಸ್ಥೆಯ ದೈಹಿಕ ನಿರ್ದೇಶಕ ಎಸ್.ಎಸ್.ಕೋರಿ, ಪಿಯುಸಿ ಆಡಳಿತಾಧಿಕಾರಿ ಐ.ಎಸ್.ಕಾಳಪ್ಪನವರ, ಬಿಎಲ್‌ಡಿಇ ಸಂಸ್ಥೆಯ ಅಧಿಕಾರಿಗಳು, ಪ್ರಭಾರ ಪ್ರಾಚಾರ್ಯ ಡಾ.ಅನೀಲ ನಾಯಕ, ಡಾ.ಪಿ.ಎಸ್.ಪಾಟೀಲ ಇದ್ದರು.



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯೆ ಡಾ.ಆರ್.ಎಂ.ಮಿರ್ಧೆ ಅವರ ಬೀಳ್ಕೊಡುಗೆ ಸಮಾರಂಭ ನಡೆಯಿತು. ಡಾ.ಎಸ್.ಟಿ.ಮೇರವಾಡೆ, ಪ್ರೊ.ಆರ್.ಎಚ್.ಬಿದರಿ, ಪ್ರೊ.ಜಿ.ಆರ್.ಅಂಬಲಿ, ಪಿಯುಸಿ ಪ್ರಾಚಾರ್ಯ ಪ್ರೊ.ಸಿ.ಬಿ.ಪಾಟೀಲ, ಪ್ರೊ.ಎಸ್.ಜಿ.ಜೇರಗಾಳಿ, ಡಾ.ಎಸ್.ಬಿ.ಕಮತಿ ನಿವೃತ್ತ ಪ್ರಾಚಾರ್ಯ ಡಾ.ಯು.ಎಸ್.ಪೂಜೇರಿ ಇದ್ದರು.

ಜನಗಣತಿ ಯಶಸ್ಸಿಗೆ ಕೈಜೋಡಿಸಿ: ಡಿಸಿ

ವಿಜಯಪುರ: ಜಿಲ್ಲೆಯಾದ್ಯಂತ ಏ.1ರಿಂದ ರಾಷ್ಟ್ರೀಯ ಜನಗಣತಿಯ ಮೊದಲ ಹಂತದ ಸ್ವಯಂ ಜನಗಣತಿ ಕಾರ್ಯಾರಂಭವಾಗಿದ್ದು, ಏ.15ರೊಳಗಾಗಿ ಸಾರ್ವಜನಿಕರು, ಎಲ್ಲ ಇಲಾಖೆಗಳ ಅಧಿಕಾರಿ, ಸಿಬ್ಬಂದಿ ಸ್ವಯಂ ಗಣತಿಗೊಳಪಡಿಸುವ ಮೂಲಕ ಜನಗಣತಿ ಕಾರ್ಯ ಯಶಸ್ವಿಗೆ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ರಾಷ್ಟ್ರೀಯ ಜನಗಣತಿ 2027 ರ ಮೊದಲ ಹಂತದ ಸ್ವಯಂ ಗಣತಿ ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಅವರು ಮಾತನಾಡಿದರು. ಪ್ರತಿ ಇಲಾಖೆಗಳ ಮುಖ್ಯಸ್ಥರು ತಮ್ಮ ಸಿಬ್ಬಂದಿಯ ಸ್ವಯಂ ಗಣತಿ ಪೂರ್ಣಗೊಳಿಸಿ ಎನ್ಯೂಮರೇಶನ್ ಮಾಡಿಸಬೇಕು. ತಮ್ಮ ಕಚೇರಿಗಳಲ್ಲಿ ಎಷ್ಟು ಜನರದ್ದು ಆಗಿದೆ ಎಂಬ ವರದಿಯನ್ನು ಜಿಲ್ಲಾಡಳಿತಕ್ಕೆ ತಕ್ಷಣ ಸಲ್ಲಿಸುವ ಮೂಲಕ ಜನಗಣತಿ ಯಶಸ್ವಿಗೊಳಿಸಲು ಜಿಲ್ಲಾಧಿಕಾರಿಗಳು ತಿಳಿಸಿದರು. ನಾನು ಈಗಾಗಲೇ



ಸ್ವಯಂ ಗಣತಿ ಮಾಡಿಕೊಂಡಿದ್ದೇನೆ. ಹಾಗಾಗಿ ಎಲ್ಲ ಸಾರ್ವಜನಿಕರು, ಅಧಿಕಾರಿ, ಸಿಬ್ಬಂದಿ ಸ್ವಯಂ ಗಣತಿ ಆನ್‌ಲೈನ್ ಮೂಲಕ ಮಾಡುವಂತೆ ಅವರು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಜಿಲ್ಲೆಯ ಪ್ರತಿ ಪೊಲೀಸ್ ಠಾಣೆ ಸಿಬ್ಬಂದಿಯನ್ನು ಸ್ವಯಂ ಗಣತಿ ಮಾಡಿಸಿಕೊಳ್ಳಲು ಸೂಚಿಸುವುದಾಗಿ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು. ಇದಕ್ಕೆ ಸಮಯ ಬಹಳೇನಿಲ್ಲ, ಕೇವಲ 15 ದಿನಗಳಲ್ಲಿ ಈ ಪ್ರಕ್ರಿಯೆ

- ಜನಗಣತಿಯಲ್ಲಿ ಜಿಲ್ಲೆಯ ಪ್ರತಿಯೊಬ್ಬರೂ ಭಾಗವಹಿಸುವುದು ಕಡ್ಡಾಯವಾಗಿದೆ.
- ಪ್ರತಿ ತಾಲೂಕಿನಿಂದ ಯಾರೂ ಜನಗಣತಿಯಿಂದ ಹೊರಗುಳಿಯದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ನೋಡಿಕೊಳ್ಳಬೇಕು.
- ಸ್ವಯಂ ಗಣತಿ ಕಠಿಣವಾಗಿಲ್ಲ, ಅದು ಸರಳವಾಗಿದೆ.

ಪೂರ್ಣಗೊಳಿಸಬೇಕಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲ ಸಿಬ್ಬಂದಿಗೆ ತರಬೇತುಗೊಳಿಸಲಾಗಿದೆ. ಆ ತರಬೇತಿದಾರರಿಗೆ ಶೀಘ್ರದಲ್ಲಿ ಗುರುತಿನ ಚೀಟಿ ನೀಡಲಾಗುವುದು ಎಂದ ಅವರು, 600ರಿಂದ 800 ಜನರಿಗೆ ಸಾಕಾಗುವಷ್ಟು ಸಿಬ್ಬಂದಿ ನಿಯೋಜಿಸಬೇಕು ಎಂದರು. ಜಿಪಂ ಸಿಇಒ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಇದ್ದರು.

ರೈತರ ಜಮೀನುಗಳಿಗೆ ಒಂದೇ ದರ ನಿಗದಿ ಮಾಡಿ: ಶಾಸಕ ರಾಜುಗೌಡ ಪಾಟೀಲ

ದೇವರಹಿಪ್ಪರಗಿ: ತಾಲೂಕಿನ ಚಾಲವಾದ ಗ್ರಾಮದಲ್ಲಿ ಆರ್‌ಎಫ್‌ಝುಡ್ ಕಂಪನಿ ಮಾಲೀಕರುರೈತರಜಮೀನುಗಳಿಗೆಪರಿಹಾರ ನೀಡುವಲ್ಲಿ ತಾರತಮ್ಯ ಎಸಗಿದ್ದಾರೆ. ಎಲ್ಲಾ ರೈತರಿಗೆ ಒಂದೇ ದರ ನಿಗದಿ ಮಾಡಿ ಪರಿಹಾರ ಒದಗಿಸಬೇಕು ಅಲ್ಲಿಯವರೆಗೆ ಕೆಲಸ ಬಂದ್ ಮಾಡಲು ತಹಶೀಲ್ದಾರ್ ನಿಂಗಣ್ಣ ಬಿರಾದಾರ ಅವರಿಗೆ ಶಾಸಕ ರಾಜುಗೌಡ ಪಾಟೀಲ(ಕುದರಿಸಾಲವಾಡ) ಗೆ ಸೂಚನೆ ನೀಡಿದರು.

ತಾಲೂಕಿನ ಚಾಲವಾದ ಗ್ರಾಮದಲ್ಲಿ ಗುರುವಾರ 11ನೇ ದಿನದ ರೈತ ಸಂಘ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ರೈತರ ಧರಣಿ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಆರ್.ಎಫ್.ಝುಡ್ ಕಂಪನಿ ಮಾಲೀಕರು ದಲ್ಲಾಳಿಗಳು ರೈತರಿಗೆ ನ್ಯಾಯಯುತ ಬೆಲೆ ನೀಡಲು ಒತ್ತಾಯ ಮಾಡಿದರು. ಸುಮಾರು 20 ಜನ ರೈತರಿಂದ 69 ಎಕರೆ ಜಮೀನು ಖರೀದಿಸಿದ್ದು ಕೆಲ ರೈತರಿಗೆ ಎಕರೆಗೆ 28 ಲಕ್ಷ ನೀಡಿದ್ದಾರೆ, ಇನ್ನು ಕೆಲ ಜನರಿಗೆ 16 ಲಕ್ಷ ನೀಡಿದ್ದಾರೆ. ಎಲ್ಲಾ ಒಂದೇ ತರನಾದ ಜಮೀನುಗಳಿಗೆ ಈ ರೀತಿಯ ಬೆಲೆ ನಿಗದಿ ಮಾಡಿದ್ದು ರೈತರಿಗೆ ಅನ್ಯಾಯ ಎಸಗಿದ್ದಾರೆ. ಕೂಡಲೇ ಕಂಪನಿಯವರು ರೈತರ ಜಮೀನುಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಬಂದ್ ಮಾಡಿ ರೈತರಿಗೆ ಒಂದೇ ರೀತಿಯಾಗಿ ಪರಿಹಾರ ಒದಗಿಸಬೇಕು ಅಲ್ಲಿಯವರೆಗೆ ಕಂಪನಿಯವರಿಗೆ ನೋಟಿಸ್ ನೀಡಿ ಎಂದು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದರು.

ಸಂದರ್ಭದಲ್ಲಿ ಉತ್ತರ ಕರ್ನಾಟಕದ ರೈತ ಸಂಘದ ಅಧ್ಯಕ್ಷರಾದ ಶಂಕರಗೌಡ ಹಿರೇಗೌಡ ಅವರು ಮಾತನಾಡಿ ರೈತರ ಜಮೀನುಗಳಿಗೆ ಒಂದೇ ರೀತಿ ಬೆಲೆ ನಿಗದಿ ಮಾಡಿ ಪರಿಹಾರ ಒದಗಿಸಬೇಕು. ಜಮೀನು ಕಳೆದುಕೊಂಡ ರೈತರ ಕುಟುಂಬದ ಒಬ್ಬರಿಗೆ ಕೆಲಸ ನೀಡಬೇಕು ಎಂದು ಒತ್ತಾಯಿಸಿದರು.

ಭೀಮರಾಯ ಮನಗೂಳಿ, ಚಾಂದ ಇನಾಮದಾರ, ಮಡು ದಳವಾಯಿ, ಶಿವರಾಜ ನೀರಲಗಿ, ಪ್ರಧಾನಿ ನೀರಲಗಿ, ಈರಪ್ಪ ನಡುಗೇರಿ, ಸಲೀಂ ಮುಲ್ಲಾ, ಅಲ್ಲಾಬಾಕ್ಷ ಇನಾಮದಾರ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ ರೈತರು ಉಪಸ್ಥಿತರಿದ್ದರು.



ಶಿವಯೋಗಿಗಳ ಸ್ಮಾರಕ ನಿರ್ಮಾಣಕ್ಕೆ ಆಗ್ರಹ

ಬಸವನಬಾಗೇವಾಡಿ: ವಿಜಯಪುರ ಜಿಲ್ಲೆಯಾದ್ಯಂತ ಶಿಕ್ಷಣ ಕ್ರಾಂತಿ ಮಾಡಿದ ಶೈಕ್ಷಣಿಕ ಕ್ರಾಂತಿಯ ಹರಿಕಾರ, ಅಕ್ಷರ ದಾಸೋಹಿ ಬಂಥನಾಳದ ಲಿಂಗೈಕ್ಯ ಸಂಗನಬಸವ ಶಿವಯೋಗಿಗಳ ಸ್ಮಾರಕ ನಿರ್ಮಾಣ ಮಾಡುವಂತೆ ಆಗ್ರಹಿಸಿ ವಿವೇಕ್ ಬ್ರಿಗೇಡ್ ಸಂಸ್ಥೆ ಸದಸ್ಯರು ಗುರುವಾರ ಗ್ರೇಡ್ ತಹಶೀಲ್ದಾರ್ ಎಚ್.ಎಸ್.ಅರಕೇರಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಲಿಂಗೈಕ್ಯ ಸಂಗನಬಸವ ಶಿವಯೋಗಿ ಮಹಾಪುರುಷರ ಜೀವನ ಆದರ್ಶಗಳು ನಮ್ಮ ಯುವ ಪೀಳಿಗೆಗೆ ತಿಳಿಸುವಂತೆ ಶಾಶ್ವತವಾಗಿ ಉಳಿಯಲು ಜಿಲ್ಲೆಯಲ್ಲಿ ಸಂಗನಬಸವ ಶಿವಯೋಗಿಗಳು ಭವ್ಯ ಸ್ಮಾರಕವಾಗಬೇಕು, ಈ ನಿಟ್ಟಿನಲ್ಲಿ ಸರಕಾರ ಚಿಂತನೆ ನಡೆಸಬೇಕು ಎಂದು ವಿವೇಕ್ ಬ್ರಿಗೇಡ್ ಸಂಸ್ಥೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.



ವಿನೂತ ಕಲ್ಲೂರ ಮಾತನಾಡಿದರು, ರವಿಗೌಡ ಚಿಕ್ಕೊಂಡ, ಶಿವರುದ್ರಯ್ಯ ಹಿರೇಮಠ, ಮಣಿಕಂಠ ಕಲ್ಲೂರ, ಉಮೇಶ ಅವಟಿ, ಮಲ್ಲು ಬನಾಶಿ,ಶಿವಾನಂದ ಮ್ಯಾಗೇರಿ, ಸಂಗನಗೌಡ ಪಾಟೀಲ, ಸಚಿನ ಕಲ್ಲೂರ, ಭೀಮು ಬಸ್ತಾಳ, ಶಿವಾನಂದ ಭಟ್ಟಲ, ಶ್ರೀಶೈಲ ಕೋಲಕಾರ, ಬಸವರಾಜ ಉಳ್ಳಾಗಡ್ಡಿ ಇದ್ದರು.

ಧರಣಿಗೆ ಕುರುಹಿನಶೆಟ್ಟಿ ಸಮಾಜದಿಂದ ಬೆಂಬಲ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ 'ಪ್ರಜಾಸೌಧ'ದ ಸ್ಥಳ ಆಯ್ಕೆ ವಿರೋಧಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಗುರುವಾರ 38ನೇ ದಿನಕ್ಕೆ ಯಶಸ್ವಿಯಾಗಿ ಮುಂದುವರಿಯಿತು. ಈ ಹೋರಾಟಕ್ಕೆ ತಾಲೂಕಿನ ಕುರುಹಿನಶೆಟ್ಟಿ ಸಮಾಜವು ಸಂಪೂರ್ಣ ಬೆಂಬಲ ಘೋಷಿಸಿ ಧರಣಿಯಲ್ಲಿ ಭಾಗವಹಿಸಿತು.

ಮುಖಂಡ ಸುಭಾಸ ಬಿಳೆಭಾವಿ ಮಾತನಾಡಿ, ಪ್ರಜಾಸೌಧವು ಸಾರ್ವಜನಿಕರಿಗೆ ಸುಲಭವಾಗಿ ತಲುಪುವಂತಿರಬೇಕು. ಆದರೆ ಈಗ ಗುರುತಿಸಲಾದ ಸ್ಥಳವು ಪಟ್ಟಣದಿಂದ ದೂರವಿದ್ದು, ನಿರ್ಜನ ಪ್ರದೇಶದಲ್ಲಿದೆ. ಇಲ್ಲಿ ಸೌಧ ನಿರ್ಮಿಸಿದರೆ ವೃದ್ಧರು, ಮಹಿಳೆಯರು, ವಿದ್ಯಾರ್ಥಿನಿಯರು ಮತ್ತು ಅಂಗವಿಕಲರಿಗೆ ಸುರಕ್ಷತೆ ದೃಷ್ಟಿಯಿಂದ ಹಾಗೂ ಓಡಾಟಕ್ಕೆ ತೀವ್ರ ತೊಂದರೆಯಾಗಲಿದೆ. ಸರ್ಕಾರ ಕೂಡಲೇ ಸರ್ಕಾರಿ ಜಾಗದಲ್ಲಿಯೇ ಕಟ್ಟಡ ನಿರ್ಮಿಸಬೇಕು ಎಂದರು.

ಜಿಲ್ಲಾಡಳಿತ ಮತ್ತು ಉಸ್ತುವಾರಿ ಸಚಿವರ ನಡೆಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರು ಕೇವಲ ಬಬಲೇಶ್ವರ ಅಥವಾ ತಿಕೋಟಾಕ್ಕೆ ಸೀಮಿತರಲ್ಲ, ಅವರು ಇಡೀ ಜಿಲ್ಲೆಗೆ ಜವಾಬ್ದಾರರು. 37-38 ದಿನಗಳಿಂದ ಜನ ರಸ್ತೆಯಲ್ಲಿ ಕುಳಿತು ಪ್ರತಿಭಟಿಸುತ್ತಿದ್ದರೂ ಸಚಿವರು ಕಣ್ಣು ಮುಚ್ಚಿ ಕುಳಿತಿರುವುದು ವಿಷಾದನೀಯ. ಇಲ್ಲಿ ಜಾಗ ದಾನ ನೀಡಿದವರ ಹಿಂದೆ ಸ್ವಹಿತಾಸಕ್ತಿಯಿದ್ದು, ತಮ್ಮ ಜಮೀನುಗಳನ್ನು ವಾಣಿಜ್ಯೀಕರಣಗೊಳಿಸುವ ಉದ್ದೇಶದಿಂದ ಈ ಸಂಚು ರೂಪಿಸಲಾಗಿದೆ ಎಂದು ಗಂಭೀರ ಆರೋಪ ಮಾಡಿದರು.

ಬಸವರಾಜ ಹೊಟ್ಟಿ, ಚನ್ನಪ್ಪ ಮಸ್ಕನಾಳ, ನಾಗಪ್ಪ ಅಲ್ಲಾಪುರ, ವೀರಭದ್ರ ಹಂದಿಗನೂರ, ಶಿವಾನಂದ ಊರಣ್ಣವರ, ನೀಲಕಂಠ ಹಂದಿಗನೂರ, ಮಲ್ಲು ಕೊಳಕೂರ, ಸಿದ್ದು ಕೊಳುಕುರ, ಸುಭಾಸ್ ಅಲ್ಲಾಪೂರ, ಗಂಗಾಧರ ಕಲಹಾಳ, ಸುರೇಶ ಕವಡಿಮಟ್ಟಿ, ಕಾಶಿನಾಥ ಕೋಳುಕೂರ, ಚಂದ್ರಶೇಖರ ಮುಂಡಾಸ, ಬಸವರಾಜ ಹಿಪ್ಪರಗಿ, ಕಾಶಿನಾಥ ಶಹಪುರ, ಸಂಗಮೇಶ ರಂಜಣಗಿ, ಸಂಗು ದೇವೂರ, ಕಾಶೀನಾಥ ಟಕ್ಕಳಕಿ, ನಾಗಪ್ಪ ಬಳವಾಟ, ಗುರು ರವೀಂದ್ರ ಕೊಳುಕೂರ, ಶ್ರೀಶೈಲಹಂದಿಗನೂರ, ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಆರ್.ಎಸ್.ಪಾಟೀಲ ಮುತ್ತಪ್ಪ ಚಮಲಾಪುರ,, ಕಾಶಿನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಭಲವಾದಿ, ಪ್ರಕಾಶ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ ಇದ್ದರು.



ಆಸ್ಪತ್ರೆಯಲ್ಲಿ ಜೆಎಸ್‌ಎಸ್ ಲಕ್ಷ್ಮೀಪುತ್ರಿ ಸುರಕ್ಷಾ ಯೋಜನೆಗೆ ಚಾಲನೆ

ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಅಧ್ಯಕ್ಷತೆಯ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೂತನವಾಗಿ ಜಾರಿಗೆ ತರಲಾದ ಜೆಎಸ್‌ಎಸ್ ಲಕ್ಷ್ಮೀಪುತ್ರಿ ಸುರಕ್ಷಾ ಯೋಜನೆಗೆ ಸಿದ್ಧಸಿರಿ ಬಹುರಾಜ್ಯ ಬಹು ಉದ್ದೇಶ ಸಹಕಾರಿ ಸೊಸೈಟಿ ನಿಯಮಿತ ನಿರ್ದೇಶಕಿ ಶೈಲಜಾ ಬಸನಗೌಡ ಪಾಟೀಲ ಯತ್ನಾಳ ಹಾಗೂ ಅಬೋಲಿ ರಾಮನಗೌಡ ಪಾಟೀಲ ಯತ್ನಾಳ ಅವರು ಚಾಲನೆ ನೀಡಿದರು.

ನಿರ್ದೇಶಕಿ ಶೈಲಜಾ ಪಾಟೀಲ ಯತ್ನಾಳ ಮಾತನಾಡಿ, ಅತ್ಯಾಧುನಿಕ ತಂತ್ರಜ್ಞಾನ, ತಜ್ಞ ವೈದ್ಯರುಗಳೊಂದಿಗೆ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸಿ, ಅತ್ಯುತ್ತಮ ಆರೈಕೆಗೆ ಹೆಸರುವಾಸಿಯಾದ, ನಮ್ಮ ಜೆಎಸ್‌ಎಸ್ ಆಸ್ಪತ್ರೆಯಲ್ಲಿ, ಸುರಕ್ಷತೆ ಹೆರಿಗೆ ನಮ್ಮ ಬದ್ಧತೆ ಎಂಬ ಸಾಮಾಜಿಕ ಕಾಳಜಿಯೊಂದಿಗೆ ಇದೀಗ ಜಾರಿಗೆ ತಂದಿರುವ ಜೆಎಸ್‌ಎಸ್ ಲಕ್ಷ್ಮೀಪುತ್ರಿ ಸುರಕ್ಷಾ ಯೋಜನೆಯಡಿ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದರೆ ತಾಯಿಗೆ ಉಚಿತ ಆರೈಕೆ ಮಾಡಲಾಗುತ್ತದೆ. ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಗೆ



ಇಂತಹ ಯೋಜನೆಗಳು ಸಹಕಾರಿ ಆಗಲಿವೆ ಎಂದರು. ಕಾರ್ಯನಿರ್ವಾಹಕ ಅಧಿಕಾರಿ ಡಾ.ರವಿ ಆರ್.ಬಿ. (ನಾಯ್ಕ), ವೈದ್ಯರಾದ ಡಾ.ವೀಣಾ ದಿವಟೆರ, ಡಾ.ಸಂಗಮೇಶ ಮಠಪತಿ, ಡಾ.ಬಲವಂತರಾಯ ಮಸಳಿ, ಡಾ.ಸುನೀಲ ಉಕುಮನಾಳ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ, ಸಾರ್ವಜನಿಕರು ಇದ್ದರು.

ನಿವೃತ್ತ ಸೈನಿಕ ಕೃಷ್ಣಾಜಿ ಪವಾರಗೆ ಸನ್ಮಾನ



ಕೊಲ್ಹಾರ: ಭಾರತೀಯ ಸೇನೆಯಲ್ಲಿ 22 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ ಪಟ್ಟಣಕ್ಕೆ ಮರಳಿದ ಯೋಧ ಕೃಷ್ಣಾಜಿ ಸಾಬು ಪವಾರ ಅವರನ್ನು ಪಟ್ಟಣದ ದೇಶಭಕ್ತರು ಮತ್ತು ಅವರ ಸ್ನೇಹ ಬಳಗ, ಕುಟುಂಬಸ್ಥರು ಸ್ವಾಗತ ಕೋರಿದರು. 22 ವರ್ಷದಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ಬುಧವಾರ ತಮ್ಮ ಸ್ವಗ್ರಾಮ ಕೊಲ್ಹಾರ ಪಟ್ಟಣಕ್ಕೆ ಕೃಷ್ಣಾಜಿ ಪವಾರ ಆಗಮಿಸುತ್ತಿದ್ದಂತೆ ವಿಜಯಪುರಕ್ಕೆ ಹೋಗುವ ಮುಖ್ಯರಸ್ತೆಯಲ್ಲಿ ನಿಲ್ಲಿಸಿ ತೆರೆದ ವಾಹನದಲ್ಲಿ ಅವರನ್ನು ನಿಲ್ಲಿಸಿ ಬೈಕ್ ಜಾತ ಮೂಲಕ ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಪಟ್ಟಣದ ದಿಗಂಬರೇಶ್ವರ ಮಠಕ್ಕೆ ಆಗಮಿಸಿತು. ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಸಿ.ಎಂ.ಗಣಕುಮಾರ, ಮುಖಂಡ ಕಲ್ಲು ಸೊನ್ನದ, ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು ಸೇರಿದಂತೆ ಗಣ್ಯರು ಸನ್ಮಾನಿಸಿದರು.

ಭಕ್ತರಿಗೆ ಪ್ರಸಾದ ವಿತರಣೆ

ಬಸವನಬಾಗೇವಾಡಿ: ಹನುಮ ಜಯಂತಿ ನಿಮಿತ್ತ ಪಟ್ಟಣದ ಬಸವೇಶ್ವರ ವೃತ್ತದಲ್ಲಿರುವ ಜಿರ್ಣೋದ್ಧಾರ ಹಂತದಲ್ಲಿರುವ ಮಾರುತೇಶ್ವರನ ದೇವಸ್ಥಾನಕ್ಕೆ ಗುರುವಾರ ಅಪಾರ ಸಂಖ್ಯೆಯ ಭಕ್ತರು ಆಗಮಿಸಿ ಹನುಮಂತನ ದರ್ಶನ ಪಡೆದರು. ಈ ವೇಳೆ ಯೂಟ್ಯೂಬ್ ಕಲಾವಿದ ಶಿವಪುತ್ರ ಯಶೋಧರ ತಂಡದಿಂದ ದೇವಸ್ಥಾನಕ್ಕೆ ಆಗಮಿಸಿದ ಭಕ್ತರಿಗೆ ಪ್ರಸಾದ ಹಾಗೂ ಪಾನಕ ವಿತರಿಸಿದರು. ಶಿವಪುತ್ರ ಮಾತನಾಡಿ, ಭಕ್ತರಿಗೆ ಬೇಡಿದ ವರವನ್ನು ನೀಡುವ ಆಂಜನೇಯ ಸ್ವಾಮಿಯ ಜಯಂತಿ ಪ್ರಯುಕ್ತ ಪ್ರಸಾದ ಸೇವೆ ಸಲ್ಲಿಸುತ್ತಿದ್ದು ಆಂಜನೇಯ ಸ್ವಾಮಿ ಎಲ್ಲರಿಗೂ ಒಳ್ಳೆಯದನ್ನ ಮಾಡಲಿ ಎಂದರು. ಯೂಟ್ಯೂಬ್ ಕಲಾವಿದರಾದ ಹನುಮಂತ ಯಶೋಧರ, ಆನಂದ ಕಸ್ತೂರಿ, ರಾಜು ಸೇರಿದಂತೆ ಇತರರು ಇದ್ದರು.



ಸಮಾಜದ ಉನ್ನತಿಗೆ ಸ್ತ್ರೀಯರ ಕೊಡುಗೆ ಅಪಾರ



ವಿಜಯಪುರ: ಮಹಿಳೆಯ ಸ್ಥಾನ ಅತ್ಯಂತ ಹಿರಿದಾಗಿದ್ದು, ಕುಟುಂಬ ಅಷ್ಟೇ ಅಲ್ಲ ಸಮಾಜದ ಉನ್ನತಿಗೆ ಆಕೆಯ ಕೊಡುಗೆ ಅಪಾರ ಎಂದು ಖ್ಯಾತ ಪ್ರಸೂತಿ ತಜ್ಞೆ ಡಾ.ಜಯಶ್ರೀ ಮಂಗಲಗಿ ಹೇಳಿದರು.

ನಗರದ ಹಳಕೇರಿ ಗಲ್ಲಿಯ ಗಾಯಿ ಚಾಳ್‌ದಲ್ಲಿ ಸಿರಿಗನ್ನಡ ವೇದಿಕೆಯ ಮಹಿಳಾ ಘಟಕ ವತಿಯಿಂದ ಹಮ್ಮಿಕೊಂಡ ವಿಶ್ವ ಮಹಿಳಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಿವೃತ್ತ ವಿಷಯ ಪರೀಕ್ಷಕಿ ವಿಮಲಾ ಹಂದಿಗೋಳ ಮಾತನಾಡಿ, ಜೀವನದಲ್ಲಿ ಯಾವುದೇ ಬಗೆಯ ತೊಂದರೆ ಬಂದರೂ ಅದನ್ನು ಧೈರ್ಯದಿಂದ ಎದುರಿಸುವ ಗುಣವನ್ನು ಮಹಿಳೆ ಹೊಂದಿದ್ದು, ಅದಕ್ಕಾಗಿಯೇ ಮಹಿಳೆ ಅಬಲೆ ಅಲ್ಲ ಸಬಲೆ ಎನ್ನುವುದು ಎಂದರು.

ಗಾಯಕಿ ನಂದಾ ಮಿರ್ಜಿ ಮಾತನಾಡಿ, ಸಂಸಾರ ಬೆಳೆಸುವಲ್ಲಿ ಮಹಿಳೆಯ ಜವಾಬ್ದಾರಿ ಮಹತ್ವದ್ದಾಗಿದೆ ಎಂದ ಅವರು, ಮಹಿಳೆಯರಲ್ಲಿ ಹಿಂದುತ್ವದ ಬಗ್ಗೆ ಜಾಗೃತಿ ಮೂಡಿಸಿದರು. ರೇಖಾ ಮುಜುಮದಾರ, ಆರ್.ವೈ.ಕಾಂಬಳೆ, ಎಂ.ಎಂ.ಬಾಗೇವಾಡಿ, ಎಸ್.ವಿ.ಕದಂ, ಜಿ.ವೈ.ಕುಬಕಡ್ಡಿ, ಸುನಂದಾ ಹೊಕ್ರಾಣಿ ಇದ್ದರು. ವೈಶಾಲಿ ಥೊಬ್ಬಿ ಪ್ರಾರ್ಥಿಸಿದರು. ಜ್ಯೋತಿ ಕುಲಕರ್ಣಿ ಸ್ವಾಗತಿಸಿದರು. ನಿವೃತ್ತ ಶಿಕ್ಷಕಿ ಅನಿತಾ ಗಾಯಿ ಮಾತನಾಡಿದರು. ಎಸ್.ಪಿ.ಕಡ್ಲಿ ನಿರೂಪಿಸಿದರು. ವಿ.ಬಿ.ದಿವಾಣಜಿ ವಂದಿಸಿದರು.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಹಕಾರ

ಸಿಂದಗಿ: ಮುಂದಿನ ದಿನಮಾನಗಳಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಎಲ್ಲ ರೀತಿಯಲ್ಲಿ ಸಹಕರಿಸುತ್ತೇನೆ ಎಂದು ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿರುವ ಶ್ರೀಘಾಳಿ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಕ್ತರ ಕಷ್ಟಗಳನ್ನು ನಿವಾರಿಸುವ, ಬೇಡಿದವರಿಗೆ ವರವ ನೀಡುತ ಜಗತ್ತ ಉದ್ಧಾರಕ ಸಿಂದಗಿ ನಗರದ ಶ್ರೀಘಾಳಿ ಆಂಜನೇಯ ಸ್ವಾಮಿ ಜಯಂತಿಯಲ್ಲಿ ಪಾಲ್ಗೊಂಡಿರುವುದು ನನಗೆ ಅತೀವ ಸಂತಸ ತಂದಿದೆ ಎಂದರು.

ದೇವಸ್ಥಾನದ ಅರ್ಚಕ ವಿಜಯಕುಮಾರ ಪತ್ತಾರ ಮಾತನಾಡಿದರು. ಸಿಂದಗಿ ನಗರದ ಗಣ್ಯವರ್ತಕ ರಾಜಶೇಖರ ಉಪ್ಪಿನ ದಂಪತಿಗಳು ಅನ್ನ ಪ್ರಸಾದ ವ್ಯವಸ್ಥೆ ಮಾಡಿ ಆಂಜನೇಯ ಸ್ವಾಮಿಯ ಕೃಪೆಗೆ ಪಾತ್ರರಾದರು. ಜಯಂತಿಯಲ್ಲಿ ಮೂರಜಾವದಮಠ ಈರಯ್ಯ ಸ್ವಾಮಿಗಳು, ಶ್ರೀಪಾದ ಮಲ್ಲೇದ, ಬಸವರಾಜ ಶಿವಶಿಂಪಗೇರ, ಈರಣ್ಣ ಬಡಿಗೇರ, ರಾಮನಗೌಡ ಬಿರಾದಾರ, ಚನ್ನಪ್ಪಗೌಡ ಬಿರಾದಾರ, ಗುರಪ್ಪ ಪತ್ತಾರ, ರುದ್ರಯ್ಯ ಹಿರೇಮಠ, ಸಂಗಮೇಶ ಕುಂಬಾರ, ಪ್ರಭುಲಿಂಗ ಕುಂಬಾರ, ಎಪಿಎಂಸಿ ಯೋಗಾ ಗ್ರೂಪಿನ ಸದಸ್ಯರು ಇದ್ದರು.



ಜನಗಣತಿ ಕಾರ್ಯಕ್ಕೆ ಮೇಯರ್ ಚಾಲನೆ



ವಿಜಯಪುರ: ನಮ್ಮ ಜನಗಣತಿ, ನಮ್ಮ ಭವಿಷ್ಯ ಧ್ಯೇಯವಾಕ್ಯದಡಿ ದೇಶ ವ್ಯಾಪಿ ನಡೆಯಲಿರುವ ರಾಷ್ಟ್ರೀಯ ಜನಗಣತಿ 2027 ರ ಮೊದಲ ಹಂತದ ಸ್ವಯಂ ಗಣತಿ ಕಾರ್ಯಕ್ಕೆ ಇಲ್ಲಿನ ಮಹಾನಗರ ಪಾಲಿಕೆಯ ಮೇಯರ್ ಮಡಿವಾಳಪ್ಪ ಕರಡಿ ಹಾಗೂ ಉಪ ಮೇಯರ್ ಸುಮಿತ್ರಾ ಜಾಧವ ಚಾಲನೆ ನೀಡಿದರು.

ಮೇಯರ್ ಮಡಿವಾಳಪ್ಪ ಕರಡಿ ಅವರು ತಮ್ಮ ಸ್ವಯಂ ಗಣತಿ ಮಾಡುವುದರ ಮೂಲಕ ನಗರ ವ್ಯಾಪ್ತಿಯಲ್ಲಿ ಸ್ವಯಂ ಗಣತಿ ಕಾರ್ಯಕ್ಕೆ ಚಾಲನೆ ನೀಡಿ, ನಗರದ ಜನತೆ ಸ್ವಯಂ ಗಣತಿ ಮಾಡಿಕೊಳ್ಳಲು ಕರೆ ನೀಡಿದರು.

ರಾಷ್ಟ್ರೀಯ ಜನಗಣತಿ 2027ರ ಮೊದಲ ಹಂತದ ಎಚ್‌ಎಲ್‌ಒಗೆ ಸಂಬಂಧಿಸಿದಂತೆ ಏ. 1 ರಿಂದ 15 ರ ವರೆಗೆ ದತ್ತಾಂಶ ಆಧಾರಿತ ಸ್ವಯಂ ಗಣತಿ ಕಾರ್ಯವನ್ನು ನಗರದ ನಾಗರಿಕರು ತಮ್ಮ ಕುಟುಂಬದ ಸ್ವಯಂ ಗಣತಿ ಮಾಡಿಕೊಳ್ಳುವ ಮೂಲಕ ಜನಗಣತಿ ಕಾರ್ಯಕ್ಕೆ ಅಧಿಕಾರಿಗಳಿಗೆ ಸಹಕಾರ ನೀಡಬೇಕು ಎಂದರು. ಉಪ ಮೇಯರ್ ಸುಮಿತ್ರಾ ಜಾಧವ ಅವರು ಕೂಡ ಸ್ವಯಂ ಗಣತಿ ಮಾಡಿಕೊಳ್ಳುವುದರ ಮೂಲಕ ಗಣತಿ ಕಾರ್ಯಕ್ಕೆ ಸಾಕ್ಷಿಯಾದರು. ನಗರದ ಹೆಚ್ಚುವರಿ ಜನಗಣತಿ ಅಧಿಕಾರಿ ಶಿಲ್ಪಶ್ರೀ ಸಾಗರ, ಅಂಬಿಕಾ ಕಾಂಬಳೆ, ಪಾಲಿಕೆ ಸಿಬ್ಬಂದಿ ಇದ್ದರು.

ಅಧ್ಯಕ್ಷರಾಗಿ ಸುಣಗಾರ ಅಧಿಕಾರ ಸ್ವೀಕಾರ

ಸಿಂದಗಿ: ಕಚೇರಿಗೆ ವರುವವರಿಗೆ ಯಾವುದೇ ರೀತಿಯ ತೊಂದರೆ ಇಲ್ಲದಂತೆ ಭ್ರಷ್ಟಾಚಾರ ರಹಿತವಾಗಿ ಕಾರ್ಯನಿರ್ವಹಿಸಬೇಕು. ನಗರದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಅಶೋಕ ಮನಗೂಳಿ ಎಂದು ಹೇಳಿದರು.

ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಗರ ಸಾವಿರಾರು ಎಕರೆ ವಿಸ್ತಾರದಲ್ಲಿ ನಿರ್ಮಾಣಗೊಂಡಿದ್ದು, ನಗರದ ಅಭಿವೃದ್ಧಿಗೆ ನಗರ ಯೋಜನಾ ಪ್ರಾಧಿಕಾರ ಸೂಕ್ತ ಯೋಜನೆ ರೂಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿ ಶುಭ ಹಾರೈಸಿದರು. ನೂತನ ಅಧ್ಯಕ್ಷ ಹಣಮಂತ ಸುಣಗಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಶಾಸಕರ ಮೂಲಕ ಸರಕಾರದಿಂದ ಸಿಂದಗಿ ಯೋಜನಾ ಪ್ರಾಧಿಕಾರದ ಜವಾಬ್ದಾರಿ ವಹಿಸಿದ್ದಾರೆ. ನನಗೆ ಆಯ್ಕೆ ಮಾಡಿದ ಸಿಎಂ, ಡಿಸಿಎಂ ಹಾಗೂ ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವರಿಗೆ ಹಾಗೂ ಪಕ್ಷದ ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಮಾಜಿ ಪುರಸಭೆ ಸದಸ್ಯ ರಾಜಶೇಖರ ಕೂಚಬಾಳ, ರವಿ ನಾವಿ, ಯಾಶೀನ ಬಿಳಗಿ, ಅಂಬರೀಷ ಚೌಗಲೆ, ದಯಾನಂದ ಪತ್ತಾರ, ಸೇರಿದಂತೆ ಕಾರ್ಯಕರ್ತರು ಇದ್ದರು.



ಕಿರುಸುದ್ದಿ

ಯೇಸು ತ್ಯಾಗ, ನಂಬಿಕೆಯ ಪ್ರತೀಕ



ಹಟ್ಟಿಚಿನ್ನದಗಣಿ: ಯೇಸುವಿನ ಆರಾಧನೆಯಲ್ಲಿ ಗುಡ್‌ಫ್ರೈಡೆ ದಿನವನ್ನು ಆಧ್ಯಾತ್ಮಿಕ ರೀತಿಯಲ್ಲಿ ಆಚರಿಸಲಾಗುತ್ತಿದೆ. ಇದು ಚಿಂತನೆ, ತ್ಯಾಗ ಮತ್ತು ಭರವಸೆಯ ಬಗ್ಗೆ ಜನರಲ್ಲಿ ಜ್ಞಾನವನ್ನು ಮೂಡಿಸುತ್ತದೆ ಎಂದು ರೋಮನ್ ಕ್ಯಾಥೋಲಿಕ್ ಚರ್ಚ್ ಫಾದರ್ ಫಿಲಿಪ್ ಮಾಣಿಕ್ಯಂ ಹೇಳಿದರು.

ಗುಡ್‌ಫ್ರಾಯಡೆ ನಿಮಿತ್ತ ರೋಮನ್ ಕ್ಯಾಥೋಲಿಕ್ ಚರ್ಚ್ ಚಾಲೀತ ಹಟ್ಟಿ ಪಟ್ಟಣದ ಸಂತ ಅನ್ನಮ್ಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಪ್ರಪಂಚದಾದ್ಯಂತದ ಕ್ರಿಶ್ಚಿಯನ್ನರ ಆಂತರಿಕ ಭಕ್ತಿಯಿಂದ ಆಚರಿಸುತ್ತಾರೆ. ದುಃಖವನ್ನು ವಿಜಯೋತ್ಸವವಾಗಿ ಪರಿವರ್ತಿಸುವ ಈಸ್ಟರ್ ಭಾನುವಾರವನ್ನು ಆಚರಿಸಲು ಈ ದಿನದಂದೇ ಅವರು ತಮ್ಮನ್ನು ಆಧ್ಯಾತ್ಮಿಕವಾಗಿ ಸಿದ್ಧಪಡಿಸಿಕೊಳ್ಳುತ್ತಾರೆ. ಈ ದಿನದ ಆಚರಣೆಯು ಅವರಲ್ಲಿ ಯೇಸುವಿನ ಆಳವಾದ ಭಕ್ತಿಯನ್ನು, ಮಾನವೀಯತೆಯ ಪಾಪಗಳಿಗಾಗಿ ಮಾಡಿದ ತ್ಯಾಗವನ್ನು ಮತ್ತು ನಂಬಿಕೆ, ಕ್ಷಮೆ ಹಾಗೂ ಕೃಪೆಯ ಮಹತ್ವವನ್ನು ನೆನಪಿಸುವ ನಿಟ್ಟಿನಲ್ಲಿ ರೂಪಕದ ಮೂಲಕ ವಿವರಿಸಲಾಯಿತು.

ನೂತನ ಪಿಎಸ್‌ಐ ನಾಯಕ ಅಧಿಕಾರ ಸ್ವೀಕಾರ



ಕುಕನೂರು: ಪಟ್ಟಣದ ಕುಕನೂರು ಪೊಲೀಸ್ ಠಾಣೆಗೆ ನೂತನ ಪಿಎಸ್‌ಐ ಆಗಿ ಎಸ್.ಪಿ.ನಾಯಕ ಅವರು ಅಧಿಕಾರ ಸ್ವೀಕರಿಸಿದರು.

ಈ ಹಿಂದೆ ಅವರು ಬೇವೂರ್ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದೀಗ ಕುಕನೂರು ಠಾಣೆಗೆ ವರ್ಗಾವಣೆಯಾಗಿದ್ದಾರೆ. ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಅವರು, ಠಾಣಾ ವ್ಯಾಪ್ತಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ತಮ್ಮಮೊದಲ ಆದ್ಯತೆಯಾಗಿದ್ದು ಸಾರ್ವಜನಿಕರ ಸಹಕಾರದೊಂದಿಗೆ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಾಗಿ ಹೇಳಿದರು.

'ಜನಸಾಮಾನ್ಯರು ಯಾವುದೇ ಸಮಸ್ಯೆಗಳಿದ್ದರೂ, ನಿರ್ಭಯವಾಗಿ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದ ಅವರು, ಅಕ್ರಮ ಚಟುವಟಿಕೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು. ಸ್ಥಳೀಯ ಪೊಲೀಸ್ ಸಿಬ್ಬಂದಿ ಮತ್ತು ಸಾರ್ವಜನಿಕರು ನೂತನ ಪಿಎಸ್‌ಐ ಅವರನ್ನು ಸ್ವಾಗತಿಸಿದರು.

ದ್ಯಾಂಪುರದಲ್ಲಿ ಮದ್ಯ ಮಾರಾಟ ನಿಷೇಧಿಸಿ



ಕುಕನೂರು: ತಾಲೂಕಿನ ದ್ಯಾಂಪುರ ಗ್ರಾಮದಲ್ಲಿ ಮದ್ಯ ಮಾರಾಟ ತಡೆಯಬೇಕು ಇಲ್ಲದಿಂದ್ದರೆ ಹೋರಾಟ ಮಾಡಲಾಗುವುದು ಎಂದು ಗ್ರಾಮದ ಮಹಿಳೆಯರು ಒತ್ತಾಯಿಸಿದ್ದಾರೆ.

ತಾಲೂಕಿನ ದ್ಯಾಂಪುರ ಗ್ರಾಮದಲ್ಲಿ ಆದಷ್ಟು ಬೇಗ ಸಂಭಂದಪಟ್ಟ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯವರು ಮದ್ಯ ಮಾರಾಟ ಮಾಡುವುದನ್ನು ತಡೆಯಬೇಕು. ಇಲ್ಲದಿದ್ದರೆ ಪೊಲೀಸ್ ಠಾಣೆಯ ಮುಂದೆ ಕುಕನೂರ ಪಟ್ಟಣದಲ್ಲಿ ಎಲ್ಲ ಮಹಿಳೆಯರು ಸೇರಿ ಹೋರಾಟ ಮಾಡಬೇಕಾಗುತ್ತದೆ. ಎಷ್ಟೋ ಭಾರೀ ಸ್ಥಳೀಯ ಶಾಸಕರಿಗೂ ಕೂಡ ಹೇಳಲಾಗಿದೆ. ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮದ ಜಯಮ್ಮ ನೋಟಗಾರ ಇತರ ಮಹಿಳೆಯರು ಪತ್ರಿಕೆಯೊಂದಿಗೆ ತಮ್ಮ ಅಳಲನ್ನು ಹೇಳಿಕೊಂಡರು. ಹಲವಾರು ವರ್ಷಗಳಿಂದ ಗ್ರಾಮದಲ್ಲಿ ಮದ್ಯ ಮಾರಾಟ ಮಾಡುವ ಮೂಲಕ ಅನೇಕ ಕುಟುಂಬಗಳಲ್ಲಿ ಅಶಾಂತಿ ಸೃಷ್ಟಿಯಾಗಿ ನೆಮ್ಮದಿ ಹಾಳ ಆಗಿದ್ದು, ಸಂಬಂಧಿಸಿದ ಅಧಿಕಾರಿಗಳು ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧ ಮಾಡಲು ಮುಂದಾಗಬೇಕು ಕುಟುಂಬಗಳನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ಜಯಮ್ಮ ನೋಟಗಾರ, ಲಲಿತಾ ನೋಟಗಾರ, ಚಂದ್ರವ್ವ ತೊಂಡಿಹಾಳ, ಯಲ್ಲವ್ವ ನೋಟಗಾರ, ರೇಣುಕಾ ಸೇರಿದಂತೆ ಇತರರು ಭಾಗವಹಿಸಿದ್ದರು.



ಕುಷ್ಟಗಿ: ತಾಲೂಕಿನ ತಾವರಗೇರಾ ಪಟ್ಟಣದ ಶ್ರೀವೀರಾಟ್ ವಿಶ್ವಕರ್ಮ ನೂತನ ವೃತ್ತ ಲೇಬಗೇರಿ ಮಠದ ದಿವಾಕರ ಸ್ವಾಮೀಜಿ ಮತ್ತು ನರಸಿಂಹಾಚಾರಿಗಳು ಇವರ ದಿವ್ಯ ಸಾನಿಧ್ಯದಲ್ಲಿ ಮತ್ತು ಸಿದ್ದಾರೂಢ ಮಠದ ಕುಮಾರ ಸಿದ್ಧಾರೂಢ ಸ್ವಾಮೀಜಿ ಆಶೀರ್ವಚನ ನೀಡಿದರು. ಗ್ರಾಪಂ ಮಾಜಿ ಅಧ್ಯಕ್ಷ ವೀರಭದ್ರಪ್ಪ ನಾಲತ್ವಾಡ, ವಿಶ್ವಕರ್ಮ ಸಮಾಜದ ಹಿರಿಯ ಮುಖಂಡರಾದ ನಿಂಗಪ್ಪ ಬಡಿಗೇರ್, ಗಟ್ಟೆಪ್ಪ ಬಡಿಗೇರ್, ಮಾನಪ್ಪ ಕಮ್ಮಾರ, ಅಧ್ಯಕ್ಷರಾದ ಶ್ಯಾಮಸುಂದರ್ ಕಮ್ಮಾರ, ಅಶೋಕ್ ಕಮ್ಮಾರ, ಆನಂದ ಕಮ್ಮಾರ, ನಾಗರಾಜ್ ಬಡಿಗೇರ್, ವಿಜಯ್ ಕುಮಾರ, ನಾಗರಾಜ್, ಅಮರೇಶ್ ಬಡಿಗೇರ್ ಇತರರಿದ್ದರು.

ವಿಜೃಂಭಣೆಯಿಂದ ನಡೆದ ಸಿದ್ಧೇಶ್ವರ ರಥೋತ್ಸವ

ಮುನಿರಾಬಾದ್: ಐದುಮುಖಿ ಬಸಾಪುರ ಗ್ರಾಮದಲ್ಲಿ ಗುರುವಾರ ಶ್ರೀಸಿದ್ಧೇಶ್ವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ವಿಶೇಷವಾಗಿ ಮಹಿಳೆಯರು ಕುಂಭ ಮೆರವಣಿಗೆ, ಗೊಂಬೆ ಕುಣಿತ, ನಂದಿ ಕೋಲು, ಸುಮಾಳ ಕುಣಿತ ಭಾಜ ಭಜಂತ್ರಿ ಮೆರವಣಿಗೆಗೆ ಕಳತಂದಿತು.

ಪ್ರತಿ ವರ್ಷದಂತೆ ಈ ವರ್ಷವೂ ಸಾಮೂಹಿಕ ವಿವಾಹ ಜರುಗಿತು, ಮೂರು ಜೋಡಿ ನವದಂಪತಿಗಳು ನವ ಜೀವನಕ್ಕೆ ಕಾಲಿಟ್ಟರು,

ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ಶ್ರೀಸಿದ್ದೇಶ್ವರ ಲಘು ರಥೋತ್ಸವ ಸಾವಿರಾರು ಭಕ್ತ ಸಮೂಹ ಮಧ್ಯೆ ವಿಜೃಂಭಣೆಯಿಂದ ನೆರವೇರಿತು.

ವೇದಿಕೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಈ ಭಾಗದಲ್ಲಿ ಕೋಮು ಸೌಹಾರ್ದತೆ ಒಂದು ಕುಟುಂಬವಾಗಿದೆ, ಜಾತ್ರೆಗಳು ನಮ್ಮ ಸಂಬಂಧ ಗಟ್ಟಿ ಮಾಡಲು ಬರುತ್ತವೆ,ದುಡಿದ ಹಣದಲ್ಲಿ ಸ್ವಲ್ಪ ಸಮಾಜಕ್ಕೆ ಖರ್ಚು ಮಾಡಬೇಕು ಎಂದು ಕೆ.ಎಂ.ಸೈಯದ್ ಕಾರ್ಯಕ್ರಮ ಕುರಿತು ಮಾತನಾಡಿದರು.

ಜಾತ್ರೆ ಹಿರಿಯರು ಹಾಕಿಕೊಟ್ಟಂತ ದಾರಿ ಇದು, ಧಾರ್ಮಿಕತೆ ನಮ್ಮ ಜೀವನ ಭಾಗದ ಒಂದು ಅಂಗ, ಬಡವರು ವಿವಾಹ ಮಾಡುಲು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ, ಇಂತ ಧಾರ್ಮಿಕ ಜಾತ್ರೆಗಳಿಂದ ದುಂದು ವೆಚ್ಚ ಕಡಿಮೆಯಾಗುತ್ತಿದೆ ಎಂದು ಡಾ.ಬಸವರಾಜ ಕ್ಯಾವಟರ್ ಅಭಿಪ್ರಾಯ ವ್ಯಕ್ತಪಡಿಸಿದರು.



ಮುನಿರಾಬಾದ್: ಐದುಮುಖಿ ಬಸಾಪುರ ಗ್ರಾಮದಲ್ಲಿ ಗುರುವಾರ ಶ್ರೀಸಿದ್ಧೇಶ್ವರ ಜಾತ್ರಾ ಮಹೋತ್ಸವದಲ್ಲಿ ವೇದಿಕೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು. ಕೆ.ಎಂ.ಸೈಯದ್,ಡಾ.ಬಸವರಾಜ ಕ್ಯಾವಟರ್, ಮತ್ತಿತರರು ಇದ್ದರು.

ದಾಖಲೆ ಪ್ರಮಾಣದಲ್ಲಿ ತೆರಿಗೆ ಸಂಗ್ರಹ | ಶೇ.56.43 ಪ್ರಗತಿ ಸಾಧನೆ

ಜಿಲ್ಲೆಯಲ್ಲಿಯೇ ಮಸ್ಕಿ ಪ್ರಥಮ

ಸಿದ್ದಯ್ಯ ಹೆಸರೂರು

ಮಸ್ಕಿ: ತೆರಿಗೆ ವಸೂಲಾತಿಯಲ್ಲಿ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ ಪಡೆದಿದೆ. ಅದರಲ್ಲೂ ಮಸ್ಕಿ ತಾಲೂಕು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು, ಗಮನಾರ್ಹ ಸಾಧನೆಗೈದಿದೆ.

ನೀರಾವರಿ ಮತ್ತು ಒಣಬೇಸಾಯ ಆಶ್ರಿತ 21 ಗ್ರಾಪಂಗಳನ್ನು ಒಳಗೊಂಡಿರುವ ಮಸ್ಕಿ ತಾಲೂಕಿಗೆ ಕಳೆದ ಆರ್ಥಿಕ ವರ್ಷಕ್ಕೆ 4.49 ಕೋಟಿ ರೂ. ಕರ ವಸೂಲಾತಿ ಗುರಿ ನಿಗದಿಪಡಿಸಲಾಗಿತ್ತು. ಈ ಪೈಕಿ 2.53 ಕೋಟಿ ರೂ. ತೆರಿಗೆ ಸಂಗ್ರಹಿಸಿ ಶೇ.56.43 ಪ್ರಗತಿ ಸಾಧಿಸುವ ಮೂಲಕ ನೂತನ ದಾಖಲೆ ಬರೆದಿದೆ.

21ಗ್ರಾಪಂಗಳ ಪೈಕಿ ಹಿರೇದಿನ್ನಿ, ತೋರಣದಿನ್ನಿ, ವಟಗಲ್ ಶೇ. 100 ತೆರಿಗೆ ವಸೂಲಿ ಮಾಡಿವೆ. ಗ್ರಾಮೀಣಾಭಿವೃದ್ಧಿಯ ವಿಕೇಂದ್ರಿಕರಣದಲ್ಲಿ ಗ್ರಾಪಂಗಳು ನಿರ್ಣಾಯಕ ಪಾತ್ರ ನಿರ್ವಹಿಸುತ್ತಿವೆ. ಸ್ಥಳೀಯರಿಗೆ ಕುಡಿಯುವ ನೀರು, ಬೀದಿ ದೀಪಗಳ ನಿರ್ವಹಣೆ, ಶೌಚಾಲಯ ನಿರ್ಮಾಣ, ಆಸ್ತಿಗಳಿಗೆ ಸಂಬಂಧಿಸಿದ ದಾಖಲೆ ಪತ್ರ ವಿತರಣೆ,ಸೇರಿ ಪ್ರತಿಯೊಂದು ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವ ಗ್ರಾಪಂಗಳು ಸ್ಥಳೀಯರಿಗೆ ಬಹಳಷ್ಟು ಅನುಕೂಲ ಕಲ್ಪಿಸಿವೆ.



ಗ್ರಾಪಂಗಳ ಸುಗಮ ಆಡಳಿತಕ್ಕಾಗಿ ತೆರಿಗೆ ವಸೂಲಾತಿ ನಿರ್ಣಾಯಕವಾಗಲಿದೆ. ಹೀಗಾಗಿ ಮಸ್ಕಿ ತಾಲೂಕಿನ 21 ಗ್ರಾಪಂಗಳಲ್ಲಿ ಕೈಗೊಂಡ ನಿರಂತರ ಅಭಿಯಾನದ ಪರಿಣಾಮವಾಗಿ ತೆರಿಗೆ ವಸೂಲಾತಿಯಲ್ಲಿ ಮೇಲುಗೈ ಸಾಧಿಸಿದೆ.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕರ ನಿರ್ದೇಶನದಂತೆ ತೆರಿಗೆ ವಸೂಲಾತಿ ಅಭಿಯಾನ ಕೈಗೊಳ್ಳಲಾಗಿತ್ತು. ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರಾದ (ಪಂ.ರಾ) ಸೋಮನಗೌಡ ಪಾಟೀಲ ಅವರ ನೇತೃತ್ವದಲ್ಲಿ ತೆರಿಗೆ ಪಾವತಿಸುವಂತೆ ವ್ಯಾಪಕ ಪ್ರಚಾರ ಕೈಗೊಂಡಿದ್ದರಿಂದ ಗಮನಾರ್ಹವಾಗಿ ತೆರಿಗೆ ವಸೂಲಾತಿಯಾಗಿದೆ. ಆಯಾ ಗ್ರಾಪಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿ ಮನೆ ಮನೆಗೆ ತೆರಳಿ ಕರ ವಸೂಲಿಗೆ ಕೈಜೋಡಿಸಿದ್ದಾರೆ.

> **ಜಿಲ್ಲೆಯ ಹಿರಿಯ ಅಧಿಕಾರಿಗಳ ಆದೇಶದಂತೆ ತೆರಿಗೆ ವಸೂಲಾತಿಯಲ್ಲಿ ನಿಗಾವಹಿಸಿದ್ದರಿಂದ ದಾಖಲೆ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸಲಾಗಿದೆ. ಹಾಗಾಗಿ ಮಸ್ಕಿ ತಾಪಂ ಪ್ರಥಮ ಸ್ಥಾನ ಪಡೆಯಲು ಶ್ರಮಿಸಿದ ಎಲ್ಲ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸುತ್ತೇನೆ.**
> ■ ಅಮರೇಶ್ ಯಾದವ್, ತಾಪಂ ಇಒ, ಮಸ್ಕಿ

ರಂಗಭೂಮಿ ಬದುಕಿನ ಕನ್ನಡಿ: ಶ್ರೀಗಳು

ಹನುಮಸಾಗರ: ಪಟ್ಟಣದ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘದ 26ನೇ ವರ್ಷದ ಸವಿನೆನಪು ಹಾಗೂ ಧುತ್ತರಗಿ ದಂಪತಿಗಳ ಪುಣ್ಯಸ್ಮರಣೆ ಅಂಗವಾಗಿ ಮಹಾದೇವ ಹೊಸೂರ ವಿರಚಿತ ಮತ್ತೊಮ್ಮೆ ಬಾ ಮುತ್ತೈದೆಯಾಗಿ ಎಂಬ ಸುಂದರ ಸಾಮಾಜಿಕ ನಾಟಕವು ಗುರುರಾಜ ದೇಸಾಯಿಯವರ ನಿರ್ದೇಶನದಲ್ಲಿ ನಿಸರ್ಗ ಸಂಗೀತ ಶಾಲೆಯ ರಂಗಕಲಾವಿದರಿಂದ ಶ್ರೀಕರಿಸಿದೇಶ್ವರ ಮಠದ ಬಸವಮಟಪದಲ್ಲಿ ಪ್ರದರ್ಶನಗೊಂಡಿತು.

ನಾಟಕ ಉದ್ಘಾಟನೆ ಮಾಡಿದ ವಿಜಯಮಾಹಂತ ಸ್ವಾಮೀಜಿ ಮತ್ತು ಮಲ್ಲಯ್ಯ ಕೋಮಾರಿ ಮಾತನಾಡಿ, ನಾಟಕ ಪುರಾತನ ಗಂಡು ಕಲೆ. ರಂಗಭೂಮಿ ಬದುಕಿನ ಕನ್ನಡಿ ಹಾಗೂ ನೈಜ ಕಲೆಯಾಗಿದ್ದು, ಪ್ರೇಕ್ಷಕರೇ ಇದರ ಜೀವಾಳವಾಗಿದ್ದಾರೆ ಎಂದರು.

ಜಾಗತೀಕರಣ ಮತ್ತು ಆಧುನಿಕತೆಯ ಭರಾಟೆಯಲ್ಲಿ ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳಾಗಿರುವ ನಾಟಕಗಳು ಇಂದು ಹೆಚ್ಚು ಜನರನ್ನು ತಲುಪುತ್ತಿಲ್ಲ, ಜನತೆ ಸಿನಿಮಾ, ಟಿವಿ ಕಡೆಗೆ ಆಕರ್ಷಿತರಾಗಿ ನಾಟಕಗಳನ್ನು ನೋಡುವುದನ್ನೇ ಕಡಿಮೆ ಮಾಡಿದ್ದಾರೆ ಎಂದು ವಿಷಾಧಿಸಿದ ಅವರು, ಸಿನಿಮಾ, ಧಾರವಾಹಿಗಳ ಪ್ರಭಾವ ಎಷ್ಟೇ ಬೀರಿದರೂ ನಾಟಕ ಎಂದಿಗೂ ಜೀವಂತವಾಗಿರುತ್ತದೆ ಎಂದು ಹೇಳಿದರು.

ನಂತರ ಕರ್ನಾಟಕ ರಾಜ್ಯ ಕಾರ್ಯಕಾರಣಿ ನಿರ್ದೇಶಕರಾದ ಚಂದಪ್ಪ ಹಕ್ಕಿ, ರುದ್ರಗೌಡ ಗೌಡಪ್ಪನವರ ಹಾಗೂ ಮಹಾಂತೇಶ ಅಗಸಿಮುಂದಿನ, ಪ್ರಶಾಂತ್ ಗಡದ ಮಾತನಾಡಿ, ಮತ್ತೊಮ್ಮ ಹುಟ್ಟಿ ಬಾ ಮುತ್ತೈದೆ ಈ ನಾಟಕವು ಮಹಿಳೆಯ ತ್ಯಾಗ, ಸಹನೆ ಮತ್ತು ಗೌರವದ ಮಹತ್ವವನ್ನು ಒತ್ತಿಹೇಳುವ ಒಂದು ಉತ್ತಮ ಸಾಮಾಜಿಕ ಕೃತಿ ಆಗಿದೆ ಎಂದು ತಿಳಿಸಿದರು.

ನಾಟಕದ ಪಾತ್ರಧಾರಿಗಳಾದ ಶಿವಪ್ಪ, ರಾಮಚಂದ್ರ, ಬಡಿಗೇರ ಶಿಕ್ಷಕರು, ಶಂಕರ್ ಉಪ್ಪಾರ, ಬೀರಪ್ಪ ಕಡ್ಲಿಮಟ್ಟಿ, ನಾಗನಗೌಡ ಪೊಲೀಸ್ ಪಾಟೀಲ,ಗುರುರಾಜ ದೇಸಾಯಿ, ಶಶಿ ಸಿನ್ನೂರ, ಮಹಾದೇವ ಹೊಸೂರ, ಜಗದೀಶ, ಕುಮಾರ, ಸುನೀಲ ವಿಭೂತಿ, ಗುರುರಾಜ ದೇಸಾಯಿ ಇವರ ನಾಟಕ ಪ್ರದರ್ಶನಕ್ಕೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದರು.

ವಿಜಯಮಾಹಂತ ಸ್ವಾಮಿಗಳು,ರಾಚಪ್ಪಾ ಚಿನಿವಾಲರ್, ಕರಿಸಿದ್ದಪ್ಪ ಕುಷ್ಟಗಿ, ರುದ್ರಗೌಡ ಗೌಡಪ್ಪನವರ, ಚಂದಪ್ಪ ಹಕ್ಕಿ, ಲೆಂಕಪ್ಪ ವಾಲಿಕಾರ್, ವಿಶ್ವನಾಥ್ ಕನ್ನೂರು ಮಲ್ಲಯ್ಯ ಕೋಮಾರಿ, ಶ್ರೀನಿವಾಸ ಜಾಹಗೀರದಾರ, ಕಿಶನರಾವ್ ಕುಲಕರ್ಣಿ, ಮಹಾಂತಯ್ಯ ಕೋಮಾರಿ, ಚಂದ್ರಶೇಖರ್ ಗುಳೆದ್, ಸುನೀತಾ ಕೋಮಾರಿ, ಮತ್ತಿತರರಿದ್ದರು.



ಯುಟ್ಯೂಬರ್ ಹಾವಳಿ ನಿಯಂತ್ರಿಸಿ

ಬೀದರ್: ಜಿಲ್ಲೆಯಲ್ಲಿ ನಕಲಿ ಪತ್ರಕರ್ತರು ಹಾಗೂ ಯುಟ್ಯೂಬರ್‌ಗಳ ಹಾವಳಿ ಹೆಚ್ಚಾಗಿದ್ದು, ನಿಜವಾದ ಪತ್ರಕರ್ತರ ಮೇಲೆ ಸಮಾಜ ಸಂಶಯ ಪಡುವಂತಾಗುತ್ತಿದೆ. ಅದೇ ರೀತಿ ಜಿಲ್ಲೆಯಲ್ಲಿ ಹಣ ವಸೂಲಿ ಮಾಡುವ ನಕಲಿ ಪತ್ರಕರ್ತರು ಹಾಗೂ ಯುಟ್ಯೂಬರ್‌ಗಳು ಓಡಾಡುತ್ತಿದ್ದು ಅಂಥಹವರಿಗೆ ಅಧಿಕಾರಿಗಳಾಗಲಿ ಅಥವಾ ಸಮಾಜವಾಗಲಿ ಮನ್ನಣೆ ನೀಡಬಾರದು ಎಂದು ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ದೇವಪ್ಪ ಆಗ್ರಹಿಸಿದ್ದಾರೆ.

ಈಗಾಗಲೇ ಹಲವು ಸಲ ನಮ್ಮ ಸಂಘ ಮನವಿ ಮಾಡಿ ಇಂತಹ ನಕಲಿ ಪತ್ರಕರ್ತರ ಹಾಗೂ ಯುಟ್ಯೂಬರ್ ಮೇಲೆ ಹಿಡಿತವಿರಲು ಆಗ್ರಹಿಸಿದೆ.

ಅದೇ ರೀತಿ ಜಿಲ್ಲೆಯಲ್ಲಿ ವಾಹನಗಳ ಮೇಲೆ ಪ್ರೆಸ್ ಎಂದು ಬರೆಸಿಕೊಂಡು ನಕಲಿ ಪತ್ರಕರ್ತರು ಓಡಾಡುತ್ತಿದ್ದು ಇವರನ್ನು ಕೂಡ ನಿಯಂತ್ರಣ ಮಾಡುವ ಅವಶ್ಯಕತೆ ಇದೆ. ಗುರುವಾರ ಬೀದರನಲ್ಲಿ ಪತ್ರಕರ್ತ ಎಂದು ಹೇಳಿಕೊಂಡು ಪೊಲೀಸ್ ಅಧಿಕಾರಿಗಳ ವಿರುದ್ಧ ನಡೆದ ಘಟನೆಯಲ್ಲಿ ಆ ವ್ಯಕ್ತಿ ನಮ್ಮ ಪತ್ರಕರ್ತರ ಸಂಘದ ಸದಸ್ಯತ್ವ ಹೊಂದಿಲ್ಲವೆಂದು ಆನಂದ ದೇವಪ್ಪಾ ಸ್ಪಷ್ಟ ಪಡಿಸಿದ್ದಾರೆ.

ನ್ಯಾಯಾಲಯ ಸಂಕೀರ್ಣ ಉದ್ಘಾಟನೆ ಇಂದು



ಯಲಬುರ್ಗಾ: ಪಟ್ಟಣದ ನೂತನವಾಗಿ ನಿರ್ಮಾಣಗೊಂಡಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಸುಸಜ್ಜಿತ ಮಾದರಿಯ ನ್ಯಾಯಲಯ ಸಂಕೀರ್ಣ ಏ.4ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ರಂಗಸ್ವಾಮಿ ಜೆ.ಹೇಳಿದರು.

ಪಟ್ಟಣದ ವಕೀಲರ ಸಂಘದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಈ ನೂತನ ನ್ಯಾಯಾಲಯ ಸಂಕೀರ್ಣ ಸುಮಾರು 18ಕೋಟಿ ವೆಚ್ಚದಲ್ಲಿ ಸುಸಜ್ಜಿತ ಗುಣಮಟ್ಟದಿಂದ ನಿರ್ಮಾಣವಾಗಿದೆ. ಈ ಕಾರ್ಯಕ್ರಮದಲ್ಲಿ ಹೈಕೋರ್ಟ ನ್ಯಾಯಮೂರ್ತಿಗಳಾದ ಹಂಚಾಟೆ ಸಂಜೀವಕುಮಾರ, ಎಂ.ಜಿ.ಸುಕರೇಕಮಲ್ ಹಾಗೂ ಪಿ.ಶ್ರೀಸುಧಾ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ಕೊಪ್ಪಳ ಆಡಳಿತಾತ್ಮಕ ನ್ಯಾಯಾಧೀಶ ಸಿ.ಎಂ.ಪೂಣಚ ಅವರು ನೂತನ ನ್ಯಾಯಾಲಯ ಸಂಕೀರ್ಣವನ್ನು ಉದ್ಘಾಟಿಸಲಿದ್ದು ಜಿಲ್ಲಾ ನ್ಯಾಯಾಧೀಶರಾದ ಚಂದ್ರಶೇಖರ ಸೇರಿದಂತೆ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ವಕೀಲರ ಸಂಘದ ತಾಲೂಕಾಧ್ಯಕ್ಷ ಎಸ್.ಎಸ್.ಹೊಂಬಳ ಮಾತನಾಡಿ, ಅಂದಿನ ಕಾರ್ಯಕ್ರಮದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಸಿ.ಎಂ.ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಸಂಸದ ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ ಹಾಗೂ ಜಿಲ್ಲೆಯ ಹಿರಿಯ ವಕೀಲರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದರು.

ಸಿವಿಲ್ ನ್ಯಾಯಾಧೀಶ ಸಂಜುಕುಮಾರ ಪಚಪುರಿ, ವಕೀಲರ ಸಂಘದ ಉಪಾಧ್ಯಕ್ಷ ಎಂ.ಎಸ್.ನಾಯ್ಕರ್, ಪ್ರಧಾನಕಾರ್ಯದರ್ಶಿ ಮಹಾಂತೇಶ ಈಟಿ, ಜಂಟಿ ಕಾರ್ಯದರ್ಶಿ ಹಸನಸಾಬ ನದಾಫ್, ಹಿರಿಯ ವಕೀಲರಾದ ಬಿ.ಎಂ.ಶಿರೂರ, ಸಿ.ಪಿ.ಪಾಟೀಲ, ಸಂಗಮೇಶ ವಾದಿ, ಉಮೇಶ ಮೇಣಸಗೇರಿ, ಶಂಕರಗೌಡ ಪಾಟೀಲ, ಪ್ರಕಾಶ ಬೇಲೇರಿ, ಎಚ್.ಎಚ್.ಹಿರೇಮನಿ, ಎಸ್.ಎನ್.ಶ್ಯಾಗೋಟಿ, ಅಕ್ಕಮಹಾದೇವಿ ಪಾಟೀಲ, ರಾಜುನಿಂಗೋಜಿ, ಎ.ಎಂ.ಪಾಟೀಲ, ಎಸ್.ಕೆಂಚಮ್ಮನವರ್, ದಾದು ಎಲಿಗಾರ, ಅಂಬರೇಶ ಹುಬ್ಬಳ್ಳಿ ಹಾಗೂ ಸಿಬ್ಬಂದಿ ರಾಘವೇಂದ್ರ, ಕೋಳಿಹಾಳ, ವಿನಾಯಕ ಮತ್ತಿತರರು ಇದ್ದರು.

ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಆಯ್ಕೆ

ಕೊಪ್ಪಳ: ನಗರದ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯಿತು.

ಎಲ್ಲ ಹುದ್ದೆಗೆ ಕೇವಲ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣೆ ಅಧಿಕಾರಿಗಳು ಅವಿರೋಧ ಆಯ್ಕೆ ಘೋಷಿಸಿದರು. ತಾಪಂ ಯೋಜನಾಧಿಕಾರಿ ರಾಜಾಸಾಬ್ ನದಾಫ್ ಸಹಾಯಕ ಚುನಾವಣೆ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು.

ಸಂಘದ ಜಿಲ್ಲಾಧ್ಯಕ್ಷರಾಗಿ ಸುರೇಶ ಚಲವಾದಿ, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ, ಸೌಮ್ಯ ಕೆ.ಆಯ್ಕೆಯಾದರು. ನಿಂಗಪ್ಪ ಮೂಲಿಮನಿ (ಖಜಾಂಚಿ), ಶಿವಬಸಪ್ಪ (ರಾಜ್ಯ ಪರಿಷತ್ ಸದಸ್ಯ), ಶ್ರೀಶೈಲ ಪೊಲ್ಮೇಶಿ (ಸಂಘಟನಾ ಕಾರ್ಯದರ್ಶಿ), ಜ್ಯೋತಿ ರಡ್ಡೇರ (ಸಂಘಟನಾ ಕಾರ್ಯದರ್ಶಿ), ವೆಂಕಟೇಶ (ಕ್ರೀಡಾ ಕಾರ್ಯದರ್ಶಿ), ಪುಷ್ಪಲತಾ ಸಿ (ಸಾಂಸ್ಕೃತಿಕ ಕಾರ್ಯದರ್ಶಿ) ಗಳಾಗಿ ಅವಿರೋಧವಾಗಿ ಆಯ್ಕೆಯಾದರು. ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು.



ಸರ್ಕಾರಕ್ಕೆ ಜಾಗ ಕೊಡಲು ಸಿದ್ಧರಿಲ್ಲ: ರಾಮಣ್ಣ ಮೆಣಸಿನಕಾಯಿ

ಕುಕನೂರ: ಸರ್ಕಾರಕ್ಕೆ ಜಾಗವನ್ನು ಕೊಡಲು ನಾವು ಸಿದ್ಧವಿಲ್ಲ ಎಂದು ರಾಮಣ್ಣ ಮೆಣಸಿನಕಾಯಿ ಹೇಳಿದರು.

ಪಟ್ಟಣದ ಗುದ್ದೇಪನಮಠದಲ್ಲಿ ಗದಗ ಜಿಲ್ಲೆಯ ಮಲ್ಲಿಗವಾಡ ಹಾಗೂ ನೀಲಗುಂದ ಗ್ರಾಮದ ಗುದ್ದೇಶ್ವರ ಸ್ವಾಮಿಭಕ್ತರಿಂದ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಗುದ್ದೇಶ್ವರ ಮಠದ 211 ಎಕರೆ ಭೂಮಿ ಇದೆ. ಮಠದ ಜಾಗವನ್ನು ಮಠದ ಅಭಿವೃದ್ಧಿಗಾಗಿ ಬಿಡಿ ಅದನ್ನು ಸರ್ಕಾರ ತಮ್ಮದೇ ಇದೆ ಅಂತ ಸ್ಥಳೀಯ ಶಾಸಕ ರಾಯರಡ್ಡಿಯವರು ಅಧಿಕಾರಿಗಳನ್ನು ಮನಬಂದಂತೆ ಬಳಸಿಕೊಂಡು ಮಠದ ಜಾಗವನ್ನು ಕಬಳಿಕೆ ಮಾಡಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ ಇದಕ್ಕೂ ಮೀರಿ ನೀವು ಜಾಗೆಯನ್ನು ಪಡೆಯಲು ಮುಂದಾದರೆ. ಸರ್ಕಾರ ಮತ್ತು ಶಾಸಕರ ವಿರುದ್ಧ ತೀವ್ರ ಹೋರಾಟವನ್ನು ಪಟ್ಟಣದಲ್ಲಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಂತರ ಪ್ರಭು ಅಂಗಡಿ ಮಾತನಾಡಿ, ಈಗಾಗಲೇ ಗುದ್ದೇಶ್ವರ ಜಾಗದ ಕುರಿತು ಸ್ಥಳೀಯರು ಕೋರ್ಟ್ ಮೊರೆ ಹೋಗಿದ್ದಾರೆ. ಕೋರ್ಟ್‌ನಿಂದ ಇನ್ನೂ ಯಾವುದೇ ಆದೇಶ ಬಂದಿಲ್ಲ, ಈ ಮಧ್ಯೆ ಅಧಿಕಾರಿ ವರ್ಗದವರು ಆಗಾಗ್ಗೆ ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡುವುದು, ವೀಕ್ಷಣೆ ಮಾಡುವುದು ಮಾಡುತ್ತಿದ್ದಾರೆ. ಕೋರ್ಟ್ ಆದೇಶ ಬಾರದೇ ಈ ರೀತಿ ಮಾಡುವುದು ತಪ್ಪು. ಆದಾಗ್ಯೂ ಗುದ್ದೇಶ್ವರ ದೇವಸ್ಥಾನ ಜಾಗದಲ್ಲಿ ಸ್ಥಳೀಯ ಶಾಸಕ ಬಸವರಾಜ ರಾಯರಡ್ಡಿ ಸರ್ಕಾರಿ ಕಟ್ಟಡ ನಿರ್ಮಾಣ ಮಾಡಲು ಹೊರಟಿರುವುದು ತಪ್ಪು. ಬೇಕಿದ್ದರೆ ಬೇರೆ ಕಡೆ ಜಾಗ ಹುಡುಕಿ ಮಾಡಲಿ, ಇಲ್ಲಿ ಬೇಡ, ಶಾಸಕ ರಾಯರಡ್ಡಿ ಕಾನೂನು ಪ್ರಕಾರ ಕೆಲಸ ಮಾಡಲಿ. ನಾವು ಭಕ್ತರೂ ಸಹ ಗುದ್ದೇಶ್ವರ ಮಠದ ಜಾಗ ಉಳಿಯಲಿ ಎಂದು ಕೋರ್ಟಿಗೆ ಹೋಗುತ್ತೇವೆ. ಎಂದರು



ಮಲ್ಲಿಗವಾಡದ ವಿರುಪಾಕ್ಷಪ್ಪ ಭಾವಿಕಟ್ಟಿ ಮಾತನಾಡಿದರು.

ನೀಲಗುಂದ ಗ್ರಾಮದ ಭಕ್ತರಾದ ಬಸಪ್ಪ ಪೂಜಾರ, ಶೇಖಪ್ಪ ಕಟ್ಟಳ್ಳಿ, ಬಸಯ್ಯ ಸಾಲಿಮಠ, ಮಂಜಪ್ಪ ಇಟಗಿ, ವೀರಭದ್ರಪ್ಪ ತೀರ್ಲಾಪೂರ, ಚನ್ನಪ್ಪ ತೀರ್ಲಾಪೂರ, ಸುಭಾಷ ಯತ್ನಟ್ಟಿ, ಎನ್.ಭಾವಿಕಟ್ಟಿ, ಮಲ್ಲಿಗವಾಡ ಗ್ರಾಮದ ಭಕ್ತ ಬಸಪ್ಪ ಜಕ್ಕಲಿ, ಶಿವಯ್ಯ ಬಾಗೇವಾಡಿ, ಗುರುಪಾದಯ್ಯ ಹೆಬ್ಬಾಳಮಠ, ಬೂದಯ್ಯ, ಚಂದ್ರಶೇಖರಪ್ಪ, ಗುರಯ್ಯ ಕಡೇದ ಇದ್ದರು.

ನವನಗರ ಹನುಮ ಜಯಂತಿ | ರಕ್ತದಾನ, ವೈದ್ಯಕೀಯ ತಪಾಸಣೆ

ಪಾಲಕರು ಮಕ್ಕಳನ್ನು ಓದಲು ಬಿಡಲಿ: ಎಸ್ಪಿ

ಕೊಪ್ಪಳ: ತಾಲೂಕಿನ ಭಾಗ್ಯನಗರ ಪಟ್ಟಣ ಪಂಚಾಯಿತಿಯ ವಾರ್ಡ್ ನಂ.10 ನವನಗರದಲ್ಲಿ ಹನುಮ ಜಯಂತಿ ಹಿನ್ನೆಲೆ ಗುರುವಾರ ಕೆ.ಎಸ್.ಖಾಸಗಿ ಆಸ್ಪತ್ರೆವತಿಯಿಂದ ಉಚಿತ ವೈದ್ಯಕೀಯ ತಪಾಸಣೆ, ಭಾರತೀಯ ರೆಡ್ ಕ್ರಾಸ್ ವತಿಯಿಂದ ರಕ್ತದಾನ ಶಿಬಿರ ಸೇರಿದಂತ ಬಡಾವಣೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಅನ್ನದಾಸೋಹ ಕಾರ್ಯಕ್ರಮ ಜರುಗಿದವು

ಬಡಾವಣೆಯ ಸುಮಾರು 18 ಯುವಕರು ರಕ್ತದಾನ ಮಾಡಿದ್ರು, 70ಕ್ಕೂ ಹೆಚ್ಚು ಜನರು ವೈದ್ಯಕೀಯ ತಪಾಸಣೆಗೆ ಒಳಪಟ್ಟರು. ಇನ್ನು ಸಂಜೆ ಹನುಮನ ತೊಟ್ಟಿಲು ಕಾರ್ಯಕ್ರಮ ಜರುಗಿತು ನಂತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ ಭಾಗವಹಿಸಿ ಮಾತನಾಡಿ, ನಾನು ಒಂದು ಸಣ್ಣ ಊರು ಬಡ ಕುಟುಂಬದಲ್ಲಿ ಜನಿಸಿದವನು. ಇಲಕಲ್ ಊರಲ್ಲಿ ಸರಕಾರಿ ಶಾಲೆಯಲ್ಲಿ ಕಲಿತು. ಪ್ರೌಢ ಶಿಕ್ಷಣಕ್ಕಾಗಿ ಮೈಸೂರಿನ ರಾಮಕೃಷ್ಣ ವಿದ್ಯಾಶ್ರಮದಲ್ಲಿ ಪ್ರವೇಶ ಪರೀಕ್ಷೆ ಬರೆದು ಅಲ್ಲಿ ಮುಂದಿನ ನನ್ನ ಅಭ್ಯಾಸ ಪೂರ್ಣಗೊಳಿಸಿದೆ. ನಂತರ ಎಂಬಿಬಿಎಸ್ ಮಾಡಿದೆ. ನಂತರ ದೆಹಲಿಯಲ್ಲಿ ಓದಿ ಐಪಿಎಸ್ ಅಧಿಕಾರಿ ಆಗಿದ್ದು, ನಮ್ಮ ಜೀವನದಲ್ಲಿ ಶಿಕ್ಷಣ ಮುಖ್ಯ ಹಾಗಾಗಿ ಪಾಲಕರು ಮಕ್ಕಳನ್ನು ಓದಿಸಿ ಹಾಗೂ ಓದಲು ಬಿಡಿ ಎಂದರು.

ಇನ್ನೋರ್ವ ಮುಖ್ಯ ಅತಯಾಗಿ ಭಾಗವಹಿಸಿದ್ದ ಸಮಾಜ ಸೇವಕಾರದ ಗೀತಾ ಮುತ್ತಾಳ್ ಮಾತ್ನಾಡಿ, ನಾವು ಹನುಮು ನಾಡಿನಲ್ಲಿ ಜನಿಸಿದ್ದೇವೆ. ಹನುಮು ಜಯಂತಿಯಂದ ಉಚಿತ ವೈದ್ಯಕೀಯ ತಪಾಸಣೆ, ರಕ್ತದಾನ ಶಿಬಿರ ಹಮ್ಮಿಕೊಂಡಿದ್ದು ಬಹಳ ಸಂತಸದ ವಿಷಯ. ಜಯಂತಿ ಮಾಡುವುದಷ್ಟೇ ಅಲ್ಲ,ಅವರ ಆದರ್ಶಗಳನ್ನು ಸಹ ಅಳವಡಿಸಿಕೊಳ್ಳಬೇಕು. ಉತ್ತವ ಶಿಕ್ಷಣ ಪಡೆದು ಸಮಾಜದಲ್ಲಿ ಒಳಿತು ಮಾಡಬೇಕು. ಬಡವರಿಗೆ ಸಹಾಯ ಮಾಡುವ ಮನೋಭಾವನೆ ಬೆಳಿಸಿಕೊಳ್ಳಬೇಕು ಎಂದರು.

ಉಚಿತ ರಕ್ತದಾನ ಮಾಡಿದ ಯುವಕರಿಗೆ ಭಾರತೀಯ ರೆಡ್ ಕ್ರಾಸ್ ವತಿಯಿಂದ ಪ್ರಮಾಣ ಪತ್ರಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಯುವ ಮುಖಂಡ ಸಂತೋಷ ಹಾಗೂ ನವನಗರ ಶಾಲೆಯ ಮುಖ್ಯ ಶಿಕ್ಷಕಿ ದಾಕ್ಷಿಯಿಣಿ ಅವರು ಭಾಗವಹಿಸಿದ್ದರು. ನಾಗರಾಜ ನಿರೂಪಿಸಿ ಸ್ವಾಗತಿಸಿದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಜನಗಣತಿಯನ್ನು ಯಶಸ್ವಿಗೊಳಿಸಿ: ಸಚಿವ ಬೋಸರಾಜು

ಮಾನ್ವಿ: ದೇಶದ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ರೂಪಿಸುವುದಕ್ಕಾಗಿ ಪ್ರತಿ 10 ವರ್ಷಗಳಿಗೆ ಒಮ್ಮೆ ಜನಗಣತಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತವೆ. ಆದ್ದರಿಂದ ಜನಗಣತಿಯಲ್ಲಿ ಭಾಗವಹಿಸುವ ಗಣತಿದಾರರು ನಿಖರವಾದ ಅಂಶಗಳನ್ನು ದಾಖಲಿಸುವ ಮೂಲಕ ಜನಗಣತಿಯನ್ನು ಯಶಸ್ವಿಗೊಳಿಸಬೇಕು ಎಂದು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಹೇಳಿದರು.

ಪಟ್ಟಣದ ಕಾಕತೀಯ ವಿದ್ಯಾಸಂಸ್ಥೆಯಲ್ಲಿ ನಡೆದ ಜನಗಣತಿದಾರರ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾನ್ವಿ ತಾಲೂಕು ಗ್ರಾಮೀಣ ಭಾಗದ ಚಾರ್ಜ್ ಅಧಿಕಾರಿ ಹಾಗೂ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ, ನಮ್ಮ ಗಣತಿ ನಮ್ಮ ಅಭಿವೃದ್ಧಿ ಘೋಷ ವಾಕ್ಯದೊಂದಿಗೆ ಸ್ವಯಂ ಗಣತಿಯನ್ನು ಏ.1ರಿಂದ ಪ್ರಾರಂಭಿಸಲಾಗಿದ್ದು ಸಾರ್ವಜನಿಕರು ತಮ್ಮ 34 ಅಂಶಗಳ ಮಾಹಿತಿಯನ್ನು ಸ್ವಯಂ ತಮ್ಮ ಮೊಬೈಲ್ ಮೂಲಕ ದಾಖಲಿಸಿಕೊಳ್ಳಬಹುದಾಗಿದೆ. ಮಾನ್ವಿ ತಾಲೂಕಿನಲ್ಲಿ ಜನಗಣತಿದಾರರಿಗೆ ಏ.3, 4 ಹಾಗೂ 10ರಂದು ತರಬೇತಿ ನೀಡಲಾಗುವುದು. ಜನಗಣತಿದಾರರು ಏ.16ರಿಂದ ಮೇ 15ರವರಿಗೆ ತಾಲೂಕಿನ ಎಲ್ಲ 78 ಗ್ರಾಮಗಳಲ್ಲಿ ಹಾಗೂ ಮಾನ್ವಿ ಪಟ್ಟಣದಲ್ಲಿ ಮನೆ ಮನೆಗೆ ತೆರಳಿ ಗಣತಿ ನಡೆಸಲಿದ್ದಾರೆ.



ಮಾನ್ವಿ ಪಟ್ಟಣದ ಜನಗಣತಿಯ ಚಾರ್ಜ್ ಅಧಿಕಾರಿಯಾಗಿ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಕಾರ್ಯನಿರ್ವಹಿಸಲಿದ್ದಾರೆ. ಗ್ರಾಮೀಣ ಭಾಗದಲ್ಲಿ 247 ಗಣತಿದಾರರು ಹಾಗೂ 25 ಕಾಯ್ದಿರಿಸಿದ ಗಣತಿದಾರರು, 43 ಸೂಪರ್ ವೈಸರ್,5 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು,ಮಾನ್ವಿಪಟ್ಟಣದಲ್ಲಿ 87 ಗಣತಿದಾರರು ಹಾಗೂ 8 ಕಾಯ್ದಿರಿಸಿದ ಗಣತಿದಾರರು, 14 ಸೂಪರ್ ವೈಸರ್,2 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು ಜನಗಣತಿಯ ಕಾರ್ಯದಲ್ಲಿ ಭಾಗವಹಿಸಲಿದ್ದಾರೆ. ಉತ್ತಮ ತರಬೇತಿ ಪಡೆದ ಗಣತಿದಾರರಿಗೆ ಹಾಗೂ ಉತ್ತಮ ಗಣತಿ ಕಾರ್ಯ ನಿರ್ವಹಿಸಿದ ಗಣತಿದಾರರಿಗೆ ಮೇಲ್ವಿಚಾರಕರಿಗೆ ಸನ್ಮಾನಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು. ಜನಗಣತಿಯಲ್ಲಿ ಭಾಗವಹಿಸುವ ಗಣತಿದಾರರಿಗೆ ಗಣತಿಕಿಟ್‌ಗಳನ್ನು ವಿತರಿಸಲಾಯಿತು.

ಶಾಸಕ ಹಂಪಯ್ಯನಾಯಕ, ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಅಂಬರೇಶಪ್ಪ, ಬಿ.ಕೆ,ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್, ತಾಪಂ ಇಒ ಖಾಲಿದ್ ಅಹ್ಮದ್, ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ಡಿ., ಮುಖಂಡರಾದ ಶಿವಮೂರ್ತಿ, ಅಮರೇಗೌಡ, ಶರಣಯ್ಯನಾಯಕ ಗುಡದಿನ್ನಿ ಇತರರಿದ್ದರು.

ಕಿರುಸುದ್ದಿ

ಬಸ್ ನಿಲ್ದಾಣ ನಿರ್ಮಿಸಲು ಆಗ್ರಹ



◆**ಗಾದಿಗನೂರು:** ಬಿರು ಬೇಸಿಗೆ ಕಾಲದಲ್ಲಿ ತಾಪಮಾನ ಹೆಚ್ಚಾಗಿದ್ದು ವೃದ್ಧರೂ ಮಕ್ಕಳು ಬೇರೆ ಊರಿಗೆ ಹೋಗಲು ಬಸ್ ಕಾಯುವ ಕೆಲಸ ಒಂದು ಕಡೆಯಾದರೆ ಕುಳಿತುಕೊಳ್ಳಲು ಸರಿಯಾದ ತಂಗುದಾಣವಿಲ್ಲದೆ ಜನರು ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದ ಗಾದಿಗನೂರು ಗ್ರಾಮದಲ್ಲಿ ಬಳ್ಳಾರಿ ಮತ್ತು ಹೊಸಪೇಟೆ ಹೋಗುವ ಪ್ರಯಾಣಿಕರಿಗೆ ತಂಗುದಾಣ ಇಲ್ಲದೆ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಬಹಳ ತೊಂದರೆಯಾಗಿದ್ದು ರಸ್ತೆ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿ ಬಸ್ ನಿಲ್ದಾಣವನ್ನು ನಿರ್ಮಿಸಿ ಕೊಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಅತಿ ಹೆಚ್ಚು ತಾಪಮಾನ ಉಂಟಾಗುವ ಕಾರಣ ಗ್ರಾಪಂ ಅಧಿಕಾರಿಗಳು ತಾತ್ಕಾಲಿಕವಾಗಿ ತಂಗುದಾಣ ನಿರ್ಮಾಣಕ್ಕೆ ಜನರು ಆಗ್ರಹಿಸಿದ್ದಾರೆ.

ಸ್ವಯಂ ಗಣತಿ: ಮಾಹಿತಿ ದಾಖಲಿಸಿದ ಎಡಿಸಿ

◆**ಬಳ್ಳಾರಿ:** ಡಿಜಿಟಲ್ ಜನಗಣತಿ– 2027ರ ಸ್ವಯಂ ಗಣತಿ ಪ್ರಕ್ರಿಯೆ ಆರಂಭವಾಗಿದ್ದು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್. ಝುಬೇರ್ ಅವರು ಶುಕ್ರವಾರ ತಮ್ಮ ಕಚೇರಿಯಲ್ಲಿ ಕಂಪ್ಯೂಟರ್ ಮೂಲಕ ಮಾಹಿತಿಯನ್ನು ದಾಖಲಿಸಿದರು.



ನಿಗದಿತ ಜನಗಣತಿ ಪೋರ್ಟಲ್‌ಗೆ ಲಾಗಿನ್ ಆಗುವ ಮೂಲಕ, ಕುಟುಂಬದ ಸದಸ್ಯರ ವಿವರಗಳು, ವಸತಿ ಸೌಕರ್ಯ ಮತ್ತು ಇತರ ಅಗತ್ಯ ಮಾಹಿತಿಗಳನ್ನು ಆನ್‌ಲೈನ್ ಮೂಲಕವೇ ದಾಖಲಿಸುವ ಅವಕಾಶ ಈ ಪ್ರಕ್ರಿಯೆಯಲ್ಲಿ ಒದಗಿಸಲಾಗಿದೆ. ಏ.15ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬಹುದು. ಸರ್ಕಾರವು ಒದಗಿಸಿರುವ ಈ 'ಸ್ವಯಂ ಗಣತಿ' ಸೌಲಭ್ಯವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಮತ್ತು ನಿಖರವಾದ ಮಾಹಿತಿ ನೀಡುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

ಪಾಲಿಕೆ ಎಂಜಿನಿಯರ್ ಮೇಲೆ ಸದಸ್ಯನ ಬೆಂಬಲಿಗರಿಂದ ಹಲ್ಲೆ



◆**ಬಳ್ಳಾರಿ:** ಮಹಾನಗರ ಪಾಲಿಕೆ ಎಂಜಿನಿಯರ್ ವೀರೇಶ್ ಅವರ ಮೇಲೆ ನಾನಾ ಕಾರಣಕ್ಕೆ ಪಾಲಿಕೆ ಸದಸ್ಯ ಕುಬೇರ ಹಾಗೂ ಅವರ ಬೆಂಬಲಿಗರು ಹಲ್ಲೆ ನಡೆಸಿದ ಘಟನೆ ನಡೆದಿದೆ.

ಕೂಡಲೇ ಸಿಬ್ಬಂದಿ ಎಂಜನಿಯರ್ ವೀರೇಶ್ ಅವರನ್ನು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದು, ಯಾವುದೇ ಅಪಾಯವಿಲ್ಲ ಎಂದು ವೈದ್ಯರು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಸ್ಪಷ್ಟಪಡಿಸಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಮಹಾನಗರ ಪಾಲಿಕೆ ಆಯುಕ್ತ ಮಂಜುನಾಥ್ ಅವರು ಆಸ್ಪತ್ರೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು. ನಂತರ ಮಾತನಾಡಿ, ಈ ಬೆಳವಣಿಗೆ ಸರಿಯಲ್ಲ, ಯಾವುದೇ ಕೆಲಸ ಇರಲಿ, ಸಮಸ್ಯೆ ಇರಲಿ ನನ್ನ ಗಮನಕ್ಕೂ ತಂದಿದ್ದರೆ ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೆ, ಈ ರೀತಿ ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವುದು ಸರಿಯಲ್ಲ, ಈ ಘಟನೆಯನ್ನು ಖಂಡಿಸುವೆ. ಮೇಲಧಿಕಾರಿಗಳ ಗಮನಕ್ಕೆ ತರುವೆ ಎಂದರು. ಈ ಕುರಿತು ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಸರ್ಕಾರಿ ಶತಮಾನದ ಶಾಲೆಯಲ್ಲಿ ಭಗವಾನ್ ಮಹಾವೀರ ಜಯಂತಿ ಆಚರಿಸಲಾಯಿತು. ಮುಖ್ಯ ಶಿಕ್ಷಕ ಬಿ.ಎಸ್.ಸದ್ಯೋಜಾತಪ್ಪ, ಶಿಕ್ಷಕರಾದ ರವಿಕುಮಾರ್, ಎಸ್.ರಾಮಪ್ಪ, ಮಂಜುನಾಥ್, ದೇವರಾಜ್ ಸೇರಿದಂತೆ ಮಕ್ಕಳಿದ್ದರು.

ಶ್ರದ್ಧಾ ಭಕ್ತಿಯಿಂದ ಹನುಮಾನ್ ಜಯಂತಿ ಆಚರಣೆ

◆**ವಿಜಯನಗರ:** ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಗುರುವಾರ ಪವನ ಪುತ್ರ ಹನುಮಾನ್ ಜಯಂತಿಯನ್ನು ಶ್ರದ್ಧೆ, ಭಕ್ತಿಯಿಂದ ಆಚರಿಸಲಾಯಿತು. ಆಂಜನೇಯ ದೇವಸ್ಥಾನಗಳಲ್ಲಿ ಶ್ರೀರಾಮ ಭಕ್ತ ಹನುಮಂತನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ವಿಶ್ವವಿಖ್ಯಾತ ಹಂಪಿಯ ಚಕ್ರತೀರ್ಥ ಯಂತ್ರೋದ್ಧಾರಕ ಆಂಜನೇಯ ಸ್ವಾಮಿ ಸನ್ನಿಧಾನದಲ್ಲಿ ಗುರುವಾರ ಬೆಳಗ್ಗೆಯಿಂದಲೇ ವಿಶೇಷ ಪೂಜಾ, ಕೈಂಕರ್ಯಗಳು ಜೋರಾಗಿದ್ದವು. ವ್ಯಾಸರಾಜರು ಪ್ರತಿಷ್ಠಾಪಿಸಿರುವ ಯಂತ್ರೋದ್ಧಾರಕ ಆಂಜನೇಯನ ಮೂರ್ತಿಯನ್ನು ಬೆಳ್ಳಿ ಕವಚದಿಂದ ಅಲಂಕರಿಸಿ, ವಿಶೇಷ ಪೂಜೆ ನೆರವೇರಿಸಲಾಯಿತು. ಬೆಳಗ್ಗೆ ಹೋಮ, ಹವನ ಹಾಗೂ ವಾಯುಪುತ್ರನನ್ನು ಸ್ತುತಿಸಲಾಯಿತು. ಹನುಮಾನ ಜಯಂತಿ ಅಂಗವಾಗಿ ದೇವರ ದರ್ಶನಕ್ಕೆ ಬಂದಿದ್ದ ಅನೇಕ ಭಕ್ತರು ಚಕ್ರತೀರ್ಥ ಯಂತ್ರೋದ್ಧಾರಕನ ಮಂತ್ರವನ್ನು ಪಠಿಸಿದರೆ, ಇನ್ನಿತರರು ಭಕ್ತಿಗೀತೆಗಳೊಂದಿಗೆ ದೇವರ ನಾಮ ಜಪಿಸಿದರು.

ಅದರಂತೆ ಹೊಸಪೇಟೆಯ ಐತಿಹಾಸಿಕ ವಡಕರಾಯ ದೇವಸ್ಥಾನ, ಪಂಚಮುಖಿ ಪ್ರಾಣದೇವರ ಸನ್ನಿಧಾನ, ಭಟ್ರಹಳ್ಳಿ ಆಂಜನೇಯ, ಅಭಯ ಆಂಜನೇಯ ದೇವಸ್ಥಾನದ ಸೇರಿದಂತೆ ವಿವಿಧೆಡೆಯಿರುವ ವೀರಾಂಜನೇಯ, ಮಾರುತಿ ಮಂದಿರಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.ದೇವರ ದರ್ಶನಾಶೀರ್ವಾದಕ್ಕೆ ಆಗಮಿಸಿದ್ದ ಭಕ್ತರಿಗೆ ದೇವಸ್ಥಾನ ಮಂಡಳಿಗಳಿಂದ ಪ್ರಸಾದ, ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ವಿಜಯನಗರ: ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಗುರುವಾರ ಪವನ ಪುತ್ರ ಹನುಮಾನ್ ಜಯಂತಿಯನ್ನು ಶ್ರದ್ಧೆ, ಭಕ್ತಿಯಿಂದ ಆಚರಿಸಲಾಯಿತು. ಆಂಜನೇಯ ದೇವಸ್ಥಾನಗಳಲ್ಲಿ ಶ್ರೀರಾಮ ಭಕ್ತ ಹನುಮಂತನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ದಾರಿ ತಪ್ಪುತ್ತಿರುವ ಯುವಜನತೆ | ಗ್ರಾಮೀಣ ಪ್ರದೇಶದಲ್ಲಿ ಅಕ್ರಮ ಮದ್ಯ ಮಾರಾಟ

ಹುಣಸಗಿಯಲ್ಲಿ ಅಕ್ರಮ ಮದ್ಯದ ಹಾವಳಿ

▸ಮಲ್ಲಿಕಾರ್ಜುನ ಗುತ್ತೇದಾರ

◆**ಹುಣಸಗಿ:** ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನಾದ್ಯಂತ ಪಾನ್ ಶಾಪ್‌ಗಳು ಮತ್ತು ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿರುವುದು ಗಂಭೀರ ಸಾಮಾಜಿಕ ಸಮಸ್ಯೆಯಾಗಿ ರೂಪುಗೊಂಡಿದೆ. ಆದರೆ ಇದು ಕೇವಲ ಹುಣಸಗಿ ತಾಲೂಕಿಗೆ ಸೀಮಿತವಾಗಿರುವ ಸಮಸ್ಯೆಯಲ್ಲ, ರಾಜ್ಯದ ವಿವಿಧ ಭಾಗಗಳಲ್ಲಿ ಹರಡುತ್ತಿರುವ ಒಂದು ಆತಂಕಕಾರಿ ಬೆಳವಣಿಗೆಯಾಗಿದೆ.

ದಿಗಂತ ವಿಶೇಷ

ನಿಯಮಗಳಿಗೆ ವಿರುದ್ಧವಾಗಿ ನಡೆಯುತ್ತಿರುವ ಈ ಅಕ್ರಮ ಚಟುವಟಿಕೆಗಳಿಂದ ಯುವಕರ ಬದುಕು ಹಾಳಾಗುತ್ತಿದ್ದು, ಕುಟುಂಬಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕುಟುಂಬದ ಜವಾಬ್ದಾರಿಯನ್ನು ಹೊರುವ ವಯಸ್ಸಿನಲ್ಲಿರುವ ಅನೇಕ ಯುವಕರು ಮದ್ಯದ ವ್ಯಸನಕ್ಕೆ ಒಳಗಾಗಿ ತಮ್ಮ ಸುಂದರ ಸಂಸಾರವನ್ನು ಕಳೆದುಕೊಳ್ಳುತ್ತಿದ್ದಾರೆ. ಕೆಲವರು ಅರ್ಧ ಆಯುಷ್ಯದಲ್ಲೇ ಜೀವ ಕಳೆದುಕೊಳ್ಳುತ್ತಿರುವುದು ಸಮಾಜವನ್ನು ಕಂಗಾಲು ಮಾಡುತ್ತಿದೆ.

ಈ ಪರಿಸ್ಥಿತಿಯನ್ನು ಕಂಡು ತಂದೆ–ತಾಯಿಗಳು ಭಾರೀ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ತಮ್ಮ ಮಕ್ಕಳ ಭವಿಷ್ಯ ಹಾಳಾಗುತ್ತಿರುವುದನ್ನು ಕಣ್ಣಾರೆ ನೋಡುವ ಪರಿಸ್ಥಿತಿ ಅವರ ನೋವನ್ನು ಮತ್ತಷ್ಟು ಹೆಚ್ಚಿಸುತ್ತಿದೆ.



ಕುಟುಂಬಗಳಲ್ಲಿ ಕಲಹಗಳು ಹೆಚ್ಚಾಗುತ್ತಿದ್ದು, ಸಾಮಾಜಿಕ ಸಮತೋಲನಕ್ಕೂ ಧಕ್ಕೆಯುಂಟಾಗಿದೆ.

ಸಾರ್ವಜನಿಕರ ಆರೋಪದಂತೆ,ಗ್ರಾಮೀಣ ಪ್ರದೇಶದ ಭಾಗಗಳಲ್ಲಿ ಪಾನ್ ಅಂಗಡಿಗಳು ಮತ್ತು ಕಿರಾಣಿ ಅಂಗಡಿಗಳಲ್ಲಿ ಸುಲಭವಾಗಿ ಮದ್ಯ ಲಭ್ಯವಾಗುತ್ತಿರುವುದು ಈ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ. ಈ ಅಕ್ರಮ ಮಾರಾಟ ಕೇವಲ ಗ್ರಾಮೀಣ ಭಾಗಗಳಿಗೆ ಮಾತ್ರ ಸೀಮಿತವಾಗದೇ, ರಾಜ್ಯದ ಹಲವು ಜಿಲ್ಲೆಗಳಲ್ಲಿಯೂ ವ್ಯಾಪಕವಾಗಿ ನಡೆಯುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ರಾಜ್ಯಮಟ್ಟದಲ್ಲಿ ಸಮಗ್ರ ಕ್ರಮ ಕೈಗೊಳ್ಳಬೇಕಾಗಿದೆ. ಅಕ್ರಮ ಮದ್ಯ ಮಾರಾಟವನ್ನು ಕಟ್ಟುನಿಟ್ಟಾಗಿ ನಿಗ್ರಹಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

> ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಅಂಗಡಿಗಳನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.
> ■ ಶಾರದಾ, ಯಾದಗಿರಿ ಜಿಲ್ಲಾ ಅಬಕಾರಿ ಇಲಾಖೆ ಅಧಿಕಾರಿ

ಇದರ ಜೊತೆಗೆ, ಮದ್ಯದ ವ್ಯಸನದಿಂದ ಸಂಕಷ್ಟಕ್ಕೆ ಸಿಲುಕಿರುವ ಯುವಕರಿಗೆ ಪುನರ್ವಸತಿ, ಜಾಗೃತಿ ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ಹಮ್ಮಿಕೊಳ್ಳುವುದು ಅತ್ಯಗತ್ಯವಾಗಿದೆ. ಯುವಕರಲ್ಲಿ ಉತ್ತಮ ಸಂಸ್ಕಾರ, ಜೀವನ ಮೌಲ್ಯಗಳು ಮತ್ತು ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಸರ್ಕಾರ ಹಾಗೂ ಸಾಮಾಜಿಕ ಸಂಘಟನೆಗಳು ಕೈಗೊಳ್ಳಬೇಕಾಗಿದೆ.

ಸಮಸ್ಯೆಯ ಗಂಭೀರತೆಯನ್ನು ಅರಿತು ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಕ್ರಮ ಕೈಗೊಳ್ಳುವುದರಿಂದ ಮಾತ್ರ ಈ ವ್ಯಾಪಕ ಅನಾಹುತಕ್ಕೆ ಕಡಿವಾಣ ಹಾಕಲು ಸಾಧ್ಯ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಜನಗಣತಿಯಲ್ಲಿ ಪ್ರತಿಯೊಬ್ಬರೂ ಭಾಗಿಯಾಗಿ

◆**ಬಳ್ಳಾರಿ:** ಕೇಂದ್ರ ಸರ್ಕಾರ ಪ್ರಾರಂಭಿಸಿರುವ ಜನಗಣತಿ ಅಭಿಯಾನದಲ್ಲಿ ಪ್ರತಿಯೊಬ್ಬ ನಾಗರಿಕರು ಸ್ವಯಂ ಪ್ರೇರಣೆಯಿಂದ ಭಾಗಿಯಾಗಬೇಕು ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ನಗರದ 37ನೇ ವಾರ್ಡ್ ವ್ಯಾಪ್ತಿಯ ದೇವಿ ನಗರದಲ್ಲಿ ಶುಕ್ರವಾರ ನಡೆದ ಭೂಮಿ ಪೂಜೆ ಕಾರ್ಯಕ್ರಮ ಹಾಗೂ ಸಲಾಂ ಬಳ್ಳಾರಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಹಾನಗರ ಪಾಲಿಕೆಯ ವತಿಯಿಂದ ಜನಗಣತಿಯ ಕುರಿತು ಸಾಕಷ್ಟು ಪ್ರಚಾರ ಮಾಡಲಾಗುತ್ತಿದೆ. ಪಾಲಿಕೆಯ ಅಧಿಕಾರಿಗಳು ಮನೆ ಮನೆಗೆ ಜನಗಣತಿ ಬಂದಾಗ ಜನರು ಸಹಕರಿಸಿ ಅಭಿಯಾನ ಯಶಸ್ವಿಗೊಳಿಸಬೇಕು ಎಂದರು.

ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆಯ ಅನಿಲ ಪೂರೈಕೆಯಲ್ಲಿ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಪಾಲಿಕೆ ಹಾಗೂ ಜಿಲ್ಲಾಧಿಕಾರಿಗಳು ಈಗಾಗಲೇ ಕ್ರಮ ಕೈಗೊಂಡಿದ್ದಾರೆ ಎಂದರು. ನಗರದ 37ನೇ ವಾರ್ಡ್ ಹಾಗೂ 38ನೇ ವಾರ್ಡುಗಳಲ್ಲಿ ರಸ್ತೆ, ಮಳೆ ನೀರು ಚರಂಡಿ, ಒಳ ಚರಂಡಿ ಹಾಗೂ ಪೇವರ್ಸ್ ಅಳವಡಿಕೆ ಕಾಮಗಾರಿಗಳ ಎರಡು ಪ್ರತ್ಯೇಕ ಕಾಮಗಾರಿಗಳಿಗೆ ತಲಾ 2 ಕೋಟಿ ರೂ.ಗಳ ಒಟ್ಟು 4 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಹಿನ್ನೆಲೆ ತುಂಗಭದ್ರಾ ಜಲಾಶಯದಿಂದ 400 ಕ್ಯೂಸೆಕ್ ನೀರನ್ನು ಕಾಲುವೆ ಮೂಲಕ ಕೆರೆಗೆ ತುಂಬಿಸಲು ಪ್ರಾದೇಶಿಕ ಆಯುಕ್ತರು ಆದೇಶಿಸಿದ್ದಾರೆ. ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸೋಲ್ಲ ಎನ್ನುವ ವಿಶ್ವಾಸವಿದೆ. ಶಾಶ್ವತ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದರು.

ಪಾಲಿಕೆಯ ಆಯುಕ್ತ ಮಂಜುನಾಥ, ಪಾಲಿಕೆ ಸದಸ್ಯ ಕುಬೇರ, ಮುಖಂಡ ಮೊಹಮ್ಮದ್ ಭಾಯ್, ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯುಡು, ಪಾಲಿಕೆಯ ಸದಸ್ಯ ಶ್ರೀನಿವಾಸ್ ಮಿಂಚು, ಮುಖಂಡರಾದ ಪರುಶುರಾಮುಡು, ಲಾಲಸ್ವಾಮಿ, ಹೊನ್ನಪ್ಪ, ಹಗರಿ ಗೋವಿಂದ, ದೇವಿನಗರ ಹೊನ್ನೂರಪ್ಪ, ಪಿ.ರಾಜು, ಹವಂಭಾವಿ ಲೋಕೇಶ್, ಮುಕ್ಕಣ್ಣ ಚರಣ್, ಥಿಯೇಟರ್ ಶಿವು, ಪೆದ್ದನ್ನ, ವಿಶ್ವನಾಥ, ಪದ್ಮಾ, ಹೊನ್ನೂರಸ್ವಾಮಿ ಇತರರಿದ್ದರು.



ಆಕ್ಷೇಪಣೆ ಸಲ್ಲಿಸಲು ಅವಕಾಶ

◆ **ಬಳ್ಳಾರಿ:** ಮಹಾನಗರ ಪಾಲಿಕೆವ್ಯಾಪ್ತಿಯ ವಿವಿಧ ವೃತ್ತ ಹಾಗೂ ರಸ್ತೆಗಳಿಗೆ ನಾಮಕರಣ ಮಾಡಲು ಉದ್ದೇಶಿಸಲಾಗಿದ್ದು, ಈ ಕುರಿತು ಸಲಹೆ, ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಪಾಲಿಕೆ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್ ತಿಳಿಸಿದ್ದಾರೆ.

ವೃತ್ತ ಮತ್ತು ರಸ್ತೆಗಳಿಗೆ ಹೊಸದಾಗಿ ಹೆಸರು ನಾಮಕರಣ ಮಾಡಲು ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ, ಸಭೆಯ ಸರ್ವಾನುಮತದಿಂದ ಮಂಜೂರಾತಿ ನೀಡಿದೆ. ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ, ಬಳ್ಳಾರಿ ಮಹಾನಗರಪಾಲಿಕೆಯ ಆಯುಕ್ತರ ಕಚೇರಿಗೆ ಏ.30ರೊಳೊಗಾಗಿ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ದೇವರ ನಾಮಸ್ಮರಣೆಯಿಂದ ನೆಮ್ಮದಿ ಜೀವನ

◆**ಕುರುಗೋಡು:** ಮನುಷ್ಯ ತನ್ನ ಪಾಪಕರ್ಮಗಳಿಂದ ಜೀವನದಲ್ಲಿ ಅಸುಖಿಯಾಗಿದ್ದಾನೆ. ಸಾಕಷ್ಟು ಆಸ್ತಿ ಅಂತಸ್ತು ಇದ್ದಾರೂ ವೇಗದ ಬದುಕು ನಮ್ಮನ್ನು ಯಾಂತ್ರಿಕರನ್ನಾಗಿ ಮಾಡಿದೆ. ಈ ಜಂಜಾಟದಿಂದ ಹೊರಬಂದು ನೆಮ್ಮದಿ ಜೀವನ ನಡೆಸಲು ಪ್ರತಿಯೊಬ್ಬರು ಇಂತಹ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರ ನಾಮಸ್ಮರಣೆಯಿಂದ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯ ಎಂದು ಸಿದ್ದರಾಂಪುರ ಮಠದ ಚಿದಾನಂದ ಸ್ವಾಮೀಜಿ ಭಕ್ತರಿಗೆ ಆಶೀರ್ವಾಚನ ನೀಡಿದರು.

ಪಟ್ಟಣದ ಮುಷ್ಠಗಟ್ಟೆ ರಸ್ತೆಯಲ್ಲಿರುವ ಶ್ರೀಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿರುವ ಮಹಾ ಮಹಿಮ ಶ್ರೀಗುಡದೂರು ದೊಡ್ಡ ಬಸವೇಶ್ವರ ತಾತನವರ 8ನೇ ವರ್ಷದ ಪುರಾಣ ಕಾರ್ಯಕ್ರಮ ಹಾಗೂ ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಬುಧವಾರ ಅವರು ಮಾತನಾಡಿದರು.

ನಂತರ ಮಾತನಾಡಿದ ಎಚ್.ವೀರಾಪುರ ಮಠದ ಜಡೇಶ ಸ್ವಾಮೀಜಿ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸಂಸ್ಕೃತಿ ಸಂಸ್ಕಾರ ಬೆಳಸಲು ಸಹಕಾರಿಯಾಗುವ ಜೊತೆಗೆ ನೆಮ್ಮದಿ ಜೀವನಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಹೇಳಿದರು.

ಮೊದಲಿಗೆ ಪುರಾಣ ಕಾರ್ಯಕ್ರಮದಲ್ಲಿ 108 ಜನ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಿತು ಗುಡದೂರು ದೊಡ್ಡ ಬಸವೇಶ್ವರ ತಾತನವರ ಲೀಲೆಗಳನ್ನು ಸಾಕಷ್ಟು ಸಂಖ್ಯೆಯ ಭಕ್ತರು ಭಕ್ತಿಯಿಂದ ಶ್ರವಣ ಮಾಡಿದರು ಕಾರ್ಯಕ್ರಮದ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಕೊನೆಯಲ್ಲಿ ಎಲ್ಲ ಸ್ವಾಮೀಜಿಗಳಿಗೆ ದೇವಸ್ಥಾನದ ವತಿಯಿಂದ ಸನ್ಮಾನ ಗೌರವ ಸಮರ್ಪಣೆ ಜರುಗಿತು.

ಭಕ್ತರಿಗೆ ಅನ್ನ ಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಪುರಾಣ ಪ್ರವಚನ ಕಾರಾದ ಷಡಕ್ಷರಿ ಸ್ವಾಮಿ, ಚಂದ್ರ ಶೇಖರಯ್ಯ ಸ್ವಾಮಿ, ಗವಾಯಿಗಳು ಕೊಂಚಿಗೇರಿ ಶಿವಯ್ಯ, ಎಸ್.ಪ್ರಭುಲಿಂಗ ಗೌಡ ಹಾಗೂ ವ್ಯವಸ್ಥಾಪಕ ಎಸ್.ಭೀಮನಗೌಡ ಹಾಗೂ ಪುರೋಹಿತರಾದ ಜಡೆಯ್ಯಸ್ವಾಮೀಜಿ, ರುದ್ರಸ್ವಾಮಿ ಗೇಣಿಕೆಹಾಳು, ಮುಷ್ಠಗಟ್ಟೆ, ಎಚ್.ವೀರಾಪುರ, ಮತ್ತು ಕುರುಗೋಡು ಪಟ್ಟಣದ ಸದ್ಭಕ್ತರು ಉಪಸ್ಥಿತರಿದ್ದರು.



ಶಿವಶರಣರ ಮಾರ್ಗದಲ್ಲಿ ಸಾಗೋಣ

◆**ಕೆಂಭಾವಿ:** ವೈವಿಧ್ಯಮಯ ಸಂಸ್ಕೃತಿಯನ್ನು ಪ್ರೀತಿಸೋಣ, ಗೌರವಿಸೋಣ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯೋಣ, ಸೂಫಿ ಸಂತರು, ದಾಸ ಶ್ರೇಷ್ಠರು, ಮಹಾತ್ಮರು, ಶಿವಶರಣರು ತೋರಿದ ಮಾರ್ಗದಲ್ಲಿ ಸಾಗೋಣ ಎಂದು ಸಜ್ಜಾದ ನಶಿನ್ ಮಾಸಾಬಿ ದುರ್ಗಾದ ಸಾಹೇಬ್ ಶಾಹೀದ್ ಹುಸೇನ್ ಫಾರೂಕಿ ಹೇಳಿದರು.

ಪಟ್ಟಣದ ಶ್ರೀಗುರು ಕಾತೇಶ್ವರ ಜನ ಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ಹಿರೇಮಠ ಸಂಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿಯಲ್ಲಿ ಇಲಿಯಾಸ್ ಪಟೇಲರ ಚೊಚ್ಚಲ ಕೃತಿ 'ಅತಿಥಿ ಹೃದಯ' ಕಾದಂಬರಿ ಮುಖಪುಟ ಅನಾವರಣ ಮಾಡಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಉಪನ್ಯಾಸ ನೀಡಿದ ಮಲ್ಲಯ್ಯ ಸ್ವಾಮಿ ವಡಿಗೇರಿ ಹೆಣ್ಣು, ಹೊನ್ನು, ಮಣ್ಣು, ಅಧಿಕಾರ, ಅಂತಸ್ತು, ಬಯಸದೆ, ಬದುಕಿನುದ್ದಕ್ಕೂ ಸೇವಾ ಮನೋಭಾವ ಮೈಗೂಡಿಸಿಕೊಂಡರೆ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ ಎಂದವರು, ಹಿರೇಮಠದ ಪೀಠಾಧಿಪತಿ ಷ ಬ್ರ ಚನ್ನಬಸವ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಜರುಗುವ ಮಾಸಿಕ ಸತ್ಸಂಗವು ಸಾಹಿತ್ಯ, ಸಂಗೀತ,ಕಲೆ, ಸಂಸ್ಕೃತಿ, ಆಚಾರ, ವಿಚಾರ, ಶ್ರದ್ಧೆ, ಮತ್ತು, ಸಂಪ್ರದಾಯಗಳ ಪಾಠಶಾಲೆ ಎಂದು ಬಣ್ಣಿಸಿದರು.



ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸೋಮನಾಥ ಯಾಳಗಿ ಹಾಗೂ ಯಮನೇಶ ಯಾಳಗಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು. ಮಲ್ಲಮ್ಮ ನುಡಿ ಪತ್ರಿಕೆಯ ಯುಗಾದಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಸಾಹಿತಿ ನಿಂಗನಗೌಡ ದೇಸಾಯಿ, ನಿಜಗುಣಿ ವಿಶ್ವಕರ್ಮ, ಪುರಸಭೆ ಸದಸ್ಯ ಭೀಮನಗೌಡ ಮಲ್ಹಾಪುರ, ದೇವಿಂದ್ರ ಕರಡಕಲ್, ನಯೋಮ್ ಖಾಜಿ ಅಬ್ದುಲ್ ರಜಾಕ್ ಸಾಸನೂರ, ಬಂದೇ ನವಾಜ್ ನಾಲತವಾಡ, ಇಲಿಯಾಸ್ ವಡಿಕೇರಿ, ಡಾ.ಯಂಕನಗೌಡ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಾಟಕಗಳು ಸಾಮಾಜಿಕ ಪ್ರಜ್ಞೆ ಮೂಡಿಸುತ್ತವೆ: ಶಾಸಕ ಕೃಷ್ಣನಾಯಕ

◆**ಹೂವಿನಹಡಗಲಿ:** ನಾಟಕಗಳು ಸಾಮಾಜಿಕ ಪ್ರಜ್ಞೆ ಅರಿವು ಮೂಡಿಸುತ್ತವೆ ಎಂದು ಶಾಸಕ ಎಲ್.ಕೃಷ್ಣನಾಯಕ ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಹಿರೇಮಲ್ಲಿನ ಕೇರಿ ಗ್ರಾಮದಲ್ಲಿ ಶ್ರೀಆಂಜನೇಯ ಸ್ವಾಮಿಯ ರಥೋತ್ಸವದ ಪ್ರಯುಕ್ತ ನಡೆದ ನಾಟಕದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಜಾತ್ರೆ, ಹಬ್ಬ ಧಾರ್ಮಿಕ ಉತ್ಸವ ನಿಮಿತ್ತ ಸಂಸ್ಕೃತಿ ಬಿಂಬಿಸುವ ಕಂಪನಿ ಸಾಮಾಜಿಕ ನಾಟಕಗಳನ್ನು ಹಳ್ಳಿಯ ಜನರೇ ಸ್ವಂತ ದುಡಿಮೆಯಿಂದ ಹಣ ಹೊಂದಿಸಿಕೊಂಡು ಪ್ರದರ್ಶನ ಮಾಡುವ ಕಾರ್ಯ ಅನನ್ಯ ಎಂದು ಬಣ್ಣಿಸಿದರು.

ಕೇವಲ ಎರಡು ಮೂರು ವಾರಗಳಲ್ಲಿ ತಾವೇ ತಾಲೀಮಿನಲ್ಲಿ ನಿರ್ದೇಶಕರ ಮಾರ್ಗದರ್ಶನದಲ್ಲಿ ಅಭಿನಯ ಗಾಯನ ಕಲಿತು ನಾಟಕದಲ್ಲಿ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ಮಾಡುವರು. ಕನ್ನಡ ನಾಡಿನ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಗ್ರಾಮೀಣ ರಂಗಭೂಮಿ ಜೀವಂತವಾಗಿ ಉಳಿಯಲು ಹಳ್ಳಿಗರ ಸಾಂಸ್ಕೃತಿಕ ಪ್ರಜ್ಞೆ ಚಿಂತನೆ ಬಹುಮುಖ್ಯ ಕಾರಣ ಎಂದು ತಿಳಿಸಿದರು.

ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀಚನ್ನಬಸವೇಶ್ವರ ಸ್ವಾಮೀಜಿ ವಹಿಸಿದ್ದರು. ಮುಖಂಡರಾದ ವಾರದ್ ಗೌಸ್ ಮೋಹಿದ್ದಿನ್, ಈ.ಟಿ.ಲಿಂಗರಾಜ್, ಕೊಟ್ರೇಶ್ ನಾಯಕ್, ಡಂಬಳದ ನಾಗರಾಜ್, ದೇವಲಾ ನಾಯಕ್, ರೇಣುಕಮ್ಮ, ಆರ್.ಮಲ್ಲಣ್ಣ, ಡಿ.ಆಂಜನೇಯ, ಹೊಂಬಳ ನಾಗರಾಜ್, ಎಂ.ಎಲ್ಲಪ್ಪ, ರಾಮಣ್ಣ, ಎಚ್.ಪ್ರಕಾಶ, ಅಂಜಿನಪ್ಪ, ಎಂ.ಪರಮೇಶ, ಕೆ.ವಿಜಯ್‌ಕುಮಾರ್ ಅನೇಕ ಹಿರಿಯ ಮುಖಂಡರು ಹಾಗೂ ಆಂಜನೇಯ ಸ್ವಾಮಿಯ ಭಕ್ತರು ಭಾಗವಹಿಸಿದ್ದರು.



ಪೊಲೀಸ್ ಇಲಾಖೆ ಸೇವೆ ತೃಪ್ತಿ ನೀಡಿದೆ: ಶ್ರೀನಿವಾಸಲು

◆**ಬಳ್ಳಾರಿ:** ಸೇವಾವಧಿಯಲ್ಲಿ ಎದುರಾದ ಕ್ಲಿಷ್ಟ ಪರಿಸ್ಥಿತಿಗಳು ಮತ್ತು ಕಠಿಣ ಪ್ರಕರಣಗಳ ತನಿಖೆಯಲ್ಲಿ ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಪೊಲೀಸ್ ಇಲಾಖೆ ನೀಡಿದ ಶಕ್ತಿಯಿಂದ ಸೇವೆ ತೃಪ್ತಿ ನೀಡಿದೆ ಎಂದು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ನಿವೃತ್ತ ಸಹಾಯಕ ಸಬ್-ಇನ್‌ಸ್ಪೆಕ್ಟರ್ ಶ್ರೀನಿವಾಸಲು ಎಂ. ಹೇಳಿದರು.



ನಗರದ ಜಿಲ್ಲಾ ಸಶಸ್ತ್ರ ಪೊಲೀಸ್ ಕವಾಯತು (ಡಿಎಆರ್) ಮೈದಾನದಲ್ಲಿ ಗುರುವಾರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ 'ಪೊಲೀಸ್ ಧ್ವಜ ದಿನಾಚರಣೆ' ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು. ನಿವೃತ್ತಿಯ ನಂತರವೂ ಸಿಗುವ ಆರೋಗ್ಯ ಭಾಗ್ಯ ಯೋಜನೆ, ಪೊಲೀಸ್ ಕ್ಯಾಂಟೀನ್ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಗಳು ಅನುಕೂಲಕರವಾಗಿದ್ದು, ನಿವೃತ್ತ ಸಿಬ್ಬಂದಿಗೆ ಇಲಾಖೆಯಿಂದ ಬರಬೇಕಾದ ಸೌಲಭ್ಯಗಳು ವಿಳಂಬವಿಲ್ಲದೆ ತಲುಪುವಂತಾಗಬೇಕು ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಸ್.ನವೀನ್‌ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪೊಲೀಸ್ ಇಲಾಖೆಯು ತನ್ನ ಸಿಬ್ಬಂದಿ ಮತ್ತು ನಿವೃತ್ತ ಅಧಿಕಾರಿಗಳ ಕ್ಷೇಮಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ. ಕರ್ತವ್ಯದ ಅವಧಿಯಲ್ಲಿ ಮರಣ ಹೊಂದಿದ ಅಧಿಕಾರಿಗಳು ಹಾಗೂ ಮೃತ ನಿವೃತ್ತ ಅಧಿಕಾರಿಗಳ ಕುಟುಂಬಗಳಿಗೆ ನಗದು, ನಿವೃತ್ತ ಅಧಿಕಾರಿಗಳ ಆರೋಗ್ಯ ರಕ್ಷಣೆಗಾಗಿ ವೈದ್ಯಕೀಯ ಚಿಕಿತ್ಸಾ ಧನ ವಿತರಿಸಲಾಗಿದೆ ಎಂದು ತಿಳಿಸಿದರು.

ಬಳ್ಳಾರಿಯ ಡಿಎಆರ್ ಡಿಎಸ್ಪಿ ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಸೇನಾಪಡೆಯು ಕೇವಲ ಯುದ್ಧದ ಸಮಯದಲ್ಲಿ ಹೋರಾಡಿದರೆ, ಪೊಲೀಸ್ ಇಲಾಖೆಯು ಪ್ರತಿದಿನ ಹತ್ತು ಹಲವಾರು ಕಷ್ಟಕರ ಸನ್ನಿವೇಶಗಳನ್ನು ಎದುರಿಸಿ ಸಮಾಜದ ರಕ್ಷಣೆಗೆ ಶ್ರಮಿಸುತ್ತದೆ ಎಂದು ಸ್ಮರಿಸಿದರು. 2025–26ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಒಟ್ಟು 160 ಪೊಲೀಸ್ ಅಧಿಕಾರಿಗಳಿಗೆ ತಲಾ 1 ಲಕ್ಷ ರೂ. ನಗದು ಬಹುಮಾನ ವಿತರಿಸಲಾಗಿದೆ ಎಂದು ತಿಳಿಸಿದರು.

ಬಳ್ಳಾರಿ ನಗರ ಉಪವಿಭಾಗ ಡಿಎಸ್ಪಿ ಗೋವಿಂದರಾಜು, ತೋರಣಗಲ್ಲು ಉಪವಿಭಾಗ ಡಿಎಸ್ಪಿ ಪ್ರಸಾದ್ ಗೋಖಲೆ, ಕುರುಗೋಡು ಪಿಐ ಬಳನಗೌಡ ಅವರು, ಜಿಲ್ಲಾ ಗೃಹರಕ್ಷಕ ದಳದ ಕಮಾಡೆಂಟ್ ಶೇಕ್ ಸಾಬ್ ಸೇರಿದಂತೆ ಜಿಲ್ಲೆಯ ಎಲ್ಲ ಹಿರಿಯ ಪೊಲೀಸ್ ಅಧಿಕಾರಿಗಳು, ನಿವೃತ್ತ ಪೊಲೀಸ್ ಅಧಿಕಾರಿ–ಸಿಬ್ಬಂದಿ ಉಪಸ್ಥಿತರಿದ್ದರು.

ಎಲ್ಲರಿಗಿಂತ ರೈತನೇ ಶ್ರೇಷ್ಠ: ಉಜ್ಜಯಿನಿ ಶ್ರೀಗಳು

◆**ಕೊಟ್ಟೂರು:** ಎಲ್ಲ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ರೈತರು ಭೂಮಿಯಲ್ಲಿ ಬಿತ್ತನೆ ಮಾಡದೇ ಆಹಾರ ಉತ್ಪಾದನೆಯಾಗುವುದು ಅಸಾಧ್ಯ. ಎಲ್ಲರಿಗಿಂತ ರೈತನೇ ಶ್ರೇಷ್ಠನಾಗಿದ್ದಾನೆಂದು ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮೀಜಿ ಹೇಳಿದರು.

ತಾಲೂಕಿನ ಹರಾಳು ಗ್ರಾಮದಲ್ಲಿ ಕರಿಗಲ್ಲು, ವಿನಾಯಕ, ದೊಡ್ಡ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ, ಕರಿಯಮ್ಮದೇವಿ ದೇವಸ್ಥಾನದ ಕಳಸಾರೋಹಣ ಪ್ರಯುಕ್ತ ನಡೆದ ಧರ್ಮಸಭೆ ಸಾನ್ನಿಧ್ಯ ವಹಿಸಿ ಅವರು ಗುರುವಾರ ಮಾತನಾಡಿದರು.

ಜಗತ್ತಿಗೆ ಅನ್ನ ನೀಡುವ ರೈತರು ಬಿತ್ತನೆ ಮಾಡಿದರೆ ಮಾತ್ರ ನಮ್ಮ ಆಹಾರ ಸಿಗಲು ಸಾಧ್ಯ. ಕೃಷಿ ಕ್ಷೇತ್ರದಲ್ಲಿಯೂ ತಂತ್ರಜ್ಞಾನ ಅಭಿವೃದ್ಧಿಯಾಗಿದ್ದರೂ, ಭೂಮಿಗೆ ಬೀಜ ಬಿತ್ತನೆ ಮಾಡಲೇಬೇಕು. ಬಿತ್ತುವುದು ಒಂದು ಬೀಜವಾದರೆ, ಬೆಳೆಯುವುದು ನೂರಾರು ಕಾಳುಗಳು. ದೇವರ ಪ್ರಾರ್ಥನೆ ಇಲ್ಲದೇ ಯಾವುದೇ ಫಲ ಸಿಗಲಾರದು ಎಂದರು.



ನಮಗೆ ಅನ್ನ ನೀಡುವ ನೆಲಕ್ಕೆ ನಾವು ಭೂಮಿ ತಾಯಿ ಎಂದು ಕರೆಯುತ್ತಿದ್ದೇವೆ. ದೇವರಿಗಿಂತ ಮಿಗಿಲು ತಂದೆ ತಾಯಿ. ಅಂತಹ ತಾಯಿ ರೂಪದಲ್ಲಿ ಅನೇಕ ದೇವತೆಗಳ ದೇವಸ್ಥಾನಗಳು ನಮ್ಮಲ್ಲಿವೆ. ದೊಡ್ಡ ಬಸವೇಶ್ವರ, ಕರಿಯಮ್ಮದೇವಿ ಸೇರಿ ಇತರೆ ದೇವಸ್ಥಾನಗಳನ್ನು ಹೊಂದಿರುವ ಹರಾಳು ಗ್ರಾಮ ಆದರ್ಶ ಹಾಗೂ ಮಾದರಿಯಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಕೆ.ನೇಮಿರಾಜನಾಯ್ಕ ಮಾತನಾಡಿ, ನಮ್ಮ ದೇಶ ಹೊಂದಿರುವ ಆಧ್ಯಾತ್ಮಿಕ, ಧಾರ್ಮಿಕ ನೆಲೆಗಟ್ಟಿನಿಂದಾಗಿ ಎಲ್ಲರೂ ನೆಮ್ಮದಿಯಲ್ಲಿದ್ದೇವೆ. ಎಲ್ಲರಲ್ಲೂ ಸಂಸ್ಕಾರ, ಸಂಸ್ಕೃತಿ ಬೆಳೆಯಬೇಕಾದರೆ ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿರಬೇಕು. ಗ್ರಾಮದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ರೈತರು ಇರುವುದು ವಿಶೇಷವಾಗಿದೆ. ಗ್ರಾಮದ ದೇವಸ್ಥಾನಗಳ ಅಭಿವೃದ್ಧಿಗಾಗಿ 60 ಲಕ್ಷ ರೂ. ಅನುದಾನ ಕಲ್ಪಿಸುವುದಾಗಿ ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಎಂಎಂಜೆ ಹರ್ಷವರ್ಧನ ಮಾತನಾಡಿ, ಯುವಕರು ದುಶ್ಚಟಗಳಿಗೆ ಬಲಿಯಾಗದೇ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಮಹಿಳೆಯರಿಗೆ ಗೌರವ ನೀಡಬೇಕು ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಪಿ.ಎಚ್.ದೊಡ್ಡರಾಮಣ್ಣ, ಚಾನುಕೋಟಿ ಮಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿದರು.

ತಾಪಂ ಮಾಜಿ ಅಧ್ಯಕ್ಷ ಗುರುಮೂರ್ತಿ ಶ್ಯಾನುಭೋಗರ, ಎರಡು ದಿನಗಳ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿದರು.

ಹರಪನಹಳ್ಳಿ ತೆಗ್ಗಿನಮಠದ ವರಸದ್ಯೋಜಾತ ಶಿವಾಚಾರ್ಯ, ನಂದೀಪುರದ ಮಹೇಶ್ವರ ಸ್ವಾಮಿಗಳು, ಬೆಣ್ಣಿಹಳ್ಳಿ ಮಠದ ಪಂಚಾಕ್ಷರಿ ಶಿವಚಾರ್ಯ ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಬೂದಿ ಶಿವಕುಮಾರ್, ಮುಖಂಡರಾದ ಹರಾಳು ಅಶೋಕ, ಯು.ಕೆ.ಕೊಟ್ರೇಶ್, ಬಸವನಗೌಡ್ರು, ನಂದೀಶ, ತೋಪುರಾಜ, ನ್ಯಾಯಬೆಲೆ ಅಂಗಡಿ ಕೊಟ್ರಯ್ಯ ಇತರರಿದ್ದರು.